ಮುಂಗಾರು

ಮಂಗಳವಾರ, ಅಕ್ಟೋಬರ್ 29, 1985

ಈ ಕ್ರಾಂತಿ ಮಾಡಿ

ವಿದ್ಯೆಯ ವಿಕ್ರಯವನ್ನು ಕೇಂದ್ರ ಸರಕಾರ ತೀವ್ರವಾಗಿ ವಿರೋಧಿಸುವುದೆಂದು ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪಿ.ವಿ. ನರಸಿಂಹ ರಾವ್ ಹೇಳಿದ್ದಾರೆ. ಅತಿ ಹೆಚ್ಚು ಸವಾಲು ಕೂಗುವವರಿಗೆ ಶಿಕ್ಷಣವನ್ನು ವಿಕ್ರಯಿಸುವುದನ್ನು ಕೇಂದ್ರವು ಒಪ್ಪದೆಂದು ಅವರಂದಿದ್ದಾರೆ. ಇತ್ತ ಕರ್ನಾಟಕದ ಗೃಹಸಚಿವ ಬಿ. ರಾಚಯ್ಯನವರು ಬೆಂಗಳೂರಲ್ಲಿ ಸಾಹಿತ್ಯ ಸಮ್ಮೇಳನವೊಂದರಲ್ಲಿ ಮಾತನಾಡುತ್ತ ಕ್ರಾಂತಿಕಾರಿ ಸಾಹಿತ್ಯವನ್ನು ಪಠ್ಯ ಪುಸ್ತಕವಾಗಿ ಮಾಡಬೇಕೆಂದು ಕರೆಕೊಟ್ಟಿದ್ದಾರೆ.

ಈ ಎರಡೂ ಸುದ್ದಿಗಳು ನಮ್ಮ ರಾಜಕಾರಣಿಗಳ ಭಯಂಕರ ಬೂಟಾಟಿಕೆಯ ಮಾತು ಹಾಗೂ ನಡವಳಿಕೆಗಳಿಗೆ ಅತ್ಯುತ್ತಮ ಸಾಕ್ಷ್ಯಗಳಾಗಿವೆ. ತಮ್ಮ ಸರಕಾರಗಳು ಪ್ರಚಂಡ ಜನಹಿತದ ಆಗರಗಳೆಂದೂ ನಾಡಿನ ಹಿತಾಸಕ್ತಿ ಬಿಟ್ಟರೆ ಬೇರೆ ಚಿಂತೆಯೇ ಅವುಗಳಿಗಿಲ್ಲವೆಂದೂ ಜನರನ್ನು ನಂಬಿಸಿ ಮೋಸ ಮಾಡುವ ಮಾತಿನ ಜಾಲಗಳಾಗಿವೆ ಇವು. ದಿನ ಬೆಳಗಾಗುವುದರೊಳಗೆ ಈ ನಾಡನ್ನು ಸುಖೀ ರಾಜ್ಯವಾಗಿ ಮಾಡುವ ಅದ್ಭುತ ಕಳಕಳಿ ತಮಗಿದೆಯೆಂದು ತೋರಿಸುವ ಆವುಟಕ್ಕೆ ಇವು ನಿದರ್ಶನಗಳಾಗಿವೆ.

ಸುಮಾರು ಕಾಲು ಶತಮಾನದ ಹಿಂದೆ ವೈದ್ಯಕೀಯ ವಿದ್ಯೆಯ ವ್ಯಾಪಾರದಂಗಡಿಯೊಂದು ದಕ್ಷಿಣ ಕನ್ನಡ ಜಿಲ್ಲೆಯ ಮೂಲೆಯಲ್ಲೊಂದೆಡೆ ಸದ್ದಿಲ್ಲದೆ ತೆರೆಯಿತು. ಭಾರತೀಯ ಸಮಾಜದ ಮಹಾಸಂಕಟವಾಗಿ ಪರಿಣಮಿಸಿದ ಕ್ಯಾಪಿಟೇಶನ್ ಕ್ಯಾನ್ಸರನ್ನು ಹುಟ್ಟಿಸಿದ ಕಳಂಕವನ್ನು ಹೀಗೆ ಈ ಜಿಲ್ಲೆಯ ಜನ ಇಂದು ಹೊತ್ತು ದಿನದಿನವೂ ನಾಚಿಕೆಯಿಂದ ತಲೆತಗ್ಗಿಸಿ ಬಾಳಬೇಕಾಗಿದೆ. ಇಂದು ಕ್ಯಾಪಿಟೇಶನ್ ರೋಗ ದೇಶದ ಹಲವು ಕಡೆಗಳಿಗೆ ಹಬ್ಬಿದೆ. ಹಣದ ಮೂಟೆ ತುಂಬಿಸಿಕೊಳ್ಳಲು ಎಂ.ಬಿ.ಬಿ.ಎಸ್. ಹಾಗೂ ಬಿ.ಇ. ಡಿಗ್ರಿಗಳನ್ನು ಹರಾಜು ಹಾಕುವುದು ಬಲು ಸುಲಭವಾದ ಒಳ್ಳೆಯ ಉಪಾಯವೆಂದು ಕಂಡುಕೊಂಡಿರುವ ಹಲವು ಮಂದಿ ಕರ್ನಾಟಕದಲ್ಲಿ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳೆಂಬ ಡಿಗ್ರಿ ಹರಾಜು ಅಂಗಡಿಗಳನ್ನು ತೆರೆದಿದ್ದಾರೆ. ತಮಿಳ್ನಾಡಿಗೂ ಈ ಪಿಡುಗು ಹಬ್ಬಿದೆ. "ಖರ್ಚನ್ನು ತಾವೇ ಹೊಂದಿಸಿಕೊಳ್ಳುವ ಕಾಲೇಜುಗಳು" ಎಂಬ ಬಣ್ಣದ ಹೆಸರಿನಿಂದ ಅವುಗಳನ್ನು ಅಲ್ಲಿ ಕರೆಯಲಾಗುತ್ತಿದೆ. ಈ ರೋಗ ಕೇರಳಕ್ಕೂ ದಬ್ಬಿದೆ. ಅಲ್ಲಿನ ಸರಕಾರ ಇತ್ತೀಚೆ ತಾನೇ 15 ಪಾಲಿಟೆಕ್ನಿಕ್‌ಗಳನ್ನು ಖಾಸಗಿ ರಂಗದಲ್ಲಿ ಸ್ಥಾಪಿಸಲು ಅನುಮತಿಯನ್ನು ಪ್ರಕಟಿಸಿತ್ತು. ಅವುಗಳಲ್ಲಿ ಸೀಟು ಶುಲ್ಕ ಸಂಗ್ರಹಕ್ಕೆ ಅವಕಾಶವಿದೆಯೆಂಬುದು ನಿಸ್ಸಂದೇಹ. ಈ ವಿಚಾರ ಬಂದಾಗ ಅಲ್ಲಿನ ಮುಖ್ಯಮಂತ್ರಿ ಕರ್ನಾಟಕದಲ್ಲಿ ನಡೆಯುತ್ತಿರುವ ಸೀಟು ಶುಲ್ಕ ಸಂಗ್ರಹವನ್ನು ಉದಾಹರಿಸಿ ತಮ್ಮ ನಡವಳಿಕೆಯನ್ನು ಸಮರ್ಥಿಸಿಕೊಂಡಿದ್ದರು. ಕ್ಯಾಪಿಟೇಶನ್ ಶುಲ್ಕ ಪಡೆಯುವ ಮೆಡಿಕಲ್ ಕಾಲೇಜುಗಳು ಮುಂಬಯಿ ಮಹಾನಗರದಲ್ಲಿಯೂ ತಲೆಯೆತ್ತ ತೊಡಗಿವೆ. ದೇಶದ ಇತರೆಲ್ಲಾ ಭಾಗಗಳಿಗೂ ಈ ರೋಗ ಬೇಗನೇ ಹಬ್ಬಬಹುದು.

ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಸೀಟುಗಳನ್ನು ಹರಾಜಿನಲ್ಲಿ ಮಾರುವ ಈ ವ್ಯವಸ್ಥೆಯಿಂದ ಈ ದೇಶದ ಜನ ಸಾಮಾನ್ಯರಿಗೆ ಸಾಮಾಜಿಕವಾಗಿ ಮಹಾ ಅನ್ಯಾಯ ಮಾಡಿದಂತಾಗಿದೆ. ಜನರ ನೋವನ್ನು ಶಮನಿಸಬೇಕಾದ ವೈದ್ಯಕೀಯ ಸೇವೆಯೂ ಅಭಿವೃದ್ಧಿಯ ವಿನ್ಯಾಸವನ್ನು ಹಾಕಿಕೊಟ್ಟು ನಿರ್ಮಾಣದ ಉಸ್ತುವಾರಿ ವಹಿಸುವ ಇಂಜಿನಿಯರಿಂಗ್ ವೃತ್ತಿಯೂ ಹಣವುಳ್ಳವರ ಮಕ್ಕಳ ತೊತ್ತೆನಿಸಿ ಇನ್ನಷ್ಟು ಹಣವನ್ನು ಆ ಮೂಲಕ ಸಾಮಾಜಿಕ ಪ್ರತಿಷ್ಠೆಯನ್ನೂ ತರುವ ದಂಧೆಯೆನಿಸಿದೆ.

ಸಾಮಾಜಿಕ ಸ್ವಾಸ್ಥ್ಯಕ್ಕೂ ನಾಡಿನ ಅಭಿವೃದ್ಧಿಗೂ ಬೇಕಾದ ಪರಿಣತಿಯನ್ನೂ ವಿದ್ಯೆಯನ್ನೂ ಜನಸಮುದಾಯಕ್ಕೆ ಒದಗಿಸುವ ಹೊಣೆಗಾರಿಕೆಯನ್ನು ಹೀಗೆ ಖಾಸಗಿ ವ್ಯಾಪಾರಿಗಳ ಕೈಯಲ್ಲಿ ಕೊಡದೆ ತಾನೇ ವಹಿಸಿಕೊಂಡು ಸಾಮಾಜಿಕ ನ್ಯಾಯ ಒದಗಿಸುವ ಹೊಣೆಗಾರಿಕೆ ಸರಕಾರದ್ದಾಗಿತ್ತು. ಮೀಸಲಾತಿ ನಿಯಮದನ್ವಯ ಹಿಂದುಳಿದವರಿಗೂ ಪರಿಶಿಷ್ಟ ಜಾತಿ ಹಾಗೂ ಪಂಗಡಗಳವರಿಗೂ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಸೀಟುಗಳನ್ನು ಹಂಚಿಕೊಟ್ಟಿದ್ದರೆ ಇಂದು ಈ ದಂಧೆಗಳಲ್ಲಿರುವವರ ಅರ್ಧಾಂಶಕ್ಕಿಂತಲೂ ಹೆಚ್ಚು ಮಂದಿ ಕೆಳವರ್ಗಕ್ಕೆ ಸೇರಿದವರಾಗಿ ಒಂದು ದೊಡ್ಡ ಸಾಮಾಜಿಕ ಕ್ರಾಂತಿಯೇ ನಡೆಯುತ್ತಿತ್ತು. ಅಂಥ ಅವಕಾಶಕ್ಕೆ ಸರಕಾರ ಬಾಗಿಲು ಮುಚ್ಚಿ ಕೂತಿದೆ. ಶ್ರೀಮಂತರೆನಿಸಿದ ಪ್ರತಿಷ್ಠಿತ ವರ್ಗದವರ ಮಕ್ಕಳು ಮಾತ್ರ ವೈದ್ಯರೂ ಇಂಜಿನಿಯರರೂ ಆಗಿ ಈ ಸಮಾಜವನ್ನು ಆಳುವ ಹಕ್ಕು ಅವರಿಗೆ ಪಿತ್ರಾರ್ಜಿತವಾಗಿ ಬರುತ್ತಿದೆ.

ಈ ದೇಶದ ಎಲ್ಲ ಜನರಿಗೂ ಕಡ್ಡಾಯವಾಗಿ ಶಿಕ್ಷಣವನ್ನು ಒದಗಿಸುವ ಹಾಗೂ ವೃತ್ತಿ ಸಂಬಂಧವಾದ ತಾಂತ್ರಿಕ ಶಿಕ್ಷಣದಲ್ಲಿ ಕೆಳವರ್ಗದವರಿಗೆ ಮೀಸಲಾತಿ ಒದಗಿಸಿ ಅವರ ಅಭ್ಯುದಯಕ್ಕೆ ಚಾಲನೆ ಕೊಡಬೇಕಾದ ಹೊಣೆಗಾರಿಕೆ ಸರಕಾರದ್ದಾಗಿತ್ತು. ಅದನ್ನು ಯಾವ ಸರಕಾರವು ಸಮರ್ಪಕವಾಗಿ ಮಾಡಿಲ್ಲ. ಮೂವತ್ತೈದು ವರ್ಷಗಳಿಗೂ ಹೆಚ್ಚು ಸಮಯ ಈ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ಎಂದೂ ಈ ಬಗ್ಗೆ ಗಂಭೀರವಾದ ಹೆಜ್ಜೆಯನ್ನು ಇರಿಸಿದ್ದೇ ಇಲ್ಲ. ನರಸಿಂಹರಾಯರಂತಹವರು ಆಗೊಮ್ಮೆ ಈಗೊಮ್ಮೆ ಕ್ಯಾಪಿಟೇಶನ್ ವಿರೋಧಿ ಬೂಟಾಟಿಕೆಯ ಮಾತನ್ನು ಆಡಿದ್ದು ಬಿಟ್ಟರೆ ಬೇರಾವ ಕೆಲಸವೂ ಆಗಿಲ್ಲ. ಅವರದ್ದೇ ಪಕ್ಷದ ಸರಕಾರವಿದ್ದ ವೇಳೆ ಕರ್ನಾಟಕದಲ್ಲಿ ಕ್ಯಾಪಿಟೇಶನ್ ಕಾಲೇಜುಗಳು ಅಣಬೆಗಳಂತೆ ಹುಟ್ಟಿಕೊಂಡವು.

ಬಿ. ರಾಚಯ್ಯನವರ ಮಾತೂ ಅಷ್ಟೇ. ಅವರಿಂದು ಕ್ರಾಂತಿ ಸಾಹಿತ್ಯವನ್ನು ಪಠ್ಯ ಪುಸ್ತಕ ಮಾಡುವ ಮಾತಾಡುತ್ತಿದ್ದಾರೆ. ಮೊದಲು ಅವರ ಸಹಕಾರ ಪ್ರಾಥಮಿಕ ಶಿಕ್ಷಣವನ್ನು ಈ ರಾಜ್ಯದ ಎಲ್ಲಾ ಹಳ್ಳಿಗಳ ಎಲ್ಲಾ ಬಡವರ ಮಕ್ಕಳಿಗೆ ಒದಗಿಸುವ ಕೆಲಸ ಮಾಡಬೇಕು. ಅದುವೇ ದೊಡ್ಡ ಕ್ರಾಂತಿಯಾಗುತ್ತದೆ. ಎರಡನೆಯದಾಗಿ ತಾಂತ್ರಿಕ ವಿದ್ಯೆಯನ್ನು ಹರಾಜು ಹಾಕುವ ಅಂಗಡಿಗಳನ್ನೆಲ್ಲಾ ವಶಕ್ಕೆ ತೆಗೆದುಕೊಂಡು ಕೆಳವರ್ಗದ ಮಕ್ಕಳಿಗೆ ನ್ಯಾಯ ಸಮ್ಮತವಾದ ಸೀಟುಗಳನ್ನು ಹಂಚಿಕೊಡಲಿ. ಅದು ಇನ್ನೊಂದು ಕ್ರಾಂತಿಯಾಗುತ್ತದೆ. ಕ್ಯಾಪಿಟೇಶನ್ ಶುಲ್ಕ ನಿಷೇಧದ ಭಾಷೆಯನ್ನು ಕೊಟ್ಟು ಆ ಮೇಲೆ ಅಂಥ ಮಾತೇ ಆಡಿಲ್ಲವೆಂದು ವಂಚನೆ ಮಾಡಿರುವ ಈ ಸರಕಾರದ ಈ ಸಚಿವರು ಕ್ರಾಂತಿ ಸಾಹಿತ್ಯವನ್ನು ಪಠ್ಯಪುಸ್ತಕ ಮಾಡುವ ಮಾತಾಡುವುದನ್ನು ನೋಡಿ ಈ ನಾಡಿನ ಜನ ನಗಬಹುದು.

ಮುಂಗಾರು
ಶುಕ್ರವಾರ, ಅಕ್ಟೋಬರ್ 4, 1985

ನೆಲೆ ತಪ್ಪಿದ ಪ್ಯಾಲೆಸ್ತೀನಿಯರು

ಟ್ಯುನೀಷಿಯದ ಹಮ್ಮಾನ್ ನಗರದಲ್ಲಿ ನೆಲೆ ಕಂಡುಕೊಂಡ ಪ್ಯಾಲೆಸ್ತೀನ್ ವಿಮೋಚನಾ ದಳದ ಕೇಂದ್ರ ಕಚೇರಿಯ ಮೇಲೆ ಇಸ್ರೇಲಿನ ಯುದ್ಧ ವಿಮಾನಗಳು ಬಾಂಬು ದಾಳಿ ನಡೆಸಿ ಕಟ್ಟಡವನ್ನು ಧ್ವಂಸಗೊಳಿಸಿವೆ. ಈ ಬರ್ಬರ ದಾಳಿಯಲ್ಲಿ 156 ಜನರು ಸತ್ತಿರುವ ವರದಿ ಬಂದಿದೆ.

ಪ್ಯಾಲೆಸ್ತೀನ್ ವಿಮೋಚನಾ ದಳದ ಗೆರಿಲ್ಲಾ ಪಡೆಗಳು ಹಾಗೂ ಕೇಂದ್ರ ಕಚೇರಿ ಈ ಮೊದಲು ನೆಲೆಯಾಗಿದ್ದ ದಕ್ಷಿಣ ಲೆಬನಾನಿನ ಪ್ಯಾಲೆಸ್ತೀನ್ ನಿರಾಶ್ರಿತ ಶಿಬಿರಗಳ ಮೇಲೂ 1982ರಲ್ಲಿ ಇಸ್ರೇಲ್ ವ್ಯಾಪಕ ದಾಳಿ ನಡೆಸಿತ್ತು. ಅಂದು ಆ ಶಿಬಿರಗಳಲ್ಲಿ ಹೆಂಗಸರು-ಹಸುಳೆಗಳೂ ಸೇರಿ ಸಾವಿರಾರು ಮಂದಿಯ ಕೊಲೆಯಾಗಿತ್ತು. ರಾತ್ರಿ ಇಸ್ರೇಲಿ ಸೈನಿಕರು ನುಗ್ಗಿ ಜನರನ್ನು ಮಂಚಗಳಿಂದ ಎಳೆದುಹಾಕಿ ಕೊಂದಿದ್ದರು.

ಪ್ಯಾಲೆಸ್ತೀನ್ ಗೆರಿಲ್ಲಾಗಳು ಭಯೋತ್ಪಾದಕ ಕೃತ್ಯಗಳಲ್ಲಿ ನಿರತರಾಗಿದ್ದಾರೆ. ಪ್ಯಾಲೆಸ್ತೀನ್ ವಿಮೋಚನಾದಳವು ಇಸ್ರೇಲಿನ ನಿರ್ಮೂಲನದ ಶಪಥ ಹಾಕಿದೆ ಎಂಬ ಸಬೂಬಿನ ಮರೆಯಲ್ಲಿ ಪ್ಯಾಲೆಸ್ತೀನಿಯರಿಗೆ ಪಾಠ ಕಲಿಸುವ ಈ ಕಾರ್ಯಾಚರಣೆಗಳನ್ನು ಇಸ್ರೇಲ್ ನಡೆಸುತ್ತಿದೆ.

ಆದರೆ ಪ್ಯಾಲೆಸ್ತೀನ್ ಗೆರಿಲ್ಲಾಗಳ ಹೋರಾಟದ ಹಿಂದೆ ದೊಡ್ಡ ಜನಾಂಗವೊಂದರ ನೋವಿನ ಕಥೆಯಿದೆ. ದಶಕಗಳ ಕಾಲ ಸಿಕ್ಕಸಿಕ್ಕಲ್ಲಿ ಅಂಡಲೆದು ನೆಲೆ ಕಾಣದೆ ಬಸವಳಿದ ಸಂಕಟದ ಸರಮಾಲೆಯಿದೆ. ಸ್ವಂತ ಮನೆ-ಮಂದಿರಗಳಿಂದ, ಉತ್ತು ಬಿತ್ತಿ ಉಣ್ಣಬೇಕಾದ ಹೊಲದಿಂದ ಪರಕೀಯರು ಬಂದು ಕತ್ತು ಹಿಡಿದು ದಬ್ಬಿಸಿಕೊಂಡ ಜನಾಂಗವೊಂದರ ವ್ಯಥೆಯಿದೆ.

ಪ್ಯಾಲೆಸ್ತೀನೀಯರ ಸಂಕಟ ಶುರುವಾದದ್ದು 1948ರ ಮೇ 14ರಂದು. ವಿಶ್ವಸಂಸ್ಥೆಯ ಠರಾವಿನನ್ವಯ ಇಸ್ರೇಲ್ ಎಂಬ ಯಹೂದ್ಯರಿಗೆ ನೆಲೆಯೊದಗಿಸಿದ ರಾಷ್ಟ್ರವೊಂದರ ನಿರ್ಮಾಣವಾದಾಗ. ಇದರಜತೆಗೆ ಅತನಕ ಜೋರ್ಡಾನ್ ನದಿಯ ಪಶ್ಚಿಮಕ್ಕೆ ಮೆಡಿಟರೇನಿಯನ್ ಸಮುದ್ರದ ತನಕ ವಿಶಾಲವಾಗಿ ಹರಡಿದ್ದ ಪ್ಯಾಲೆಸ್ತೀನ್ ಭೂಮಿಯ ಆಧಿಪತ್ಯ ವಹಿಸಿದ್ದ ಬ್ರಿಟನ್ ಕಾಲ್ತೆಗೆಯಿತು. ಅರೇಬಿಯದ ಮುಸ್ಲಿಂ ದೇಶಗಳಿನ್ನೂ ಸೈನಿಕವಾಗಿ, ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಭದ್ರವಾಗಿರಲಿಲ್ಲ. ಇಸ್ರೇಲಿನ ಯಹೂದ್ಯರು ಜಗತ್ತಿನ ವಿವಿಧ ದೇಶಗಳಲ್ಲಿ ಹರಿಹಂಚಾಗಿದ್ದಾರೆ. ಇಂದು ಅವರ ಒಟ್ಟು ಸಂಖ್ಯೆ ಅರ್ಧ ಕೋಟಿ ಆಗಿದೆ. ಯುರೋಪಿನಲ್ಲಿಯೂ ಅಮೆರಿಕದಲ್ಲಿಯೂ ಕೆಲವರಿದ್ದಾರೆ. ವಿಶ್ವಸಂಸ್ಥೆ ತಿಳಿಸಿದ ಗಡಿಯೊಳಗೆ ಯಹೂದ್ಯರು ಕೂರುತ್ತಿದ್ದರೆ ಇಂದು ಈ ಮಾನವೀಯ ಸಮಸ್ಯೆ ಹುಟ್ಟುತ್ತಿರಲಿಲ್ಲ. ಎಂಟು ಲಕ್ಷ ಮುಸ್ಲಿಂ ಪ್ಯಾಲೆಸ್ತೀನೀಯರ ಬದುಕಿನ ನೆಲೆ ತಪ್ಪದಿರುತ್ತಿದ್ದರೆ ಮಧ್ಯ ಪೂರ್ವದ ಇಂದಿನ ರಾಜಕೀಯ ಕ್ಷೋಭೆಯಾಗಲಿ ಭಯೋತ್ಪಾದಕತೆಯ ಹಿಂಸೆಯಾಗಲಿ ಇರುತ್ತಿರಲಿಲ್ಲ.

ಪ್ಯಾಲೆಸ್ತೀನೀಯರಿಗೆ ನೆಲೆ ಒದಗಿಸಲು ಇಸ್ರೇಲ್ ತಯಾರಿಲ್ಲ. ನೆಲೆ ಕಾಣುವುದಕ್ಕಾಗಿ ಪ್ಯಾಲೆಸ್ತೀನೀಯರ ಹೋರಾಟ ನಡೆದಿದೆ. ಬದುಕಿನ ಬೇರು ಕಿತ್ತ ಕ್ರೋಧ ಅವರಿಂದ ಇಸ್ರೇಲಿನ ನಿರ್ಮೂಲನದ ಪ್ರತಿಜ್ಞೆ ಮಾಡಿಸಿದೆ. ಇಂದು ಪಿ. ಎಲ್. ಓ. ಒಂದು ಶಕ್ತಿಯಾಗಿ ಬೆಳೆದಿದೆ. ಇದು ಇಸ್ರೇಲಿಗೆ ಕಣ್ಣು ಕಿಸುರಾಗಿದೆ. 1982ರಲ್ಲಿ ಬೆರೂತಿನ ಶಿಬಿರಗಳಿಗೆ ನಡೆದ ಆಕ್ರಮಣ, ನರಹತ್ಯೆ- ಇವೆಲ್ಲಕ್ಕೂ ಇದುವೇ ಕಾರಣ. ಅನೇಕ ಅರಬ್ ರಾಷ್ಟ್ರಗಳಲ್ಲಿ ಹರಿಹಂಚಾಗಿ ಹೋದ ಪ್ಯಾಲೆಸ್ತೀನೀಯರು ಇಂದು ಸಾವು ಬದುಕಿನ ಹೋರಾಟದಲ್ಲಿ ನಿರತರಾಗಿದ್ದಾರೆ. ಅಲ್‌ಫತಾ ಮೂಲಕ 1969ರಲ್ಲಿ ಪಿ. ಎಲ್. ಓ. ನಾಯಕನಾದ ಯಾಸರ್ ಅರಾಫತ್ ಅವರ ಬುದ್ಧಿವಂತಿಕೆಯ, ವಿವೇಕಶಾಲಿ ನಾಯಕತ್ವದಲ್ಲಿ ಅವರು ಮುನ್ನಡೆಯುತ್ತಿದ್ದಾರೆ. 1964ರಲ್ಲಿ ಸ್ಥಾಪನೆಗೊಂಡ ಅವರ ಸಂಸ್ಥೆ ಪ್ಯಾಲೆಸ್ತೀನೀಯರಿಗೆ ಸ್ವಂತದ್ದಾದ ನೆಲೆಯೊಂದನ್ನು ಕೊಡುವುದಿದ್ದರೆ ಇಸ್ರೇಲಿನ ಅಸ್ತಿತ್ವವನ್ನು ಒಪ್ಪಿಕೊಳ್ಳುವ ಸೌಮ್ಯವಾದಿ ಧೋರಣೆಗೆ ಬಂದಿದೆ.

ಆದರೆ ಇಸ್ರೇಲ್ ಪ್ಯಾಲೆಸ್ತೀನೀಯರಿಗೆ ನೆಲೆ ಒದಗಿಸಲು ಸಿದ್ಧವಿಲ್ಲ. ಇಸ್ರೇಲ್ ಆಕ್ರಮಣಕಾರಿಯೆಂದು ಜಾಗತಿಕ ಸಮುದಾಯ ಗುರುತಿಸಿದೆ. ಪ್ಯಾಲೆಸ್ತೀನೀಯರಿಗೆ ಸೇರಿದ ನೆಲವನ್ನು ಅದು ನುಂಗಿಹಾಕಿದೆಯೆಂದು ಈ ಜಗತ್ತು ತಿಳಿದುಕೊಂಡಿದೆ. ಆ ನೆಲದಿಂದ ಅದು ಹಿಂದೆ ಹೋಗಬೇಕೆಂದು ವಿಶ್ವಸಂಸ್ಥೆ ನಿರ್ಣಯ ಮಾಡಿದೆ. ಆದರೆ ಇದನ್ನು ಮನ್ನಿಸಲು ಇಸ್ರೇಲ್ ಸಿದ್ಧವಿಲ್ಲ, ಅದು ಪ್ಯಾಲೆಸ್ತೀನ್ ಗೆರಿಲ್ಲಾಗಳ ಭಯೋತ್ಪಾದಕತೆಯ ಸಬೂಬಿನಡಿಯಲ್ಲಿ ಇಡಿಯ ಚಳುವಳಿಯನ್ನು ನಾಶ ಮಾಡಲು ಹೆಣಗಾಡುತ್ತಿದೆ.

ನೆರೆ ಸಂತ್ರಸ್ತರ ನೆರವಿಗೂ 50 ಕೋಟಿ ರೂ. ನೆರವು

ಭೀಕರ ಪ್ರವಾಹದಿಂದ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ನಿರಾಶ್ರಿತರಾದ ನೆರೆ ಸಂತ್ರಸ್ತರಿಗೆ ಮನೆಗಳನ್ನು ಕಟ್ಟಿಕೊಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 50 ಕೋಟಿ ರೂ.ಗಳನ್ನು ಮುಖ್ಯಮಂತ್ರಿಯವರ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ನೀಡಿದೆ.

ಗಾಂಧೀಭವನದ ಅತಿಥಿಗೃಹ ನಿರ್ಮಾಣ

ಗಾಂಧೀಭವನದ ನವೀಕರಿಸಿದ ಕಟ್ಟಡಕ್ಕೆ ಪೀಠೋಪಕರಣ ಹಾಗೂ ಅತಿಥಿಗೃಹ ನಿರ್ಮಾಣಕ್ಕಾಗಿ 1.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಟೆಂಡರ್ ಕರೆಯಲಾಗಿದೆ.

* * * * * *

ಧ್ಯರಾದರೋ ಇವೆಲ್ಲದರಲ್ಲೂ ಬಲಯುತರಾಗಿದ್ದರು. ಅಮೆರಿಕ ಹಾಗೂ ಬ್ರಿಟನ್‌ಗಳ ಕುಮ್ಮಕ್ಕು ಅದಕ್ಕಿತ್ತು.

ಇಸ್ರೇಲಿಗೆ ಬೇಕಾದದ್ದು ಕಾಲೂರಲು ಒಂದು ತಾಣ ಮಾತ್ರ. ಆಮೇಲೆ ಬೇಕಾದ್ದೆಲ್ಲವನ್ನೂ ಅದು ಮಾಡಿಕೊಂಡಿತು. ಇಸ್ರೇಲ್ ಸ್ಥಾಪನೆ ಘೋಷಣೆಯೊಡನೆಯೇ ಯುದ್ಧವೂ ಪ್ರಾರಂಭವಾಯಿತು. ವಿಶ್ವಸಂಸ್ಥೆ ನಿಗದಿ ಪಡಿಸಿದ ಗಡಿಗಳೆಲ್ಲವನ್ನೂ ದಾಟಿ ಇಸ್ರೇಲ್ ಮುಂದುವರಿಯಿತು. ತನ್ನ ದೇಶದ ಎಲ್ಲೆಗಳನ್ನು ಮನಬಂದಂತೆ ವಿಸ್ತರಿಸಿಕೊಂಡಿತು, ಅಮಾಯಕ ಪ್ಯಾಲೆಸ್ತೀನಿಯರನ್ನು ನೆಲದೊಡನಿದ್ದ ಅವರ ಹೊಕ್ಕಳ ಬಳ್ಳಿ ಹರಿದು ಹೊರಗಟ್ಟಿತು. ಹೀಗೆ ಬದುಕಿನ ನೆಲೆಯಿಲ್ಲದೆ ಅಂಡಲೆದವರು ಎಂಟು ಲಕ್ಷ.

ಇಂದು [illegible]ಸ್ತೀನಿಯರು ವಿವಿಧ ಅರಬ್

ತಾನೇ ಹುಟ್ಟು ಹಾಕಿದ ಮಾನವೀಯ ಸಮಸ್ಯೆಯೊಂದನ್ನು ನಿವಾರಿಸಲು ನೆರವಾಗದೆ ನೆನೆಗುದಿಗೆ ಬೀಳಿಸಿದ್ದಲ್ಲದೆ ಕಳಂಕ ಹಚ್ಚಿ ಇತಿಹಾಸ ಅರಿಯದ ಜಗತ್ತಿನ ಅಮಾಯಕರ ಮುಂದೆ ತಾನೇ ಬಲಿಪಶುವೆಂದು ಮೊರೆದಾಡಲು, ಹೀರೋ ಆಗಲು ಹವಣಿಸುತ್ತಿರುವ ಇಸ್ರೇಲ್ ಯಾವ ಸಹಾನುಭೂತಿಗೂ ಅರ್ಹವಲ್ಲ. ಅದಕ್ಕೆ ಸಲ್ಲಬೇಕಾದ್ದು ಖಂಡನೆ ಮಾತ್ರ. ಜಗತ್ತಿನ ಜನಸಮುದಾಯ ದೂರವಿಡಬೇಕಾದ ಕ್ರೂರಿ ಅದು. ಜಗತ್ತಿನ ವ್ಯವಹಾರಗಳಿಂದ ಹೊರಗಿಡುವ ಮೂಲಕ ಅವಿವೇಕಿಯಾದ ದೇಶವನ್ನು ಮಣಿಸಬೇಕಾಗಿದೆ. ಅರ್ಧಕೋಟಿ ಜನಸಮುದಾಯವನ್ನು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿದ ಆ ದೇಶಕ್ಕೆ ನೆರವಾಗುವವರೂ ಅಷ್ಟೇ ಖಂಡನಾರ್ಹರು.

ಮುಂಗಾರು

ಬುಧವಾರ, ಅಕ್ಟೋಬರ್ 30, 1985

ಈ ಚಾರ್ಜು ಬೇಡ

ದೇಶದಲ್ಲಿನ ರಾಷ್ಟ್ರೀಕೃತ ಬ್ಯಾಂಕುಗಳು ನವೆಂಬರ್ ತಿಂಗಳ 15ನೇ ತಾರೀಕಿನಿಂದ ಒಂದೇ ರೀತಿಯ "ಸರ್ವಿಸ್ ಚಾರ್ಜು" ವಸೂಲು ಮಾಡುವವೆಂದು ರಾಷ್ಟ್ರೀಕೃತ ಬ್ಯಾಂಕುಗಳ ಉನ್ನತ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನವಾಗಿದೆಯೆಂದು ಬ್ಯಾಂಕ್ ಆಫ್ ಇಂಡಿಯಾದ ಅಧ್ಯಕ್ಷ ಜೆ. ಎಸ್. ಭಾಟ್ನಗರ್ ತಿಳಿಸಿದ್ದಾರೆ.

ವಾಣಿಜ್ಯ ಬ್ಯಾಂಕುಗಳು ನಾಡಿನ ಆರ್ಥಿಕ ಹಾಗೂ ವಾಣಿಜ್ಯ ಚಟುವಟಿಕೆಗಳು ಸಲೀಸಾಗಿಯೂ ನ್ಯಾಯಸಮ್ಮತವಾಗಿಯೂ ನಡೆಯುವುದಕ್ಕೆ ಚಾಲನೆ ಕೊಡಬೇಕಾದ ಸಂಸ್ಥೆಗಳು ಕ್ಲಪ್ತವಾಗಿ ಹಣಕಾಸು ಒದಗಿಸುವ ಮೂಲಕ ಕೈಗಾರಿಕಾ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನೂ ಅವುಗಳು ಕೊಡಬೇಕಾಗಿದೆ. ಇತ್ತೀಚೆಗೆ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಶಾಖೆಗಳ ಜಾಲವನ್ನು ಹೆಣೆದು ಕೃಷಿ ಹಾಗೂ ಗುಡಿ ಕೈಗಾರಿಕೆಗಳಿಗೂ ಉತ್ತೇಜನ ಕೊಡುವ ಕಾರ್ಯದಲ್ಲಿ ಇತರ ಹಣಕಾಸು ಸಂಸ್ಥೆಗಳಿಗೆ ಪೂರಕವಾದ ಪಾತ್ರ ವಹಿಸುತ್ತಿವೆ.

ಬ್ಯಾಂಕುಗಳು ಅಧಿಕೃತ ಸಂಸ್ಥೆಗಳು. ಇವುಗಳ ಪೈಕಿ ದೊಡ್ಡವುಗಳೆಲ್ಲಾ ರಾಷ್ಟ್ರೀಕರಣಗೊಂಡು ಸರಕಾರದ ಅಂಗಸಂಸ್ಥೆಗಳೇ ಆಗಿವೆ. ಹೊರಗಿರುವವುಗಳು ಕೇವಲ ಸಣ್ಣ ಪುಟ್ಟ ಸಂಸ್ಥೆಗಳು ಮಾತ್ರ. ಹೀಗಾಗಿ ದೇಶದ ಆರ್ಥಿಕ ಚಟುವಟಿಕೆಯ ನೂರಕ್ಕೆ ತೊಂಭತ್ತರಷ್ಟು ಭಾಗವನ್ನು ರಾಷ್ಟ್ರೀಕೃತ ಬ್ಯಾಂಕುಗಳೇ ನಿಯಂತ್ರಿಸುತ್ತಿವೆ.

ಈ ಸಂಸ್ಥೆಗಳು ಸರಕಾರದ ಅಧೀನದಲ್ಲಿದ್ದು ಕೂಡ ಖಾಸಗಿ ಬಡ್ಡಿ ಸಾಹುಕಾರರಿಗೆ ಸರಿ ಮಿಗಿಲೆಂಬಂತೆ ಗ್ರಾಹಕರೊಡನೆ ವ್ಯವಹರಿಸುತ್ತಿರುವ ವಿದ್ಯಮಾನ ಬಹುಕಾಲದಿಂದ ನಡೆದು ಬಂದಿದೆ. ಕೊಟ್ಟ ಸಾಲಕ್ಕೆ ಬಡ್ಡಿ ಸಂಗ್ರಹ ಮಾಡುವುದೇ ಅಲ್ಲದೆ ಸರ್ವಿಸ್ ಚಾರ್ಜ್ ಎಂಬ ಹೆಸರಿನಲ್ಲಿ ಗಮನಾರ್ಹ ಮೊತ್ತವನ್ನು ಇವುಗಳು ವಿಧಿಸುತ್ತವೆ. ಈ ಶುಲ್ಕವೂ ಒಂದೊಂದು ಸಂಸ್ಥೆಯಲ್ಲಿ ಒಂದೊಂದು ವಿಧ. ಒಂದೇ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ವಿವಿಧ ನಮೂನೆ. ಆಯಾ ಬ್ಯಾಂಕಿನ ಮ್ಯಾನೇಜರರಿಗೆ ಖುಷಿ ಬಂದಂತೆ ಗ್ರಾಹಕನಿಗೆ ದಂಡನೆ.

ಬ್ಯಾಂಕುಗಳ ಸಾಲದ ಬಡ್ಡಿ ದರವೇ ಬಹಳ ಹೆಚ್ಚು. ಇದು ಈಗ ಗರಿಷ್ಠ ಶೇಕಡಾ 18. ವ್ಯಾಪಾರಿಗಳು, ವ್ಯವಹಾರದವರು ಉದ್ದಿಮೆದಾರರು ವಾಣಿಜ್ಯ ಬ್ಯಾಂಕುಗಳಿಂದ ಬಡ್ಡಿ ಕೊಟ್ಟು ಸಾಲ ಪಡೆದು ನಡೆಸುವ ವ್ಯವಹಾರ ಇಂದು ಮಾರುಕಟ್ಟೆಯಲ್ಲಿ ಸಾಮಗ್ರಿಗಳ ಬೆಲೆಗಳ ಕಿಚ್ಚಿಗೆ ಎಣ್ಣೆ ಹೊಯ್ಯುತ್ತದೆ. ಬ್ಯಾಂಕು ಬಡ್ಡಿಯೇ ಖಾಸಗಿ ಲೇವಾದೇವಿಗಾರರ ಬಡ್ಡಿಗಿಂತ ಬಹಳವೇನೂ ಕಮ್ಮಿಯಿಲ್ಲ.

ಬ್ಯಾಂಕು ಒದಗಿಸುವ ಇತರ ರೀತಿಯ ಸೇವೆಗಳಿಗೂ ಶುಲ್ಕ ತೆರಬೇಕು. ಚೆಕ್ಕು ವಟಾಯಿಸಲು ಕಮಿಷನ್ ಕೊಡಬೇಕು. ಡಿಮಾಂಡ್ ಡ್ರಾಫ್ಟ್‌ಗೆ ಶುಲ್ಕ ತೆರಬೇಕು. ಅಂಚೆ ಮೂಲಕ ಹಣ ರವಾನಿಸಲೂ ಚಾರ್ಜು ಕೊಡಬೇಕು.

ಅದೇನಿದ್ದರೂ ಗ್ರಾಹಕರು ಪಡೆಯುವ ವಿಶೇಷ ತರದ ಸೇವೆ. ಅದಕ್ಕೆಲ್ಲ ಶುಲ್ಕ ಇರಲಿ. ಆದರೆ ಎಲ್ಲವೂ ಮಿತಿಯಲ್ಲಿರಲಿ. ಈ ಸೇವೆಗೆ ತಗಲುವ ಖರ್ಚನ್ನು ನಿಭಾಯಿಸುವ ಮಟ್ಟದಲ್ಲಿದ್ದರೆ ಸಾಕು. ಈ ಸೇವೆಗಳ ಶುಲ್ಕಗಳಲ್ಲಿಯೂ ಬ್ಯಾಂಕಿನಿಂದ ಬ್ಯಾಂಕಿಗೆ ಭಿನ್ನತೆಯಿದೆ. ಇತ್ತೀಚೆಗೆ ಬ್ಯಾಂಕ್ ಡಿ. ಡಿ. ಶುಲ್ಕ ಒಂದು ಬ್ಯಾಂಕಿನಿಂದ ಇನ್ನೊಂದಕ್ಕೆ ಹತ್ತು ಪಟ್ಟು ಅಂತರವಿದ್ದುದು ಮುಂಗಾರು ಅಂಕಣದಲ್ಲೇ ಪ್ರಕಟಗೊಂಡಿತ್ತು.

ಇವೆಲ್ಲ ಬ್ಯಾಂಕಿನ ಆಡಳಿತದ ಮೇಲೆ ಸರಕಾರಕ್ಕೂ ರಿಸರ್ವ್ ಬ್ಯಾಂಕಿಗೂ ಸೂಕ್ತ ನಿಯಂತ್ರಣ ಇಲ್ಲದಿರುವುದರ ಪರಿಣಾಮವಾಗಿದೆ. ಬ್ಯಾಂಕುಗಳು ತಮ್ಮ ಖರ್ಚು ವೆಚ್ಚ ನಿಭಾಯಿಸಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ತಾವು ವ್ಯವಹಾರದಲ್ಲಿ ಸಂಗ್ರಹಿಸಬೇಕು. ಬದಲಾಗಿ ಬ್ಯಾಂಕುಗಳು ಇಂದು ಬಡ್ಡಿ ಹಾಗೂ ಸರ್ವಿಸ್ ಚಾರ್ಜುಗಳ ಮೂಲಕ ಹಣ ಸಂಗ್ರಹ ಮಾಡಿ ಲಾಭ ಗಳಿಸುವ ಪೈಪೋಟಿಗೆ ಇಳಿದಿವೆ.

ಬ್ಯಾಂಕುಗಳು ತಮ್ಮ ಖರ್ಚಿಗೆ ಬೇಕಾದ್ದನ್ನು ಬಡ್ಡಿ ಮೂಲಕವೇ ಸಂಗ್ರಹಿಸಬೇಕು. ಅದು ಅವುಗಳಿಗೆ ಸಾಕು ಕೂಡ. ಬ್ಯಾಂಕುಗಳು ಠೇವಣಿಗೆ ಕೊಡುವ ಬಡ್ಡಿಯೂ ಸಾಲಕ್ಕೆ ವಸೂಲು ಮಾಡುವ ಬಡ್ಡಿಗೂ ಬಹಳಷ್ಟು ಅಂತರವಿದೆ. ಸರ್ವಿಸ್ ಚಾರ್ಜು ಎಂಬ ವ್ಯವಸ್ಥೆಯ ಮೂಲಕ ಹಣ ಸಂಗ್ರಹದ ದಾರಿಯೇ ತಪ್ಪು. ಅದಕ್ಕೆ ಅವಕಾಶ ಕೊಟ್ಟದ್ದೇ ತಪ್ಪು. ಸರಕಾರಿ ಅಂಗ ಸಂಸ್ಥೆಗಳಾದ ರಾಷ್ಟ್ರೀಕೃತ ಬ್ಯಾಂಕುಗಳ ವ್ಯವಹಾರಕ್ಕೆ ನ್ಯಾಯದ ನೆಲೆ ಇರಬೇಕು.

ಮುಂಗಾರು
ಗುರುವಾರ, ಅಕ್ಟೋಬರ್ 10, 1985

ಕೈಮಗ್ಗವನ್ನು ಕೊಲ್ಲಬೇಡಿ

1985-86ನೇ ಸಾಲಿನಲ್ಲಿ ಕೈಮಗ್ಗವಸ್ತ್ರೋದ್ಯಮಕ್ಕೆ 130 ಕೋಟಿ ರೂಪಾಯಿಗಳಷ್ಟು ಅಂದರೆ ಕಳೆದ ವರ್ಷಕ್ಕಿಂತ ಮೂರುಪಟ್ಟು ಜಾಸ್ತಿ ಸಹಾಯಧನ ಒದಗಿಸಲಾಗುವುದೆಂದು ಕೇಂದ್ರ ಸರಕಾರ ಪ್ರಕಟಿಸಿದೆ.

ಈ ನೀತಿ ಗಾಯಮಾಡಿ ಆ ಮೇಲೆ ಲೇಪ ಹಚ್ಚುವಂತಹದ್ದಾಗಿದೆ. ಯಾಕೆಂದರೆ ಈ ವರ್ಷದ ಜೂನ್ ತಿಂಗಳಲ್ಲಿ ಕೇಂದ್ರ ಸರಕಾರ ಘೋಷಿಸಿದ ಹೊಸ ಜವಳಿ ನೀತಿಯನ್ವಯ ಆಯಾ ರಂಗಗಳಿಗೆ ನಿರ್ದಿಷ್ಟ ನಮೂನೆಯ ಬಟ್ಟೆಗಳನ್ನು ಉತ್ಪಾದನೆಗಾಗಿ ಮೀಸಲಿಡುವುದನ್ನು ಕೈಬಿಟ್ಟು ದೊಡ್ಡ ಗಿರಣಿಗಳು, ವಿದ್ಯುತ್ ಚಾಲಿತ ಮಗ್ಗಗಳು ಹಾಗೂ ಕೈಮಗ್ಗಗಳು ಪರಸ್ಪರ ಸ್ಪರ್ಧಿಸುವ ವಾತಾವರಣವನ್ನು ನಿರ್ಮಿಸಲಾಯಿತು.

ಈ ನೀತಿಯ ಪರಿಣಾಮವಾಗಿ ಮೊದಲೇ ಜನರ ಅವಗಣನೆಯಿಂದ ದುರ್ಬಲವಾಗಿದ್ದ ಕೈ ಮಗ್ಗವನ್ನು ಎದ್ದು ಕೂರಲೂ ಅಸಾಧ್ಯವಾದಂತಹ ನಿತ್ರಾಣದ ಸ್ಥಿತಿಗೆ ದೂಡಿ ಕ್ರಮೇಣ ಸಾಯಿಸುವಂತಹ ಕೆಲಸವನ್ನು ಕೇಂದ್ರ ಸರಕಾರ ಮಾಡಿದಂತಾಗಿದೆ. ಜನತಾ ಸರಕಾರದ ಕಾಲದಲ್ಲಿ ಆಯಾ ರಂಗಗಳಿಗೆ ಇಂತಿಂತಹದೇ ಬಟ್ಟೆಯ ಉತ್ಪಾದನೆಯ ಹಕ್ಕು ಎಂದು ಸ್ಪಷ್ಟವಾಗಿ ನಿಗದಿ ಮಾಡಲಾಗಿತ್ತು. ಆದರೆ ಹೊಸ ನೀತಿಯನ್ವಯ ಯಾವ ಕ್ಷೇತ್ರವೂ ಯಾವ ಬಟ್ಟೆಯನ್ನಾದರೂ ಉತ್ಪಾದಿಸಬಹುದಿತ್ತು.

ಇದೀಗ ನಿಯಂತ್ರಿತ ಬಟ್ಟೆಯನ್ನು ಸಂಪೂರ್ಣವಾಗಿ ಕೈಮಗ್ಗ ಕ್ಷೇತ್ರಕ್ಕೆ ಮೀಸಲಿಡುವುದಾಗಿ ಕೇಂದ್ರ ಸರಕಾರ ಹೇಳುತ್ತಿದೆ. ಆದರೆ ನಿಯಂತ್ರಿತ ಬಟ್ಟೆಯೊಂದನ್ನೇ ಉತ್ಪಾದಿಸಿ ಕೈಮಗ್ಗಗಳು ಖಂಡಿತಾ ಬದುಕಲಾರವು. ಕೈಮಗ್ಗಗಳು ಈಗ ದೇಶದಲ್ಲಿ ವಾರ್ಷಿಕವಾಗಿ ತಯಾರಿಸುತ್ತಿರುವ 300 ಕೋಟಿ ಮೀಟರು ಬಟ್ಟೆಯಲ್ಲಿ ನಿಯಂತ್ರಿತ ಬಟ್ಟೆಯ ಪಾಲು ಮೂವತ್ತು ಲಕ್ಷ ಮೀಟರು ಮಾತ್ರ. ಉಳಿದ 270 ಲಕ್ಷ ಮೀಟರು ಬಟ್ಟೆಯನ್ನು ಅವುಗಳು ಮಾರುಕಟ್ಟೆಯಲ್ಲಿ ಆಧುನಿಕ ಗಿರಣಿಗಳು ಹಾಗೂ ವಿದ್ಯುತ್ ಮಗ್ಗಗಳೊಂದಿಗೆ ಸ್ಪರ್ಧಿಸಿ ಮಾರಬೇಕು. ಹೀಗೆ ಮಾರುವುದು ಅವುಗಳಿಂದಾಗದು ಎಂಬುದು ಆಧುನಿಕ ಉತ್ಪಾದನೆ ಹಾಗೂ ಮಾರುಕಟ್ಟೆಯ ವಾಸ್ತವಿಕತೆಯನ್ನು ಅರಿತಿರುವ ಎಲ್ಲರಿಗೂ ನಿಚ್ಚಳವಾಗಿ ತಿಳಿದಿರುವುದೇ ಆಗಿದೆ.

ಹೀಗೆ ಕೈಮಗ್ಗಗಳಿಗೆ ಸ್ಪರ್ಧೆಯಿಂದ ರಕ್ಷಣೆ ಕೊಡುವ ನೀತಿಯನ್ನು ಸರಕಾರ ಜೂನ್‌ನಲ್ಲಿ ಕೈಬಿಟ್ಟದ್ದು ಈ ರಂಗದ ಅವಸಾನದ ಆರಂಭವಾಗಿತ್ತು, ರಿಯಾಯಿತಿ ದರದಲ್ಲಿ ಕೈಮಗ್ಗದ ಬಟ್ಟೆಗಳನ್ನು ಮಾರಾಟ ಮಾಡುವ ಅವಧಿಯನ್ನೂ ಅದು ಮೊದಲಿದ್ದ 60ದಿನಗಳಿಂದ 30 ದಿನಗಳಿಗೆ ಇಳಿಸಿತ್ತು. ಇದರಿಂದೆಲ್ಲ ಕೈಮಗ್ಗ ರಂಗದಲ್ಲಿ ಹಾಹಾಕಾರ ಎದ್ದಿತ್ತು. ಸುಮಾರು ಒಂದು ಕೋಟಿ ಜನರು ಉದ್ಯೋಗವನ್ನು ಈ ಕ್ಷೇತ್ರದಲ್ಲಿ ಕಂಡುಕೊಂಡಿದ್ದಾರಾದರೂ ಅವರಿಗೆ ಬಾಯಿಬಲವಿಲ್ಲ. ಅವರ ಪರವಾಗಿ ವಾದಿಸುವವರಿಲ್ಲ. ಹಣದ ಬಲ ಅವರಿಗಿಲ್ಲ. ಅಧಿಕಾರದ ಪಡಸಾಲೆಗಳಲ್ಲಿ ಅವರಿಗೆ ಪರಿಚಯದವರಿಲ್ಲ. ದೊಡ್ಡ ಗಿರಣಿಗಳವರು ಈಯೆಲ್ಲಾ ಬಲಗಳನ್ನು ಹೊಂದಿ ತಮಗೆ ಬೇಕಾದಂತಹ ನೀತಿಯ ರಚನೆಗೆ ಸಮರ್ಥರಾದರು.

ಸಹಾಯಧನವನ್ನು ಮೂರು ಪಟ್ಟು ಏರಿಸಿರುವುದು ಸ್ವಾಗತಾರ್ಹ. ಆದರೆ ಅಷ್ಟೇ ಸಾಲದು. ನಿಯಂತ್ರಿತ ಬಟ್ಟೆಯನ್ನು ಮಾತ್ರ ಕೈಮಗ್ಗ ರಂಗಕ್ಕೆ ಮೀಸಲಿಡುವುದರಿಂದ ದೊಡ್ಡ ಪ್ರಯೋಜನವೇನೂ ಅವರಿಗಾಗದು. ಈ ಬಟ್ಟೆಗೆ ಸರಕಾರವೇ ಬೆಲೆ ನಿಗದಿ ಮಾಡುವುದರಿಂದ ಅದು ಸದಾ ಕೆಳಮಟ್ಟದಲ್ಲೇ ಇರುವುದರಿಂದ ನೇಯ್ಗೆಯವರಿಗೆ ಸಿಗುವ ವರಮಾನ ಅಷ್ಟರಲ್ಲೇ ಇದೆ.

ದೊಡ್ಡ ಜನಸಮುದಾಯವೊಂದು ಉದ್ಯೋಗ ಕಂಡುಕೊಂಡಿರುವ ಕೈಮಗ್ಗವನ್ನು ಅಲಕ್ಷಿಸುವುದು ಈ ನಾಡಿನ ಆರ್ಥಿಕತೆಯ ವಾಸ್ತವಿಕತೆಯ ಪರಿಚಯ ನಮ್ಮ ಸರಕಾರಕ್ಕಿಲ್ಲ ಎಂಬುದನ್ನು ತೋರಿಸುತ್ತದೆ. ಒಂದು ಕೋಟಿ ಜನಸಮುದಾಯಕ್ಕೆ ಪರ್ಯಾಯ ಉದ್ಯೋಗವನ್ನು ಕಲ್ಪಿಸುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಈಗಾಗಲೇ ನಮ್ಮ ಕೋಟಿಗಟ್ಟಲೆ ಯುವಕರು ಕೆಲಸವಿಲ್ಲದೆ ಅಂಡಲೆಯುತ್ತಿದ್ದಾರೆ.

ಸರಕಾರ ಮಾಡಬೇಕಾದ್ದು ಕೈಮಗ್ಗ ರಂಗವನ್ನು ಸತ್ವಶಾಲಿಯಾಗಿ ಮಾಡುವಂತಹದ್ದು. ಆ ರಂಗಕ್ಕಾಗಿಯೇ ನಿರ್ದಿಷ್ಟ ಬಟ್ಟೆಗಳನ್ನು ಮೀಸಲಿಡಬೇಕು. ಮಾತ್ರವಲ್ಲ ಆ ನಿಯಮ ಕಟ್ಟುನಿಟ್ಟಾಗಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು.

ಪ್ರಶಸ್ತಿ ಪಡೆದ ಮಹಾನಗರಪಾಲಿಕೆ

ರಾಜ್ಯದ ಮಹಾನಗರ ಪಾಲಿಕೆಗಳ ಪೈಕಿ ಉತ್ತಮ ಸೇವೆ ಸಲ್ಲಿಸಿದ ಸಂಸ್ಥೆಯೆಂದು ಮಂಗಳೂರಿನ ಮಹಾನಗರ ಪಾಲಿಕೆಗೆ 1984-85ನೇ ಸಾಲಿನ 25 ಲಕ್ಷ ರೂ.ಗಳ ಬಹುಮಾನ ಸಂದಿದೆ.

ಈ ಸಾಧನೆ ನಡೆಸಿದ್ದಕ್ಕಾಗಿ ಮಂಗಳೂರು ಮಹಾನಗರ ಪಾಲಿಕೆಗೆ ಅಭಿನಂದನೆಗಳು. ಮಹಾನಗರ ಪಾಲಿಕೆಯಾಗಿ ಭಡ್ತಿ ಹೊಂದಿದ ಕೆಲವೇ ವರ್ಷಗಳಲ್ಲಿ ಇಂತಹ ಸಾಧನೆ ನಡೆಸಲು ಸಾಧ್ಯವಾದುದಕ್ಕೆ ನಗರ ಪಾಲಿಕೆಯ ಮೇಯರ್, ಕಾರ್ಪೊರೇಟರುಗಳು, ಸಿಬ್ಬಂದಿಗಳು, ನಾಗರೀಕರು ಎಲ್ಲರ ಸಹಕಾರವೂ ಕಾರಣ. ನೀತಿ ನಿಯಮಗಳಿಗೆ ಗೌರವವಿತ್ತು ನಡೆಯುವವರು ಎಂದು ಹೆಸರಾದ ಮಂಗಳೂರು ನಗರದ ಜನ ಕ್ಲಪ್ತ ಕಾಲಕ್ಕೆ ತೆರಿಗೆಗಳನ್ನು ಪಾವತಿ ಮಾಡಿರುವುದೂ ನಗರ ಪಾಲಿಕೆಯು ತನ್ನ ಕೆಲಸಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಸಹಾಯಕವಾಯಿತು ಎಂಬುದನ್ನು ಮರೆಯಬಾರದು.

ಉತ್ತಮ ನಗರ ಸಭೆಯೆಂದು ಉಡುಪಿ ನಗರ ಸಭೆಗೂ ಐದು ಲಕ್ಷ ರೂಪಾಯಿ ಬಹುಮಾನ ಸಂದಿದೆ. ಇದನ್ನು ಸಾಧಿಸಿದ ಉಡುಪಿಯ ಜನರಿಗೆ ನಮ್ಮ ಅಭಿನಂದನೆಗಳು.

ಪ್ರಶಸ್ತಿ ಬಂದಿದೆ ಎಂದ ಮಾತ್ರಕ್ಕೆ ಈ ಸಂಸ್ಥೆಗಳು ದೋಷಾತೀತವೆಂದೋ ಅವುಗಳು ಇನ್ನೇನೂ ಮಾಡಬೇಕಾದ್ದು ಇಲ್ಲವೆಂದೋ ತಿಳಿದುಕೊಳ್ಳಬಾರದು. ಬೆಳೆಯುತ್ತಿರುವ ಮಂಗಳೂರಿನ ಸಮಸ್ಯೆಗಳೂ ಜತೆಗೇ ಬೆಳೆಯುತ್ತಿವೆ. ಈ ನಗರದ ವಸತಿ ಸಮಸ್ಯೆ ಬಲು ದೊಡ್ಡದು ಹಾಗೂ ಬಲು ಭೀಕರವಾದದ್ದು. ಅದರ ನಿವಾರಣೆಗೆ ಸೂಕ್ತ ಹೆಜ್ಜೆಗಳನ್ನು ಮಹಾನಗರ ಪಾಲಿಕೆ ಇರಿಸಬೇಕು. ಸೂಕ್ತ ಅಂಗಸಂಸ್ಥೆಗಳನ್ನು ರಚಿಸಿಕೊಂಡು ಖಾಸಗಿ ಜಮೀನನ್ನು ವಶಕ್ಕೆ ಪಡೆದು ನ್ಯಾಯ ಬೆಲೆಯಲ್ಲಿ ಆಸಕ್ತ ಸಾರ್ವಜನಿಕರಿಗೆ ವಿತರಿಸುವ ಕೆಲಸವನ್ನು ಅದು ಮಾಡಬೇಕಾಗಿದೆ. ಅದಕ್ಕೆ ಕಾಯಿದೆಯನ್ನು ರಚಿಸಬೇಕಿದ್ದರೆ ರಾಜ್ಯ ಸರಕಾರದೊಡನೆ ಸಮಾಲೋಚಿಸಿ ಸೂಕ್ತ ಕಾಯಿದೆಯ ರಚನೆ ಕೆಲಸಕ್ಕೆ ಚಾಲನೆ ಕೊಡಬೇಕು. ಅಗತ್ಯವೆನಿಸಿದರೆ ಮಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಬೇಕು.

ಕೆಲವು ವರ್ಷಗಳ ಹಿಂದೆ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿರುವ 14 ಗ್ರಾಮಗಳಲ್ಲಿ ನಾಗರೀಕರಿಗೆ ಆಧುನಿಕ ಜೀವನದ ಹಲವಾರು ಸೌಲಭ್ಯಗಳು ಇನ್ನೂ ದೊರಕಿಲ್ಲ. ಅವುಗಳನ್ನು ದೊರಕಿಸುವ ಕೆಲಸದತ್ತ ನಗರಪಾಲಿಕೆ ಗಮನ ಹರಿಸಬೇಕು. ನಗರದಲ್ಲಿ ಕುಡಿಯುವ ನೀರಿನ ಪೂರೈಕೆ ಸಮರ್ಪಕವಿಲ್ಲ. ಅದನ್ನೂ ಸುಧಾರಿಸುವತ್ತ ಗಮನಿಸಬೇಕು. ನಗರದೊಳಗೆ ಶೌಚ ಸೌಲಭ್ಯಗಳು ಸರಿಯಾಗಿಲ್ಲ. ನಗರಕ್ಕೆ ಭೇಟಿ ಕೊಡುವ ಪ್ರವಾಸಿಗರೂ ಗ್ರಾಮೀಣ ಜನರೂ ಇಂತಹ ಅಸೌಕರ್ಯದಿಂದಾಗಿ ಬಲು ಪಾಡು ಪಡುತ್ತಿದ್ದಾರೆ. ನಗರ ಪಾಲಿಕೆ ಇನ್ನಷ್ಟು ಸಮರ್ಥವಿದೆ ಎನಿಸಿ ಮತ್ತಷ್ಟು ಪ್ರಶಸ್ತಿಗಳನ್ನು ಪಡೆಯಲು ನಾಗರೀಕರಿಗೆ ಇಂತ[illegible] ಸೌಲಭ್ಯಗಳನ್ನೆಲ್ಲ ಒದಗಿಸಿ ಕೆಲಸ ಮಾಡಬೇಕ[illegible] ಜನರ ಪ್ರೀತಿಗೂ ಪಾತ್ರವಾಗಬೇಕು.

'ಅರ್ಥ್'

ನಟ-ನಟಿಯರ ಖಾಸಗಿ ಬದುಕಿನ ಗಾಸಿಪ್ ಹುಟ್ಟುವ ಬಗ್ಗೆ. ಈ ಚಿತ್ರ ಇನ್ನಷ್ಟು ಗ್ರಾಸ ಒದಗಿಸಿದರೆ ಆಶ್ಚರ್ಯ ಪಡಬೇಕಿಲ್ಲ.

ಮಂಗಳೂರು — ಎಂ. ಬಿ. ಹಾರ್‍ಯಾಡಿ

ಹೊಸತನ ಕಾಣದ 'ತಾಯಿ ಮಮತೆ'

'ಟೈಗರ್' ಪ್ರಭಾಕರ್‌ಗೆ ತ್ರಿಪಾತ್ರಗಳ ಅವಕಾಶ ಕಲ್ಪಿಸಲೆಂದೇ 'ತಾಯಿ ಮಮತೆ' ಚಿತ್ರವನ್ನು ಮಾಡಿದಂತಿದೆ. ಫಾಮು ೯ಲಾ ದಿಂದ ಆಚೀಚೆ ಹೋಗದಂತೆ ನಿರ್ಮಿಸಲಾಗಿರುವ ಈ ಚಿತ್ರದಲ್ಲಿ ಹೊಸತನ ಅನ್ನುವಂಥದು ಏನೂ ಇಲ್ಲ. ಅಪರೂಪಕ್ಕೊಮ್ಮೆ ಕಾಣಿಸಿಕೊಳ್ಳುವ ರಾಜೇಶ್ ಈ ಚಿತ್ರದ ವಿಶೇಷ.

ಸುಂದರ ಮಗು ಬಯಸಿದ ಕುರೂಪಿ ತಂದೆಗೆ ಮೊದಲು ಹುಟ್ಟುವುದು ತನ್ನಂತೆಯೇ ಇರುವ ಮಗು ಚಿಕ್ಕಂದಿನಲ್ಲಿ ತಾನು ಅನುಭವಿಸಿದ ಹಿಂಸೆಯನ್ನು ಮುಂದೆ ತನ್ನ ಮಗನೂ ಅನುಭವಿಸಬಾರದೆಂದು, ಅದನ್ನು ಕೊಂದುಬಿಡಲು ವೈದ್ಯರನ್ನು ಕೇಳಿಕೊಳ್ಳುತ್ತಾನೆ. ಆದರೆ ವೈದ್ಯ ಆ ಮಗುವನ್ನು ಅನಾಥಾಶ್ರಮಕ್ಕೆ ಸೇರಿಸುತ್ತಾನೆ.

ಈ ಮಧ್ಯೆ ಮತ್ತೊಂದು ಮಗು ಸುಂದರವಾಗಿರುವುದು — ಹುಟ್ಟುತ್ತದೆ. ಕುರೂಪಿ ತಂದೆಗೆ ತಾಯಿಯ ಅತಿಯಾದ ಮುದ್ದಿನಿಂದ ಚೆಲ್ಲು ಚೆಲ್ಲಾಗಿ ಬೆಳೆಯುತ್ತಾನೆ. ತಂದೆ ಹಾಗೂ ಇಬ್ಬರೂ ಮಕ್ಕಳ ಪಾತ್ರವನ್ನು ಪ್ರಭಾಕರ್ ಒಬ್ಬರೇ ನಿರ್ವಹಿಸಿದ್ದಾರೆಂದು ಬೇರೆಯಾಗಿ ಹೇಳಬೇಕಾಗಿಲ್ಲವಲ್ಲ!

ಅನಾಥಾಶ್ರಮದಲ್ಲಿ ಬೆಳೆದ ಮಗ, ತನ್ನ ಗುರು ಸಾಯುವ ವೇಳೆ ತಂದೆ–ತಾಯಿಗಳು ಬದುಕಿರುವ ಸುದ್ದಿ ತಿಳಿದು ಅವರನ್ನು ಕಾಣಲು ಪರಿತಪಿಸುವುದು. ತಾಯಿಯ ಅಂತರಂಗ ವಿಲಿವಿಲಿ ಒದ್ದಾಡುವುದು ಇವೆಲ್ಲಾ ಹೆಂಗಸರ ಕರ್ಚೀಫ್ ಒದ್ದೆ ಮಾಡಲು ಸೇರಿಕೊಂಡಿರುವ ಅಂಶಗಳು.

ಕಿರಿಯ ಮಗ ಅಪಾಯಕ್ಕೆ ಸಿಕ್ಕಿಕೊಳ್ಳುವುದು. ಮಧ್ಯದಲ್ಲಿ ಕುಟುಂಬ ಪ್ರವೇಶಿಸುವ ಹಿರಿಯ ಮಗ ಆತನ ರಕ್ಷಣೆಯಲ್ಲಿ ಪ್ರಾಣ ನೀಗುವುದು ಇವೆಲ್ಲಾ ಚಿತ್ರದಲ್ಲಿವೆ ಎಂಬುದನ್ನು ನೀವು ಈಗಾಗಲೇ ಊಹಿಸಿರಬೇಕಲ್ಲಾ! ಆ ದೃಶ್ಯಗಳೂ ಇವೆ. ಅಷ್ಟೆ, ಮತ್ತೇನಿಲ್ಲ!

ಸುಮಲತಾ ಅನ್ನುವ ಹುಡುಗಿಯಿಂದ ಒಂದು ಪಾರ್ಟಿ ಮಾಡಿಸಿ ಆಕೆಗಾಗಿ ಸ್ವಲ್ಪ ಹಣ ಖರ್ಚುಮಾಡುವ ಅಗತ್ಯವಂತೂ ಇರಲಿಲ್ಲ. ಆದರೂ ಆಗಿದೆ ಯಾಕೆಂದರೆ ಚಿತ್ರವೆಂದರೆ ಯುವ ನಾಯಕಿಯೊಬ್ಬಳು ಇರಲೇಬೇಕಲ್ಲಾ!

ಮಂಗಳೂರು — ಶರ್ಕಿನ್ನನ್

...ತಾಯಿ'

...ಸಂಸ್ಥೆಯ ದ್ವಾರಕಾನಾಥ್ ಅವರು ಈ ಬಾರಿ ಅದ್ದೂರಿ ಚಿತ್ರವೊಂದರ ತಯಾರಿಕೆಗೆ ಕೈ ಹಾಕಿದ್ದಾರೆ. ಈ ಚಿತ್ರದ ಚಿತ್ರೀಕರಣ ನವೆಂಬರ್‌ನಲ್ಲಿ ಕಾರವಾರದ ಹೊರಾಂಗಣದಲ್ಲಿ ಆರಂಭವಾಗಲಿದೆ.

ಡಾ। ರಾಜ್‌ಕುಮಾರ್ ಅವರು ವಿಶಿಷ್ಟ ಪಾತ್ರವೊಂದರಲ್ಲಿ ಅಭಿನಯಿಸಲಿರುವರು. ಈ ಚಿತ್ರವನ್ನು ಶಂಕರ್‌ನಾಗ್ ನಿರ್ದೇಶಿಸಲಿದ್ದು ಚಿತ್ರಕ್ಕೆ "ಒಂದು ಮುತ್ತಿನ ಕಥೆ" ಎಂದು ಹೆಸರಿಡಲಾಗಿದೆ.

...ಎಂ. ರಂಗರಾವ್‌ಗೆ ಸನ್ಮಾನ

"ರಾಗ ರಂಜಿನಿ" ಸಂಸ್ಥೆಯ ಆಶ್ರಯದಲ್ಲಿ ಬೆಂಗಳೂರಲ್ಲಿ ಜರಗಿದ ಸಮಾರಂಭದಲ್ಲಿ ಎಂ.ರಂಗರಾವ್ ಅವರನ್ನು ಸನ್ಮಾನಿಸಲಾಯಿತು. ಚಲನ ಚಿತ್ರ ಹಿನ್ನೆಲೆ ಗಾಯಕಿ ...ರೂರು ಲತಾ ಅವರ ಪ್ರಾರ್ಥನೆ...ಗೆ ಆರಂಭವಾದ ಈ ಸಮಾರಂಭ... ಡಾ। ರಾಜ್ ಕುಮಾರ್ ...ರಂಗರಾಯರಿಗೆ "ಸಂಗೀತ ವಿದ್ವ...ರುದನ್ನು ಪ್ರದಾನಗೈದರಲ್ಲದೆ ...

ಅರವಿಂದ — "ಶಂಖನಾದ"

'ಕರ್ನಾಟಕ್ ಕೇ ಮುಖೇಶ್'

ಅಮೀರ್ ಜಾನ್

"ಆ.. ಲೌಟ್ ಕೆ ಆಜಾ ಮೇರಿ ಮೀತ್ ತುಝ್ಕೋ ಮೇರೆ ಗೀತ್ ಬುಲಾತೇ ಹೈಂ"

'ರಾಣಿ ರೂಪ್‌ಮತಿ'ಯ ಈ ವಿರಹ ಗೀತೆ ಯಾವುದೇ ಭಗ್ನ ಹೃದಯಿಯ ಮನ ತಟ್ಟುವ ಸುಂದರ ಗೀತೆ. ಮೂಲತ: ಮುಖೇಶರ ಧ್ವನಿಯಲ್ಲಿ ಹರಿದ ಈ ಸಂಗೀತ ಸುಧೆ ಇತ್ತೀಚೆಗೆ ನಗರದ ಸಂಗೀತ ರಸ ಸಂಜೆಯಲ್ಲ "ವನ್ಸ್ ಮೋರ್"ಗಳಿಸಿದ ಹಾಡು. ಹಾಡುತ್ತಿದ್ದ ಗಾಯಕ ಅಮೀರ್ ಜಾನ್. ಮುಖೇಶ್ ಅವರ ಧ್ವನಿಯನ್ನು ಅನುಕರಿಸುವ ಕಲಾವಿದರು ಕರ್ನಾಟಕದಲ್ಲಿ ವಿರಳ. ಅವರಲ್ಲಿ ಅಮೀರ್‌ಜಾನ್ ಪ್ರಮುಖರು.

ನಗರದ ಖಾಸಗಿ ಸಂಸ್ಥೆಯೊಂದರ ನೌಕರರಾದ ಅಮೀರ್ ಜಾನ್ ಕಳೆದ 15 ವರ್ಷಗಳಿಂದಲೂ ಹಾಡುತ್ತಾಬಂದಿದ್ದಾರೆ. ಸಂಗೀತದ ಮನೆತನದಲ್ಲೇ ಬೆಳೆದು ಬಂದ 'ಅಮಿ' ಪ್ರಾರಂಭದಿಂದಲೂ ಮುಖೇಶ್ ಹಾಗೂ ಸೈಗಲ್‌ರ ಧ್ವನಿಯ ಅನುಕರಣೆಯಲ್ಲೇ ಉತ್ಸಾಹ ತೋರಿದ್ದರಿಂದ ಇನ್ನಿತರರ ಹಾಡುಗಳನ್ನಿವರಿಗೆ ಹಾಡಲಾಗುತ್ತಿಲ್ಲ.



ಸಂಗೀತ ಸಾಗರದಲ್ಲಿ ತಾನಿನ್ನೂ ಒಂದು ಬಿಂದು ಎನ್ನುವ 'ಅಮಿ' ನಾಟಕಗಳಲ್ಲಿ ಹಾಡುವುದರ ಮೂಲಕ ಪದಾರ್ಪಣೆ ಗೈದವರು. ಆಗ ಅವರ ಸಹೋದರರು ಅಮಿಯನ್ನು ಬಹಳವಾಗಿ ಪ್ರೋತ್ಸಾಹಿಸಿ ತಾವೇ ಸ್ಥಾಪಿಸಿದ್ದ 'ರಿವಾ-ರೋಸಸ್ ನೈಟ್' ಮೂಲಕ ಕರ್ನಾಟಕದ ಹಲವು ನಗರಗಳಲ್ಲಿ ಯಶಸ್ವೀ ಕಾರ್ಯಕ್ರಮಗಳನ್ನು ನೀಡಿದರು. ...ಸಹೋದರರಾದ ಸಿರಾಜ್-...

ಜಾನ್‌ರ "ಮುಖೇಶ್ ಧ್ವನಿ"ಯನ್ನು ನಗರದ ಖ್ಯಾತ ಸಂಗೀತ ನಿರ್ದೇಶಕರಾದ "ಅಶೋಕ್–ಚರಣ್" ಬಳಗ ಹಾಗೂ "ಕ್ವಾಲಿಟಿ ಬೀಟ್ಸ್"ಗಳ ಕಾರ್ಯಕ್ರಮಗಳಲ್ಲಿ ಆಲಿಸಬಹುದು. ಇತ್ತೀಚೆಗೆ ಚರಣ್‌ರವರ ಸಂಗೀತ ನಿರ್ದೇಶನದಲ್ಲಿ ತಯಾರಾಗಿರುವ 'ಮಾಪ್ಲೆಪಾಟ್ ಕ್ಯಾಸೆಟ್"ನಲ್ಲೂ "ಅಮಿ" ಹಾಡೊಂದನ್ನು ಹಾಡಿದ್ದಾರೆ.

ಸುಮಾರು ನೂರಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿರುವ ಅಮೀರ್ ಜಾನ್ ಇತ್ತೀಚೆಗೆ ಕಲ್ಲಿಕೋಟೆಯಲ್ಲಿ "ಮುಖೇಶ್ ನೈಟ್" ಎಂಬ ಏಕವ್ಯಕ್ತಿ ಕಾರ್ಯಕ್ರಮದಲ್ಲಿ 35ಕ್ಕೂ ಹೆಚ್ಚು ಗೀತೆಗಳನ್ನು ಸತತವಾಗಿ ಹಾಡಿ ಭಾರೀ ಮೆಚ್ಚುಗೆ ಗಳಿಸಿದ್ದಾರೆ. ಮುಂಬೈ, ಕಲ್ಲಿಕೋಟೆ ಹಾಗೂ ಇನ್ನಿತರ ಪ್ರಮುಖ ಕೇಂದ್ರಗಳಲ್ಲಿ ಕಾರ್ಯಕ್ರಮ ನೀಡಿರುವ ಇವರು 'ಕರ್ನಾಟಕ್ ಕೆ ಮುಖೇಶ್ ಎಂದೇ ಖ್ಯಾತರು. ಖ್ಯಾತ ಸಿನಿಮಾ ಗಾಯಕರಾದ ಪಿ. ಬಿ. ಶ್ರೀನಿವಾಸ್ ಹಾಗೂ ಕಸ್ತೂರಿ ಶಂಕರ್‌ರವರ ಜತೆ ಮುಂಬೈನಲ್ಲಿ ಇವರು ನೀಡಿದ ಕಾರ್ಯಕ್ರಮ ಜನಪ್ರಿಯವಾಗಿದ್ದು ಇವರ ಏಕವ್ಯಕ್ತಿ ಕಾರ್ಯಕ್ರಮವು ಬೆಹ್ರೀನ್, ಕುವೈಟ್ ಹಾಗೂ ದುಬೈಗಳಲ್ಲಿ ಸಂಯೋಜಿಸುವ ಬಗ್ಗೆ ಮಾತುಕತೆ ನಡೆಯುತ್ತಿದೆ.

ಸಂಗೀತವು ದೈವದತ್ತವಾದ ವರಪ್ರಸಾದ ಆದರೂ ಶ್ರದ್ಧಾಪೂರ್ಣ ಪರಿಶ್ರಮ ನಡೆಯದಿದ್ದಲ್ಲಿ ಅದು ಮೊಗ್ಗಿನಲ್ಲಿಯೇ ಮುರುಟಿ ಹೋಗುವ ಸಂಭವವಿದೆ ಎನ್ನುವ 'ಅಮಿ'ಗೆ ತಾನು ಶಾಸ್ತ್ರೀಯವಾಗಿ ಸಂಗೀತಾಭ್ಯಾಸ ನಡೆಸಿಲ್ಲವೆಂಬ ಕೊರಗೂ ಇದೆ. ಹಾಗಾಗಿ, ಮುಖೇಶ್ ಜೀಯ 'ರಾಮಚರಿತ ಮಾನಸ್' ಮುಂತಾದ ಸುಶ್ರಾವ್ಯ ಕಾವ್ಯಗಳನ್ನು ಹಾಡಲು ಸಾಧ್ಯವಿಲ್ಲವಾಗಿದೆ ಎಂದು ಖಿನ್ನರಾಗಿ ನುಡಿಯುತ್ತಾರೆ. ಸತತ ಅಭ್ಯಾಸ, ಶ್ರದ್ಧೆಯಿಂದ ತಾನಿನ್ನೂ ಬೆಳೆಯ ಬೇಕಾಗಿದೆ ಎನ್ನುವ ಸೌಜನ್ಯತೆ ಹೊಂದಿರುವ ಇವರು ತನ್ನ ಇಂದಿನ ಸ್ಥಿತಿಗೆ ಹಲವಾರು ಹಿತೈಷಿಗಳ ಹಾಗೂ ತನ್ನ ಪತ್ನಿ ಶಮೀಂ ಭಾನುರವರ ಪ್ರೋತ್ಸಾಹ, ಬೆಂಬಲಗಳೇ ಕಾರಣ ಎನ್ನುತ್ತಾರೆ.

ಮುಂಗಾರು

ಮನುಕುಲದ ಉಳಿವಿಗೆ ಮುಂದಾಗಲಿ

ಕಮ್ಯೂನಿಸ್ಟ್ ರಶ್ಯದಲ್ಲಿ ಇನ್ನೋರ್ವ ನಾಯಕ ಅಸ್ತಂಗತನಾಗಿದ್ದಾರೆ. ಇಡಿಯ ಮಾನವ ಜನಾಂಗದ ಭವಿಷ್ಯವನ್ನೇ ನಿರ್ಧರಿಸಬಲ್ಲಂತಹ ದೇಶವೊಂದರಲ್ಲಿ ನಡೆಯುವ ನಾಯಕತ್ವ ಬದಲಾವಣೆಯ ವಿದ್ಯಮಾನಗಳು ಸಹಜವಾಗಿಯೆ ಜಗತ್ತಿನ ಮೇಲೆ ಪರಿಣಾಮ ಬೀರುವಂತಹವು. ಕಮ್ಯೂನಿಸ್ಟ್ ತತ್ವದ ಹಾಗೂ ಧೋರಣೆಗಳ ಭದ್ರವಾದ ಚೌಕಟ್ಟು ರಶ್ಯಕ್ಕಿದ್ದರೂ ಅಧಿಕಾರಕ್ಕೆ ಬಂದು ಆಡಳಿತ ಸೂತ್ರವನ್ನು ಚಲಾಯಿಸುವ ವ್ಯಕ್ತಿಯ ತತ್ವಾದರ್ಶನಗಳು, ಮನೋವೃತ್ತಿ ಹಾಗೂ ನಡವಳಿಕೆಗಳು ಕೂಡ ಮಹತ್ವದ್ದೆನಿಸುತ್ತವೆ.

ಈ ಹಿನ್ನೆಲೆಯಲ್ಲಿ ಕಾನ್‌ಸ್ಟಾಂಟೈನ್ ಚೆರ್ನೆಂಕೊ ಅವರ ಧೋರಣೆಗಳು, ಕಾರ್ಯವಿಧಾನ ಹಾಗೂ ವೈಯಕ್ತಿಕ ಇಷ್ಟಾನಿಷ್ಟಗಳನ್ನು ಪ್ರಪಂಚವು ತಿಳಿದುಕೊಳ್ಳುವುದಕ್ಕೆ ಸಮಯ ತುಂಬಾ ಕಡಿಮೆಯಾದುದಾಗಿತ್ತಾದರೂ ಅಮೆರಿಕಕ್ಕೆ ಎದುರಾಗಿರುವ ಸಂದರ್ಭದಲ್ಲಿ ಚೆರ್ನೆಂಕೋ ಸೌಮ್ಯನೀತಿಯನ್ನು ಹೊಂದಿದ್ದರೆಂಬುದು ಸ್ಪಷ್ಟವಾಗಿತ್ತು. ಬದಲಾಗಿ ಅವರ ಪೂರ್ವಾಧಿಕಾರಿಗಳಾಗಿದ್ದ ಯೂರಿ ಅಂದ್ರೋಪೋವ್ ಹಾಗೂ ಲಿಯೊನಿದ್ ಬ್ರೆಜ್ನೇವ್‌ರು ತುಲನಾತ್ಮಕವಾಗಿ ಕಠಿನವಾದಿಗಳಾಗಿದ್ದರು. ಇದೀಗ ಬಂದಿರುವ ಗೋರ್ಬಚೇವ್ ಪಶ್ಚಿಮದವರಿಗೆ ಇಷ್ಟವಾದವರು ಎಂಬ ವರದಿಗಳಿವೆ.

ಅಮೆರಿಕ ಹಾಗೂ ರಶ್ಯಗಳು ಇಂದು ಪ್ರಪಂಚದಲ್ಲಿ ಬಲಾಢ್ಯವಾಗಿ ಮೆರೆಯುತ್ತ ಇಡಿಯ ಭೂಗೋಲವನ್ನು ನಿಯಂತ್ರಿಸುವುದಕ್ಕಿರುವ ಧನಸಂಪತ್ತಿನ ಹಾಗೂ ತಂತ್ರಜ್ಞಾನದ ಬಲವನ್ನು ಹೊಂದಿ ಅಧಿಪತ್ಯಕ್ಕಾಗಿ ವಸ್ತುಶಃ ಹೋರಾಟವೊಂದರಲ್ಲಿ ನಿರತವಾಗಿವೆ. ಎರಡನೆ ಮಹಾಯುದ್ಧನಂತರದ ಶೀತಲ ಸಮರ ಸ್ವಲ್ಪ ಮಟ್ಟಿಗೆ ಶಮನಗೊಂಡಿದ್ದರೂ ಯುರೋಪಿನಲ್ಲಿಯೂ ಮೂರನೆ ಜಗತ್ತಿನ ದೇಶಗಳಲ್ಲಿಯೂ ಪ್ರಭಾವ ವಲಯಗಳ ವಿಸ್ತರಣೆಗೆ ಕುಟಿಲ ಕಾರಸ್ಥಾನಗಳು ಇನ್ನೂ ನಡೆಯುತ್ತಿವೆ. ಈ ವಿದ್ಯಮಾನಗಳು ಆಫ್ರಿಕಾ ಖಂಡದಲ್ಲಿ ತೀವ್ರಗತಿಯಲ್ಲಿ ಬಲು ನಗ್ನ ಸ್ವರೂಪದಲ್ಲಿ ನಡೆಯುತ್ತಿದೆ.

ವರ್ಚಸ್ಸು ಹಾಗೂ ನಿಯಂತ್ರಣ ಹೆಚ್ಚು ಮಾಡಿಕೊಳ್ಳುವ ಷಡ್ಯಂತ್ರಗಳು ಒಂದೆಡೆಯಾದರೆ ಸ್ವಂತ ಅಸ್ತಿತ್ವದ ರಕ್ಷಣೆಗಾಗಿಯೂ ಎದುರಾಳಿಯನ್ನು ನಾಶ ಮಾಡುವ ಸಾಮರ್ಥ್ಯದಲ್ಲಿ ಹಿಂದೆ ಬೀಳದಂತೆ ನೋಡಿಕೊಳ್ಳುವುದಕ್ಕಾಗಿಯೂ ಶಸ್ತ್ರಾಸ್ತ್ರ ಪೈಪೋಟಿ ಹಿಂದೆಂದೂ ಇಲ್ಲದಂತೆ ದಾಪುಗಾಲಿನಿಂದ ಸಾಗುತ್ತಿದೆ. ಕಳೆದ ವರ್ಷವಷ್ಟೇ ಅಮೆರಿಕ ಯುರೋಪಿನ ತನ್ನ ಮಿತ್ರರಾಷ್ಟ್ರಗಳ ನೆಲದಲ್ಲಿ ಪರ್ಷಿಂಗ್ ಕ್ಷಿಪಣಿಗಳನ್ನು ಸ್ಥಾಪಿಸುವ ವಿಚಾರದಲ್ಲಿ ರಾದ್ಧಾಂತವೇ ನಡೆಯಿತು. ಅಣ್ವಸ್ತ್ರಮಿತಿ ಮಾತುಕತೆಯಿಂದ ರಶ್ಯ ಹಿಂದೆಗೆಯಿತು. ಈ ಮಾತುಕತೆಗಳನ್ನು ಪುನರಾಂಭಿಸಲಾಗುವುದೆಂಬ ಸುದ್ದಿಗಳಿದ್ದರೂ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

ಇದೀಗ ರಶ್ಯದಲ್ಲಿ ಚೆರ್ನೆಂಕೋರವರ ಉತ್ತರಾಧಿಕಾರಿ ಅಧಿಕಾರಕ್ಕೆ ಬರಲಿರುವ ಮಿಖಾಯಿಲ್ ಗೋರ್ಬಚೇವ್, ಹಾಗೆಯೆ ರಶ್ಯದ ಪ್ರಮುಖ ಎದುರಾಳಿಯಾಗಿರುವ ಅಮೆರಿಕ ಅಧ್ಯಕ್ಷ ರೊನಾಲ್ಡ್ ರೇಗನ್ ಅವರ ಮುಂದೆ ಮಹತ್ವದ ಪಂಥಾಹ್ವಾನಗಳಿವೆ. ಇವರಿಬ್ಬರು ನಾಯಕರೂ ಪ್ರತಿಷ್ಠೆಯನ್ನು ಬದಿಗಿಟ್ಟು ಶಸ್ತ್ರಾಸ್ತ್ರ ಪೈಪೋಟಿಯನ್ನು ಕಮ್ಮಿ ಮಾಡಲು ಹಾಗೂ ಕ್ರಮೇಣ ಪರಮಾಣು ಶಸ್ತ್ರಗಳ ಉತ್ಪಾದನೆಯನ್ನು ನಿಲ್ಲಿಸುವ ನಿಟ್ಟಿನಲ್ಲಿ ಕೆಲಸ ಮಾಡದಿದ್ದರೆ ಇಡಿಯ ಮನುಕುಲಕ್ಕೇ ಅಪಾಯವಿದೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಅಂತೂ ರಶ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮೂವರು ನಾಯಕರು ಅಸ್ತಂಗತರಾದರೂ ಅಧಿಕಾರ ಹಸ್ತಾಂತರ ಸುಸೂತ್ರವಾಗಿ ಜರಗುತ್ತ ಬಂದಿರುವುದು ಪ್ರಪಂಚದ ಶಾಂತಿಯ ದೃಷ್ಟಿಯಿಂದ ಸ್ವಾಗತಾರ್ಹ.

ಸ್ವಾಯತ್ತೆ ಕೊಡದಿದ್ದರೆ ನಾಡು ಉಳಿಯದು

ಎಂಟು ಮಂದಿ ಬಂಧಿತ ಅಕಾಲಿ ನಾಯಕರನ್ನು ಬಿಡುಗಡೆ ಮಾಡುವ ಮೂಲಕ ಕೇಂದ್ರ ಸರಕಾರ ಪಂಜಾಬು ಸಮಸ್ಯೆಯ ಪರಿಹಾರದ ನಿಟ್ಟಿನಲ್ಲಿ ಮಹತ್ವದ ಹಜ್ಜೆಯೊಂದನ್ನಿರಿಸಿದೆ.

ಜತೆಗೆ ಪಂಜಾಬಿನ ಕೆಲವು ಪ್ರದೇಶಗಳಿಂದ ಸೇನೆಯನ್ನೂ ಹಿಂದೆಗೆಯಲಾಗಿದೆಯೆಂದು ಪ್ರಧಾನಮಂತ್ರಿ ರಾಜೀವಗಾಂಧಿ ಹೇಳಿದ್ದಾರೆ. ಎಲ್ಲೆಡೆಯಿಂದಲೂ ಸೈನ್ಯವನ್ನು ವಾಪಾಸು ಕರೆಸಿಕೊಳ್ಳಲು ತೊಂದರೆಗಳಿವೆ ಎಂದು ಕೂಡ ಅವರು ಹೇಳಿದ್ದಾರೆ. ಪಂಜಾಬಿನ ಸಿಕ್ಖರ ಉಗ್ರಗಾಮಿ ಚಟುವಟಿಕೆ ಪ್ರವೃತ್ತಿ ಸಂಪೂರ್ಣ ಶಮನಗೊಳ್ಳದೆ ಇರುವ ಈ ಸಂದರ್ಭದಲ್ಲಿ ಸೈನ್ಯವನ್ನು ಹಿಂದೆಗೆಯುವುದು ಸೂಕ್ತವಲ್ಲವೆಂಬುದು ಶಾಂತಿ ಹಾಗೂ ಸುವ್ಯವಸ್ಥೆಯ ಬಯಕೆಯಿರುವ ಎಲ್ಲರಿಗೂ ಅರ್ಥವಾಗುತ್ತದೆ.

ಆದರೆ ಬೇಕಾಗಿರುವುದು ಈ ಸಮಸ್ಯೆಯನ್ನು ನಿಜವಾಗಿಯೂ ಅಂತಿಮವಾಗಿ ಬಗೆಹರಿಸಬೇಕಾಗಿದೆಯೆಂಬ ಬಯಕೆ ಹಾಗೂ ರಾಜಕೀಯ ಇಚ್ಛಾಶಕ್ತಿ. ಬಂಧಿತ ನಾಯಕರ ಬಿಡುಗಡೆಯೊಂದನ್ನು ಬಿಟ್ಟರೆ ಕಳೆದ ನವಂಬರದಿಂದೀಚೆ ಪಂಜಾಬು ಕ್ಷೋಭೆಯನ್ನು ಶಣಿಸುವುದಕ್ಕೆ ಬೇಕಾದ ಬೇರಾವುದೆ ಮಾತನ್ನು ರಾಜೀವಗಾಂಧಿಯವರು ಆಡಿದ್ದಾಗಲಿ ಹೆಜ್ಜೆಯನ್ನು ಇರಿಸಿದ್ದಾಗಲಿ ಕಾಣಿಸಿಲ್ಲ. ಬದಲಾಗಿ ಪಂಜಾಬು ಸಮಸ್ಯೆಗೆ ವಿರೋಧ ಪಕ್ಷಗಳು ಕಾರಣವೆಂಬಂತೆ ಕಳೆದ ಲೋಕಸಭಾ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಅವರು ಹೇಳುತ್ತ ತಿರುಗಿದರು. ಪಂಜಾಬು ಸಮಸ್ಯೆಯಂತಹ ರಾಷ್ಟ್ರೀಯ ಬಿಕ್ಕಟ್ಟಿನ ವಿಚಾರದಲ್ಲಿ ವಿರೋಧ ಪಕ್ಷಗಳ ಸಹಿತ ದೇಶದ ಎಲ್ಲರ ಸಹಾಯ ಸಹಕಾರವನ್ನು ಗಳಿಸಿಕೊಂಡು ಪರಿಹಾರ ಹುಡುಕಬೇಕಾದ ದೊಡ್ಡ ಹೊಣೆಗಾರಿಕೆ, ದೊಡ್ಡ ಮನಸ್ಸಿನವನಾಗಬೇಕಾದ ಕರ್ತವ್ಯ ಪ್ರಧಾನಮಂತ್ರಿಗಿದೆ. ನಿನ್ನೆಯವರೆಗೂ ಅವರು ಅದರಲ್ಲಿ ಸೋತಿದ್ದರು ಎಂದೇ ಹೇಳಬೇಕಾಗಿದೆ.

ಪಂಜಾಬಿನಂತಹ ರಾಷ್ಟ್ರೀಯ ಕ್ಷೋಭೆಯ ವಿಚಾರದಲ್ಲಿ ತೇಪೆಯ ಕೆಲಸಗಳು ಪ್ರಯೋಜನಕಾರಿಯಾಗಲಾರವು ಎಂಬುದನ್ನು ನಾವು ಮತ್ತೆ ನಿಸ್ಸಂದಿಗ್ಧವಾಗಿ ಹೇಳುತ್ತೇವೆ. ಪಂಜಾಬು ಸಮಸ್ಯೆಯ ಮೂಲವೇ ಬೇರೆ. ಅದನ್ನು ಕೇಂದ್ರ ಸರಕಾರ ಅರ್ಥಮಾಡಿಕೊಂಡು ಪರಿಹಾರ ಹುಡುಕಬೇಕು.

ಎಲ್ಲ ರಾಜ್ಯಗಳಿಗೂ ಆಡಳಿತೆಯಲ್ಲಿ ಸ್ವಾಯತ್ತೆ ಕೊಡುವುದೊಂದೇ ಪಂಜಾಬು ಸಮಸ್ಯೆಯನ್ನು ಬಗೆಹರಿಸಬಲ್ಲುದು; ಅಲ್ಲದೆ ಅಂತಹ ಇತರ ಸಮಸ್ಯೆಗಳು ಹುಟ್ಟುವುದಕ್ಕೆ ತಡೆ ಹಾಕಿ ಈ ದೇಶವನ್ನು ಒಂದು ಗಣರಾಜ್ಯವಾಗಿ ಉಳಿಸಿಕೊಳ್ಳಬಲ್ಲುದು. ಬದಲಾಗಿ ಗಣರಾಜ್ಯವೆಂಬ ಹೆಸರಿನಲ್ಲಿ ಏಕಸತ್ತಾಧಿಕಾರವೇ ಮುಂದುವರಿದರೆ ಒಂದಲ್ಲ ಒಂದು ದಿನ ಈ ದೇಶ ಹರಿಹಂಚಾಗುವ ಅನಾಹುತ ತಪ್ಪಿದ್ದಲ್ಲ.

ಹಾಗೆ ಸ್ವಾಯತ್ತೆ ಕೊಡಲು ಸಂವಿಧಾನವನ್ನು ಬದಲಿಸುವ ಅಗತ್ಯವೇನಾದರೂ ಇದ್ದರೆ ಅದನ್ನು ಕೂಡ ಮಾಡಬೇಕು ನಾಡಿನ ರಾಜಕೀಯ ಚೌಕಟ್ಟನ್ನು ಬದಲಿಸಬೇಕೆಂಬ ಆಶಯ ಜನರದ್ದಾದರೆ ಅದನ್ನು ತಡೆದು ಒತ್ತಿಹಿಡಿಯಲು ಯಾರಿಗೂ ಹಕ್ಕು-ಅಧಿಕಾರಗಳಿಲ್ಲ. ರಕ್ಷಣೆ, ಕರೆನ್ಸಿ, ಸಂಪರ್ಕ ಹಾಗೂ ವಿದೇಶ ವ್ಯವಹಾರಗಳನ್ನು ಮಾತ್ರವೇ ಕೇಂದ್ರವು ನೋಡಿಕೊಳ್ಳುವ ಒಕ್ಕೂಟ ವ್ಯವಸ್ಥೆಯಿಂದ ಮಾತ್ರವೆ ಪಂಜಾಬನ್ನು ಉಳಿಸಿಕೊಳ್ಳಬಹುದಲ್ಲದೆ. ಭಾಷೆ, ಭೌಗೋಲಿಕ ಸ್ವರೂಪ ಹಾಗೂ ಹವಾಮಾನ ಮತ್ತು ಜನರ ನಡೆನುಡಿಗಳಲ್ಲಿ ಭಿನ್ನತೆಗಳಿರುವ ಜನಸಮುದಾಯಗಳಿಂದಾಗಿ ಈ ದೇಶವನ್ನು ಒಂದಾಗಿ ಕಾಪಾಡಬಹುದು.

ಬೊಕ್ಕಪಟ್ಣ ಘರ್ಷಣೆ: ಎಸ್ಪಿಗೆ ಮಾಹಿತಿ

ಮಂಗಳೂರು, ಮಾ. 12– ಬಿ. ಜೆ. ಪಿ ಮಂಗಳೂರು ಘಟಕದ ಅಧ್ಯಕ್ಷ ಸ್ಟ್ಯಾನಿ ಡಿಸೋಜಾ ಹಾಗೂ ಮಾಜಿ ಶಾಸಕ ಧನಂಜಯ ಕುಮಾರ್ ಅವರ ನೇತೃತ್ವದ ಪಕ್ಷದ ನಿಷ್ಠ ಮಂಡಳಿಯೊಂದು ಸೋಮವಾರ ಜಿಲ್ಲಾ ಪೊಲೀಸ್ ಅಧಿಕಾರಿ ಬಿ. ವೈ. ಭೋಸ್ಲೆ ಅವರನ್ನು ಭೇಟಿ ಮಾಡಿ, ಚುನಾವಣೆ ಬಳಿಕ ಬೊಕ್ಕಪಟ್ಣದಲ್ಲಿ ಕಾಂಗ್ರೆಸ್-ಬಿ. ಜೆ. ಪಿ. ಕಾರ್ಯಕರ್ತರ ನಡುವೆ ನಡೆದು ದಿನ್ನಲಾದ ಘರ್ಷಣೆ ಬಗ್ಗೆ ಪೂರ್ಣ ಮಾಹಿತಿ ನೀಡಿತು.

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭೋಸ್ಲೆ ಅವರು ಭರವಸೆ ನೀಡಿರುವರು ಎನ್ನಲಾಗಿದೆ.

ಅಂಗನವಾಡಿ ಉದ್ಘಾಟನೆ

ಮರವಂತೆ, ಮಾ. 12–ಮರವಂತೆ ಮಹಿಳಾ ಸಮಾಜದ ಆಶ್ರಯದಲ್ಲಿ ಮರವಂತೆ ಕರಾವಳಿ ಮತ್ತು ಮರವಂತೆ ಪೂರ್ವ ಅಂಗನವಾಡಿಗಳ ಉದ್ಘಾಟನೆಯು ಇತ್ತೀಚೆಗೆ ಶಾಲಾ ತಪಾಸಣಾಧಿಕಾರಿ ಎಂ. ರಾಮ ಹೆಬ್ಬಾರರಿಂದ ನಡೆಯಿತು.

ಮಂಗಳೂರು ವಿ. ವಿ. ಪ್ರಾಣಿಶಾಸ್ತ್ರಜ್ಞರ ಸಮ್ಮೇಳನ

ಉಡುಪಿ ಮಾ. 12– ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಪ್ರಾಣಿಶಾಸ್ತ್ರಜ್ಞರ ಸಮ್ಮೇಳನವೊಂದು ಭಾನುವಾರ ಇಲ್ಲಿನ ಪೂರ್ಣಪ್ರಜ್ಞ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಜರುಗಿತು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ. ಜಿ. ತಂತ್ರಿ ಅವರಿಂದ ಉದ್ಘಾಟನೆಗೊಂಡ ಈ ಸಮ್ಮೇಳನದ ಬೆಳಗಿನ ಸಮಾವೇಶದ ಅಧ್ಯಕ್ಷತೆಯನ್ನು ಸೈಂಟ್ ಅಲೋಸಿಯಸ್ ಕಾಲೇಜಿನ ಪ್ರೊ. ಕೆ. ಪಿ. ಮಥ್ಯಾಸ್ ವಹಿಸಿದ್ದರು. ಪ್ರಾರಂಭದಲ್ಲಿ, ಪೂರ್ಣಪ್ರಜ್ಞ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಮ್. ಎಸ್. ರಾವ್ ಸ್ವಾಗತ ಕೋರಿದರು.

ಮಂಗಳೂರು ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕ ಡಾ. ಎಮ್. ಗೋಪಾಲ ಕೃಷ್ಣನ್ ಹಾಗೂ ಪೂರ್ಣಪ್ರಜ್ಞ ಕಾಲೇಜಿನ ಡಾ॥ ಎನ್. ಎ. ಮಧ್ಯಸ್ಥ ಇವರು ಪ್ರಬಂಧಗಳನ್ನು ಮಂಡಿಸಿದರು. ಕಾಲೇಜುಗಳಲ್ಲಿ ಪ್ರಾಣಿ ಶಾಸ್ತ್ರದ ಬೋಧನಾ ಕ್ರಮ ಮತ್ತು ಪಠ್ಯ ಪುಸ್ತಕದಲ್ಲಿ ಸೂಕ್ತ ಬದಲಾವಣೆ ಅಗತ್ಯವೆಂದೂ, ಅದು ಅರ್ಥಪೂರ್ಣವಾಗಿಯೂ ವ್ಯಾಪಕವಾಗಿಯೂ ಇರಬೇಕೆಂದು ಸಮ್ಮೇಳನದಲ್ಲಿ ಅಭಿಪ್ರಾಯ ಪಡಲಾಯಿತು.

ಮಧ್ಯಾಹ್ನದ ನಂತರದ ಸಮಾವೇಶದ ಅಧ್ಯಕ್ಷತೆಯನ್ನು ಡಾ॥ ಎಮ್. ಗೋಪಾಲ ಕೃಷ್ಣನ್ ವಹಿಸಿದ್ದರು. ಈ ಸಮಾವೇಶದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಬಿ. ಎಸ್ಸಿ. ಹೊಸ ಪಠ್ಯಕ್ರಮವನ್ನು ಅಮೂಲಾಗ್ರವಾಗಿ ವಿಮರ್ಶಿಸಿ ಕೆಲವು ಸೂಕ್ತ ಬದಲಾವಣೆಗಳನ್ನು ಸರ್ವಾನುಮತದಿಂದ ಸೂಚಿಸಲಾಯಿತು. ಮಣಿಪಾಲದ ಅಕಾಡಮಿ ಆಫ್ ಜನರಲ್ ಎಜ್ಯುಕೇಷನ್ನಿನ ಡಾ॥ ಎಚ್. ಶಾಂತರಾಮ್ ಅವರು ಚರ್ಚೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನು ನೀಡಿದರು.

ಪ್ರಾಣಿಶಾಸ್ತ್ರಜ್ಞರ ಸಂಘವೊಂದನ್ನು ಸ್ಥಾಪಿಸಲು ಕೂಡಾ ಈ ಸಮ್ಮೇಳನದಲ್ಲಿ ತೀರ್ಮಾನಿಸಲಾಗಿ ಅದಕ್ಕೆ ಸಮಿತಿಯೊಂದನ್ನು ರಚಿಸಲಾಯಿತು.

ನಗರದ ಕೊಡಿಯಾಲ್ ಬೈಲ್‌ನಲ್ಲಿರುವ ಕೃಷ್ಣಾ ಕಾಂಪ್ಲೆಕ್ಸ್‌ನಲ್ಲಿ ಅತ್ಯಾಧುನಿಕವಾದ 'ನವನೀತ್ ರಿಫ್ರೆಷ್‌ಮೆಂಟ್ಸ್' ಉದ್ಘಾಟನಾ ಸಮಾರಂಭದ ಚಿತ್ರ. ವೇದಮೂರ್ತಿ ಗೋಪಾಲಕೃಷ್ಣ ಅಸ್ರಣ್ಣ, ಟಿ. ವಾಸುದೇವರಾವ್ (ಜನರಲ್ ಮೆನೇಜರ್-ಕಾರ್ಪೊರೇಶನ್ ಬ್ಯಾಂಕ್) ಡಾ॥ ಕೃಷ್ಣಾನಂದ ಹೊಳ್ಳ (ಮಾಲಿಕರು– ಕೃಷ್ಣಾ ಕಾಂಪ್ಲೆಕ್ಸ್) ಎಂ. ಬಿ. ಪುರಾಣಿಕ (ಪಾಲುದಾರರು) ಹಾಗೂ ಎಂ. ಜಿ. ಪುರಾಣಿಕ್ ಅವರು ಚಿತ್ರದಲ್ಲಿದ್ದಾರೆ.

...ತದ ಸಮಸ್ಯೆ

...ರಿಗೆ ನಿತ್ಯ ಕಾಲ್ನಡಿಗೆಯಲ್ಲೇ ಹೋಗಬೇಕಾದ ಪರಿಸ್ಥಿತಿ ಇಲ್ಲಿನ ನಿವಾಸಿಗಳಿಗಿದೆ. ಇತ್ತ ಕಡೆ ಕಂಡ್ಲೂರಿಗೆ ಹೋಗುವ ರಸ್ತೆಯನ್ನಾದರೂ ರಚಿಸಿದರೆ ಸ್ವಲ್ಪ ಅನುಕೂಲವಾದೀತು ಎಂದೂ ಇಲ್ಲಿನ ಜನ ಅಭಿಪ್ರಾಯ ನೀಡುತ್ತಾರೆ.

ಈಗ ಸುಮಾರು ಒಂದು ಕಿ. ಮೀ. ನಷ್ಟು ಇಲ್ಲಿನ ಹೊಳೆ ಬದಿಯ ಜಾಗ ಕರಗಿ ಹೋಗಿದೆ. ತೆಂಗಿನ ತೋಟ, ಗದ್ದೆಗಳನ್ನು ಗುಲ್ವಾಡಿ ಹೊಳೆ ಮೆಲ್ಲ ಮೆಲ್ಲನೆ ಕೊರೆದು ಕಬಳಿಸುತ್ತಿದೆ.

ಈ ಜಾಗಕ್ಕೆ ತಡೆಗೋಡೆ ಕಟ್ಟಿ ಬಳ್ಳೂರನ್ನು ಕಾಪಾಡಬೇಕೆಂದು ಇಲ್ಲಿನ ನಿವಾಸಿಗಳು ಈಗ ಪುನರಪಿ ಸರಕಾರಕ್ಕೆ ಮೊರೆ ಇಟ್ಟಿದ್ದಾರೆ.

ಹೆಗಡೆಗೆ ಅಭಿನಂದನೆ

ಮಂಗಳೂರು, ಮಾ. 12– ಕರ್ನಾಟಕ ಮುಖ್ಯಮಂತ್ರಿಯಾಗಿ ಪುನರಾಯ್ಕೆಗೊಂಡ ರಾಮಕೃಷ್ಣ ಹೆಗಡೆ ಹಾಗೂ ನಿಚ್ಚಳ ಬಹುಮತದಿಂದ ಆರಿಸಿ ಬಂದ ಜನತಾ ಸರ್ಕಾರವನ್ನು ದ. ಕ. ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಪದವೀಧರರ ಸಂಘದ ಅಧ್ಯಕ್ಷ ರಮೇಶ ಒಡಿಯೂರರು ಅಭಿನಂದಿಸಿದ್ದಾರೆ.

ಕೊಣಾಜೆಗೆ 'ಲೋಕಲ್ ಫೋನ್'

ಮಂಗಳೂರು, ಮಾ. 12– ಈ ತಿಂಗಳ ಆರಂಭದಿಂದ ಕೊಣಾಜೆ ದೂರವಾಣಿ ವಿನಿಮಯ ಕೇಂದ್ರವನ್ನು ಮಂಗಳೂರು. ಉಳ್ಳಾಲ ಹಾಗೂ ಪಣಂಬೂರು ಕೇಂದ್ರಗಳೊಂದಿಗೆ ಸೇರಿಸಲಾಗಿದೆ.

[illegible] ಕೊಣಾಜೆಗೆ ಫೋನ್ ಮಾಡುವಾಗ ಆರಂಭದಲ್ಲಿ 67 ಸೇರಿಸಬೇಕು. ಕೊಣಾಜೆಯವರು ಮಂಗಳೂರು, ಪಣಂಬೂರುಗಳಿಗೆ ಸಂಪರ್ಕಿಸುವಾಗ ಆರಂಭದಲ್ಲಿ 08 ಸೇರಿಸಬೇಕು, ಅಲ್ಲಿಂದ ಉಳ್ಳಾಲಕ್ಕಾದರೆ ಆರಂಭದಲ್ಲಿ '0' ಸೇರಿಸಬೇಕು. ಉಳ್ಳಾಲದಿಂದ ಕೊಣಾಜೆಗೆ ಸಂಪರ್ಕ ಬೇಕಿದ್ದರೆ ಆರಂಭದಲ್ಲಿ 7 ಸೇರಿಸಬೇಕು. ಪಣಂಬೂರಿನಿಂದ ಕೊಣಾಜೆ ಬೇಕಿದ್ದರೆ ಆರಂಭದಲ್ಲಿ [illegible] ಕೊಣಾಜೆಯವರು ಟ್ರಂಕ್ ಕಾಲ್ ಬುಕ್ ಮಾಡಲು 0180 ಕ್ಕೆ ಫೋನ್ ಮಾಡಬೇಕು. ಈ ಕೇಂದ್ರಗಳ ನಡುವಣ ಫೋನ್‌ಗಳನ್ನು ಸ್ಥಳೀಯ ಎಂದು ಪರಿಗಣಿಸಲಾಗುವುದು ಎಂದು ದೂರವಾಣಿ ವಿನಿಮಯ ಕೇಂದ್ರದ ಪತ್ರಿಕಾ ಪ್ರಕಟಣೆಯೊಂದು ತಿಳಿಸಿದೆ.

ನಮ್ಮ ಡಿಸ್ಪೆನ್ಸರಿಯನ್ನು ತಾ. 7–3–85ರಿಂದ ಲಕ್ಷ್ಮಿ ಮಹಲ್‌ನಿಂದ ವಸಂತ ಮಹಲ್‌ಗೆ ವರ್ಗಾಯಿಸಿರುವುದನ್ನು ಸಾರ್ವಜನಿಕರು ಗಮನಿಸಿ ಈ ಹಿಂದೆ ನಮಗೆ ನೀಡಿದ ಪ್ರೋತ್ಸಾಹವನ್ನು ಇನ್ನು ಮುಂದೆಯೂ ಮುಂದುವರಿಸಬೇಕಾಗಿ ವಿನಂತಿ.

ನವಚೈತನ್ಯ ಮರಳಿ ಪಡೆಯಿರಿ !

ಲೈಂಗಿಕ ಸಮಸ್ಯೆಗಳಿಗೆ ವೈಜ್ಞಾನಿಕ ಮಾರ್ಗದರ್ಶನ ಪಡೆಯಲು ಎಲ್ಲಾ ತರಹದ ನಿಶ್ಶಕ್ತಿ, ನಿತ್ರಾಣ, ನರಗಳ ದೌರ್ಬಲ್ಯ, ತಾರುಣ್ಯ ನಾಶ, ಶೀಘ್ರಸ್ಖಲನ, ಎಲ್ಲಾ ತರಹದ ಗುಪ್ತ ದೋಷಗಳಿಗೆ ಮತ್ತು ದಾಂಪತ್ಯ ಸಮಸ್ಯೆಗಳಿಗೆ ಅಪೂರ್ವ ಅನುಭವಿಗಳಾದ ಡಾ। ಮಾನೆಕ್ ಇವರ ಸಲಹೆ ಪಡೆದು ಹೊಸ ಹುರುಪು ಮರಳಿ ಪಡೆಯಿರಿ. ವಿ.ಸೂ.: ಕಳೆದ 150 ವರ್ಷಗಳಿಂದ ಈ ವೃತ್ತಿಯಲ್ಲಿ ನಮ್ಮ ವಂಶ ಪಾರಂಪರ್ಯ ಈ ಸೇವೆ ಸಲ್ಲಿಸುತ್ತಾ ಬರುತ್ತಿದೆ.

ಮಾನೆಕ್ ಡಿಸ್ಪೆನ್ಸರಿ, ರೂಂ. ನಂ. 123, ವಸಂತ ಮಹಲ್,
ಕೆ. ಎಸ್. ರಾವ್ ರಸ್ತೆ, ಮಂಗಳೂರು–575 001.

ಮುಂಗಾರು
ಬುಧವಾರ, ಅಕ್ಟೋಬರ್ 23, 1985

ಕನ್ನಡದ ವರ್ಷ

ನಾಡಿದ್ದು ನವೆಂಬರ್ ಒಂದರಿಂದ ಮುಂದಿನ ವರ್ಷ ನವೆಂಬರ್ ಒಂದರ ತನಕ ಸಮಗ್ರ ಕನ್ನಡ ಆಡಳಿತ ಭಾಷೆ ವರ್ಷವಾಗಿ ಆಚರಿಸಲು ಕರ್ನಾಟಕ ಸರಕಾರ ನಿರ್ಧರಿಸಿದೆ.

ಇದು ಸ್ವಾಗತಾರ್ಹವಾದ ಒಂದು ಹೆಜ್ಜೆ. ಆಡಳಿತೆಯನ್ನು ಜನರಿಗೆ ತಿಳಿಯುವ ಭಾಷೆಯಲ್ಲಿ ಮಾಡುವುದರಿಂದ ಆಡಳಿತೆಯಲ್ಲಿ ಜನರ ಪಾಲುದಾರಿಕೆಗೆ ಅರ್ಥಬರುತ್ತದೆ. ಆಳ್ವಿಕೆಯ ಜನರ ನೋವಿಗೆ ಅವರ ಬದುಕಿನ ಸಮಸ್ಯೆ ಸಂಕಟಗಳಿಗೆ ಸ್ಪಂದಿಸಲು ದಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಆಡಳಿತ ಭಾಷೆ ವರ್ಷ ಆಚರಿಸುವುದರಿಂದ ಕನ್ನಡವನ್ನು ಅಧಿಕಾರಿ ವಲಯಗಳಲ್ಲಿ ಒಗ್ಗಿಸುವುದಕ್ಕೆ ಸಹಾಯವಾಗುತ್ತದೆ. ವರ್ಷದಲ್ಲಿ ಆಗೊಮ್ಮೆ ಈಗೊಮ್ಮೆಯಾದರೂ ಕನ್ನಡವನ್ನು ಆಡಳಿತ ರಥಕ್ಕೆ ಹೂಡಬೇಕಾದ ಕರ್ತವ್ಯ ತಮಗಿದೆಯೆಂಬುದನ್ನು ಸರಕಾರದ ಪರಿಷ್ಕರಿಗೆ ಜನ ನೆನಪು ಮಾಡುವುದು ಸಾಧ್ಯವಾಗುತ್ತದೆ.

ಕನ್ನಡವನ್ನು ಸಮಗ್ರವಾಗಿ ಆಡಳಿತದ ಜಾಯಮಾನಕ್ಕೆ ಒಗ್ಗಿಸುವುದಕ್ಕೆ ಹಲವಾರು ಕೆಲಸಗಳು ಆಗಬೇಕಾಗಿದೆ. ಅದೆಲ್ಲವೂ ಆಡಳಿತೆ ಭಾಷೆಯ ವರ್ಷದಲ್ಲಿ ಒಮ್ಮೆ ಆಗಿ ಹೋದರೆ ಆಮೇಲೆ ಕನ್ನಡ ಬೆಳವಣಿಗೆಯ ಪ್ರಕ್ರಿಯೆಗೆ ಉತ್ತೇಜನ ಬರುತ್ತದೆ.

ಭಾಷೆ, ಸಾಹಿತ್ಯ ಸಂಸ್ಕೃತಿಗಳ ಬೆಳವಣಿಗೆಗೆ ಸರಕಾರದ ಆಶ್ರಯಬೇಕು. ಸರಕಾರದ ಆಶ್ರಯದಿಂದ ಎಲ್ಲಾ ಸೌಲಭ್ಯಗಳೂ ದೊರೆಯುತ್ತವೆ. ಕನ್ನಡವೆಂಬುದು ಜನಕ್ಕೆ ಅನಿವಾರ್ಯವಾಗುತ್ತದೆ. ಕನ್ನಡ ಕಲಿಯದಿದ್ದರೂ ನಡೆಯುತ್ತದೆ ಎಂಬ ಪರಿಸ್ಥಿತಿ ಇದ್ದರೆ ಯಾರೂ ಕನ್ನಡ ಕಲಿಯಲಾರರು.

ಇದನ್ನು ಸರಕಾರ ಅರ್ಥಮಾಡಿ ಕೊಳ್ಳಬೇಕು ಕನ್ನಡವನ್ನು ಬಳಕೆಗೆ ತರಬೇಕು ಎಂದು ಒಕ್ಕಣಿಸಿದ ಆಜ್ಞೆಗಳನ್ನೂ ನಿರ್ದೇಶಗಳನ್ನೂ ಸುತ್ತೋಲೆಗಳನ್ನೂ ಹೊರಡಿಸಿದರೆ ಸಾಲದು. ಅಂತಹ ನಿರ್ದೇಶಗಳ ಪಾಲನೆ ಆಗಿದೆಯೇ ಎಂದು ಪರಿಶೀಲನೆ ಮಾಡಬೇಕು, ಯಾವ ಮಟ್ಟದಲ್ಲಿ ಯಾವ ಕಚೇರಿಯಲ್ಲಿ ಕನ್ನಡದ ಬಳಕೆ ಆಗುತ್ತಿಲ್ಲ ಎಂಬ ಬಗ್ಗೆ ತನಿಖೆ ಅಧ್ಯಯನಗಳಾಗಬೇಕು. ಅಂತಹ ಕಚೇರಿಗಳ ಮುಖ್ಯಸ್ಥರಿಗೆ ಎಚ್ಚರಿಕೆ ಹೇಳಬೇಕು.

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರೇ ಹೇಳಿದಂತೆ ಆಡಳಿತೆಯಲ್ಲಿ ಕನ್ನಡದ ಬಳಕೆ ವಿಚಾರವಾಗಿ ಸುಮಾರು ಒಂದು ನೂರು ಆಜ್ಞೆಗಳು ಬಂದಿವೆ. ಒಂದು ನೂರು ಆಜ್ಞೆಗಳು ಬಂದ ನಂತರವೂ ರಾಜ್ಯದ ಆಡಳಿತೆಯ ಎಲ್ಲಾ ಹಂತಗಳಲ್ಲಿ ಕನ್ನಡದ ಬಳಕೆ ಇನ್ನೂ ಸರಿಯಾಗಿ ಆಗುತ್ತಿಲ್ಲ. ಅಧಿಕಾರ ಕೇಂದ್ರವಾದ ಬೆಂಗಳೂರಿನ ವಿಧಾನ ಸೌಧದಲ್ಲೇ ಕನ್ನಡವನ್ನು ಕೆಕ್ಕರಿಸಿ ನೋಡುವ ಬಹಳ ಮಂದಿ ಇದ್ದಾರೆ. ಅದರಲ್ಲಿ ಒಂದೋ ಕನ್ನಡದ ಪ್ರೀತಿ ಹುಟ್ಟಿಸಬೇಕು, ಇಲ್ಲವಾದರೆ ಕನ್ನಡವನ್ನು ಕಡೆಗಾಣಿಸಿದರೆ ಕೇಡಾದೀತೆಂಬ ಭೀತಿಯನ್ನು ಹುಟ್ಟಿಸಬೇಕು. ಕನ್ನಡದ ಪ್ರೀತಿ ಹುಟ್ಟಿಸುವ ಕೆಲಸ ಗ್ರಾಮೀಣ ಪ್ರದೇಶದಲ್ಲಿ ಸುಲಭವಾಗಿ ಮಾಡಬಹುದು. ನಗರಗಳಲ್ಲಿ ಮಾತ್ರ

ವ್ಯವಹಾರಗಳನ್ನು ಕನ್ನಡದಲ್ಲಿಯೇ ನಡೆಸುವುದು. ಇದಕ್ಕೆ ಕನ್ನಡ ಬೆರಳಚ್ಚು ಯಂತ್ರಗಳು ಬೇಕು. ಇಂಗ್ಲಿಷ್ ಬೆರಳಚ್ಚು ಯಂತ್ರಗಳನ್ನು ಇಟ್ಟುಕೊಂಡು ಕನ್ನಡದಲ್ಲಿ ಪತ್ರವ್ಯವಹಾರ ಮಾಡಲಾಗುವುದಿಲ್ಲ. ಅದಕ್ಕಾಗಿ ಎಲ್ಲಾ ಕಚೇರಿಗಳ ಇಂಗ್ಲಿಷ್ ಬೆರಳಚ್ಚು ಯಂತ್ರ ತೆಗೆದು ಕನ್ನಡ ಯಂತ್ರ ಸ್ಥಾಪಿಸಬೇಕು.

ಹೀಗೆ ಕಚೇರಿಗಳಲ್ಲಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಸ್ಥಾಪಿಸುವುದಾಗಿ ಕನ್ನಡ ಕಾವಲು ಸಮಿತಿಯ ಅಧ್ಯಕ್ಷ ಪಾಟೀಲ ಪುಟ್ಟಪ್ಪ ಹುಬ್ಬಳ್ಳಿಯಲ್ಲಿ ಹೇಳಿದ್ದಾರೆ. ಅದೇ ಕಾಲಕ್ಕೆ ಮುಖ್ಯಮಂತ್ರಿ ಹೆಗಡೆಯವರು ಕನ್ನಡ ವರ್ಷಾಚರಣೆ ವಿಷಯ ಬೆಂಗಳೂರಿನಲ್ಲಿ ಪ್ರಕಟಿಸಿದರೂ ಕನ್ನಡ ಬೆರಳಚ್ಚು ಯಂತ್ರ ಒದಗಿಸುವ ವಿಚಾರವಾಗಿ ಸೊಲ್ಲನ್ನೂ ಎತ್ತಲಿಲ್ಲ. ಪಾಟೀಲ ಪುಟ್ಟಪ್ಪನವರ ಸಮಿತಿಗೆ ಯಾವ ಶಾಸನ ಬದ್ಧ ಅಧಿಕಾರವೂ ಇಲ್ಲ. ಯಂತ್ರ ಒದಗಿಸಲು ಅಥವ ಇಂಗ್ಲಿಷ್ ಯಂತ್ರಗಳನ್ನು ಕನ್ನಡಕ್ಕೆ ಪರಿವರ್ತಿಸಲು ಆ ಸಮಿತಿಯ ಕೈಯಲ್ಲಿ ಹಣವಿಲ್ಲ. ಕನ್ನಡದ ಮೇಲೆ ಕೆಂಡಕಾರುವ ಅಧಿಕಾರಿಗಳಿಗೆ ದಂಡನೆ ವಿಧಿಸಲು ಕಾವಲು ಸಮಿತಿಗೆ ಅಧಿಕಾರ ಇಲ್ಲ. ಈ ಸಮಿತಿಯ ಸ್ಥಿತಿ ದೊಣ್ಣೆಯಿಲ್ಲದ ಕಾವಲುಗಾರನದ್ದಾಗಿದೆ.

ಕನ್ನಡವನ್ನು ಕಡೆಗಣಿಸುವ ಸಿಬ್ಬಂದಿಗಳಿಗೆ ಶಿಕ್ಷೆ ಕೊಡುವುದಕ್ಕೆ ಅಗತ್ಯವೆನಿಸಿದರೆ ಸೇವಾ ನಿಯಮವನ್ನು ತಿದ್ದಲಾಗುವುದೆಂದು ಮುಖ್ಯಮಂತ್ರಿ ಹೇಳಿದ್ದಾರೆ. ಅದರ ಆಗತ್ಯವಿದೆ ಎಂಬುದು ಅವರಿಗೆ ಮನದಟ್ಟಾಗಲು ಇನ್ನೇನಾಗಬೇಕೋ ಗೊತ್ತಾಗುತ್ತಿಲ್ಲ. ಅಂತಹ ತಿದ್ದುಪಡಿಯನ್ನು ಅವರು ಬೇಗನೆ ತರಬೇಕು. ದಂಡನೆಯ ಅಧಿಕಾರವನ್ನು ಕಾವಲು ಸಮಿತಿಗೆ ಕೊಡಬೇಕು. ಆ ಸಮಿತಿಗೆ ಶಾಸನ ಬದ್ಧನೆಲೆಯನ್ನು ಒದಗಿಸಬೇಕು.

ಕೇಂದ್ರದೊಡನೆ ವ್ಯವಹಾರ ನಡೆಸುವವುಗಳ ಹೊರತು ಉಳಿದ ಎಲ್ಲಾ ಸರಕಾರಿ ಕಚೇರಿಗಳಲ್ಲಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಮಾತ್ರ ಇರಿಸ ತಕ್ಕದ್ದೆಂದು ಸರಕಾರ ಆಜ್ಞೆ ಮಾಡಬೇಕು. ಜತೆಗೆ ಅದಕ್ಕೆ ಬೇಕಾದಷ್ಟು ಹಣ ಮಂಜೂರು ಮಾಡಬೇಕು.

ಕನ್ನಡವನ್ನು ಆಡಳಿತೆಗೆ ಹೂಡುವ ಮುತುವರ್ಜಿಯಲ್ಲಿ ಅರೆಬೆಂದ ಭಾಷಾಜ್ಞಾನದ ಸರಕಾರಿ ಅಧಿಕಾರಿಗಳು ಇಂಗ್ಲಿಷ್‌ಗೆ ಕನ್ನಡದ ಪರ್ಯಾಯಪದ ಹುಡುಕುತ್ತ ಅಧ್ವಾನದ ಕಡತ ಕನ್ನಡವೊಂದನ್ನು ಹುಟ್ಟಿಸಿ ಬಿಟ್ಟಿದ್ದಾರೆ. ಕಣ್ಣು, ಕಿವಿ, ಬಾಯಿಗಳು ವಿಕಾರವಾದ ಹೆಸರಗತ್ತೆ ಕನ್ನಡವಾಗಿದೆ. ಅದು ಸಾಮಾನ್ಯ ಜನರಿಗೂ ತಿಳಿದಿರುವಂತಹ, ದಿನಬಳಕೆಯಲ್ಲಿ ಬಂದಿರುವಂತಹ ಇಂಗ್ಲಿಷ್ ಪದಗಳಿಗೆ ಸಮಾನಾರ್ಥದ ಕನ್ನಡ ಪದವನ್ನು ಸಂಶೋಧಿಸಿ ತರುವ ಕೆಲಸ ದಯವಿಟ್ಟು ಬೇಡ. ಪೊಲೀಸರನ್ನು ಆರಕ್ಷಕರಾಗಿ ಮಾಡಿದರೆ ಅವರಿಗೇನೂ ಕೋಡು ಮೂಡುವುದಿಲ್ಲ. ಇದರಿಂದ ಕನ್ನಡವೂ ಬೆಳೆಯುವುದಿಲ್ಲ. ಅವರು ಪೊಲೀಸರಾಗಿಯೇ ಇರಲಿ ಚೀಫ್ ಇಂಜಿನಿಯರ್ ಹಾಗೆಯೇ ಇರಲಿ ಮುಖ್ಯ ಅಭಿಯಂತರರಾಗಿ ಅದಾವುದೇ ಮಂಗಳ ಗ್ರಹದಿಂದ ಬಂದ ಹೊಸ ಯಂತ್ರವಾಗುವುದು ಬೇಡ, ಬಳಕೆಯಲ್ಲಿ ಬಂದ ಪರಭಾಷೆಯ

ಸಚಿವ ಲಕ್ಷ್ಮೀಸಾಗರ್ ಪ್ರಕಟನೆ

ಎಲ್ಲಾ ಪುರಸಭೆಗಳ ಒಟ್ಟು ಬಾಕಿ 40 ಕೋ.

ಮಡಿಕೇರಿ, ಅ. 22– 'ರಾಜ್ಯದ ಎಲ್ಲ ಪುರಸಭೆಗಳಿಂದ ಒಟ್ಟು ನಲ್ವತ್ತು ಕೋಟಿ ರೂ. ಸರಕಾರಕ್ಕೆ ಬಾಕಿ ಬರಬೇಕಾಗಿದೆ' ಎಂದು ನಗರಾಭಿವೃದ್ಧಿ ಹಾಗೂ ಕಾನೂನು ಸಚಿವ ಎ. ಲಕ್ಷ್ಮೀಸಾಗರ್ ಅವರು ತಿಳಿಸಿದ್ದಾರೆ.

ಅ. 18ರಂದು ವೀರಾಜಪೇಟೆ ಪುರಸಭೆಗೆ ಸೇರಿದ ನೂತನ ಸೇತುವೆ ಶಿಶುವಿಹಾರ, ಅಡ್ಡರಸ್ತೆ ಹಾಗೂ ಸೈರನ್ ಇವುಗಳ ಉದ್ಘಾಟನೆಯನ್ನು ನೆರವೇರಿಸಿದ ನಂತರ ಪುರಸಭಾಂಗಣದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ನಾಗರಿಕರ ಪ್ರಮುಖ ಬೇಡಿಕೆಗಳಾದ ನೀರು, ವಿದ್ಯುತ್ ಹಾಗೂ ನೈರ್ಮಲ್ಯ ಸೇವೆಗಳನ್ನು ಸಮರ್ಪಕವಾಗಿ ಒದಗಿಸಿದರೆ ಸಮಸ್ಯೆಗಳೇ ಇರಲಾರದು ಎಂದು ತಿಳಿಸಿದ ಅವರು ಸ್ಥಳೀಯ ಸಂಸ್ಥೆಗಳು ಬೆಳೆಯಬೇಕಾದರೆ ಸಾರ್ವಜನಿಕರ ಸಹಕಾರ ಅಗತ್ಯ ಎಂದು ಒತ್ತಿಹೇಳಿದರು.

ಊರಿನ ಜನತೆ ನಗರಾ ನೈರ್ಮಲ್ಯವನ್ನು ಕಾಪಾಡಲು ಸಹಕರಿಸಬೇಕೆಂದು ಮನವಿ ಮಾಡಿಕೊಂಡ ಸಚಿವರು ಪುರಸಭೆ ಶಾಶ್ವತ ಆದಾಯ ಬರುವಂತೆ ವ್ಯಾಪಾರ ಮಳಿಗೆ ಇತ್ಯಾದಿಗಳನ್ನು ಬ್ಯಾಂಕ್ ನೆರವಿನಿಂದ ತೆರೆಯುವಂತಾಗಬೇಕು ಎಂದು ಕರೆ ನೀಡಿದರು.

ಕಂದಾಯ ವಸೂಲಿಯಲ್ಲಿ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಪ್ರಥಮ ಸ್ಥಾನದಲ್ಲಿದ್ದರೆ ಬೀದರ್, ಗುಲ್ಬರ್ಗ ಕೊನೆಯ ಸ್ಥಾನ ಪಡೆದಿದೆ ಎಂದು ವಿವರಿಸಿ ಪುರಸಭೆಗಳು ಎಲ್ಲದಕ್ಕೂ ಸರಕಾರವನ್ನೇ ಅವಲಂಬಿಸುವುದು ಸರಿಯಲ್ಲವೆಂದೂ ಅಭಿಪ್ರಾಯಪಟ್ಟರು.

ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಬರ ಕಾಣಿಸಿಕೊಂಡಿದ್ದು ಅಭಿವೃದ್ಧಿಯತ್ತ ಹೆಚ್ಚಿನ ಗಮನ ಹರಿಸಲು ಅಸಾಧ್ಯವಾಗಿದೆ. ಬರ ಪರಿಹಾರಕ್ಕಾಗಿ ಕೇಂದ್ರದಿಂದ 30 ಕೋಟಿ ರೂ. ಬಂದಿದ್ದು ರಾಜ್ಯ ಸರಕಾರ ಐವತ್ತು ಕೋಟಿಗೂ ಹೆಚ್ಚು ಹಣ ವ್ಯಯಿಸಿದೆ ಎಂದು ತಿಳಿಸಿದರು.

ಬರಪೊಳೆ ಯೋಜನೆಯ ಬಗ್ಗೆ ಸರಕಾರ ಸ್ಪಷ್ಟ ನಿಲುವನ್ನು ಪ್ರಕಟಿಸಿದೆ. ಕೊಡಗಿನಲ್ಲಿ ಯಾವುದೇ ಕಟ್ಟೆಗಳನ್ನು ನಿರ್ಮಿಸಲು ಬಿಡುವುದಿಲ್ಲ ಇದು ಕೊಡಗಿನವರ ಅಚಲ ನಿರ್ಧಾರವಾಗಿದೆ ಎಂಬುದನ್ನು ನಾಣಯ್ಯ ಸ್ಪಷ್ಟಪಡಿಸಿದರು.

ಶಾಸಕಿ ಸುಮಾ ವಸಂತ್ ಅವರು ಮಾತನಾಡಿ ಅಭಿವೃದ್ಧಿ ಕಾರ್ಯಗಳಿಗಾಗಿ ಪುರಸಭೆಗಳಿಗೆ ಹೆಚ್ಚಿನ ಸಹಾಯ ಧನವನ್ನು ಒದಗಿಸಿಕೊಡಬೇಕೆಂದು ಮನವಿ ಮಾಡಿಕೊಂಡರು.

ಪ್ರಾರಂಭದಲ್ಲಿ ಸ್ವಾಗತ ಭಾಷಣ ಮಾಡಿದ ಪುರಸಭಾಧ್ಯಕ್ಷ ಎಂ. ಕೆ.ಪೂವಯ್ಯ ಅವರು ಪ್ರಸ್ತುತ ನಿರ್ಮಿಸಲಾಗಿರುವ ಅಡ್ಡರಸ್ತೆಗೆ 70 ಸಾವಿರ, ಸೇತುವೆ ನಿರ್ಮಾಣಕ್ಕೆ 50 ಸಾವಿರ, ಶಿಶುವಿಹಾರಕ್ಕೆ 30 ಸಾವಿರ, ಸೈರನ್ ಅಳವಡಿಕೆಗೆ 12 ಸಾವಿರ ವೆಚ್ಚವಾಗಿದೆ. ಪುರಸಭೆಯ ಆದಾಯವನ್ನು 7 ಲಕ್ಷದಿಂದ 12 ಲಕ್ಷಗಳಿಗೆ ಏರಿಸಲಾಗಿದೆ ಎಂದು ವಿವರಿಸಿದರು.

ಕಪ್ಪು ಬಾವುಟ ಪ್ರದರ್ಶನ

ಕಾರ್ಯಕ್ರಮ ನಡೆಯುತ್ತಿದ್ದಂತೆ ಕೊಡಗು ರಕ್ಷಣಾ ವೇದಿಕೆಯ ಎಂ. ಎಸ್. ಪೂವಯ್ಯ ಅವರ ನೇತೃತ್ವದಲ್ಲಿ 8 ಮಂದಿಯ ಗುಂಪೊಂದು ಕಪ್ಪು ಬಾವುಟ ಪ್ರದರ್ಶಿಸಿದರು. ಪ್ರದರ್ಶನಕಾರರು ಸಚಿವರಿಗೆ ಮನವಿಯೊಂದನ್ನು ಸಲ್ಲಿಸಿದರು.

...ರಿಕೆ ಹಾಕಿ ...ಸೆಳೆದರು

...ದ್ದ ಭೂಮಾಲಿಕರು ಉಚ್ಚನ್ಯಾಯಾಲಯಕ್ಕೆ ಅರ್ಜಿಸಲ್ಲಿಸಿದ್ದು, ಅಲ್ಲಿಂದ ಮರು ವಿಚಾರಣೆಗೆ ಆದೇಶ ನೀಡಲಾಗಿದೆ ಇದರಂತೆ ಅಕ್ಟೋಬರ್ 4ರಂದು ವೀರಾಜಪೇಟೆ ತಾಲೂಕು ಕಚೇರಿಯಲ್ಲಿ ಮೊಕದ್ದಮೆಯ ವಿಚಾರಣೆ ನಡೆಯಿತು ಈ ಸಂದರ್ಭ ... ಮೂಲ ದಾಖಲಾತಿಗಳನ್ನು ಭೂನ್ಯಾಯ ಮಂಡಳಿಯ ಮುಂದೆ ಹಾಜರು ಪಡಿಸಿ... ಮುಂದಿನ ವಿಚಾರಣೆ (20-11-85) ...ಮು ಹಾಜರು ಪಡಿಸುವಂತೆ ಸೂಚಿಸಲಾಯಿತು.

ವಿಚಾರಣೆಯ ನಂತರ ಮನೆಗೆ ಹಿಂತಿರುಗುವ ಹಾದಿಯಲ್ಲಿ ಭೂಮಾಲಿಕರಾದ ...ಪ್ಪ ಹಾಗೂ ಸುಬ್ಬಯ್ಯ ಇವರುಗಳು ...ಖಲಾತಿಗಳಿದ್ದ ಕೈ ಚೀಲವನ್ನು ಬಲವಂತವಾಗಿ ಕಸಿದು ಕೊಂಡರಲ್ಲದೆ, ಈ ...ಯವನ್ನು ಪೊಲೀಸಿನವರಿಗೆ ತಿಳಿಸಿದರೆ ...ಡು ಹೊಡೆದು ಕೊಲೆ ಮಾಡುವುದಾಗಿಯೂ ಬೆದರಿಕೆಯೊಡ್ಡಿದರೆಂದು ಪೊಲೀಸ್ ...ರಿನಲ್ಲಿ ತಿಳಿಸಿದ್ದಾರೆ.

ವೀರಾಜಪೇಟೆ ಗ್ರಾಮಾಂತರ ಪೊಲೀ... ಎಫ್‌ಐಆರ್ ನಂ. 126-85ರಲ್ಲಿ ... 385ರಂತೆ ಮೊಕದ್ದಮೆ ದಾಖಲು

ಬಸ್ ದರ ಹೆಚ್ಚಳ: ಶಿವಮೊಗ್ಗ ಜಿಲ್ಲೆ ಬಂದ್‌ಗೆ ಬಿಜೆಪಿ ಕರೆ

ಶಿವಮೊಗ್ಗ, ಅ. 22– ರಾಜ್ಯ ಸರ್ಕಾರ ವಿದ್ಯುತ್‌ಚ್ಛಕ್ತಿ ಮತ್ತು ಬಸ್ ದರಗಳನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ದಿನಾಂಕ 24ರಂದು "ಶಿವಮೊಗ್ಗ ಜಿಲ್ಲೆಯಾದ್ಯಂತ ಬಂದ್" ಆಚರಿಸುವಂತೆ ಬಿ. ಜೆ. ಪಿ. ಯ ಜಿಲ್ಲಾ ಘಟಕ ಕರೆ ನೀಡಿದೆ.

ಭಾನುವಾರ ಇಲ್ಲಿ ಸಭೆ ಸೇರಿದ್ದ ಬಿ. ಜೆ. ಪಿ. ಜಿಲ್ಲಾ ಸಮಿತಿಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಅಲ್ಲದೆ ಅದೇ ದಿನ ಸಂಜೆ ಇಲ್ಲಿನ ನಗರಸಭಾ ಆವರಣದಲ್ಲಿ ಬಹಿರಂಗ ಸಭೆಯನ್ನು ಸಹ ಏರ್ಪಡಿಸಲಾಗಿದೆ. ಈ ಬಹಿರಂಗ ಸಭೆಯಲ್ಲಿ ಬಿ. ಜೆ. ಪಿ. ಯ ಮುಖಂಡರು ಮಾತನಾಡಲಿದ್ದಾರೆ.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಘಟಕದ ಅಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಅವರು ವಹಿಸಲಿದ್ದಾರೆ.

ಪಾಸ್ ನೀಡಲು ಒತ್ತಾಯ

ರಾಜ್ಯ ಸರ್ಕಾರಿ ನೌಕರರಿಗೆ ಬಸ್ ಪಾಸ್ ಸೌಲಭ್ಯ ನೀಡುವಂತೆಯೂ ಶಿವಮೊಗ್ಗದಿಂದ ಭದ್ರಾವತಿಗೆ ಪ್ರತಿದಿನವೂ ಓಡಾಡುವ ಕಾರ್ಮಿಕರಿಗೂ ಈ ಸೌಲಭ್ಯ ನೀಡುವಂತೆ ಬಿ. ಜೆ. ಪಿ. ಯ ಜಿಲ್ಲಾ ಸಮಿತಿ ಸರ್ಕಾರವನ್ನು ಆಗ್ರಹಪಡಿಸಿದೆ.

ವಾಲ್ಗಳ್ಳಿಯಲ್ಲಿ ಗಾಂಧಿ ಸಪ್ತಾಹ ಕಾರ್ಯಕ್ರಮ

ಕುಮಟಾ, ಅ. 22– ಇಲ್ಲಿಗೆ ಸಮೀಪದ ವಾಲ್ಗಳ್ಳಿಯಲ್ಲಿ ಈ ತಾಲೂಕಿನ ಪರಿಶಿಷ್ಟ ವರ್ಗದ ಅಭಿವೃದ್ಧಿಯಲ್ಲಿ ಶ್ರಮಿಸುವ ಸಮಿತಿ, ಮಹಾತ್ಮಾ ಗಾಂಧಿ ಸಪ್ತಾಹ ಕಾರ್ಯಕ್ರಮವನ್ನು ಇತ್ತೀಚೆಗೆ ಕೈಗೊಂಡಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷರಾಗಿ ಆರ್. ಎಸ್. ಭಾಗ್ವತ್ ಅವರು ಆಗಮಿಸಿದ್ದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್.ಎನ್. ಪಟ್ಗಾರ ಅವರು ದಲಿತರ ಸುಧಾರಣೆ ಕುರಿತು ಮಾತನಾಡಿದರು.

ಪ್ರಾರಂಭದಲ್ಲಿ ಸಮಿತಿ ಅಧ್ಯಕ್ಷ ಆರ್, ಡಿ. ಪಾವಸ್ಕರ್ ಅವರು ಸ್ವಾಗತಿಸಿದರು.

ಕಾಪುವಿನಲ್ಲಿ ಬಹುದಿನಗಳಿಂದ ನಿರೀಕ್ಷಿಸಲ್ಪಟ್ಟ,
ಚಲನ ಚಿತ್ರ ಮಂದಿರ
"ಮಹಾ ವೀರ್"
ಇಂದು ಉದ್ಘಾಟನೆ, ಬೆಳಿಗ್ಗೆ 10-29ಕ್ಕೆ
ಪ್ರಾರಂಭದ ಚಿತ್ರ
"ನಾ ನಿನ್ನ ಬಿಡಲಾರೆ"
ದಿನಂಪ್ರತಿ 2 ದೇಖಾವೆ:
6-30 p. m. & 9-30 p. m.
ಶುಭ ಕೋರುವ:
ಎಸ್. ವಿದ್ಯ ಕುಮಾರ್,
ಎಸ್. ವಿ. ಟೈಲರ್ಸ್,
ಮಾಲಕರು: ಜೈನ್‌ಪೇಟೆ, ಮೂಡಬಿದ್ರಿ

ಮುಂಗಾರು

ಶುಕ್ರವಾರ, ಅಕ್ಟೋಬರ್ 25, 1985

ಮೊರೆ ಕೇಳುವ ಆಶ್ರಯಧಾಮ

1945ರ ಅಕ್ಟೋಬರ 24ರಂದು 26 ರಾಷ್ಟ್ರಗಳು ಅಂಕಿತ ಹಾಕಿದ ಸನದಿನೊಂದಿಗೆ 51 ಸದಸ್ಯತ್ವದೊಂದಿಗೆ ಪ್ರಾರಂಭಗೊಂಡ ವಿಶ್ವಸಂಸ್ಥೆಗೆ 40 ವರ್ಷಗಳು ತುಂಬಿದವು.

ನಾಲ್ಕು ದಶಕಗಳ ಕಾಲ ಬಾಳಿ ಬಂದ ಈ ಸಂಸ್ಥೆ ಅಂತರಾಷ್ಟ್ರೀಯ ಪ್ರಶ್ನೆಗಳ ಚರ್ಚೆ—ಸಮಾಲೋಚನೆಗೆ ಒಂದು ಸೂಕ್ತ ವೇದಿಕೆಯಾಗಿ ಬೆಳೆದು ಬಂದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಅಂತಹ ಸಮಾಧಾನದ ಜತೆಗೇ ಅಂತರಾಷ್ಟ್ರೀಯ ವಿವಾದಗಳಿಗೆ ಪರಿಹಾರವನ್ನು ಕಂಡು ಹುಡುಕುವ ನಿಟ್ಟಿನಲ್ಲಿ ಈ ಸಂಸ್ಥೆಯ ದಾರಿಗೆ ಬಲಾಢ್ಯ ದೇಶಗಳ ಸ್ವಂತ ಹಿತಾಸಕ್ತಿಯೆಂಬ ಬಂಡೆಕಲ್ಲಿನ ತಡೆ ಉಂಟಾಗುತ್ತಿರುವುದೂ ಅಷ್ಟೇ ಸತ್ಯ.

ವಿಶ್ವಸಂಸ್ಥೆಯ ಸ್ಥಾಪನೆ ಆದದ್ದು ಮುಖ್ಯವಾಗಿ ಅಂತರಾಷ್ಟ್ರೀಯ ಶಾಂತಿ ಹಾಗೂ ಭದ್ರತೆಯ ಸ್ಥಾಪನೆಗಾಗಿ. ಸಮಾನ ಹಕ್ಕುಗಳು ಹಾಗೂ ದೇಶಗಳ ಸ್ವಯಂ ನಿರ್ಧಾರದ ಅಧಿಕಾರದ ಆಧಾರದಲ್ಲಿ ದೇಶಗಳೊಳಗೆ ಪರಸ್ಪರ ಸ್ನೇಹವನ್ನು ಬೆಳೆಸುವ ಉದ್ದೇಶವನ್ನು ವಿಶ್ವಸಂಸ್ಥೆ ಹೊಂದಿದೆಯೆಂದು ಅದರ ಸನದು ಹೇಳುತ್ತದೆ, ಅಂತರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನವೀಯ ಸಮಸ್ಯೆಗಳ ನಿವಾರಣೆಗೆ ಅಂತರಾಷ್ಟ್ರೀಯ ಸಹಕಾರವನ್ನು ಬೆಳೆಸುವುದಾಗಿ ಸನದಿನಲ್ಲಿ ಹೇಳಲಾಗಿದೆ.

ಇಂದು ವಿಶ್ವಸಂಸ್ಥೆಯಲ್ಲಿ 159 ದೇಶಗಳು ಸದಸ್ಯತ್ವ ಹೊಂದಿದ್ದು ಅದು ವಸ್ತುಶಃ ಜಗತ್ತಿನ ಬಹುತೇಕ ಎಲ್ಲಾ ದೇಶಗಳನ್ನೂ ಒಳಗೊಂಡಿದ್ದು ವಿಶ್ವಸಂಸ್ಥೆ ಎಂಬ ಹೆಸರನ್ನು ಪಡೆಯಲು ಅರ್ಹವೆನಿಸಿದೆ.

ಕಳೆದ ನಾಲ್ಕು ದಶಕಗಳಲ್ಲಿ ವಿಶ್ವಸಂಸ್ಥೆ ಹಲವಾರು ಅಂಗಸಂಸ್ಥೆಗಳನ್ನು ಕಟ್ಟಿ ಬೆಳೆಸಿ ಅಂತರಾಷ್ಟ್ರೀಯ ಸಹಕಾರ—ವ್ಯವಹಾರಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಜಾಗತಿಕ ಬ್ಯಾಂಕು, ಅಂತರಾಷ್ಟ್ರೀಯ ಹಣಕಾಸು ನಿಧಿ, ಜಾಗತಿಕ ನ್ಯಾಯಾಲಯ, ವಿಶ್ವ ಆರೋಗ್ಯ ಸಂಸ್ಥೆ, ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ನಿರಾಶ್ರಿತರ ಸಮಸ್ಯೆ ನಿವಾರಣೆಗಿರುವ ಅಂತರಾಷ್ಟ್ರೀಯ ನಿರಾಶ್ರಿತರ ಸಂಸ್ಥೆ, ಜಾಗತಿಕ ಮಾನವಹಕ್ಕು ಆಯೋಗ, ಜಾಗತಿಕ ಆಹಾರ ಸಂಸ್ಥೆ, ಯುನೆಸ್ಕೊ—ಇವೆಲ್ಲ ವಿಶ್ವಸಂಸ್ಥೆಯ ಆಶ್ರಯದಲ್ಲಿ ಹುಟ್ಟಿ ಕೆಲಸ ಮಾಡುತ್ತಿರುವ ಘಟಕಗಳು.

ಅಂತರಾಷ್ಟ್ರೀಯ ಕಾನೂನಿನ ಸಂಸ್ಕೃತಿ—ಪರಂಪರೆ ಬೆಳೆಯಲು ವಿಶ್ವಸಂಸ್ಥೆ ಬಹಳಷ್ಟು ಕೊಡುಗೆ ನೀಡಿದೆ.

ಶಾಂತಿಯುತ ವಿಧಾನಗಳಿಂದಲೇ ವಿವಾದಗಳನ್ನು ಬಗೆಹರಿಸಬೇಕೆಂದು ಶಕ್ತಿಯ ಬಳಕೆ ಅಥವ ಬಳಕೆಯ ಬೆದರಿಕೆ ಸಲ್ಲದೆಂದೂ ವಿಶ್ವಸಂಸ್ಥೆಯ ಸನದು ಹೇಳುತ್ತಿರುವ ಇನ್ನೊಂದು ಧ್ಯೇಯ. ವಿಶ್ವಸಂಸ್ಥೆಯ ಸನದಿನ ಅನುಸಾರವಾಗಿ ತೆಗೆದುಕೊಂಡ ಸಂಸ್ಥೆಯ ತೀರ್ಮಾನಗಳನ್ನು ಎಲ್ಲಾ ಸದಸ್ಯ ರಾಷ್ಟ್ರಗಳೂ ಗೌರವಿಸಿ ಪಾಲಿಸಬೇಕೆಂದು ವಿಧಿಸಲಾಗಿದೆ. ವಿಶ್ವಸಂಸ್ಥೆಯ ಸೋಲು ಬರುತ್ತಿರುವುದೂ ಈ ವಿಷಯಗಳಿಗೆ ಸಂಬಂಧಿಸಿಯೇ ಆಗಿದೆ.

ಜಗತ್ತಿನ ಹಲವಾರು ವಿವಾದಗಳಿಗೆ ಸಂಬಂಧಪಟ್ಟಂತೆ ಒಡಂಬಡಿಕೆಗೆ ಬರುವಲ್ಲಿ ವಿಶ್ವಸಂಸ್ಥೆ ಸೋತುಹೋಗಿದೆ. ವಿಶ್ವಸಂಸ್ಥೆಯು ಕೆಲವು ವಿಚಾರಗಳ[ಲ್ಲಿ] ತೀರ್ಮಾನಗಳನ್ನು ತೆಗೆದುಕೊಂಡಿದ್ದರೂ ಅವುಗಳನ್ನು ಗೌರವಿಸಿ ಪಾಲಿಸುವವರು ಇಲ್ಲವಾಗಿ ಅವುಗಳೆಲ್ಲ ಕಡತಗಳಲ್ಲೇ ಉಳಿದು ಹೋಗಿವೆ. ವಿಯೆಟ್ನಾಂ ವಿಚಾರವಾಗಲಿ, ಕಾಂಪೂಚಿಯ ಸಮಸ್ಯೆಯಾಗಲಿ, ಆಫ್ರಿಕನ್ ದೇಶಗಳಲ್ಲಿ ಶಕ್ತ ರಾಷ್ಟ್ರಗಳ ಹಸ್ತಕ್ಷೇಪದ ಪ್ರಶ್ನೆಯಾಗಲಿ, ಲ್ಯಾಟಿನ್ ಅಮೆರಿಕದಲ್ಲಿ ಅಮೆರಿಕ ನಡೆಸುತ್ತಿರುವ ಷಡ್ಯಂತ್ರವಾಗಲಿ ದಕ್ಷಿಣ ಆಫ್ರಿಕದ ಜನಾಂಗಭೇದವಾಗಲಿ, ಅಫಘಾನಿಸ್ತಾನದಲ್ಲಿ ರಷ್ಯದ ಹಸ್ತಕ್ಷೇಪವಾಗಲಿ, ಇಸ್ರೇಲ್ ನಡೆಸಿದ ಅರಬ್ ನೆಲದ ಆಕ್ರಮಣ ವಿಚಾರವಾಗಲಿ, ಫಾಕ್ಲೆಂಡ್‌ನಲ್ಲಿ ಬ್ರಿಟನ್ನಿನ ನಗ್ನ ಹಸ್ತಕ್ಷೇಪವಿರಲಿ ಎಲ್ಲವೂ ತನ್ನಿಂದ ತಾನಾಗಿ ಬಲಾಢ್ಯರ ಮನದ ಬಯಕೆಯಂತೆ ತೀರ್ಮಾನ ಕಂಡುಕೊಂಡಿವೆಯಷ್ಟೇ ಹೊರತು ವಿಶ್ವಸಂಸ್ಥೆಗೆ ಮಾಡಲು ಸಾಧ್ಯವಾಗಿರುವುದು ಏನೂ ಇಲ್ಲ.

ಈ ಎಲ್ಲಾ ಜಾಗತಿಕ ಪ್ರಶ್ನೆಗಳಲ್ಲಿ ನ್ಯಾಯವನ್ನು ಬಲಾಢ್ಯರು ಹೆಡೆಮುರಿ ಕಟ್ಟಿ ಎಳೆದುಕೊಂಡು ಹೋಗಿದ್ದಾರೆ. ನ್ಯಾಯದ ಕಡೆಯಲ್ಲಿ ವಿಶ್ವಸಂಸ್ಥೆಯ ಮುಖೇನ ಜಾಗತಿಕ ಜನಾಭಿಪ್ರಾಯವು ಏನನ್ನೇ ಹೇಳಲಿ ಆಯಾ ವಿವಾದಗಳಲ್ಲಿ ಆಸಕ್ತರಾದ ಬಲಿಷ್ಠರು ತಮ್ಮ ಮೂಗಿನ ನೇರಕ್ಕೆ ನಡೆದಿದ್ದಾರೆ. ಸ್ವಂತ ಹಿತದ ಹಾದಿ ಬಿಟ್ಟು ಯಾರೂ ಒಂದಂಗುಲವೂ ಚಲಿಸಿಲ್ಲ.

ಅರಬ್ ನೆಲವನ್ನು ಕಬಳಿಸಿ ಲಕ್ಷಾಂತರ ಪ್ಯಾಲೆಸ್ತೀನೀಯರನ್ನು ನಿರಾಶ್ರಿತರನ್ನಾಗಿ ಮಾಡಿ ಮನುಕುಲಕ್ಕೆ ಸಂಕಟ ತಂದಿರುವ ಇಸ್ರೇಲಿನ ನಡವಳಿಕೆಯನ್ನು ಖಂಡಿಸಿ ಆಕ್ರಮಿತ ನೆಲದಿಂದ ವಾಪಾಸಾಗಬೇಕೆಂದು ವಿಶ್ವಸಂಸ್ಥೆ ನಿರ್ಣಯ ಮಾಡಿದ್ದರೂ ಇಸ್ರೇಲ್ ಒಂದಂಗುಲ ನೆಲ ಬಿಟ್ಟುಕೊಟ್ಟಿಲ್ಲ. ಅದಕ್ಕೆ ಅಮೆರಿಕದ ಹಾಗೂ ಬ್ರಿಟನ್ನಿನ ಕುಮ್ಮಕ್ಕು ಉಂಟು. ಜನಾಂಗಭೇದ ನೀತಿ ಅನುಸರಿಸುತ್ತಿರುವ ಕರಿಯರನ್ನು ಕಳಪೆ ಮನುಷ್ಯರೆಂದು ಪರಿಗಣಿಸುತ್ತಿರುವ ದಕ್ಷಿಣ ಆಫ್ರಿಕದ ಬಿಳಿಯರ ಸರಕಾರವನ್ನು ಬಹಿಷ್ಕರಿಸುವಂತೆ ವಿಶ್ವಸಂಸ್ಥೆ ನಿರ್ಣಯ ಮಾಡಿದ್ದರೂ ಅದನ್ನು ಅಮೆರಿಕವೂ ಬ್ರಿಟನೂ ಪಾಲಿಸುತ್ತಿಲ್ಲ.

ಕೋಟ್ಯಂತರ ಜನಸಮೂಹವನ್ನು ಪ್ರತಿನಿಧಿಸಿದ ಜನತಾ ಚೀನಕ್ಕೆ ಸದಸ್ಯತ್ವ ಕೊಡದೆ ತೈವಾನ್‌ನ ರಾಷ್ಟ್ರೀಯ ಚೀನವನ್ನೇ ಅಧಿಕೃತ ಚೀನವೆಂದು ತನ್ನ ವಿಟೋ ಅಧಿಕಾರದ ಮೂಲಕ ಪಟ್ಟು ಹಿಡಿದು ಇಪ್ಪತ್ತು ವರ್ಷ ಕಾಲ ಸತಾಯಿಸಿದ ಅಮೆರಿಕದ ಪಾತ್ರ ಈ ಜಗತ್ತಿನ ವ್ಯವಹಾರಗಳ ನ್ಯಾಯ ತೀರ್ಮಾನದಲ್ಲಿ ತೋಳ್ಬಲದ ಪಾತ್ರ ಎಷ್ಟೆಂಬುದಕ್ಕೆ ನಿದರ್ಶನವಾಗಿದೆ.

ಇಷ್ಟೆಲ್ಲ ಇದ್ದರೂ ಸೋಲುಗಳು ಬಂದಿದ್ದರೂ ಅಸಾಮರ್ಥ್ಯ ಇದ್ದರೂ ವಿಶ್ವಸಂಸ್ಥೆ ಮನುಕುಲ ಕ್ಷೇಮದ ವೇದಿಕೆ, ಭವಿಷ್ಯದ ಆಶಾಕಿರಣ ಎಂಬುದನ್ನು ಅಲ್ಲಗಳೆಯುವಂತಿಲ್ಲ. 40 ವರ್ಷಗಳ ಏಳುಬೀಳುಗಳ ಅನುಭವದ ಪಾಕದಿಂದ ಈ ಸಂಸ್ಥೆ ಮಾನವರು ಕಲೆತು ಚರ್ಚಿಸಬಹುದಾದ ಸಂಕಟ ಬಂದಾಗ ಓಡೋಡಿ ಬಂದು ಮೊರೆ ಇಡಬಹುದಾದ ಒಂದು ಆಶ್ರಯಧಾಮವಾಗಿ ಉಂಟು ಎಂಬುದನ್ನು ಮರೆಯುವಂತಿಲ್ಲ.



'ಕೆಟ್ಟ ಸಾಹಿತ್ಯ ಕುಡಿವ ನೀರಿಗೆ ವಿಷ ಬೆರಸಿದಂತೆ'

ಸಾಗರ, ಅ. 24–ಸಮಾಜದ ಹುಳು ಕನ್ನು ತೆಗೆದು ಒಳಿತನ್ನು ರೂಪಿಸಬೇಕಾದ ಬರಹಗಾರರು ಪ್ರಕಟಿಸುತ್ತಿರುವ ಇತ್ತೀಚಿನ ಸಾಹಿತ್ಯ ತೀರಾ ವಿಕೃತವಾಗಿ ಯುವ ಜನಾಂಗದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಕೆಟ್ಟ ಸಾಹಿತ್ಯ ಕುಡಿಯುವ ನೀರಿಗೆ ವಿಷಹಾಕಿದಂತೇ ಸಮಾಜವನ್ನು ಕಲುಷಿತಗೊಳಿಸುತ್ತಿದೆಯೆಂದು ಇಲ್ಲಿನ ಸಹಾಯಕ ಶಿಕ್ಷಣಾಧಿಕಾರಿ ಟಿ.ಕೆ. ಚಂದ್ರಪ್ಪ ಅವರು ಅಭಿಪ್ರಾಯ ಪಟ್ಟರು.

ಅವರು ಇತ್ತೀಚೆಗೆ ಸಾಗರದ ಪುರಭವನದಲ್ಲಿ ಸಾಹಿತ್ಯೋತ್ಸವದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಶ್ರೀನಿವಾಸ ಉಡುಪ ಅವರು ಮಾತನಾಡಿ ಹಿಂದೆ ಜನರಲ್ಲಿದ್ದ ಸಾಹಿತ್ಯಾಭಿಮಾನವನ್ನು ಸಂಸ್ಥೆಗಳು ವಹಿಸಿಕೊಂಡದ್ದರಿಂದ ಜನಸಾಮಾನ್ಯರು ಸಾಹಿತ್ಯ ಸಮಾರಂಭಗಳಲ್ಲಿ ನಿರಾಸಕ್ತರಾಗುತ್ತಿದ್ದಾರೆಂದು ಅಭಿಪ್ರಾಯಪಟ್ಟರಲ್ಲದೇ ಈಚೆಗೆ ಕಾರ್ಯಾಲಯಗಳಲ್ಲಿ ಕನ್ನಡ ಬಳಕೆ ಹೆಚ್ಚಾಗುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು.

...ರಕ್ಷಿಸಲು ...ಬೇಲಿ

...ಷ್ಟ ತಪ್ಪಿಸಲು ವಿದ್ಯುತ್ ಬೇಲಿಯ ...ಯೋಗಿಕ ಯೋಜನೆಯೊಂದನ್ನು ...ಳ್ಳಲಾಗಿದೆ ಎಂದು ವರದಿಯಾಗಿದೆ.

...ಕೊಡ್ಲಿಪೇಟೆ ಹೋಬಳಿ ಕಟ್ಟೆಪುರ ...ಸಲು ಅರಣ್ಯದಿಂದ ಕಾಡಾನೆಗಳು ...ರಬಂದು ರೈತರ ಬೆಳೆಗಳನ್ನು ನಾಶ ...ಡದಂತೆ 500 ಎಕರೆ ಪ್ರದೇಶಕ್ಕೆ ...ಯನ್ನು ಅಳವಡಿಸಲಾಗಿದೆ. ಈ ...ಜನೆಯನ್ನು ಹೆಚ್ಚು ಫಲಕಾರಿಯಾಗು...ತೆ ಮಾಡಲು ಮತ್ತು ವಿದ್ಯುತ್ ...ಷ್ಟವನ್ನು ತಪ್ಪಿಸಲು ದೊಡ್ಡ ಗಾತ್ರದ ...ಂತ್ರಗಳನ್ನು ಅಳವಡಿಸಲಾಗುವುದೆಂದು ...ಳಲಾಗಿದ್ದು ಅರಣ್ಯ ಇಲಾಖೆಯ ನೌಕ... ಈ ಬೇಲಿಯ ಮೇಲ್ವಿಚಾರಣೆ ವಹಿ...ವಾರೆ ಎಂದು ಗೊತ್ತಾಗಿದೆ.

ಪಂಜಿನ ಮೆರವಣಿಗೆ

...ಬರಪೊಳೆ ಯೋಜನೆಯನ್ನು ಪ್ರತಿಭಟಿ... ...ತ್ತೀಚೆಗೆ ಪೊನ್ನಂಪೇಟೆಯಲ್ಲಿ ಪಂಜಿನ ...ರವಣಿಗೆ ನಡೆಸಲಾಯಿತು.

ಕೊಡಗು ಜನಜಾಗೃತಿ ಸಮಿತಿಯ ...ಧ್ಯಕ್ಷ ಸಿ.ಕೇ. ಪೂಣಚ್ಚ ಅವರು ಪೊನ್ನಂ...ಟೆ ಬಸವೇಶ್ವರ ದೇವಾಲಯದ ...ಮುಂಭಾಗದಲ್ಲಿ ಪಂಜನ್ನು ಉರಿಸಿ ಕಾರ್ಯ...ಮವನ್ನು ಉದ್ಘಾಟಿಸಿದರು.

...ಮೆರವಣಿಗೆ ನಗರಾದ್ಯಂತ ಈ ಯೋ...ನೆ ವಿರುದ್ಧ ಘೋಷಣೆ ಕೂಗುತ್ತಾ ...ಸಾಗಿತು.

ಆತ್ಯಾಚಾರಕ್ಕೆ ವಿಫಲ ಯತ್ನ

ಮಡಿಕೇರಿ, ಅ. 24–ಯುವತಿಯೊಬ್ಬಳ ಮಾನಭಂಗಕ್ಕೆ ವಿಫಲ ಯತ್ನ ನಡೆಸಿದ ಕುರಿತು ಪೊನ್ನಂಪೇಟೆ ಪೊಲೀಸರಿಗೆ ದೂರು ಬಂದಿದೆ.

ಪೊನ್ನಂಪೇಟೆ ಸಮೀಪದ ಬೆಕ್ಕೆಸೊಡ್ಲೂರು ಗ್ರಾಮದ ಪರಿವಾರದ ಚಾಮಿ ನಾಯಕ್ ಎಂಬವರ ಪುತ್ರಿ ಚಾವಮ್ಮ ಎಂದಾಕೆ (14) ಇತ್ತೀಚೆಗೆ ಅಂಗಡಿಯಿಂದ ಸಾಮಗ್ರಿ ತರಲು ತೆರಳಿ ಹಿಂತಿರುಗುವ ಹಾದಿಯಲ್ಲಿ ಅದೇ ಗ್ರಾಮದ ಟಿ. ಬೋಪಯ್ಯ ಹಾಗೂ ಎಸ್. ಸೋಮಯ್ಯ ಎಂಬಿಬ್ಬರು ಆಕೆಯನ್ನು ಬಲಾತ್ಕಾರವಾಗಿ ಕಾಡಿಗೆ ಎಳೆದೊಯ್ದು ಆಕೆಯ ಮಾನಭಂಗಕ್ಕೆ ಯತ್ನಿಸಿದರೆಂದು ದೂರಿನಲ್ಲಿ ನಮೂದಿಸಲಾಗಿದೆ.

ಆರೋಪಿಗಳಿಬ್ಬರು ತಲೆ ತಪ್ಪಿಸಿಕೊಂಡಿದ್ದು, ಪೊಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಚೂರಿ ಇರಿತದಿಂದ ವಿದ್ಯಾರ್ಥಿಯ ಬಲಗೈ ತುಂಡು

ಮಡಿಕೇರಿ, ಅ. 24– ಕಾಲೇಜು ವಿದ್ಯಾರ್ಥಿಯೊಬ್ಬನನ್ನು ಚೂರಿಯಿಂದ ತಿವಿದು, ಆತನ ಬಲಗೈಯನ್ನು ಕತ್ತರಿಸಿದ ಕುರಿತು ಶ್ರೀಮಂಗಲ ಪೊಲೀಸರಿಗೆ ದೂರು ನೀಡಲಾಗಿದೆ.

ಶ್ರೀಮಂಗಲ ಸಮೀಪದ ನಾಲ್ಕೇರಿ ಗ್ರಾಮದ ನಿವಾಸಿ ಕೆ. ಸೋಮಯ್ಯ ...

ಕೇವಲ 5 ರೂಪಾಯಿಗೆ ಕರ್ನಾಟಕ ರಾಜ್ಯ ಲಾಟರಿ ಪ್ರಪ್ರಥಮ ಬಾರಿಗೆ ರೂ. 33 ಲಕ್ಷ ಬಂಪರ್ ಬಹುಮಾನ ನೀಡುತ್ತದೆ.

ಬನ್ನಿ. ಅತ್ಯಂತ ವಿಶ್ವಾಸಾರ್ಹವಾದ ಈ ಲಾಟರಿಯಲ್ಲಿ ಅದೃಷ್ಟ ನಿಮ್ಮದಾಗಬಹುದು.

ಮೂರು ಪ್ರಥಮ ಬಹುಮಾನಗಳು :
ತಲಾ ರೂ. 1.00.000

ಮುಂಗಾರು
ಮಂಗಳವಾರ, ಅಕ್ಟೋಬರ್ 15, 1985

ಗಡಿ ವಿವಾದ: ಹೊಸ ಧೋರಣೆ

ಕರ್ನಾಟಕ–ಮಹಾರಾಷ್ಟ್ರ ಹಾಗೂ ಕರ್ನಾಟಕ–ಕೇರಳಗಳಿಗೆ ಸಂಬಂಧಪಟ್ಟಂತೆ ಮಹಾಜನ ಆಯೋಗದ ವರದಿಯನ್ನು ಜಾರಿಗೆ ತರಬೇಕು–ಇಲ್ಲವಾದರೆ ಕರ್ನಾಟಕ ರಾಜ್ಯದಲ್ಲಿ ಹಿಂಸಾತ್ಮಕ ಚಳವಳಿ ನಡೆದೀತು ಎಂದು ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರಿಗೆ ಸುದೀರ್ಘವಾದ ಪತ್ರ ಬರೆದು ಎಚ್ಚರಿಕೆ ನೀಡಿರುವ ವರದಿ ಬಂದಿದೆ.

ಗಡಿ ವಿವಾದಗಳಿಗೆ ಸಂಬಂಧ ಪಟ್ಟಂತೆ ಹೆಗಡೆಯವರು ತಳೆದಿರುವ ಈ ಹೊಸ ಧೋರಣೆ ಹಿಂದಿನ ಎಲ್ಲಾ ಸರಕಾರಗಳ ಧೋರಣೆಗಳಿಂತ ತುಂಬಾ ಬೇರೆಯಾದದ್ದು. ಇಡಿಯ ಪ್ರಕರಣವನ್ನು ಹೊಸ ಬೆಳಕಿನಲ್ಲಿ ನೋಡುವಂತಹದ್ದು. ಹಾಗೆಯೇ ರಾಜ್ಯದ ಜನಜೀವನಕ್ಕೆ ಅಪಾಯಕಾರಿಯಾದದ್ದು ಕೂಡ.

ಈ ತನಕ ರಾಜ್ಯದ ಸರಕಾರಗಳು ಮಹಾಜನ ಆಯೋಗದ ವರದಿಗೆ ಸಂಬಂಧಪಟ್ಟ ಹಾಗೆ ಅದನ್ನು ಅನುಷ್ಠಾನಿಸಲೇ ಬೇಕು ಎಂಬ ಕಠೋರ ನಿಲುವೆಯನ್ನು ತಾಳಿರಲಿಲ್ಲ. ಗಡಿ ಸಮಸ್ಯೆಯೆಂಬುದು ಇಂದೇ ತೀರ್ಮಾನವಾಗಬೇಕೆಂಬ ಒತ್ತಾಯದ ವಿಚಾರವೆಂದು ಅವುಗಳು ಭಾವಿಸಿರಲಿಲ್ಲ. ಗಡಿವಿವಾದ ಇಲ್ಲವೇ ಇಲ್ಲವೆಂಬ ನಕಾರಾತ್ಮಕ ನಿಲುವೆ ಅವುಗಳದಾಗಿರಲಿಲ್ಲವಾದರೂ ವಿವಾದ ತೀರ್ಮಾನವಾಗಬೇಕೆಂಬ ಒತ್ತಾಯ ಯಾರದ್ದಾದರೂ ಇದ್ದರೆ ಅದು ಮಹಾಜನ ವರದಿಯ ಶಿಫಾರಸಿನ ಆಧಾರದಲ್ಲಿ ನಡೆಯಲಿ ಎಂಬ ಧೋರಣೆ ಈ ಹಿಂದಿನ ಸರಕಾರಗಳದ್ದಾಗಿತ್ತು.

ಆದರೆ ಇದೀಗ ಸರಕಾರದ ನಿಲುವೆ ಬದಲಾಗಿದೆ. ಮಹಾಜನ ಆಯೋಗದ ಶಿಫಾರಸು ಒಪ್ಪಿಕೊಳ್ಳಲೇಬೇಕು ಎಂಬುದು ಸರಕಾರದ ಹೊಸ ಧೋರಣೆಯಾಗಿದೆ. ಇಲ್ಲವಾದರೆ ರಾಜ್ಯದಲ್ಲಿ ಹಿಂಸಾತ್ಮಕ ಆಂದೋಲನ ನಡೆದೀತು ಎಂದು ಈ ಸರಕಾರದ ಮುಖ್ಯಸ್ಥನಾಗಿ ರಾಮಕೃಷ್ಣ ಹೆಗಡೆಯವರು ಪ್ರಧಾನ ಮಂತ್ರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಈ ಹೊಸ ನಿಲುವೆ ರಾಜ್ಯ ಸರಕಾರದಲ್ಲಿ ಚರ್ಚೆಗೆ ಬಂದು ಅಂಗೀಕಾರವಾಗಿರಬಹುದೆಂದು ನಾವು ನಂಬುತ್ತೇವೆ. ಹಾಗೆ ನಂಬದಿರಲು ಕಾರಣಗಳೇನೂ ಇಲ್ಲ.

ಈ ನಿಲುವಿನಲ್ಲಿ ಅಪಾಯವಿದೆ. ಭಾಷೆಗೆ ಸಂಬಂಧಪಟ್ಟ ಗಡಿವಿವಾದವೆಂಬುದು ಅತ್ಯಂತ ಜಟಿಲವಾದ ವಿಚಾರ. ಜನರ ಭಾವ ವಿಕಾರಗಳನ್ನು ಅತ್ಯಂತ ಸುಲಭವಾಗಿ ಚುಚ್ಚಿ ಕೆರಳಿಸಲು ಅನುಕೂಲಕ್ಕೊದಗುವ ಸಾಮಗ್ರಿ ಅದು. ಮಹಾಜನ ವರದಿ ಜಾರಿಗೆ ಬರಬೇಕು. ವಿವಾದಕ್ಕೆ ಅದು ಮಾತ್ರವೇ ಪರಿಹಾರವೆಂಬುದು ಕರ್ನಾಟಕದ ನಿಲುವೆಯಾದರೆ- ಅದು ಬೇಡ. ವಿವಾದದ ಮರುಪರಿಶೀಲನೆ ಆಗಬೇಕು. ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಹೊಸ ಆಯೋಗದಿಂದ ಪರಿಶೀಲನೆ ಆಗಬೇಕು ಎಂಬುದು ಮಹಾರಾಷ್ಟ್ರದ ನಿಲುವೆಯಾಗಿದೆ. ಇತ್ತ ಕೇರಳದಲ್ಲಿ ಗಡಿ ವಿವಾದ ಎಂಬುದೊಂದು ಇಲ್ಲವೇ ಇಲ್ಲ ಎನ್ನುವುದು ಕೇರಳದವರ ಅಧಿಕೃತ ನಿಲುವೆಯಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕವಿಂದು ಮಹಾಜನ ಆಯೋಗದ ಶಿಫಾರಸಿನ ಅನುಷ್ಠಾನಕ್ಕಾಗಿ ಆಗ್ರಹಪೂರ್ವಕ ಒತ್ತಾಯಿಸಿದರೆ, ಹಿಂಸೆಯಾದೀತು ಎಂದು ಎಚ್ಚರಿಕೆ ಕೊಟ್ಟರೆ ಅದರ ಪ್ರತಿಧ್ವನಿ ಮಹಾರಾಷ್ಟ್ರದಲ್ಲಿ ಆಗದೆ ಹೋದೀತೇ? ಹಿಂಸೆ ಅಲ್ಲಿಯೂ ಏಳಲಾರದೇ? ಮಹಾಜನ ವರದಿ ಬೇಡವೇ ಬೇಡ–ಅದನ್ನು ಮುಟ್ಟಿದರೆ ಮುನಿದೇವು ಎಂದು ಮರಾಠಿಗರು ಸಡ್ಡು ಹೊಡೆಯಲಾರರೇ? ಹಿಂಸೆ ನಡೆಸುವ ಹಕ್ಕು ಮತ್ತು ತಾಕತ್ತು ನಮಗೆ ಮಾತ್ರವೇ ಇರುವುದೇ?

ಇದರರ್ಥ ನ್ಯಾಯಾನ್ಯಾಯದ ವಿಮರ್ಶೆ ಮರುವಿಮರ್ಶೆ ಆಗಬಾರದು ಎಂದಲ್ಲ. ಅದನ್ನು ಬಲು ಸೂಕ್ಷ್ಮವಾಗಿ ನಡೆಸಬೇಕು. ಗಡಿ ವಿವಾದದಂತಹ ಒಂದು ವಿಚಾರವನ್ನು ಚಾಕ ಚಕ್ಯತೆಯಿಂದ ನಿರ್ವಹಿಸಬೇಕು. ಜನರ ಭಾವ–ವಿಕಾರಗಳನ್ನು ಕೆರಳಿಸುವ ಕೆಲಸವನ್ನು ಅತ್ಯಗತ್ಯದ ಸಂದರ್ಭದಲ್ಲಿ ರಾಜ್ಯದ ಹಿತಕ್ಕೆ ಧಕ್ಕೆ ನಿಜವಾಗಿಯೂ ಬಂದಿರುವ ಸಂದರ್ಭದಲ್ಲಿ ಮಾಡಬೇಕು,

ಕಾಸರಗೋಡು ಗಡಿಪ್ರಶ್ನೆ ವಿಚಾರದಲ್ಲಿ ಅಂತಹದೊಂದು ಪ್ರಸಂಗವಿದೆ ಎಂದು ನಾವೊಪ್ಪುತ್ತೇವೆ. ಅದು ನಿಜವಾಗಿಯೂ ಕನ್ನಡದ ಗಂಡು ಮೆಟ್ಟಿನ ನೆಲ. ಅದು ತುಳುನಾಡಿನ ಅವಿಭಾಜ್ಯ ಅಂಗ. ಹಲವು ಶತಮಾನಗಳಿಂದ ಕನ್ನಡವೇ ಆ ನೆಲದ ಉಸಿರು. ಮಂಗಳೂರಿನ ಜತೆ ಆ ನೆಲದ ಜನ ಹೊಕ್ಕುಳ ಬಳ್ಳಿಯ ಸಂಬಂಧ ಹೊಂದಿದವರು. ಕಾಸರಗೋಡು–ಮಂಗಳೂರುಗಳ ನಡುವೆ ವ್ಯಾಪಾರ–ವಾಣಿಜ್ಯ–ಸಂಸ್ಕೃತಿ ಸಾಹಿತ್ಯ–ಕಲೆ–ಕಾವ್ಯಗಳ, ಪರಸ್ಪರ ಕೌಟುಂಬಿಕ ಸಂಬಂಧಗಳ ಜೀವನದಿ ಹರೆಯುತ್ತಿದೆ. ಈ ರಕ್ತ ಸಂಬಂಧವನ್ನು ಕಿತ್ತೊಗೆದರೆ ಆ ನೆಲದ ಸತ್ವವೇ ಸತ್ತು ಹೋದೀತು. ಇಂದು ಅಲ್ಲಿ ಆಗುತ್ತಿರುವುದೂ ಅದೇ.

ಇದನ್ನು ಕರ್ನಾಟಕದ ಸರಕಾರ ಅರಿಯುವುದಕ್ಕೆ ತಡವಾಯಿತು. ಹೆಗಡೆಯವರು ಕಾಸರಗೋಡಿನ ಸಂದರ್ಭದಲ್ಲಿ ಇಂದು ಆಡಿದ ಮಾತನ್ನು ಇನ್ನಷ್ಟು ಜೋರಾಗಿ, ಬಹಿರಂಗವಾಗಿ, ಕಟುವಾಗಿ 1956ರಲ್ಲೆ ಈ ನಾಡಿನ ಸರಕಾರದ ಮುಖ್ಯಸ್ಥರು ಹಾಗೂ ಜನ ನಾಯಕರು ಆಡಬೇಕಿತ್ತು. ಆದರೆ ಯಾರೂ ಆಡಿಲ್ಲ. ಅವಕ್ಕೆ ಆಯಾಕಾಲದ ರಾಜಕೀಯ ಪರಿಗಣನೆಗಳು ಅಡ್ಡ ಬಂದವು. ಕನ್ನಡಿಗರ ಉದಾಸೀನವೇ ಅವರ ಹಿತಾಸಕ್ತಿಗೆ ಮುಳುವಾಯಿತು.

ಇಂದು ಕಾಸರಗೋಡಿನ ಜನ ನಿರಾಶ್ರಿತರಾಗಿದ್ದಾರೆ. ಅತಂತ್ರರಾಗಿದ್ದಾರೆ. ಅವರನ್ನು ಕೇರಳೀಕರಣವು ಹೈರಾಣಗೊಳಿಸುತ್ತಿದೆ. ಅವರ ಬದುಕಿನ ಬೇರು ಕಿತ್ತು ಒಣಗಿ ಹೋಗಿದೆ. ಜೀವತಂತುಗಳು ಕಡಿದು ಹೋಗಿವೆ. ಸಮಯ ಮೀರುತ್ತಿದೆ.

ಹೆಗಡೆಯವರು ಕಾಸರಗೋಡಿನ ವಿಚಾರದಲ್ಲಿ ಆಡಿರುವ ಮಾತುಗಳನ್ನು ಕಾರ್ಯರೂಪಕ್ಕೆ ತರುವರೋ ಎಂಬುದನ್ನು ಅಲ್ಲಿನ ಜನ ನೋಡುತ್ತಿದ್ದಾರೆ.

ರ್ವಸದಸ್ಯರ ಸಮಿತಿ ಗೊತ್ತುವಳಿ

...ಸಿದ್ದಾಪುರ ಪುರಸಭೆ: ...ಭಾರಿ ಅವ್ಯವಹಾರ

...ಸಿ. ಅ. 14– ಸಿದ್ದಾಪುರ ಪುರ ... ನೌಕರರಿಂದ ಭಾರಿ ಅವ್ಯವಹಾರ ...ದಿಯೆಂದು. ಈ ಬಗ್ಗೆ ಇತ್ತೀಚಿಗೆ ...ನೆಯ ಸರ್ವ ಸದಸ್ಯರ ಸಭೆಯಲ್ಲಿ ...ವಳಿ ಸ್ವೀಕರಿಸಿ ಈ ಕುರಿತು ತುರ್ತು ... ಕೈಗೊಳ್ಳುವಂತೆ ಮೇಲಧಿಕಾರಿಗ... ಈ ಸಭೆ ವಿನಂತಿಸಿಕೊಂಡಿದೆ ಎಂದು ... ಬಂದಿದೆ.

...ದಸ್ಯರ ಗಮನಕ್ಕೆ ಬಂದ 12000 ರೂ. ...ವಹಾರಕ್ಕೆ ಕೆಲವು ವರ್ಷಗಳಿಂದ ಹಂ... ಪುರಸಭೆ ಮುಖ್ಯಾಧಿಕಾರಿ ಆಗಿರುವ ...ಗ್ಯ ನಿರೀಕ್ಷಕ ಎ.ಓ.ಕಾಟ್ನಾ ಅವರೇ ...ಬ್ದಾರರೆಂದು ಈ ಸಭೆಯಲ್ಲಿ ತೀರ್ಮಾ...ನಾಯಿತು.

...ಲ್ಲಾಧಿಕಾರಿಗಳು, ಉಪ ವಿಭಾಗಾಧಿ...ಗಳು ಸಿದ್ದಾಪುರಕ್ಕೆ ಭೇಟಿ ನೀಡಿದಾಗ ...ರನ್ನು ಪುರಸಭಾ ಸದಸ್ಯರು ಭೇಟಿ ...ಡಿ ಈ ಕುರಿತು ವಿವರಿಸಿದರೂ ಇದು ...ರೆಗೂ ಈ ಬಗ್ಗೆ ಕ್ರಮ ತೆಗೆದುಕೊಳ್ಳದಿ...ವುದು ವಿಷಾದನೀಯ ಎಂದು ಪುರ... ಸದಸ್ಯ ಕೆ.ಟಿ.ದಾಸ ನಾಯ್ಕ ಅವರು ...ಮುಂಗಾರು"ವಿಗೆ ತಿಳಿಸಿದ್ದಾರೆ.

...ಮೇಲಿನ ಗೊತ್ತುವಳಿ ತಂದ ನಂತರ ... ಹರಿಜನ, ಗಿರಿಜನರಿಗಾಗಿ ಕಾಯ್ದಿಟ್ಟ ...ಯಲ್ಲಿ ಪ್ರತಿಯೊಂದು ಕುಟುಂಬಕ್ಕೆ ...ದು ಹಂಚೆ, ಒಂದು ಕೊಡ ಕೊಡ...ಬೇಕೆಂದು ಸಾಮಾಜಿಕ ನ್ಯಾಯ ಮಂಡ...ಯು ನಿರ್ಣಯಿಸಿತ್ತು. ಇದನ್ನು ನಿರ್ಲ...ಸಿ ಒಂದೇ ವಾರ್ಡಿಗೆ ಸೇರಿದ 20 ಹರಿ...ನ ಕುಟುಂಬಗಳಿಗೆ ತಲಾ 500ರೂ. ...ಗದು ಹಣದಂತೆ 10.000ರೂ. ನಗದು ...ಣ ನೀಡಿ ನಿಯಮವನ್ನು ಉಲ್ಲಂಘಿಸಿ ಸಮಿತಿಯ ತೀರ್ಮಾನದ ವಿರುದ್ಧ ವರ್ತಿಸಿ ಸಮಿತಿಗೆ ಅವಮಾನ ಮಾಡಿದ್ದಾರೆ. ಇದನ್ನು ಸಹ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ಅವರು ಹೇಳಿದ್ದಾರೆ.

ಕೆಳದರ್ಜೆ ನೌಕರರು ಸಹ ತಮ್ಮ ಮೇಲಾಧಿಕಾರಿಗಳ ವರ್ತನೆ ತಿಳಿದು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಅವ್ಯವಹಾರ ಮಾಡಿದ್ದಾರೆ ಎಂದು ದಾಸಪ್ಪ ಅವರು ಆರೋಪಿಸಿದ್ದಾರೆ.

ಜನತೆಗೆ ಆಗಬಹುದಾದ ಅನ್ಯಾಯ ನಿವಾರಿಸಲು ಮೇಲಾಧಿಕಾರಿಗಳು ಕೂಡಲೆ ಕ್ರಮ ಕೈಗೊಳ್ಳುವಂತೆ ದಾಸಪ್ಪ ಅವರು ಒತ್ತಾಯಿಸಿದ್ದಾರೆ.

...ಶಿಕಾರಿಪುರದಲ್ಲಿ ರೈತರ ಜಾಥ ಸಿದ್ಧತೆ

ಶಿಕಾರಿಪುರ. ಅ. 14– ರಾಜ್ಯ ರೈತ ...ಸಂಘದ ಕರೆಯ ಮೇರೆಗೆ ತಾಲೂಕ್ ...ತ ಸಂಘದ ಕಾರ್ಯಕರ್ತರು ಶಿರಾಳ...ಕೊಪ್ಪದಲ್ಲಿ ಸಭೆ ಸೇರಿ ತಾಲೂಕಿನಿಂದ ...ಸ್ತಿನ ಸಂಖ್ಯೆಯಲ್ಲಿ ಜಾಥಾದಲ್ಲಿ ಭಾಗವ...ಹಿಸಬೇಕೆಂದು ತೀರ್ಮಾನಿಸಿದರು.

ಸಭೆಯ ಅಧ್ಯಕ್ಷತೆಯನ್ನು ಜಿ. ಶಿವಪ್ಪ ...ವರು ವಹಿಸಿದ್ದರು. ಕಾರ್ಯದರ್ಶಿ ಎನ್. ...ರ್ರರವರು ಜಾಥದ ಬಗ್ಗೆ ವಿವರಿಸಿದರು.

ಈ ಸಭೆಯಲ್ಲಿ ಶಿಕಾರಿಪುರ ತಾಲೂಕ್ ...ತಗಣತಾಳಗುಂದ ಮೋಬಳಿ ರೈತ ಸಂ... ಕಾರ್ಯದರ್ಶಿ ನಿಂಗಪ್ಪ ಬೆಳಗಾವಿ ...ವರ ಅಕಾಲ ಮರಣಕ್ಕಾಗಿ ಶ್ರದ್ಧಾಂಜಲಿ...ಯನ್ನು ಅರ್ಪಿಸಲಾಯಿತು.

ಹತ್ತಿನಾಳು ಗ್ರಾಮದಲ್ಲಿ ಹುಲಿ ಹಾವಳಿ

ಚಿಕ್ಕಮಗಳೂರು, ಅ. 14– ತರೀಕೆರೆಯ ಹತ್ತಿನಾಳು ಗ್ರಾಮದಲ್ಲಿ ಹುಲಿಯೊಂದು ಎತ್ತುಗಳ ಮೇಲೆ ದಾಳಿ ನಡೆಸಿ, ಅವು ಈಗ ಚಿಂತಾಜನಕ ಸ್ಥಿತಿಯಲ್ಲಿವೆ ಎಂದು ಗೊತ್ತಾಗಿದೆ.

ತರೀಕೆರೆಯ ಗಂಗಾಧರಪ್ಪ ಎಂಬವರಿಗೆ ಸೇರಿದ ಎರಡು ಹೋರಿಗಳ ಮೇಲೆ ದಾಳಿ ದಡೆಸಿದ ಹುಲಿ ಅವುಗಳ ರಕ್ತ ಹೀರಲು ಯತ್ನಿಸಿ ವಿಫಲವಾಗಿದೆ. ಆ ಹೋರಿಗಳಿಗೆ ಈಗ ಚಿಕಿತ್ಸೆ ನೀಡಲಾಗುತ್ತಿದೆ.

ಹಲವಾರು ದಿನಗಳಿಂದ ಈ ಗ್ರಾಮದ ಸುತ್ತ ಹುಲಿಯ ಹಾವಳಿ ಜಾಸ್ತಿಯಾಗಿದ್ದು ಗ್ರಾಮಸ್ಥರು ಭಯ ಭೀತರಾಗಿದ್ದಾರೆ. ಈ ಬಗ್ಗೆ ಅರಣ್ಯ ಇಲಾಖೆಗೆ ದೂರು ನೀಡಲಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಮಚ್ಚಿನಿಂದ ಕಡಿದ ವ್ಯಕ್ತಿಯ ಬಂಧನ

ಮಡಿಕೇರಿ, ಅ. 14– ಸ್ಥಳೀಯ ಚಿತ್ರ ಮಂದಿರವೊಂದರ ಬಳಿ ರಜಾಕ್ ಎಂಬವರಿಗೆ ಮಚ್ಚಿನಿಂದ ಕಡಿದು ಪರಾರಿಯಾದ ಕುರಿತು ನಗರ ಪೊಲೀಸರಿಗೆ ದೂರು ನೀಡಲಾಗಿದೆ.

ಮಡಿಕೇರಿ ನಗರ ಪೊಲೀಸರು ಈ ಸಂಬಂಧ ಕೇಶವ ಎಂಬವರನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿದಾಗ, ಆರೋಪಿಯನ್ನು ಅ. 21ರವರೆಗೆ ನ್ಯಾಯಾಂಗ ವಶಕ್ಕೆ ನೀಡುವಂತೆ ಆದೇಶ ನೀಡಲಾಗಿದೆ.

ಮದುವೆಯಾದ ಮಾರಾಟ ಮಾಡಿದ

(ಮುಂಗಾರು ವರದಿ)

ಚಿಕ್ಕಮಗಳೂರು, ಅ. 14- ಹುಡುಗಿಯರನ್ನು ಮುಂಬಯಿಗೆ ಮಾರುತ್ತಿದ್ದ ಯುವಕನೊಬ್ಬನನ್ನು ಪೊಲೀಸರು ಬಂಧಿಸಿರುವುದಾಗಿ ವರದಿಯಾಗಿದೆ.

ಇಲ್ಲಿಗೆ ಸಮೀಪದ ಆಲೇನಹಳ್ಳಿ ಎಂಬಲ್ಲಿ ಯುವತಿಯೊಬ್ಬಳನ್ನು ಮದುವೆಯಾಗಿ ನಂತರ ಮುಂಬಯಿಯ ಕೆಂಪು ದೀಪ ಪ್ರದೇಶಕ್ಕೆ ಮಾರಾಟ ಮಾಡಿದ್ದಾನೆನ್ನಲಾಗಿದೆ. ಮದುವೆಯಾಗುವ ಮುನ್ನ ಈ ಯುವಕ ತನ್ನ ಹೆಸರು ವಾಜೀದ್ ಎಂದು ಹಾಗೂ ಹಣ್ಣು ವ್ಯಾಪಾರ ಮಾಡುತ್ತಿರುವುದಾಗಿ ತಿಳಿಸಿದ್ದನೆಂದು ತಿಳಿದು ಬಂದಿದೆ. ಮದುವೆಯಾದ ನಂತರ ತನ್ನ ಹೆಂಡತಿಯನ್ನು ಇತರ ಊರುಗಳಿಗೆ ಕರೆದೊಯ್ದು ಕೊನೆಗೆ ಮುಂಬೈಯಲ್ಲಿ ಮಾರಿದನೆನ್ನಲಾಗಿದೆ.

ತನ್ನನ್ನು ಮೋಸ ಮಾಡಿ ವಂಚಿಸಿ ಇತರರಿಗೆ ತನ್ನ ಗಂಡ ಮಾರಿದನೆಂದು ತಿಳಿದ ಯುವತಿ ತನ್ನ ಯಜಮಾನಿಯ ಬಳಿ ಗೋಗರೆದು ಬಸ್ ಚಾರ್ಜಿಗೆ ಹಣ ಪಡೆದು ಮಂಗಳೂರು ತಲುಪಿ ಅನಂತರ ತನ್ನ ಊರಿಗೆ ಬಂದಿದ್ದಾಳೆ.

ಯುವಕ ಇಲ್ಲಿಗೆ ಬಂದು ಹೆಂಡತಿಗೆ ಹುಷಾರಿಲ್ಲ, ನಾದಿನಿಯನ್ನು ಕರೆದುಕೊಂಡು ಹೋಗಬೇಕು ಎಂದು ಹೆಂಡತಿಯ ಮನೆಗೆ ಕಾಲಿಟ್ಟಾಗ ಹೆಂಡತಿಯೇ ಎದುರುಗೊಂಡಾಗ ದಿಗ್ಭ್ರಮೆಗೊಂಡು ಆಕೆ ಕಿರುಚಿಕೊಂಡಾಗ ಅಕ್ಕಪಕ್ಕದವರು ಸೇರಿ ಆ ಯುವಕನನ್ನು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದರೆಂದು ಗೊತ್ತಾಗಿದೆ.

50ರೂ. ಖೋಟಾ ನೋಟು ಪತ್ತೆ

ಚಿಕ್ಕಮಗಳೂರು, ಅ. 14– ಇಲ್ಲಿನ ಸ್ಟೇಟ್‌ಬ್ಯಾಂಕ್ ಶಾಖೆಗೆ ಪಾವತಿ ಮಾಡಿದ ನೋಟಿನ ಕಂತೆಯಲ್ಲಿ 50ರೂ ನ ಖೋಟಾ ನೋಟು ಪತ್ತೆಯಾಗಿದೆ.

ರಬ್ಬರು ಮತ್ತು ಅಡಿಕೆ ಗಿಡಗಳು

ರಬ್ಬರು ಮತ್ತು ಅಡಿಕೆಗಿಡಗಳಿಗೆ ಬೇಕಾಗುವ ಹೊಸ ಉನ್ನತ ಮಾದರಿಯ ಪ್ಲಾಸ್ಟಿಕ್ ಚೀಲಗಳು ಸ್ಪರ್ಧಾತ್ಮಕ ದರದಲ್ಲಿ ನಮ್ಮಲ್ಲಿ ದೊರೆಯುತ್ತವೆ.

ಗುರುದೇವ್ ಸೇಲ್ಸ್ ಕಾರ್ಪೋರೇಶನ್

4,ಸೆಂಟ್ರಲ್ ಮಾರ್ಕೆಟ್,ಮಂಗಳೂರು–1

ಫೋನ್: 23563, 22807

...ಉಚಿತ ...ಪರೀಕ್ಷೆ



ಮುಂಗಾರು

ಸೋಮವಾರ, ಅಕ್ಟೋಬರ್ 14, 1985

ತಿರುಳಿಲ್ಲದ ನಮ್ಮ ಜನತಂತ್ರ

ರಾಜ್ಯಗಳ ಮೇಲೆ ಒತ್ತಡ ಹೇರಿ ಮಣಿಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಸರಕಾರವು ಹೆಚ್ಚು ಹೆಚ್ಚು ರಾಜಕೀಯ ಹಾಗೂ ಹಣಕಾಸಿನ ಅಧಿಕಾರಗಳನ್ನು ಕೈಯಲ್ಲಿ ತೆಗೆದುಕೊಳ್ಳುತ್ತಿದೆಯೆಂದು ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರ್ ಅವರು ಬಾಲಿಯಾದಲ್ಲಿ ನಡೆದ ಅವರ ಪಕ್ಷದ ರಾಷ್ಟ್ರೀಯ ಅಧಿವೇಶನದಲ್ಲಿ ಟೀಕಿಸಿದ್ದಾರೆ.

ಆಂತರಿಕ ಭದ್ರತೆಗೆ ಒಂದು ಪ್ರತ್ಯೇಕ ಸಚಿವ ಖಾತೆಯನ್ನು ನಿರ್ಮಿಸುವ ಮೂಲಕ ಈ ದೇಶ ಒಂದು "ಭದ್ರತಾ ರಾಷ್ಟ್ರ" ವಾಗಿದೆಯೆಂದೂ ಇದು ಮಿಲಿಟರಿ ಸರ್ವಾಧಿಕಾರಗಳು ಹಿಡಿಯುವ ದಾರಿಯನ್ನು ಹೋಲುವುದೆಂದೂ ಜನತಾ ಪಕ್ಷದ ರಾಷ್ಟ್ರೀಯ ಮಂಡಳಿಯು ಅಂಗೀಕರಿಸಿದ ರಾಜಕೀಯ ಗೊತ್ತುವಳಿಯು ಖಂಡಿಸಿದೆ.

ಪಕ್ಷವು ತನ್ನ ಆರ್ಥಿಕ ನೀತಿಯ ಗೊತ್ತುವಳಿಯಲ್ಲಿ ಕೇಂದ್ರ ಸರಕಾರವು ಈಗ ಹಿಡಿದಿರುವ ಅತ್ಯಾಧುನಿಕ ವಿದೇಶಿ ತಂತ್ರಜ್ಞಾನವನ್ನು ವಿವೇಚನೆಯಿಲ್ಲದೆ ಆಮದು ಮಾಡಿಕೊಳ್ಳುವ ಧೋರಣೆಯನ್ನು ಖಂಡಿಸಿ ಈ ಧೋರಣೆಯಿಂದ ಜನ ನಿಬಿಡ ದೇಶವಾದ ಭಾರತದ ನಿರುದ್ಯೋಗ ಸಮಸ್ಯೆ ಇನ್ನಷ್ಟು ಬಿಗಡಾಯಿಸುವುದೆಂದು ಎಚ್ಚರಿಸಿದೆ.

ದೇಶದ ಹಿತದ ಬಗ್ಗೆ ಚಿಂತನೆ ಮಾಡುವವರೆಲ್ಲ ಆಲೋಚಿಸಬೇಕಾದ ಗಂಭೀರ ಪ್ರಶ್ನೆಗಳನ್ನು ಜನತಾ ಪಕ್ಷದ ರಾಷ್ಟ್ರೀಯ ಮಂಡಳಿ ಇದೀಗ ಜನರ ಮುಂದೆ ಇರಿಸಿದೆ. ನಾಡಿನ ಆರ್ಥಿಕತೆಯಲ್ಲಿ, ಆಗುಹೋಗುಗಳಲ್ಲಿ ಜನಾಭಿಪ್ರಾಯಕ್ಕೆ ಮನ್ನಣೆ ದೊರೆಯಬೇಕಾದ ಪರಿಸ್ಥಿತಿಯನ್ನು ಉಂಟು ಮಾಡಬೇಕಾದ್ದು ಸಮಾಜದ ಸ್ವಾಸ್ಥ್ಯ ದೃಷ್ಟಿಯಿಂದ ಅಗತ್ಯ. ಪ್ರಗತಿ ಹೇಗೋ ಆದರೆ, ಯಾರಿಗೋ ಆದರೆ ಸಾಲದು, ಪ್ರಗತಿಯಲ್ಲಿ ವಿಕೃತಿ ಉಂಟಾಗಬಾರದು. ಜನಾಭಿಪ್ರಾಯದ ಚೌಕಟ್ಟಿನೊಳಗೆ ನಡೆಯುವ ಅಭಿವೃದ್ಧಿಯ ಫಲಗಳು ಸಾಮಾನ್ಯ ಜನರಿಗೆ ದೊರೆಯದೆ ಸೀಮಿತ ಜನಗಳ ಜೇಬಿಗಿಳಿಯುವ ವಿಲಕ್ಷಣ ವಿದ್ಯಮಾನ ನಡೆಯುತ್ತದೆ. ಇಂದು ಭಾರತದಲ್ಲಿ ಆಗಿರುವುದೂ ಅದೇ.

ಇಂದು ಕೇಂದ್ರ ಸರಕಾರದ ನಾಯಕರು ದೇಶವನ್ನು ಇಪ್ಪತ್ತೊಂದನೇ ಶತಮಾನಕ್ಕೆ ನೆಗೆಯಿಸುವ ಉತ್ಸಾಹದ ಭರದಲ್ಲಿ ವಿದೇಶಿ ತಂತ್ರಜ್ಞಾನಕ್ಕೆ ಬಾಗಿಲನ್ನು ದೊಡ್ಡದಾಗಿ ತೆರೆದು ಇರಿಸಿರುವ ಪ್ರಸಂಗ ಕಂಡು ಬರುತ್ತಿರುವುದು ನಮ್ಮ ವ್ಯವಸ್ಥೆಯಲ್ಲಿ ಜನಾಭಿಪ್ರಾಯಕ್ಕೆ ದೊರೆಯುವ ಮನ್ನಣೆ ಅತ್ಯಂತ ಕನಿಷ್ಠವಾದುದನ್ನು ತೋರಿಸಿಕೊಡುತ್ತದೆ. ಈ ದೇಶಕ್ಕೆ ಯಾವ ತಂತ್ರಜ್ಞಾನ ಬೇಕು, ಅವನ್ನೆಲ್ಲ ಅಳವಡಿಸಿಕೊಳ್ಳುವ ಬಗೆ ಹೇಗೆ, ಬಂಡವಾಳ ಹೂಡಿಕೆಯ ವ್ಯವಸ್ಥೆ [illegible] ಯಿಂದಲೂ ಬರುವ ಲಾಭದ ವಿತರಣೆ ಹೇಗಿರಬೇಕು- ಇದನ್ನೆಲ್ಲ ತೀರ್ಮಾನಿಸುವ ರಾಜಕೀಯ ವ್ಯವಸ್ಥೆ ಹೇಗಿರಬೇಕು ಎಂಬ ವಿಚಾರಗಳಲ್ಲಿ ಜನರ ಅಭಿಪ್ರಾಯವೇ ಒಂದಾದರೆ ಸರಕಾರದ ಅಭಿಪ್ರಾಯವೇ ಇನ್ನೊಂದಾಗಿ ಬಿಟ್ಟಿದೆ.

ಆದ್ದರಿಂದಲೇ ಇಂದಿನ ವಿಕೃತಿಗಳು ಕಾಣಿಸಿಕೊಂಡಿವೆ. ವಿದೇಶಿ ತಂತ್ರಜ್ಞಾನದ ಕುದುರೆಯ ಬೆನ್ನೇರಿ ಇಪ್ಪತ್ತೊಂದನೇ ಶತಮಾನಕ್ಕೆ ನೆಗೆಯಬಹುದೆಂದು ರಾಜೀವ ಗಾಂಧಿಯವರು ಹೇಳಿದರೆ ನಮ್ಮ ಸರಕಾರಿ ವ್ಯವಸ್ಥೆಯ ಜನರಿಗೆ ಅದುವೇ ವೇದವಾಕ್ಯವಾಗುತ್ತಿದೆ. ದೊಡ್ಡ ಉದ್ಯಮಗಳವರಿಗೆ ಹೆಚ್ಚು ಹೆಚ್ಚು ಪರಿಹಾರ ಕೊಡುವುದರಿಂದ ಉತ್ಪಾದನೆಯು ಹೆಚ್ಚಿ ದೇಶದಲ್ಲಿ ಸಮೃದ್ಧಿ ಉಂಟಾಗಿ ಬಡತನ ಓಡಿ ಹೋಗುವುದೆಂದು ಸರಕಾರಿ ವರಿಷ್ಠರು ತೀರ್ಮಾನಿಸಿದರೆ ಜನ ಅದನ್ನು ಮೌನವಾಗಿ ಒಪ್ಪಿಕೊಳ್ಳುತ್ತಾರೆ. ದೆಹಲಿಯು ಬಲವಾದರೆ ಮಾತ್ರ ದೇಶ ಬಲವಾಗುತ್ತದೆ ಎಂದು ಪ್ರಧಾನ ಮಂತ್ರಿ ಅಪ್ಪಣೆ ಕೊಡಿಸಿದರೆ ಅದರ ವಿರುದ್ಧ ಚಕಾರ ಎತ್ತುವವರು ಯಾರೂ ಇರುವುದಿಲ್ಲ.

ಇಂದು ಪ್ರಧಾನ ಮಂತ್ರಿ ಮಾಡುತ್ತಿರುವುದೂ ಅದೇ ಆಗಿದೆ. ಅವರು ದೆಹಲಿಯನ್ನು ಬಲಪಡಿಸುತ್ತಿದ್ದಾರೆ. ರಾಷ್ಟ್ರೀಯ ಆಂತರಿಕ ಭದ್ರತೆ ಮಂತ್ರಿ ಖಾತೆಯನ್ನು ಅವರು ನಿರ್ಮಿಸಿದ್ದು ಅದಕ್ಕೆ. ಈಗಾಗಲೇ ಮುನಿಸಿಪಾಲಿಟಿಗಳ ಮಟ್ಟಕ್ಕೆ ಇಳಿದಿರುವ ರಾಜ್ಯಗಳ ಸ್ಥಿತಿ ಆ ಮಟ್ಟದಲ್ಲೇ ಖಾಯಂ ಆಗುತ್ತದೆ. ಶಾಂತಿ ಪಾಲನೆಯ ಕೆಲಸ ರಾಜ್ಯಗಳದ್ದಾಗಿರುವುದರಿಂದ ಕೇಂದ್ರದಲ್ಲೊಂದು ಆಂತರಿಕ ಭದ್ರತೆ ಸಚಿವ ಖಾತೆಯಾದರೂ ಏತಕ್ಕೆ?

ರಾಷ್ಟ್ರೀಯ ಏಕತೆ, ಸಮಗ್ರತೆ ಹಾಗೂ ಸಾರ್ವಭೌಮತೆಗಳ ಭೂತವನ್ನು ಛೂಬಿಟ್ಟು ದೆಹಲಿಯನ್ನು ಬಲಪಡಿಸಿಕೊಂಡು ಮೆರೆಯುವ ಆಳವನ್ನು ಇಂದಿನ ನಮ್ಮ ವ್ಯವಸ್ಥೆಯಲ್ಲಿ ಅಧಿಕಾರಸ್ಥರು ಮಾಡುತ್ತಿದ್ದಾರೆ. ಆರ್ಥಿಕ, ರಾಜಕೀಯ ಧೋರಣೆಗಳ ನಿರೂಪಣೆಯಲ್ಲಿ ರಾಜಕೀಯ ಚಿಂತಕರಿಗಾಗಲಿ, ಜನರಿಗಾಗಲಿ, ಆಳುವ ಪಕ್ಷದೊಳಗಿನ ಜನರಿಗಾಗಲಿ ಮಾತೇ ಇಲ್ಲವಾಗಿದೆ. ಆರ್ಥಿಕ ಧೋರಣೆಗಳನ್ನು ಕೈಗಾರಿಕಾ ನೀತಿ ಏನಿರಬೇಕೆಂಬುದನ್ನು ಜನರೊಡನೆ ಕೇಳಿ ಯಾರೂ ತೀರ್ಮಾನಿಸುತ್ತಿಲ್ಲ. ಜನತಂತ್ರವು ಇಲ್ಲಿ ಜೀವವಿಲ್ಲದ ಹಂದರವಾಗಿದೆ. ಟೊಳ್ಳು ಗೆರಟೆಯಾಗಿದೆ. ಜನತಂತ್ರದಲ್ಲಿ ತಿರುಳಿದ್ದರೆ ಇಂತಹ ವಿಕೃತಿಗಳು ಉಂಟಾಗುವುದಿಲ್ಲ.

ಇಂದು ಜನತಾ ಪಕ್ಷದವರು ರಾಷ್ಟ್ರೀಯ ಮಹತ್ವದ ವಿಚಾರಗಳ ಬಗ್ಗೆ ಜನರ ಗಮನ ಸೆಳೆದಿದ್ದಾರೆ. ಇದರ ಬಗ್ಗೆ ಚಿಂತನೆ ನಡೆಯಬೇಕು. ನಮ್ಮ ಜನತಂತ್ರದಲ್ಲಿನ ವಿಕಾರಗಳ ನಿವಾರಣೆಗೆ ಅದರಿಂದ ದಾರಿ ದೊರೆಯಬೇಕು.

...ರ ದೇಶಪಾಂಡೆ

...ಲನಕ್ಕೆ ಸಣ್ಣ ...ೆ ಅಗತ್ಯ'

...ಜಿಲ್ಲೆಯ ಅರಣ್ಯ ಶೇ. 50 ರಷ್ಟು ...ವಾಗಿದೆ ಎಂದು ಅವರು ತಿಳಿಸಿದರು. ...ಕಾರವಾರದ ಕೊಳಚೆ ಹೊತ್ತ ಕೋಣ ...ದ ಒಳಚರಂಡಿ ಯೋಜನೆಗೆ 8 ಲಕ್ಷ ...ಗಳ ಒಂದು ರೂಪರೇಷೆ ತಯಾರಿಸ ...ದ್ದು. ಒಳಚರಂಡಿ ಯೋಜನಾ ಮಂಡ... ಇದರ ಜವಾಬ್ದಾರಿ ವಹಿಸಲಾಗುವುದು ...ದು ಅವರು ಹೇಳಿದರು.

ಕಾರವಾರ ಸಮುದ್ರ ತೀರವನ್ನು ಅಭಿ... ಪಡಿಸಿ ಜಲಕ್ರೀಡೆ ಸಂಕೀರ್ಣವನ್ನು ...ಸಲಾಗುವುದು. ಬನವಾಸಿಯಲ್ಲಿ ...ವಾಸಿ ಕಚೇರಿಯನ್ನು ತೆರೆಯಲಿದ್ದು. ... ಶಿಲ್ಪಕೇಂದ್ರವನ್ನಾಗಿ ಮಾಡುವ ... ವರ್ಷದ ಯೋಜನೆಯೊಂದನ್ನು ಸಿದ್ಧ...ಸಲಾಗಿದೆ. ರಾಮನಗರದಲ್ಲಿ [illegible] ... ವತಿಯಿಂದ 2.5 ಎಕರೆ ಪ್ರದೇಶದಲ್ಲಿ ...ಟೆಲ್ ಸ್ಥಾಪಿಸಲಾಗುವುದೆಂದು ಸಚಿ...ವರು ವಿವರಿಸಿದರು.

ಪ್ರಾರಂಭದಲ್ಲಿ ಬೆಳಗಾವಿ ವಿಭಾಗದ ...ವಾರ್ತಾ ಮತ್ತು ಪ್ರಚಾರ ಇಲಾಖೆಯ ...ನಿರ್ದೇಶಕ ಪಿ. ನಾಗಾಚಾರ್ ಸ್ವಾಗತಿ...ದರು. ಕೊನೆಯಲ್ಲಿ ಜಿಲ್ಲಾ ವಾರ್ತಾಧಿ... ಬಸವರಾಜ ವಂದಿಸಿದರು.

ಶಿರಸಿ ತಾಲೂಕಿನ 53 ಹಳ್ಳಿಗಳಲ್ಲಿ ಬರಗಾಲ

ಕಾರವಾರ, ಅ. 13– ಹಳಿಯಾಳ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಸಾರಿದ್ದು ಯಲ್ಲಾಪುರ ತಾಲೂಕಿನ ಹುಣಶಿತೇಕೊಪ್ಪ ಮತ್ತು ಕಿರವತ್ತಿ ಪ್ರದೇಶದ ಪರಿಸ್ಥಿತಿಯನ್ನು ಅಭ್ಯಸಿಸಿ ನಿರ್ಧರಿಸಬೇಕಾಗಿದೆಯೆಂದು ರಾಜ್ಯ ಸಣ್ಣ ಕೈಗಾರಿಕಾ ಮಂತ್ರಿ ಆರ್. ವಿ. ದೇಶಪಾಂಡೆ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮುಂಡಗೋಡು ತಾಲೂಕನ್ನು ಸಂಪೂರ್ಣ ಬರಪೀಡಿತ ಪ್ರದೇಶವೆಂದು ಘೋಷಿಸಿ ಈ ಪ್ರದೇಶದಲ್ಲಿದ್ದ ಬೆಳೆಯ ನಷ್ಟ 4.11 ಕೋಟಿ ರೂ. ಎಂದು ಗುರುತಿಸಲಾಗಿದೆ.

ಶಿರಸಿ ತಾಲೂಕಿನ 53 ಹಳ್ಳಿಗಳನ್ನು ಬರಗಾಲ ಪ್ರದೇಶವೆಂದು ನಿರ್ಧರಿಸಿ 228 ಕುಟುಂಬಗಳನ್ನು ನಿರ್ಗತಿಕರೆಂದು ಗುರುತಿಸಿ 1,11,84,000 ರೂ. ನಷ್ಟವೆಂದು ಅಂದಾಜಿಸಲಾಗಿದೆ. ತಾಲೂಕಿನ ಒಟ್ಟು ಬರಗಾಲ ನಷ್ಟಕ್ಕೆ 20 ಲಕ್ಷ ರೂ.ನ್ನು ಉದ್ಯೋಗ ಭರವಸೆ ಕಾಮಗಾರಿಗೆ ಮಂಜೂರು ಮಾಡಲಾಗಿದೆ ಎಂದು ಅವರು ಹೇಳಿದರು.

ಅಡಿಕೆ ಕಟ್ಟೆ ರೋಗದ ಕುರಿತು ಜಿಲ್ಲೆಯಾದ್ಯಂತ 1984-85ರಲ್ಲಿ ಅಡಿಕೆ ತೋಟಕ್ಕೆ ತಗಲಿದ ಕಟ್ಟೆ ರೋಗದಿಂದ ನಷ್ಟವಾದ ಹಾಗೂ 1985-86ರಲ್ಲಿ ಅಂದರೆ ಈಗಾಗಲೆ ತಗಲಿರುವ ಕಟ್ಟೆ ರೋಗದಿಂದ ನಷ್ಟವಾಗ ಬಹುದಾದ ಒಟ್ಟು ಹಾನಿಯು ಶಿರಸಿಯಲ್ಲಿ 26.67 ಕೋಟಿ ರೂ. ಆಗಬಹುದೆಂದು ಕೃಷಿ ವಿಶ್ವವಿದ್ಯಾನಿಲಯ ಧಾರವಾಡ ಮತ್ತು ತೋಟಗಾರಿಕೆ ಇಲಾಖೆ ಸಂಯುಕ್ತವಾಗಿ ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಿದೆಯೆಂದು ಈ ಸಮೀಕ್ಷೆಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಗೊತ್ತಾಗಿದೆ.

ಕಟ್ಟೆ ರೋಗ 6,239 ಎಕರೆ ಪ್ರದೇಶಕ್ಕೆ ತಗಲಿದ್ದು ರೋಗ ನಿಯಂತ್ರಣೆಗೆ ಸಿಂಪಡಿಸಿದ ಔಷಧದ ಖರ್ಚು 2.20 ಕೋಟಿ ರೂ. ಎಂದು ತಿಳಿದು ಬಂದಿದೆ.

ರೋಗ ನಿಯಂತ್ರಿಸುವ ಸಲುವಾಗಿ ತೋಟಗಾರಿಕಾ ಇಲಾಖೆ ಈಗಾಗಲೆ ಈ ಈ ರೋಗ ಪೀಡಿತ ಪ್ರದೇಶಕ್ಕೆ ಭೇಟಿನೀಡಿ ರೈತರಿಗೆ ಮಾಹಿತಿ ನೀಡುತ್ತಿದೆ.

ರಕ್ತದಾನ

ಚಿಕ್ಕಮಗಳೂರು, ಅ. 13– ವಿಶ್ವ ಲಯನ್ಸ್ ಸೇವಾ ದಿನಾಚರಣೆ ಅಂಗವಾಗಿ ಇಲ್ಲಿನ ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಯಲ್ಲಿ ಲಯನ್ಸ್‌ನ ಮೂರುಜನ ಪದಾಧಿಕಾರಿಗಳು ಬುಧವಾರ ರಕ್ತದಾನ ಮಾಡಿದರು.

ರೆಡ್‌ಕ್ರಾಸ್ ಹಾಗೂ ಲಯನ್ಸ್ ಸಂಸ್ಥೆಗಳ ಆಶ್ರಯದಲ್ಲಿ ವ್ಯವಸ್ಥೆಗೊಳಿಸಿದ್ದ ಈ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಇಲ್ಲಿನ ಬಿಷಪ್ ಮಥಾಯಸ್ ಉದ್ಘಾಟಿಸಿದರು. ಜಿಲ್ಲಾ ಸರ್ಜನ್ ಡಾ॥ಜಯಲಕ್ಷ್ಮಣ ರೆಡ್ಡಿ ಅವರು ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣಗೊಂಡ ನಂತರ ರಕ್ತದಾನಕ್ಕೆ ಪೂರ್ಣ ಪ್ರಮಾಣದ ಘಟಕ ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ಬ್ಲಡ್ ಬ್ಯಾಂಕಿಗಾಗಿ ನಾಗರಾಜ್ ಅವರು ಒಂದೂವರೆ ಲಕ್ಷ ರೂ.ಗಳನ್ನು ದಾನ ಮಾಡುವುದಾಗಿ ವಾಗ್ದಾನ ಮಾಡಿದರು.

ರೈತರ ಧರಣಿಗೆ ಹೊನ್ನಾಳಿ ರೈತರು

ಹೊನ್ನಾಳಿ, ಅ. 13–ನವೆಂಬರ್ ಒಂದರಂದು ಬೆಂಗಳೂರಿನಲ್ಲಿ ನಡೆಯಲಿರುವ ರೈತರ ಧರಣಿಯಲ್ಲಿ ಭಾಗವಹಿಸಲು ತಾಲೂಕು ರೈತ ಸಂಘ ನಿರ್ಧರಿಸಿದೆ.

ತಾಲೂಕು ರೈತ ಸಂಘದ ಅಧ್ಯಕ್ಷ ಎ. ಬಿ. ಲಿಂಗರಾಜು ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ಬಗ್ಗೆ ನಿರ್ಧರಿಸಲಾಯಿತು.

ತಾಲೂಕಿನಾದ್ಯಂತ ಬರಗಾಲ ಸ್ಥಿತಿ ಇದ್ದರೂ ಸರ್ಕಾರ ಯಾವುದೇ ಪರಿಹಾರ ಕಾರ್ಯ ಕೈಗೊಂಡಿಲ್ಲವೆಂದು ವಿಷಾದಿಸಿದ ಸಭೆ ಸರ್ಕಾರ ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿತು.

ಟ್ರ್ಯಾಕ್ಟರ್ ಡಿಕ್ಕಿ: ಬಾಲಕಿ ಆಸ್ಪತ್ರೆಗೆ

ಚಿಕ್ಕಮಗಳೂರು, ಅ. 13– ಆಲ್ದೂರು ಸಮೀಪದ ಸಿಂಡುಗೋಡು ಎಂಬಲ್ಲಿ ಟ್ರ್ಯಾಕ್ಟರೊಂದು ಹೇಮಾವತಿ (4) ಎಂಬ ಬಾಲಕಿಗೆ ಈಚೆಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ಬಾಲಕಿ ತೀವ್ರ ಗಾಯಗೊಂಡು ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಬಾಲಕಿಯ ಬಲಗೈ ಪೂರ್ಣ ಜಜ್ಜಿ ಹೋಗಿದ್ದು ಹೊಟ್ಟೆಯ ಭಾಗವು ಕೂಡ ಜಜ್ಜಿ ಹೋಗಿದೆ. ಮಗುವಿನ ಮೂತ್ರದಲ್ಲಿ ರಕ್ತ ಬರುತ್ತಿದೆ. ಎಂದು ತಿಳಿದು ಬಂದಿದೆ.

ಪುಟ್ಟಣ್ಣ ಕಣಗಾಲ್ ಚಿತ್ರೋತ್ಸವ

ಮಡಿಕೇರಿ, ಅ. 13-ಕೊಡಗು ಜೇಸೀಸ್ ಸಂಸ್ಥೆಯ ಆಶ್ರಯದಲ್ಲಿ ಗೋಣಿಕೊಪ್ಪಲು ನವೀನ ಚಿತ್ರ ಮಂದಿರದಲ್ಲಿ ದಿ॥ಪುಟ್ಟಣ್ಣ ಕಣಗಾಲ್ ಚಿತ್ರೋತ್ಸವವನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು.



ಮುಂಗಾರು

ಬುಧವಾರ, ಅಕ್ಟೋಬರ್ 23, 1985

ಕನ್ನಡದ ವರ್ಷ

ನಾಡಿದ್ದು ನವೆಂಬರ್ ಒಂದರಿಂದ ಮುಂದಿನ ವರ್ಷ ನವೆಂಬರ್ ಒಂದರ ತನಕ ಸಮಗ್ರ ಕನ್ನಡ ಆಡಳಿತ ಭಾಷೆ ವರ್ಷವಾಗಿ ಆಚರಿಸಲು ಕರ್ನಾಟಕ ಸರಕಾರ ನಿರ್ಧರಿಸಿದೆ.

ಇದು ಸ್ವಾಗತಾರ್ಹವಾದ ಒಂದು ಹೆಜ್ಜೆ ಆಡಳಿತೆಯನ್ನು ಜನರಿಗೆ ತಿಳಿಯುವ ಭಾಷೆಯಲ್ಲಿ ಮಾಡುವುದರಿಂದ ಆಡಳಿತೆಯಲ್ಲಿ ಜನರ ಪಾಲುದಾರಿಕೆಗೆ ಅರ್ಥಬರುತ್ತದೆ. ಆಳ್ವಿಕೆಯ ಜನರ ನೋವಿಗೆ ಅವರ ಬದುಕಿನ ಸಮಸ್ಯೆ ಸಂಕಟಗಳಿಗೆ ಸ್ಪಂದಿಸಲು ದಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಆಡಳಿತ ಭಾಷೆ ವರ್ಷ ಆಚರಿಸುವುದರಿಂದ ಕನ್ನಡವನ್ನು ಅಧಿಕಾರಿ ವಲಯಗಳಲ್ಲಿ ಒಗ್ಗಿಸುವುದಕ್ಕೆ ಸಹಾಯವಾಗುತ್ತದೆ. ವರ್ಷದಲ್ಲಿ ಆಗೊಮ್ಮೆ ಈಗೊಮ್ಮೆಯಾದರೂ ಕನ್ನಡವನ್ನು ಆಡಳಿತ ರಥಕ್ಕೆ ಹೂಡಬೇಕಾದ ಕರ್ತವ್ಯ ತಮಗಿದೆ ಯೆಂಬುದನ್ನು ಸರಕಾರದ ಪರಿಷ್ಕರಿಗೆ ಜನ ನೆನಪು ಮಾಡುವುದು ಸಾಧ್ಯವಾಗುತ್ತದೆ.

ಕನ್ನಡವನ್ನು ಸಮಗ್ರವಾಗಿ ಆಡಳಿತದ ಜಾಯಮಾನಕ್ಕೆ ಒಗ್ಗಿಸುವುದಕ್ಕೆ ಹಲವಾರು ಕೆಲಸಗಳು ಆಗಬೇಕಾಗಿದೆ. ಅದೆಲ್ಲವೂ ಆಡಳಿತ ಭಾಷೆಯ ವರ್ಷದಲ್ಲಿ ಒಮ್ಮೆ ಆಗಿ ಹೋದರೆ ಆವೇಳೆ ಕನ್ನಡ ಬೆಳವಣಿಗೆಯ ಪ್ರಕ್ರಿಯೆಗೆ ಉತ್ತೇಜನ ಬರುತ್ತದೆ.

ಭಾಷೆ, ಸಾಹಿತ್ಯ ಸಂಸ್ಕೃತಿಗಳ ಬೆಳವಣಿಗೆಗೆ ಸರಕಾರದ ಆಶ್ರಯಬೇಕು. ಸರಕಾರದ ಆಶ್ರಯದಿಂದ ಎಲ್ಲಾ ಸೌಲಭ್ಯಗಳೂ ದೊರೆಯುತ್ತವೆ. ಕನ್ನಡವೆಂಬುದು ಜನಕ್ಕೆ ಅನಿವಾರ್ಯವಾಗುತ್ತದೆ. ಕನ್ನಡ ಕಲಿಯದಿದ್ದರೂ ನಡೆಯುತ್ತದೆ ಎಂಬ ಪರಿಸ್ಥಿತಿ ಇದ್ದರೆ ಯಾರೂ ಕನ್ನಡ ಕಲಿಯಲಾರರು.

ಇದನ್ನು ಸರಕಾರ ಅರ್ಥಮಾಡಿ ಕೊಳ್ಳಬೇಕು ಕನ್ನಡವನ್ನು ಬಳಕೆಗೆ ತರಬೇಕು ಎಂದು ಒಕ್ಕಣಿಸಿದ ಆಜ್ಞೆಗಳನ್ನೂ ನಿರ್ದೇಶಗಳನ್ನೂ ಸುತ್ತೋಲೆಗಳನ್ನೂ ಹೊರಡಿಸಿದರೆ ಸಾಲದು. ಅಂತಹ ನಿರ್ದೇಶಗಳ ಪಾಲನೆ ಆಗಿದೆಯೇ ಎಂದು ಪರಿಶೀಲನೆ ಮಾಡಬೇಕು. ಯಾವ ಮಟ್ಟದಲ್ಲಿ ಯಾವ ಕಚೇರಿಯಲ್ಲಿ ಕನ್ನಡದ ಬಳಕೆ ಆಗುತ್ತಿಲ್ಲ ಎಂಬ ಬಗ್ಗೆ ತನಿಖೆ ಅಧ್ಯಯನಗಳಾಗಬೇಕು. ಅಂತಹ ಕಚೇರಿಗಳ ಮುಖ್ಯಸ್ಥರಿಗೆ ಎಚ್ಚರಿಕೆ ಹೇಳಬೇಕು.

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರೇ ಹೇಳಿದಂತೆ ಆಡಳಿತೆಯಲ್ಲಿ ಕನ್ನಡದ ಬಳಕೆ ವಿಚಾರವಾಗಿ ಸುಮಾರು ಒಂದು ನೂರು ಆಜ್ಞೆಗಳು ಬಂದಿವೆ. ಒಂದು ನೂರು ಆಜ್ಞೆಗಳು ಬಂದ ನಂತರವೂ ರಾಜ್ಯದ ಆಡಳಿತೆಯ ಎಲ್ಲಾ ಹಂತಗಳಲ್ಲಿ ಕನ್ನಡದ ಬಳಕೆ ಇನ್ನೂ ಸರಿಯಾಗಿ ಆಗುತ್ತಿಲ್ಲ. ಅಧಿಕಾರ ಕೇಂದ್ರವಾದ ಬೆಂಗಳೂರಿನ ವಿಧಾನ ಸೌಧದಲ್ಲೇ ಕನ್ನಡವನ್ನು ಕೆಕ್ಕರಿಸಿ ನೋಡುವ ಬಹಳ ಮಂದಿ ಇದ್ದಾರೆ. ಅವರಲ್ಲಿ ಒಂದೋ ಕನ್ನಡದ ಪ್ರೀತಿ ಹುಟ್ಟಿಸಬೇಕು. ಇಲ್ಲವಾದರೆ ಕನ್ನಡವನ್ನು ಕಡೆಗಾಣಿಸಿದರೆ ಕೇಡಾದೀತೆಂಬ ಭೀತಿಯನ್ನು ಹುಟ್ಟಿಸಬೇಕು. ಕನ್ನಡದ ಪ್ರೀತಿ ಹುಟ್ಟಿಸುವ ಕೆಲಸ ಗ್ರಾಮೀಣ ಪ್ರದೇಶದಲ್ಲಿ ಸುಲಭವಾಗಿ ಮಾಡಬಹುದು. ನಗರಗಳಲ್ಲಿ ಮಾತ್ರ ಕಷ್ಟ.

ಆಡಳಿತೆಯಲ್ಲಿ ಕನ್ನಡವನ್ನು ಹೂಡುವುದಕ್ಕೆ [illegible]ದಾಗಿ ಮಾಡಬೇಕಾದ ಕೆಲಸ ಎಲ್ಲ ಪತ್ರವ್ಯವಹಾರಗಳನ್ನು ಕನ್ನಡದಲ್ಲಿಯೇ ನಡೆಸುವುದು. ಇದಕ್ಕೆ ಕನ್ನಡ ಬೆರಳಚ್ಚು ಯಂತ್ರಗಳು ಬೇಕು. ಇಂಗ್ಲಿಷ್ ಬೆರಳಚ್ಚು ಯಂತ್ರಗಳನ್ನು ಇಟ್ಟುಕೊಂಡು ಕನ್ನಡದಲ್ಲಿ ಪತ್ರವ್ಯವಹಾರ ಮಾಡಲಾಗುವುದಿಲ್ಲ. ಅದಕ್ಕಾಗಿ ಎಲ್ಲಾ ಕಚೇರಿಗಳ ಇಂಗ್ಲಿಷ್ ಬೆರಳಚ್ಚು ಯಂತ್ರ ತೆಗೆದು ಕನ್ನಡ ಯಂತ್ರ ಸ್ಥಾಪಿಸಬೇಕು.

ಹೀಗೆ ಕಚೇರಿಗಳಲ್ಲಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಸ್ಥಾಪಿಸುವುದಾಗಿ ಕನ್ನಡ ಕಾವಲು ಸಮಿತಿಯ ಅಧ್ಯಕ್ಷ ಪಾಟೀಲ ಪುಟ್ಟಪ್ಪ ಹುಬ್ಬಳ್ಳಿಯಲ್ಲಿ ಹೇಳಿದ್ದಾರೆ. ಅದೇ ಕಾಲಕ್ಕೆ ಮುಖ್ಯಮಂತ್ರಿ ಹೆಗಡೆಯವರು ಕನ್ನಡ ವರ್ಷಾಚರಣೆ ವಿಷಯ ಬೆಂಗಳೂರಿನಲ್ಲಿ ಪ್ರಕಟಿಸಿದರೂ ಕನ್ನಡ ಬೆರಳಚ್ಚು ಯಂತ್ರ ಒದಗಿಸುವ ವಿಚಾರವಾಗಿ ಸೊಲ್ಲನ್ನೂ ಎತ್ತಲಿಲ್ಲ. ಪಾಟೀಲ ಪುಟ್ಟಪ್ಪನವರ ಸಮಿತಿಗೆ ಯಾವ ಶಾಸನ ಬದ್ಧ ಅಧಿಕಾರವೂ ಇಲ್ಲ. ಯಂತ್ರ ಒದಗಿಸಲು ಅಥವ ಇಂಗ್ಲಿಷ್ ಯಂತ್ರಗಳನ್ನು ಕನ್ನಡಕ್ಕೆ ಪರಿವರ್ತಿಸಲು ಆ ಸಮಿತಿಯ ಕೈಯಲ್ಲಿ ಹಣವಿಲ್ಲ. ಕನ್ನಡದ ಮೇಲೆ ಕೆಂಡ ಕಾರುವ ಅಧಿಕಾರಿಗಳಿಗೆ ದಂಡನೆ ವಿಧಿಸಲು ಕಾವಲು ಸಮಿತಿಗೆ ಅಧಿಕಾರ ಇಲ್ಲ. ಈ ಸಮಿತಿಯ ಸ್ಥಿತಿ ದೊಣ್ಣೆಯಿಲ್ಲದ ಕಾವಲುಗಾರನದ್ದಾಗಿದೆ.

ಕನ್ನಡವನ್ನು ಕಡೆಗಣಿಸುವ ಸಿಬ್ಬಂದಿಗಳಿಗೆ ಶಿಕ್ಷೆ ಕೊಡುವುದಕ್ಕೆ ಅಗತ್ಯವೆನಿಸಿದರೆ ಸೇವಾ ನಿಯಮವನ್ನು ತಿದ್ದಲಾಗುವುದೆಂದು ಮುಖ್ಯಮಂತ್ರಿ ಹೇಳಿದ್ದಾರೆ. ಅದರ ಆಗತ್ಯವಿದೆ ಎಂಬುದು ಅವರಿಗೆ ಮನದಟ್ಟಾಗಲು ಇನ್ನೇನಾಗಬೇಕೋ ಗೊತ್ತಾಗುತ್ತಿಲ್ಲ. ಅಂತಹ ತಿದ್ದುಪಡಿಯನ್ನು ಅವರು ಬೇಗನೆ ತರಬೇಕು. ದಂಡನೆಯ ಅಧಿಕಾರವನ್ನು ಕಾವಲು ಸಮಿತಿಗೆ ಕೊಡಬೇಕು. ಆ ಸಮಿತಿಗೆ ಶಾಸನ ಬದ್ಧನೆಲೆಯನ್ನು ಒದಗಿಸಬೇಕು.

ಕೇಂದ್ರದೊಡನೆ ವ್ಯವಹಾರ ನಡೆಸುವವುಗಳ ಹೊರತು ಉಳಿದ ಎಲ್ಲಾ ಸರಕಾರಿ ಕಚೇರಿಗಳಲ್ಲಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಮಾತ್ರ ಇರಿಸತಕ್ಕದ್ದೆಂದು ಸರಕಾರ ಆಜ್ಞೆ ಮಾಡಬೇಕು. ಜತೆಗೆ ಅದಕ್ಕೆ ಬೇಕಾದಷ್ಟು ಹಣ ಮಂಜೂರು ಮಾಡಬೇಕು.

ಕನ್ನಡವನ್ನು ಆಡಳಿತೆಗೆ ಹೂಡುವ ಮುತುವರ್ಜಿಯಲ್ಲಿ ಅರೆಬೆಂದ ಭಾಷಾಜ್ಞಾನದ ಸರಕಾರಿ ಅಧಿಕಾರಿಗಳು ಇಂಗ್ಲಿಷ್‌ಗೆ ಕನ್ನಡದ ಪರ್ಯಾಯಪದ ಹುಡುಕುತ್ತ ಅಧ್ವಾನದ ಕಡತ ಕನ್ನಡವೊಂದನ್ನು ಹುಟ್ಟಿಸಿ ಬಿಟ್ಟಿದ್ದಾರೆ. ಕಣ್ಣು, ಕಿವಿ, ಬಾಯಿಗಳು ವಿಕಾರವಾದ ಹೇಸರಗತ್ತೆ ಕನ್ನಡವಾಗಿದೆ. ಅದು ಸಾಮಾನ್ಯ ಜನರಿಗೂ ತಿಳಿದಿರುವಂತಹ, ದಿನಬಳಕೆಯಲ್ಲಿ ಬಂದಿರುವಂತಹ ಇಂಗ್ಲಿಷ್ ಪದಗಳಿಗೆ ಸಮಾನಾರ್ಥದ ಕನ್ನಡ ಪದವನ್ನು ಸಂಶೋಧಿಸಿ ತರುವ ಕೆಲಸ ದಯವಿಟ್ಟು ಬೇಡ. ಪೊಲೀಸರನ್ನು ಆರಕ್ಷಕರಾಗಿ ಮಾಡಿದರೆ ಅವರಿಗೇನೂ ಕೋಡು ಮೂಡುವುದಿಲ್ಲ. ಇದರಿಂದ ಕನ್ನಡವೂ ಬೆಳೆಯುವುದಿಲ್ಲ. ಅವರು ಪೊಲೀಸರಾಗಿಯೇ ಇರಲಿ ಚೀಫ್ ಇಂಜಿನಿಯರ್ ಹಾಗೆಯೇ ಇರಲಿ ಮುಖ್ಯ ಅಭಿಯಂತರರಾಗಿ ಅದಾವುದೇ ಮಂಗಳ ಗ್ರಹದಿಂದ ಬಂದ ಹೊಸ ಯಂತ್ರವಾಗುವುದು ಬೇಡ. ಬಳಕೆಯಲ್ಲಿ ಬಂದ ಪರಭಾಷೆಯ ಶಬ್ದಗಳನ್ನು ಹಾಗೆಯೇ ಬಳಸಿಕೊಳ್ಳುವುದು ಮಹಾಪರಾಧವೇನೂ ಅಲ್ಲ. ಅದರಿಂದ ಭಾಷೆ ಬೆಳೆಯುತ್ತದೆ. ಸಾಮಾನ್ಯ ಜನಕ್ಕೆ ಅನುಕೂಲವೂ ಆಗುತ್ತದೆ.

ಸಚಿವ ಲಕ್ಷ್ಮೀಸಾಗರ್ ಪ್ರಕಟಣೆ

ಎಲ್ಲಾ ಪುರಸಭೆಗಳ ಒಟ್ಟು ಬಾಕಿ 40 ಕೋ.

ಮಡಿಕೇರಿ, ಅ. 22– 'ರಾಜ್ಯದ ಎಲ್ಲ ಪುರಸಭೆಗಳಿಂದ ಒಟ್ಟು ನಲ್ವತ್ತು ಕೋಟಿ ರೂ. ಸರಕಾರಕ್ಕೆ ಬಾಕಿ ಬರಬೇಕಾಗಿದೆ' ಎಂದು ನಗರಾಭಿವೃದ್ಧಿ ಹಾಗೂ ಕಾನೂನು ಸಚಿವ ಎ. ಲಕ್ಷ್ಮೀಸಾಗರ್ ಅವರು ತಿಳಿಸಿದ್ದಾರೆ.

ಅ. 18ರಂದು ವೀರಾಜಪೇಟೆ ಪುರಸಭೆಗೆ ಸೇರಿದ ನೂತನ ಸೇತುವೆ ಶಿಶು ವಿಹಾರ, ಅಡ್ಡರಸ್ತೆ ಹಾಗೂ ಸೈರನ್ ಇವುಗಳ ಉದ್ಘಾಟನೆಯನ್ನು ನೆರವೇರಿಸಿದ ನಂತರ ಪುರಸಭಾಂಗಣದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ನಾಗರಿಕರ ಪ್ರಮುಖ ಬೇಡಿಕೆಗಳಾದ ನೀರು, ವಿದ್ಯುತ್ ಹಾಗೂ ನೈರ್ಮಲ್ಯ ಇವುಗಳನ್ನು ಸಮರ್ಪಕವಾಗಿ ಒದಗಿಸಿದರೆ ಸಮಸ್ಯೆಗಳೇ ಇರಲಾರದು ಎಂದು ತಿಳಿಸಿದ ಅವರು ಸ್ಥಳೀಯ ಸಂಸ್ಥೆಗಳು ಬೆಳೆಯಬೇಕಾದರೆ ಸಾರ್ವಜನಿಕರ ಸಹಕಾರ ಅಗತ್ಯ ಎಂದು ಒತ್ತಿಹೇಳಿದರು.

ಊರಿನ ಜನತೆ ನಗರಾ ನೈರ್ಮಲ್ಯವನ್ನು ಕಾಪಾಡಲು ಸಹಕರಿಸಬೇಕೆಂದು ಮನವಿ ಮಾಡಿಕೊಂಡ ಸಚಿವರು ಪುರಸಭೆ ಶಾಶ್ವತ ಆದಾಯ ಬರುವಂತೆ ವ್ಯಾಪಾರ ಮಳಿಗೆ ಇತ್ಯಾದಿಗಳನ್ನು ಬ್ಯಾಂಕ್ ನೆರವಿನಿಂದ ತೆರೆಯುವಂತಾಗಬೇಕು ಎಂದು ಕರೆ ನೀಡಿದರು.

ಕಂದಾಯ ವಸೂಲಿಯಲ್ಲಿ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಪ್ರಥಮ ಸ್ಥಾನದಲ್ಲಿದ್ದರೆ ಬೀದರ್, ಗುಲ್ಬರ್ಗ ಕೊನೆಯ ಸ್ಥಾನ ಪಡೆದಿದೆ ಎಂದು ವಿವರಿಸಿ ಪುರಸಭೆಗಳು ಎಲ್ಲದಕ್ಕೂ ಸರಕಾರವನ್ನೇ ಅವಲಂಬಿಸುವುದು ಸರಿಯಲ್ಲವೆಂದೂ ಅಭಿಪ್ರಾಯಪಟ್ಟರು.

ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಬರ ಕಾಣಿಸಿಕೊಂಡಿದ್ದು ಅಭಿವೃದ್ಧಿಯತ್ತ ಹೆಚ್ಚಿನ ಗಮನ ಹರಿಸಲು ಅಸಾಧ್ಯವಾಗಿದೆ. ಬರ ಪರಿಹಾರಕ್ಕಾಗಿ ಕೇಂದ್ರದಿಂದ 30 ಕೋಟಿ ರೂ. ಬಂದಿದ್ದು ರಾಜ್ಯ ಸರಕಾರ ಐವತ್ತು ಕೋಟಿಗೂ ಹೆಚ್ಚು ಹಣ ವ್ಯಯಿಸಿದೆ ಎಂದು ತಿಳಿಸಿದರು.

ಬರಪೊಳೆ ಯೋಜನೆಯ ಬಗ್ಗೆ ಸರಕಾರ ಸ್ಪಷ್ಟ ನಿಲುವನ್ನು ಪ್ರಕಟಿಸಿದೆ. ಕೊಡಗಿನಲ್ಲಿ ಯಾವುದೇ ಕಟ್ಟೆಗಳನ್ನು ನಿರ್ಮಿಸಲು ಬಿಡುವುದಿಲ್ಲ ಇದು ಕೊಡಗಿನವರ ಅಚಲ ನಿರ್ಧಾರವಾಗಿದೆ ಎಂಬುದನ್ನು ನಾಣಯ್ಯ ಸ್ಪಷ್ಟಪಡಿಸಿದರು.

ಶಾಸಕಿ ಸುಮಾ ವಸಂತ್ ಅವರು ಮಾತನಾಡಿ ಅಭಿವೃದ್ಧಿ ಕಾರ್ಯಗಳಿಗಾಗಿ ಪುರಸಭೆಗಳಿಗೆ ಹೆಚ್ಚಿನ ಸಹಾಯ ಧನವನ್ನು ಒದಗಿಸಿಕೊಡಬೇಕೆಂದು ಮನವಿ ಮಾಡಿಕೊಂಡರು.

ಪ್ರಾರಂಭದಲ್ಲಿ ಸ್ವಾಗತ ಭಾಷಣ ಮಾಡಿದ ಪುರಸಭಾಧ್ಯಕ್ಷ ಎಂ. ಕೆ.ಪೂವಯ್ಯ ಅವರು ಪ್ರಸ್ತುತ ನಿರ್ಮಿಸಲಾಗಿರುವ ಅಡ್ಡರಸ್ತೆಗೆ 70 ಸಾವಿರ, ಸೇತುವೆ ನಿರ್ಮಾಣಕ್ಕೆ 50 ಸಾವಿರ, ಶಿಶುವಿಹಾರಕ್ಕೆ 30 ಸಾವಿರ, ಸೈರನ್ ಅಳವಡಿಕೆಗೆ 12 ಸಾವಿರ ವೆಚ್ಚವಾಗಿದೆ. ಪುರಸಭೆಯ ಆದಾಯವನ್ನು 7 ಲಕ್ಷದಿಂದ 12 ಲಕ್ಷಗಳಿಗೆ ಏರಿಸಲಾಗಿದೆ ಎಂದು ವಿವರಿಸಿದರು.

ಕಪ್ಪು ಬಾವುಟ ಪ್ರದರ್ಶನ

ಕಾರ್ಯಕ್ರಮ ನಡೆಯುತ್ತಿದ್ದಂತೆ ಕೊಡಗು ರಕ್ಷಣಾ ವೇದಿಕೆಯ ಎಂ. ಎಸ್. ಪೂವಯ್ಯ ಅವರ ನೇತೃತ್ವದಲ್ಲಿ 8 ಮಂದಿಯ ಗುಂಪೊಂದು ಕಪ್ಪು ಬಾವುಟ ಪ್ರದರ್ಶಿಸಿದರು. ಪ್ರದರ್ಶನಕಾರರು ಸಚಿವರಿಗೆ ಮನವಿಯೊಂದನ್ನು ಸಲ್ಲಿಸಿದರು.

ಬಸ್ ದರ ಹೆಚ್ಚಳ: ಶಿವಮೊಗ್ಗ ಜಿಲ್ಲೆ ಬಂದ್‌ಗೆ ಬಿಜೆಪಿ ಕರೆ

ಶಿವಮೊಗ್ಗ, ಅ. 22– ರಾಜ್ಯ ಸರ್ಕಾರ ವಿದ್ಯುಚ್ಛಕ್ತಿ ಮತ್ತು ಬಸ್ ದರಗಳನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ದಿನಾಂಕ 24ರಂದು "ಶಿವಮೊಗ್ಗ ಜಿಲ್ಲೆಯಾದ್ಯಂತ ಬಂದ್" ಆಚರಿಸುವಂತೆ ಬಿ. ಜೆ. ಪಿ. ಯ ಜಿಲ್ಲಾ ಘಟಕ ಕರೆ ನೀಡಿದೆ.

ಭಾನುವಾರ ಇಲ್ಲಿ ಸಭೆ ಸೇರಿದ್ದ ಬಿ. ಜೆ. ಪಿ. ಜಿಲ್ಲಾ ಸಮಿತಿಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಅಲ್ಲದೆ ಅದೇ ದಿನ ಸಂಜೆ ಇಲ್ಲಿನ ನಗರಸಭಾ ಆವರಣದಲ್ಲಿ ಬಹಿರಂಗ ಸಭೆಯನ್ನು ಸಹ ಏರ್ಪಡಿಸಲಾಗಿದೆ. ಈ ಬಹಿರಂಗ ಸಭೆಯಲ್ಲಿ ಬಿ. ಜೆ. ಪಿ. ಯ ಮುಖಂಡರು ಮಾತನಾಡಲಿದ್ದಾರೆ.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಘಟಕದ ಅಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಅವರು ವಹಿಸಲಿದ್ದಾರೆ.

ಪಾಸ್ ನೀಡಲು ಒತ್ತಾಯ

ರಾಜ್ಯ ಸರ್ಕಾರಿ ನೌಕರರಿಗೆ ಬಸ್ ಪಾಸ್ ಸೌಲಭ್ಯ ನೀಡುವಂತೆಯೂ ಶಿವಮೊಗ್ಗದಿಂದ ಭದ್ರಾವತಿಗೆ ಪ್ರತಿದಿನವೂ ಓಡಾಡುವ ಕಾರ್ಮಿಕರಿಗೂ ಈ ಸೌಲಭ್ಯ ನೀಡುವಂತೆ ಬಿ. ಜೆ. ಪಿ. ಯ ಜಿಲ್ಲಾ ಸಮಿತಿ ಸರ್ಕಾರವನ್ನು ಆಗ್ರಹಪಡಿಸಿದೆ.

ವಾಲ್ಗಳ್ಳಿಯಲ್ಲಿ ಗಾಂಧಿ ಸಪ್ತಾಹ ಕಾರ್ಯಕ್ರಮ

ಕುಮಟಾ, ಅ. 22– ಇಲ್ಲಿಗೆ ಸಮೀಪದ ವಾಲ್ಗಳ್ಳಿಯಲ್ಲಿ ಈ ತಾಲೂಕಿನ ಪರಿಶಿಷ್ಟ ವರ್ಗದ ಅಭಿವೃದ್ಧಿಯಲ್ಲಿ ಶ್ರಮಿಸುವ ಸಮಿತಿ, ಮಹಾತ್ಮಾ ಗಾಂಧಿ ಸಪ್ತಾಹ ಕಾರ್ಯಕ್ರಮವನ್ನು ಇತ್ತೀಚೆಗೆ ಕೈಗೊಂಡಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷರಾಗಿ ಆರ್. ಎಸ್. ಭಾಗ್ವತ್ ಅವರು ಆಗಮಿಸಿದ್ದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್.ಎನ್. ಪಟ್ಗಾರ ಅವರು ದಲಿತರ ಸುಧಾರಣೆ ಕುರಿತು ಮಾತನಾಡಿದರು.

ಪ್ರಾರಂಭದಲ್ಲಿ ಸಮಿತಿ ಅಧ್ಯಕ್ಷ ಆರ್. ಡಿ. ಪಾವಸ್ಕರ್ ಅವರು ಸ್ವಾಗತಿಸಿದರು.

...ದರಿಕೆ ಹಾಕಿ ...ತಿ ಸೆಳೆದರು

...ವಿರುದ್ಧ ಭೂಮಾಲಿಕರು ಉಚ್ಚನ್ಯಾಯಾಲಯಕ್ಕೆ ಅರ್ಜಿಸಲ್ಲಿಸಿದ್ದು, ಅಲ್ಲಿಂದ ಮರು ವಿಚಾರಣೆಗೆ ಆದೇಶ ನೀಡಲಾಗಿದೆ ಇದರಂತೆ ಅಕ್ಟೋಬರ್ 4ರಂದು ವೀರಾಜಪೇಟೆ ತಾಲೂಕು ಕಚೇರಿಯಲ್ಲಿ ಮೊಕದ್ದಮೆಯ ವಿಚಾರಣೆ ನಡೆಯಿತು ಈ ಸಂದರ್ಭದಲ್ಲಿ ಮೂಲ ದಾಖಲಾತಿಗಳನ್ನು ಭೂನ್ಯಾಯ ಮಂಡಳಿಯ ಮುಂದೆ ಹಾಜರು ಪಡಿಸಿದಾಗ ಮುಂದಿನ ವಿಚಾರಣೆ (20-11-85) ಎಂದು ಹಾಜರು ಪಡಿಸುವಂತೆ ಸೂಚಿಸಲಾಯಿತು.

ವಿಚಾರಣೆಯ ನಂತರ ಮನೆಗೆ ಹಿಂತಿ...ಗುವ ಹಾದಿಯಲ್ಲಿ ಭೂಮಾಲಿಕರಾದ ...ದಾದಪ್ಪ ಹಾಗೂ ಸುಬ್ಬಯ್ಯ ಇವರುಗಳು ದಾಖಲಾತಿಗಳಿದ್ದ ಕೈ ಚೀಲವನ್ನು ಬಲಾತ್ಕಾರವಾಗಿ ಕಸಿದು ಕೊಂಡರಲ್ಲದೆ, ಈ ವಿಷಯವನ್ನು ಪೊಲೀಸಿನವರಿಗೆ ತಿಳಿಸಿದರೆ ...ಂಡು ಹೊಡೆದು ಕೊಲೆ ಮಾಡುವುದಾಗಿಯೂ ಬೆದರಿಕೆಯೊಡ್ಡಿದರೆಂದು ಪೊಲೀಸ್ ...ರಿನಲ್ಲಿ ತಿಳಿಸಿದ್ದಾರೆ.

ವೀರಾಜಪೇಟೆ ಗ್ರಾಮಾಂತರ ಪೊಲೀ...ರು ಎಫ್‌ಐಆರ್ ನಂ. 126 85ರಲ್ಲಿ ...ಐ. 385ರಂತೆ ಮೊಕದ್ದಮೆ ದಾಖಲು ...ಮಾಡಿಕೊಂಡು ತನಿಖೆ [illegible].

ಕಾರ್ಕಳದಲ್ಲಿ ಬಹುದಿನಗಳಿಂದ ನಿರೀಕ್ಷಿಸಲ್ಪಟ್ಟ,
ಚಲನ ಚಿತ್ರ ಮಂದಿರ
"ಮಹಾ ವೀರ್"
ಇಂದು ಉದ್ಘಾಟನೆ, ಬೆಳಿಗ್ಗೆ 10-29ಕ್ಕೆ
ಪ್ರಾರಂಭದ ಚಿತ್ರ
"ನಾ ನಿನ್ನ ಬಿಡಲಾರೆ"
ದಿನಂಪ್ರತಿ 2 ದೇಖಾವೆ:
6-30 p. m. & 9-30 p. m.
ಶುಭ ಕೋರುವ:
ಎಮ್. ವಿದ್ಯ ಕುಮಾರ್,
ಎಮ್. ವಿ. ಟೈಲರ್ಸ್,
ಮಾಲಕರು: ಜೈನ್‌ಪೇಟೆ, ಮೂಡಬಿದ್ರಿ

ಮುಂಗಾರು

ಸೋಮವಾರ, ಅಕ್ಟೋಬರ್ 21, 1985

ಕಳಂಕ ತೊಳೆದುಕೊಳ್ಳಿ

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಮಗ ಹಾಗೂ ಇತರ ಸಮೀಪ ಸಂಬಂಧಿಗಳು ಮೆಡಿಕಲ್ ಸೀಟು ಕೊಡಿಸುವುದಾಗಿ ಹೇಳಿ ಹಣ ಸಂಗ್ರಹ ಮಾಡಿ ವಂಚಿಸಿದ ಪ್ರಕರಣದ ದೂರೊಂದು ಬಂದಿದೆ. ಇದನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷ ಸದಸ್ಯ ಎ. ಕೆ. ಸುಬ್ಬಯ್ಯ ಅವರು ರಾಜ್ಯದ ಜನತೆಯ ಗಮನಕ್ಕೆ ತಂದಿದ್ದಾರೆ.

ಬಲು ಗಂಭೀರವಾದ ವಿಚಾರ ಇದಾಗಿದೆ. ಮುಖ್ಯಮಂತ್ರಿಯವರ ಮಗ ಮತ್ತು ಅಳಿಯನೇ ಈ ಹಗರಣದಲ್ಲಿ ಒಳಗೊಂಡಿರುವ ಆಪಾದನೆ ಬಂದಿರುವುದರಿಂದ ಆಪಾದನೆ ವಾಸ್ತವಿಕವಾಗಿ ಮುಖ್ಯಮಂತ್ರಿಯ ಮೇಲೇ ಬಂದಂತಾಗಿದೆ. ಮೆಡಿಕಲ್ ಸೀಟು ಕೊಡಿಸುವುದಾಗಿ ಹೇಳಿ ಎರಡೂವರೆ ಲಕ್ಷ ರೂಪಾಯಿ ಹಣ ಸಂಗ್ರಹ ಮಾಡಿದ್ದಾರೆನ್ನಲಾದ ಒಂದು ಕೆಲಸ ತಂದೆಯ ಗಮನಕ್ಕೆ ಬಾರದೆ ಮಗನಿಂದ ಆಗುವುದು ಸಾಧ್ಯವೇ ಎಂಬ ಸಂದೇಹವು ಜನಮನದಲ್ಲಿ ಉಂಟಾಗುವುದು ಶಕ್ಯವಿದೆ. ಅಷ್ಟೇ ಅಲ್ಲದೆ ಈ ವ್ಯವಹಾರವೆಲ್ಲ ಮುಖ್ಯಮಂತ್ರಿಯ ಅಧಿಕೃತ ನಿವಾಸದಲ್ಲಿಯೇ ನಡೆಯಿತೆಂದು ದೂರು ಕೊಟ್ಟ ಜನರು ನಮೂದಿಸಿದ್ದಾರೆ. ಹಣ ಸಂಗ್ರಹ ಮಾಡಲು ಮುಖ್ಯಮಂತ್ರಿಯವರು ಅವರ ನಿವಾಸದಲ್ಲಿ ಅಧಿಕಾರಿಯೊಬ್ಬರನ್ನು ನೇಮಿಸಿಕೊಂಡಿದ್ದಾರೆಂದು ಸುಬ್ಬಯ್ಯನವರು ಇನ್ನೊಂದು ಗುರುತರ ಆರೋಪ ಮಾಡಿದ್ದಾರೆ.

ರೂಪಾಯಿ ಕೊಟ್ಟರೂ ಸೀಟು ಸಿಗದೆ ವಂಚನೆಗೊಳಗಾದ ಮಹಿಳಾ ವೈದ್ಯೆ ದೂರು ಕೊಡಲು ಹೋದಾಗ ಕೊಡಗಿನ ಸಿದ್ದಾಪುರ ಠಾಣೆಯ ಪೋಲೀಸರು ಮೊಕದ್ದಮೆ ದಾಖಲು ಮಾಡಿಕೊಳ್ಳಲು ನಿರಾಕರಿಸಿದರೆಂದೂ ಆರೋಪಿಸಲಾಗಿದೆ. ಇದೇ ವೇಳೆ ಮುಖ್ಯಮಂತ್ರಿ ಹೆಗಡೆಯವರು ಸ್ಪಷ್ಟೀಕರಣವೊಂದನ್ನು ಕೊಟ್ಟು ಪೋಲೀಸರು ಪ್ರಕರಣವೊಂದನ್ನು ಈ ತಿಂಗಳ 15ರಂದೇ ದಾಖಲು ಪಡಿಸಿಕೊಂಡಿದ್ದಾರೆಂದು ತಿಳಿಸಿದ್ದಾರೆ.

ಇಂದೊಂದು "ಬಲು ಕೆಟ್ಟದಾದ ಕಾಲ್ಪನಿಕ ಕತೆ" ಎಂದು ಹೆಗಡೆಯವರು ಪ್ರತಿಕ್ರಿಯೆ ನೀಡಿರುವುದೂ ವರದಿಯಾಗಿದೆ. "ನನ್ನ ಮಗನ ಹೆಸರು ದೂರಲ್ಲಿ ಎಲ್ಲಿಯೂ ಇಲ್ಲ" ಎಂದು ತಿಳಿಸಿರುವ ಅವರು ಉದಯ ಶಂಕರ್ ಮತ್ತು ಲಕ್ಷ್ಮಣನ್ ಪರಸ್ಪರ ಬಹುಕಾಲದಿಂದ ಸ್ನೇಹಿತರು. ಲಕ್ಷ್ಮಣನ್‌ರಿಂದ ಉದಯಶಂಕರ್ 75,000 ರೂಪಾಯಿ ಸಾಲ ಪಡೆದಿದ್ದರು. ಅದನ್ನು ಮರಳಿಸಿದ್ದಾರೆ. ಈ ಸಂಬಂಧ ಚೆಕ್ಕು ಕೊಡಲಾಗಿತ್ತು ಎಂದು ಬೇರೊಂದು ಹಣದ ವ್ಯವಹಾರವನ್ನು ನಮೂದಿಸಿದ್ದಾರೆ.

ವ್ಯಕ್ತಿ–ವ್ಯಕ್ತಿಗಳೊಳಗೆ ಹಣದ ವ್ಯವಹಾರ ಇರಬಹುದು. ಅದು ಸಹಜ. ಇಲ್ಲಿ ಅದಲ್ಲ ಪ್ರಶ್ನೆ. ಎರಡೂವರೆ ಲಕ್ಷ ರೂಪಾಯಿಗಳನ್ನು ಸೀಟು ಕೊಡಿಸುವುದಾಗಿ ಉದಯ ಶಂಕರ್ ಪಡೆದಿದ್ದರು. ಸೀಟು ದೊರಕದೆ ಹೋದಾಗ ಐವತ್ತು ಸಾವಿರ ರೂಪಾಯಿ ಮರಳಿಸಿದರು. ಬಾಕಿ ಹಣ ಕೊಟ್ಟಿಲ್ಲ ಎಂಬುದೇ ದೂರಿನಲ್ಲಿರುವ ಮುಖ್ಯಾಂಶ. ಭರತ್ ಹೆಗಡೆ ಪರವಾಗಿ ಉದಯ ಶಂಕರ್ ಹಣ ಸ್ವೀಕರಿಸಿದರು ಎಂಬುದು [illegible] ಆರೋಪ.

ಈ ಪ್ರಕರಣ ಹೆಗಡೆಯವರೆಂದಂತೆ ಕಟ್ಟುಕತೆ ಇರಬಹುದು. ನಿಜವೂ ಇರಬಹುದು. ಸುಳ್ಳಿನ ಕಂತೆಯೇ ಆಗಿರಬಹುದು. ನಾವೇನೂ ತೀರ್ಮಾನ ಕೊಡುವ ಹಾಗಿಲ್ಲ. ಕೊಡುವುದೂ ಇಲ್ಲ.

ಆದರೆ ಈ ಪ್ರಕರಣ ತುಂಬಾ ನಿಗೂಢವಾಗಿದೆ ಎಂಬುದನ್ನು ಜನ ಗಮನಿಸುತ್ತಾರೆ. ಅಧಿಕಾರ ಸ್ಥಾನದಲ್ಲಿದ್ದು ಬಲು ಪ್ರಭಾವಶಾಲಿಯಾದ ವ್ಯಕ್ತಿಗಳ ಹಾಗೂ ಅವರ ಸಂಬಂಧಿಕರ ಮೇಲೆ "ಹುಲು ಮಾನವ"ರು ಸುಲಭಕ್ಕೆ ವಂಚನೆಯ ಆರೋಪ ಮಾಡಲಾರರು; ಮಾಡಿ ಅರಗಿಸಿಕೊಳ್ಳಲಾರರು. ಅಂತಹ ಆರೋಪ ಬಂದಿರಬೇಕಾದರೆ ಒಂದೋ ಅವರು ಬಲು ಬಲಾಢ್ಯರಾಗಿರಬೇಕು. ಇಲ್ಲವೇ ಆರೋಪದಲ್ಲಿ ಹುರುಳಿರಬೇಕು.

ಅಧಿಕಾರಸ್ಥರ ಮೇಲೆ ಇಂತಹ ಒಂದು ಬಲು ಗಂಭೀರವಾದ ಭ್ರಷ್ಟಾಚಾರದ ಆರೋಪ ಬಂದಾಗ ಸಹಜವಾಗಿಯೇ ಅವರ ರಾಜಕೀಯ ವಿರೋಧಿಗಳು ಮುಗಿಬೀಳುತ್ತಾರೆ. ಈ ಪರಿಸ್ಥಿತಿಯಿಂದ ತಮ್ಮ ರಾಜಕೀಯ ಲಾಭವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಮುಖ್ಯಮಂತ್ರಿ ಹೆಗಡೆಯವರು ಇದಕ್ಕಾಗಿ ಕರುಬಿ ಫಲವಿಲ್ಲ. ಯಾಕೆಂದರೆ ಅವರೂ ಅವರಂತಹ ಎಲ್ಲರೂ ಮಾಡುವುದು ಅದನ್ನೇ ಆಗಿದೆ.

ಈ ಪ್ರಕರಣದಲ್ಲಿ ಆಳುವ ಜನತಾ ಸರಕಾರದ ರಾಜನೈತಿಕತೆಯ ಪ್ರಶ್ನೆ ಒಳಗೊಂಡಿದೆ. ಸರಕಾರದ ಮೇಲೆ ಕಳಂಕ ಹಚ್ಚಲು ಆಸಕ್ತ ಜನ ಪ್ರಯತ್ನ ನಡೆಸಿದ್ದಾರೆ. ಅದು ಹೆಗಡೆಯವರೆಂದಂತೆ ರಾಜಕೀಯ ಕುತಂತ್ರವಿರಬಹುದು, ಅಲ್ಲದಿರಬಹುದು.

ಒಂದು ಮಾತ್ರ ಸತ್ಯ. ಸರಕಾರ ಇದರಲ್ಲಿ ಆಸಕ್ತ ಪಕ್ಷವಾಗಿದೆ. ಪೋಲೀಸರೂ ಅದೇ ಆಸಕ್ತ ಪಕ್ಷಕ್ಕೆ ಸೇರಿದವರು. ಪ್ರಕರಣವನ್ನು ದಾಖಲು ಮಾಡಿಕೊಳ್ಳಲು ಅವರು ನಿರಾಕರಿಸಿದ ಆರೋಪವಿದೆ. ಪ್ರಕರಣವು ಸಾರ್ವಜನಿಕರ ಗಮನಕ್ಕೆ ದೊಡ್ಡದಾಗಿ ಬಂದ ಮೇಲೆ ಅವರು ಅದನ್ನು ದಾಖಲಿಸಿಕೊಂಡರು ಎಂದು ನಂಬಲು ಸಾಕಷ್ಟು ಕಾರಣಗಳಿವೆ. ಪ್ರಕರಣದ ಮುಂದಿನ ತನಿಖೆಯನ್ನು ಅವರೇ ಮಾಡುವುದರಿಂದ ನ್ಯಾಯವು ಎಲ್ಲಿಯೋ ಹೂತು ಹೋಗುವ ಅಪಾಯ ಖಂಡಿತಾ ಇದೆ. ಅವರು ನ್ಯಾಯ ಪಕ್ಷಪಾತಿಗಳಾಗಿಯೇ ವ್ಯವಹರಿಸಿದರೆಂದೇ ಇಟ್ಟುಕೊಂಡರೂ ಅಂಥ ವಿಶ್ವಾಸ ಜನಮನದಲ್ಲಿ ಮೂಡುವುದು ಕಷ್ಟ.

ಆದ್ದರಿಂದ ಬಂದಿರುವ ಕಳಂಕವನ್ನು ಹೋಗಲಾಡಿಸಲು, ಭ್ರಷ್ಟಾಚಾರ ನಡೆಯದೇ ಇರುವುದನ್ನು ನಿಚ್ಚಳವಾಗಿ ಸಾಬೀತುಪಡಿಸಲು ಈ ಪ್ರಕರಣದ ತನಿಖೆಯನ್ನು ಸರಕಾರ ಮೂರನೆಯ ಸಂಸ್ಥೆಯೊಂದಕ್ಕೆ ವಹಿಸಿಕೊಡಬೇಕು. ಒಂದೋ ಇದರ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಿ ಕೊಡಬೇಕು. ಇಲ್ಲವೇ ತಕ್ಷಣವೇ ನ್ಯಾಯಾಂಗ ಆಯೋಗವೊಂದನ್ನು ನೇಮಿಸಿ ವಿಚಾರಣೆ ನಡೆಸಬೇಕು. ಹಾಗೆ ಮಾಡುವುದರಿಂದ ಮಾತ್ರವೇ ರಾಜಕೀಯ ಮೌಲ್ಯಗಳು ಬೆಳೆದು ಈ ಸರಕಾರಕ್ಕೆ ಇನ್ನಷ್ಟು ಭದ್ರವಾದ ಮೌಲ್ಯಾಧಾರ ದೊರೆಯುವುದು ಸಾಧ್ಯ.

ಮಂತ್ರಿಗಳ ಹೆಸರಿನಲ್ಲಿ ಹಣ ವಂಚನೆ: ಬಂಧನ

ಸೊರಬ, ಅ. 20- ಊರೂರು ಅಲೆದು ಸಚಿವರ ಹೆಸರಿನಲ್ಲಿ ಹಣಗಳಿಸುತ್ತಿದ್ದ ವಂಚಕರೊಬ್ಬರು ಇತ್ತೀಚೆಗೆ ಇಲ್ಲಿನ ಪೊಲೀಸರಿಗೆ ಅತಿಥಿಯಾದ ಪ್ರಕರಣ ವೊಂದು ವರದಿಯಾಗಿದೆ.

ಧಾರವಾಡದ ನರಗುಂದ ತಾಲೂಕಿನ ಚಿಕ್ಕ ನರಗುಂದ ಊರಿನವನೆಂದು ಹೇಳಲಾದ ಗುರುಸಿದ್ದಯ್ಯ ವಿ.ಹಿರೇಮಠ ಎಂಬ ಈ ವ್ಯಕ್ತಿ ತಾವು ಹೋದಲ್ಲಿ ಧಾರವಾಡ ಜಿಲ್ಲಾ ಯುವಜನತಾ ಅಧ್ಯಕ್ಷನೆಂದು

ಅಥವಾ ಮಾಜಿ ಅಧ್ಯಕ್ಷನೆಂದು ಕರೆದು ಕೊಳ್ಳುತ್ತಾ, ಅಲ್ಲಿನ ಪ್ರವಾಸಿ ಮಂದಿರ ದಲ್ಲಿ ತಂಗುತ್ತಿದ್ದರೆಂದು ತಿಳಿದು ಬಂದಿದೆ.

ಈ ಪ್ರವಾಸಿ ಮಂದಿರವನ್ನು ತಮ್ಮ ಕಾರ್ಯ ಚಟುವಟಿಕೆಯ ಕೇಂದ್ರವಾಗಿಸಿ ಕೊಂಡು, ಆಯಾ ಊರಿನ ಗೆಜೆಟೆಡ್ ಅಧಿಕಾರಿಗಳ ಮನೆಗೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳ ಆಪ್ತಕಾರ್ಯದರ್ಶಿಗಳ ಪರವಾಗಿ ತಾನು ಬಂದಿರುವೆನೆಂದೂ ಬೇರೆಯವರೊಡನೆ ಚೀಟಿ ಕಳುಹಿಸಿ, ದೇವಸ್ಥಾನದ ಸಲುವಾಗಿ ಹಣ ಸಂಗ್ರಹಿಸುತ್ತಿದ್ದೇನೆ ತಾವು ಇಲ್ಲಿಗೆ ಬರುತ್ತೀರೋ ಅಥವಾ ನಾನೇ ನಿಮ್ಮಲ್ಲಿಗೆ ಬರಬೇಕೆ ಎಂದು ತಿಳಿಸುತ್ತಿದ್ದರೆಂದು ಗೊತ್ತಾಗಿದೆ.

ಸುಮಾರು 25ರೂ.ಗಳಿಂದ 300ರೂ. ತನಕ ಹಣ ಎತ್ತುವ ಈ ವ್ಯಕ್ತಿ ಇತ್ತೀಚೆಗೆ ಸೊರಬದ ಪ್ರವಾಸಿ ಮಂದಿರದಲ್ಲಿ ಉಳಿದು ಇದೇ ಕ್ರಮದಲ್ಲಿ ವಂಚಿಸಲೆತ್ನಿಸಿದಾಗ ಇಲ್ಲಿನ ಪುರಸಭಾಧ್ಯಕ್ಷ ಎಚ್.ಎಸ್. ಮಂಜಪ್ಪ ಅವರಿಗೆ ವಿಷಯ ತಿಳಿದು ಅನುಮಾನ ಬಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಚಂದ್ರಪ್ಪನವರಿಗೆ ತಿಳಿಸಿದರು.

ಆ ಸಮಯದಲ್ಲಿ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿದ್ದ ಈ ವ್ಯಕ್ತಿಯನ್ನು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಚಂದ್ರಪ್ಪ ಅವರು ಬಂಧಿಸುವಲ್ಲಿ ಯಶಸ್ವಿಯಾದರು.

ರಾಜಕೀಯ ಪಕ್ಷದ ಕಾರ್ಯಕರ್ತನಂತೆ ಕಂಡು ಬರುವ ಈ ವ್ಯಕ್ತಿ ಇದೀಗ ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆಂದು ತಿಳಿದು ಬಂದಿದೆ.

...0.85 ಲ.ರೂ. ವೆಚ್ಚದ ...ತುವೆ ಉದ್ಘಾಟನೆ

...ರವಾರ, ಅ. 20- ಇಲ್ಲಿಂದ 12 ... ದೂರದಲ್ಲಿರುವ ದೇವಭಾಗದಲ್ಲಿ ...85 ಲಕ್ಷ ರೂ. ವೆಚ್ಚದಲ್ಲಿ ಲೋಕೋ...ಯೋಗಿ ಇಲಾಖೆಯಿಂದ ನಿರ್ಮಿಸಲಾದ ...ವೆಯನ್ನು ರಾಜ್ಯ ಚಿಕ್ಕ ಉದ್ದಿಮೆ... ಆರ್. ವಿ. ದೇಶಪಾಂಡೆ ಅವರು ...ಚೆಗೆ ಉದ್ಘಾಟಿಸಿದರು.

...ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ...ಕೋಲಾದ ಶಾಸಕ ಜಿ. ಎಸ್. ಹೆಗಡೆ ...ಬಾಳ ಅವರು ಮಾತನಾಡುತ್ತ ...ನಿ ಭೂಮಿಯ ಅಭಿವೃದ್ಧಿಗಾಗಿ ಜಿಲ್ಲಾ...ನಿ ಭೂಮಿ ಅಭಿವೃದ್ಧಿ ಮಂಡಳಿಯನ್ನು ...ಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗು...ವೆಂದು ತಿಳಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ...ರವಾರ ಶಾಸಕ ಪಿ. ಎಸ್. ರಾಣೆ ಅವರು ...ಸಿದ್ದರು.

...ಪ್ರಾರಂಭದಲ್ಲಿ ಕಾರವಾರ ಲೋಕೋ...ಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ...ಜಿನಿಯರ್ ಬಸಪ್ಪ ಅವರು ಸ್ವಾಗತಿಸಿ...

...ತ್ಯಾಚಾರಕ್ಕೆ ...ಫಲ ಯತ್ನ

ಸಾಗರ, ಅ. 20- ಗೌರಮ್ಮ ಎಂಬ... ಮೇಲೆ ಅತ್ಯಾಚಾರದ ಯತ್ನ ನಡೆಸಿ...ಲನಾದ ಶಿವ ಎಂಬಾತನನ್ನು ಪೊಲೀ... ಬಂಧಿಸಿ ಮೊಕದ್ದಮೆ, ದಾಖಲು ...ಡಿಕೊಂಡಿರುವದಾಗಿ ತಿಳಿದು ಬಂದಿದೆ.

ಭದ್ರಾವತಿ ಶಿವಮೊಗ್ಗ ನಗರದ ಮಧ್ಯೆ ಹೆದ್ದಾರಿ ಸಂಪರ್ಕ ಮಾಡಲು 81-82 ...ಜಮೀನು ಸ್ವಾಧೀನ ಪಡಿಸಿಕೊಂಡು ಈ ಬಗ್ಗೆ ಸರ್ಕಾರದವರು ಪರಿಹಾರ ಧನವನ್ನು ...ವರೆವಿಗೂ ಕೊಡದೆ ಇದ್ದುದನ್ನು ಪ್ರತಿಭಟಿಸಲು ಜಮೀನು ಕಳೆದು ಕೊಂಡವರು ...ೀಚೆಗೆ ಮೆರವಣಿಗೆ ನಡೆಸಿದರು.

ರಾಜೀವ್‌ಗೆ ಹೆಗಡೆ ಪತ್ರ: ಬೆಳಗಾವಿಯಲ್ಲಿ ಉದ್ರಿಕ್ತ ಪರಿಸ್ಥಿತಿ

ಶಿವಮೊಗ್ಗ, ಅ. 20- ಮಹಾಜನ ವರದಿಯನ್ನು ಜಾರಿಗೆ ತರಬೇಕೆಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಪ್ರಧಾನಿಗೆ ಬರೆದ ಪತ್ರದ ಪರಿಣಾಮದಿಂದ ಬೆಳಗಾವಿ ನಗರದಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟಾಗಿದೆ ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷ ಹಾಗೂ ಶಾಸಕ ಆರ್.ಎಸ್.ಮಾನೆ ಅವರು ಮಾಡಿರುವ ಆಪಾದನೆ ಮರಾಠಿಗರ ಹೀನ ಕೃತ್ಯಗಳನ್ನು ಮರೆಮಾಚಲು ಹೂಡಿರುವ ತಂತ್ರ ಎಂದು ಬೆಳಗಾವಿಯ ಕರ್ನಾಟಕ ಜನ ಸಂಘರ್ಷ ಸಮಿತಿ ಸಂಘಟಕ ರೋಹಿದಾಸ್ ಅವರು ಟೀಕಿಸಿದ್ದಾರೆ.

ಇತ್ತೀಚೆಗೆ ಮರಾಠಿಗರು ಹೊಸೂರಿನ ಕನ್ನಡ ಶಾಲೆಯನ್ನು ಸುಟ್ಟು ಹಾಕಿದ್ದಾರೆ. ಇದಕ್ಕೆ ಮುನ್ನ ಕನ್ನಡಿಗರ ಸಮಾವೇಶ ದಲ್ಲಿ ಕನ್ನಡಿಗರ ಮೇಲೆ ಕಲ್ಲು ತೂರಿದ್ದಾರೆ. ಇಂಥ ಗೂಂಡಾಗಳಿಂದ ಬೆಳಗಾವಿಯಲ್ಲಿ ಉದ್ರಿಕ್ತ ವಾತಾವರಣ ನಿರ್ಮಾಣಗೊಂಡಿದೆಯೇ ಹೊರತು ಕನ್ನಡಿಗರಿಂದಲ್ಲ ಎಂದು ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಮಟ್ಟದಲ್ಲಿ ಸಂಘಟನೆಗಾಗಿ ರೋಹಿದಾಸ್ ಅವರು ರಾಜ್ಯದಾದ್ಯಂತ ಪ್ರವಾಸ ಕೈಗೊಂಡಿದ್ದು, ಮಂಗಳವಾರ ನಗರದ ಪ್ರಮುಖ ರಸ್ತೆಗಳಲ್ಲಿ ಜನರ ಗುಂಪುಗಳನ್ನುದ್ದೇಶಿ ಭಾಷಣ ಮಾಡಿ, ಬೆಳಗಾವಿಯಲ್ಲಿ ಕನ್ನಡಿಗರಿಗಾಗುತ್ತಿರುವ ಅನ್ಯಾಯಗಳನ್ನು ವಿವರಿಸಿದರು.

...ಚಿತ ಆರೋಗ್ಯ ...ಪಾಸಣಾ ಶಿಬಿರ

...ಪುರ, ಅ. 20- ಸ್ಥಳೀಯ ... ಸಂಸ್ಥೆಯ ಆಶ್ರಯದಲ್ಲಿ ವಿಶ್ವ... ಸಪ್ತಾಹದ ಅಂಗವಾಗಿ ಇತ್ತೀಚೆಗೆ ...ತ ಆರೋಗ್ಯ ತಪಾಸಣಾ ಶಿಬಿರ ...ಡಿಸಲಾಗಿತ್ತು.

ಸುಮಾರು 260 ಜನರನ್ನು ಪರೀಕ್ಷಿಸಿ... ರಕ್ತ ... ಮದ್ಯಸೇವನೆ ಮತ್ತು ... ತಿನ್ನುವುದರಿಂದ ಉಂಟಾಗುವ ... ಬಗ್ಗೆ ವಿವರಿಸಲಾ...

ಬಸ್ ದರ ಹೆಚ್ಚಳ: ಉಪವಾಸ ಮುಷ್ಕರ

ಸಿದ್ದಾಪುರ, ಅ. 20- ಕರ್ನಾಟಕ ಸರಕಾರ ಬಸ್ ದರ ಏರಿಸಿರುವುದರ ವಿರುದ್ಧ ಸ್ಥಳೀಯ ಚಿಂತನ ವೇದಿಕೆ ಇತ್ತೀಚೆಗೆ ಒಂದು ದಿನದ ಉಪವಾಸ ಮುಷ್ಕರ ನಡೆಸಿ ಪ್ರತಿಭಟನೆ ಸೂಚಿಸಿತು.

ಕೂಡಲೆ ಬಸ್ ದರ ಇಳಿಸಬೇಕು ಹಾಗೂ ಬಸ್ ರಾಷ್ಟ್ರೀಕರಣವನ್ನು ಕೈಬಿಡಬೇಕೆಂಬ ಮನವಿಯೊಂದನ್ನು ವೇದಿಕೆಯು ಸರಕಾರಕ್ಕೆ ಸಲ್ಲಿಸಿರುವುದಾಗಿ ತಿಳಿದು ಬಂದಿದೆ.

ಮುಂಗಾರು

ಶುಕ್ರವಾರ, ಅಕ್ಟೋಬರ್ 4, 1985

ನೆಲೆ ತಪ್ಪಿದ ಪ್ಯಾಲೆಸ್ತೀನಿಯರು

ಟ್ಯುನೀಷಿಯದ ಹಮ್ಮಾನ್ ನಗರದಲ್ಲಿ ನೆಲೆ ಕಂಡುಕೊಂಡ ಪ್ಯಾಲೆಸ್ತೀನ್ ವಿಮೋಚನಾ ದಳದ ಕೇಂದ್ರ ಕಚೇರಿಯ ಮೇಲೆ ಇಸ್ರೇಲಿನ ಯುದ್ಧ ವಿಮಾನಗಳು ಬಾಂಬು ದಾಳಿ ನಡೆಸಿ ಕಟ್ಟಡವನ್ನು ಧ್ವಂಸಗೊಳಿಸಿವೆ. ಈ ಬರ್ಬರ ದಾಳಿಯಲ್ಲಿ 156 ಜನರು ಸತ್ತಿರುವ ವರದಿ ಬಂದಿದೆ.

ಪ್ಯಾಲೆಸ್ತೀನ್ ವಿಮೋಚನಾ ದಳದ ಗೆರಿಲ್ಲಾ ಪಡೆಗಳು ಹಾಗೂ ಕೇಂದ್ರ ಕಚೇರಿ ಈ ಮೊದಲು ನೆಲೆಯಾಗಿದ್ದ ದಕ್ಷಿಣ ಲೆಬನಾನಿನ ಪ್ಯಾಲೆಸ್ತೀನ್ ನಿರಾಶ್ರಿತ ಶಿಬಿರಗಳ ಮೇಲೂ 1982ರಲ್ಲಿ ಇಸ್ರೇಲ್ ವ್ಯಾಪಕ ದಾಳಿ ನಡೆಸಿತ್ತು. ಅಂದು ಆ ಶಿಬಿರಗಳಲ್ಲಿ ಹೆಂಗಸರು-ಹಸುಳೆಗಳೂ ಸೇರಿ ಸಾವಿರಾರು ಮಂದಿಯ ಕೊಲೆಯಾಗಿತ್ತು. ರಾತ್ರಿ ಇಸ್ರೇಲಿ ಸೈನಿಕರು ನುಗ್ಗಿ ಜನರನ್ನು ಮಂಚಗಳಿಂದ ಎಳೆದುಹಾಕಿ ಕೊಂದಿದ್ದರು.

ಪ್ಯಾಲೆಸ್ತೀನ್ ಗೆರಿಲ್ಲಾಗಳು ಭಯೋತ್ಪಾದಕ ಕೃತ್ಯಗಳಲ್ಲಿ ನಿರತರಾಗಿದ್ದಾರೆ. ಪ್ಯಾಲೆಸ್ತೀನ್ ವಿಮೋಚನಾದಳವು ಇಸ್ರೇಲಿನ ನಿರ್ಮೂಲನದ ಶಪಥ ಹಾಕಿದೆ ಎಂಬ ಸಬೂಬಿನ ಮರೆಯಲ್ಲಿ ಪ್ಯಾಲೆಸ್ತೀನಿಯರಿಗೆ ಪಾಠ ಕಲಿಸುವ ಈ ಕಾರ್ಯಾಚರಣೆಗಳನ್ನು ಇಸ್ರೇಲ್ ನಡೆಸುತ್ತಿದೆ.

ಆದರೆ ಪ್ಯಾಲೆಸ್ತೀನ್ ಗೆರಿಲ್ಲಾಗಳ ಹೋರಾಟದ ಹಿಂದೆ ದೊಡ್ಡ ಜನಾಂಗವೊಂದರ ನೋವಿನ ಕಥೆಯಿದೆ. ದಶಕಗಳ ಕಾಲ ಸಿಕ್ಕಸಿಕ್ಕಲ್ಲಿ ಅಂಡಲೆದು ನೆಲೆ ಕಾಣದೆ ಬಸವಳಿದ ಸಂಕಟದ ಸರಮಾಲೆಯಿದೆ. ಸ್ವಂತ ಮನೆ–ಮಂದಿರಗಳಿಂದ, ಉತ್ತು ಬಿತ್ತಿ ಉಣ್ಣಬೇಕಾದ ಹೊಲದಿಂದ ಪರಕೀಯನು ಬಂದು ಕತ್ತು ಹಿಡಿದು ದಬ್ಬಿಸಿಕೊಂಡ ಜನಾಂಗವೊಂದರ ವ್ಯಥೆಯಿದೆ.

ಪ್ಯಾಲೆಸ್ತೀನೀಯರ ಸಂಕಟ ಶುರುವಾದದ್ದು 1948ರ ಮೇ 14ರಂದು. ವಿಶ್ವಸಂಸ್ಥೆಯ ತೀರ್ಮಾನದನ್ವಯ ಇಸ್ರೇಲ್ ಎಂಬ ಯಹೂದ್ಯರಿಗೆ ನೆಲೆಯೊದಗಿಸಿದ ರಾಷ್ಟ್ರವೊಂದರ ನಿರ್ಮಾಣವಾದಾಗ. ಇದರಜತೆಗೆ ಆತನಕ ಜೋರ್ಡಾನ್ ನದಿಯ ಪಶ್ಚಿಮಕ್ಕೆ ಮೆಡಿಟರೇನಿಯನ್ ಸಮುದ್ರದ ತನಕ ವಿಶಾಲವಾಗಿ ಹರಡಿದ್ದ ಪ್ಯಾಲೆಸ್ತೀನ್ ಭೂಮಿಯ ಆಧಿಪತ್ಯ ವಹಿಸಿದ್ದ ಬ್ರಿಟನ್ ಕಾಲ್ತೆಗೆಯಿತು. ಅರೇಬಿಯದ ಮುಸ್ಲಿಂ ದೇಶಗಳಿನ್ನೂ ಸೈನಿಕವಾಗಿ, ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಭದ್ರವಾಗಿರಲಿಲ್ಲ. ಇಸ್ರೇಲಿನ ಯಹೂದ್ಯರಾದರೋ ಇವೆಲ್ಲದರಲ್ಲೂ ಬಲಯುತರಾಗಿದ್ದರು. ಅಮೆರಿಕ ಹಾಗೂ ಬ್ರಿಟನ್‌ಗಳ ಕುಮ್ಮಕ್ಕು ಅದಕ್ಕಿತ್ತು.

ಇಸ್ರೇಲಿಗೆ ಬೇಕಾದದ್ದು ಕಾಲೂರಲು ಒಂದು ತಾಣ ಮಾತ್ರ. ಆಮೇಲೆ ಬೇಕಾದ್ದೆಲ್ಲವನ್ನೂ ಅದು ಮಾಡಿಕೊಂಡಿತು. ಇಸ್ರೇಲ್ ಸ್ಥಾಪನೆ ಘೋಷಣೆಯೊಡನೆಯೇ ಯುದ್ಧವೂ ಪ್ರಾರಂಭವಾಯಿತು. ವಿಶ್ವಸಂಸ್ಥೆ ನಿಗದಿ ಪಡಿಸಿದ ಗಡಿಗಳೆಲ್ಲವನ್ನೂ ದಾಟಿ ಇಸ್ರೇಲ್ ಮುಂದುವರಿಯಿತು. ತನ್ನ ದೇಶದ ಎಲ್ಲೆಗಳನ್ನು ಮನಬಂದಂತೆ ವಿಸ್ತರಿಸಿಕೊಂಡಿತು, ಅಮಾಯಕ ಪ್ಯಾಲೆಸ್ತೀನಿಯರನ್ನು ನೆಲೆದೊರಕಿದ್ದ ಅವರ ಹೊಕ್ಕಳ ಬಳ್ಳಿ ಹರಿದು ಹೊರಗಟ್ಟಿತು. ಹೀಗೆ ಬದುಕಿನ ನೆಲೆಯಿಲ್ಲದೆ ಅಂಡಲೆದವರು ಎಂಟು ಲಕ್ಷ.

ಇಂದು ಪ್ಯಾಲೆಸ್ತೀನಿಯರು ವಿವಿಧ ಅರಬ್ ದೇಶಗಳಲ್ಲಿ ಹರಿಹಂಚಾಗಿದ್ದಾರೆ. ಇಂದು ಅವರ ಒಟ್ಟು ಸಂಖ್ಯೆ ಅರ್ಧ ಕೋಟಿ ಆಗಿದೆ. ಯುರೋಪಿನಲ್ಲಿಯೂ ಅಮೆರಿಕದಲ್ಲಿಯೂ ಕೆಲವರಿದ್ದಾರೆ. ವಿಶ್ವಸಂಸ್ಥೆ ತಿಳಿಸಿದ ಗಡಿಯೊಳಗೆ ಯಹೂದ್ಯರು ಕೂರುತ್ತಿದ್ದರೆ ಇಂದು ಈ ಮಾನವೀಯ ಸಮಸ್ಯೆ ಹುಟ್ಟುತ್ತಿರಲಿಲ್ಲ. ಎಂಟು ಲಕ್ಷ ಮುಸ್ಲಿಂ ಪ್ಯಾಲೆಸ್ತೀನೀಯರ ಬದುಕಿನ ನೆಲೆ ತಪ್ಪದಿರುತ್ತಿದ್ದರೆ ಮಧ್ಯ ಪೂರ್ವದ ಇಂದಿನ ರಾಜಕೀಯ ಕ್ಷೋಭೆಯಾಗಲಿ ಭಯೋತ್ಪಾದಕತೆಯ ಹಿಂಸೆಯಾಗಲಿ ಇರುತ್ತಿರಲಿಲ್ಲ.

ಪ್ಯಾಲೆಸ್ತೀನೀಯರಿಗೆ ನೆಲೆ ಒದಗಿಸಲು ಇಸ್ರೇಲ್ ತಯಾರಿಲ್ಲ. ನೆಲೆ ಕಾಣುವುದಕ್ಕಾಗಿ ಪ್ಯಾಲೆಸ್ತೀನೀಯರ ಹೋರಾಟ ನಡೆದಿದೆ. ಬದುಕಿನ ಬೇರು ಕಿತ್ತ ಕ್ರೋಧ ಅವರಿಂದ ಇಸ್ರೇಲಿನ ನಿರ್ಮೂಲನದ ಪ್ರತಿಜ್ಞೆ ಮಾಡಿಸಿದೆ. ಇಂದು ಪಿ. ಎಲ್. ಓ. ಒಂದು ಶಕ್ತಿಯಾಗಿ ಬೆಳೆದಿದೆ. ಇದು ಇಸ್ರೇಲಿಗೆ ಕಣ್ಣು ಕಿಸುರಾಗಿದೆ. 1982ರಲ್ಲಿ ಬೆರೂತಿನ ಶಿಬಿರಗಳಿಗೆ ನಡೆದ ಆಕ್ರಮಣ, ನರಹತ್ಯೆ- ಇವೆಲ್ಲಕ್ಕೂ ಇದುವೇ ಕಾರಣ. ಅನೇಕ ಅರಬ್ ರಾಷ್ಟ್ರಗಳಲ್ಲಿ ಹರಿಹಂಚಾಗಿ ಹೋದ ಪ್ಯಾಲೆಸ್ತೀನೀಯರು ಇಂದು ಸಾವು ಬದುಕಿನ ಹೋರಾಟದಲ್ಲಿ ನಿರತರಾಗಿದ್ದಾರೆ. ಅಲ್‌ಫತಾ ಮೂಲಕ 1969ರಲ್ಲಿ ಪಿ. ಎಲ್. ಓ. ನಾಯಕನಾದ ಯಾಸರ್ ಅರಾಫತ್ ಅವರ ಬುದ್ಧಿವಂತಿಕೆಯ, ವಿವೇಕಶಾಲಿ ನಾಯಕತ್ವದಲ್ಲಿ ಅವರು ಮುನ್ನಡೆಯುತ್ತಿದ್ದಾರೆ. 1964ರಲ್ಲಿ ಸ್ಥಾಪನೆಗೊಂಡ ಅವರ ಸಂಸ್ಥೆ ಪ್ಯಾಲೆಸ್ತೀನೀಯರಿಗೆ ಸ್ವಂತದ್ದಾದ ನೆಲೆಯೊಂದನ್ನು ಕೊಡುವುದಿದ್ದರೆ ಇಸ್ರೇಲಿನ ಅಸ್ತಿತ್ವವನ್ನು ಒಪ್ಪಿಕೊಳ್ಳುವ ಸೌಮ್ಯವಾದಿ ಧೋರಣೆಗೆ ಬಂದಿದೆ.

ಆದರೆ ಇಸ್ರೇಲ್ ಪ್ಯಾಲೆಸ್ತೀನೀಯರಿಗೆ ನೆಲೆ ಒದಗಿಸಲು ಸಿದ್ಧವಿಲ್ಲ. ಇಸ್ರೇಲ್ ಆಕ್ರಮಣಕಾರಿಯೆಂದು ಜಾಗತಿಕ ಸಮುದಾಯ ಗುರುತಿಸಿದೆ. ಪ್ಯಾಲೆಸ್ತೀನೀಯರಿಗೆ ಸೇರಿದ ನೆಲವನ್ನು ಅದು ನುಂಗಿ ಹಾಕಿದೆಯೆಂದು ಈಜಗತ್ತು ತಿಳಿದುಕೊಂಡಿದೆ. ಆ ನೆಲದಿಂದ ಅದು ಹಿಂದೆ ಹೋಗಬೇಕೆಂದು ವಿಶ್ವಸಂಸ್ಥೆ ನಿರ್ಣಯ ಮಾಡಿದೆ. ಆದರೆ ಇದನ್ನು ಮನ್ನಿಸಲು ಇಸ್ರೇಲ್ ಸಿದ್ಧವಿಲ್ಲ, ಅದು ಪ್ಯಾಲೆಸ್ತೀನ್ ಗೆರಿಲ್ಲಾಗಳ ಭಯೋತ್ಪಾದಕತೆಯ ಸಬೂಬಿನಡಿಯಲ್ಲಿ ಇಡಿಯ ಚಳುವಳಿಯನ್ನು ನಾಶ ಮಾಡಲು ಹೆಣಗಾಡುತ್ತಿದೆ.

ತಾನೇ ಹುಟ್ಟು ಹಾಕಿದ ಮಾನವೀಯ ಸಮಸ್ಯೆಯೊಂದನ್ನು ನಿವಾರಿಸಲು ನೆರವಾಗದೆ ನೆನೆಗುದಿಗೆ ಬೀಳಿಸಿದ್ದಲ್ಲದೆ ಕಳಂಕ ಹಚ್ಚಿ ಇತಿಹಾಸ ಅರಿಯದ ಜಗತ್ತಿನ ಅಮಾಯಕರ ಮುಂದೆ ತಾನೇ ಬಲಿಪಶುವೆಂದು ಮೆರೆದಾಡಲು, ಹೀರೋ ಆಗಲು ಹವಣಿಸುತ್ತಿರುವ ಇಸ್ರೇಲ್ ಯಾವ ಸಹಾನುಭೂತಿಗೂ ಅರ್ಹವಲ್ಲ. ಅದಕ್ಕೆ ಸಲ್ಲಬೇಕಾದ್ದು ಖಂಡನೆ ಮಾತ್ರ. ಜಗತ್ತಿನ ಜನಸಮುದಾಯ ದೂರವಿಡಬೇಕಾದ ಕ್ರೂರಿ ಅದು. ಜಗತ್ತಿನ ವ್ಯವಹಾರಗಳಿಂದ ಹೊರಗಿಡುವ ಮೂಲಕ ಅವಿವೇಕಿಯಾದ ದೇಶವನ್ನು ಮಣಿಸಬೇಕಾಗಿದೆ. ಅರ್ಧಕೋಟಿ ಜನಸಮುದಾಯವನ್ನು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿದ ಆ ದೇಶಕ್ಕೆ ನೆರವಾಗುವವರೂ ಅಷ್ಟೇ ಖಂಡನಾರ್ಹರು.

ದೂರವಾಣಿ ನೌಕರನ ಮೇಲೆ ಹಲ್ಲೆಗೆ ಪ್ರತಿಭಟನೆ

ಮೈಸೂರು, ಅ. 3–ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ವಿ. . ಹುಲ್ಲೂರ್, ಅವರು ದೂರವಾಣಿ ಸರಿಪಡಿಸಲೆಂದು ಬಂದ ದೂರವಾಣಿ ನೌಕರನನ್ನು ತಪ್ಪಾಗಿ ಗ್ರಹಿಸಿ ಹೊಡೆದು ಹೊರಗಟ್ಟಿದ ಪರಿಣಾಮವಾಗಿ ಇತ್ತೀಚೆಗೆ ದೂರವಾಣಿ ನೌಕರರು ಮುಷ್ಕರ ನಡೆಸಿದರು ಎಂದು ತಿಳಿದು ಬಂದಿದೆ.

ದೂರವಾಣಿ ನೌಕರನು ಮನೆಗೆ ಬಂದಾಗ ಅವರ ಗುರುತಿನ ಚೀಟಿ ಕೇಳಿದರೆಂದೂ, ಆದರೆ ಅವರು ಕೊಡದಿದ್ದಾಗ ಅವರ ಬಗ್ಗೆ ಅನುಮಾನಗೊಂಡ ರಿಜಿಸ್ಟ್ರಾರ್ ಅವರ ವಿರುದ್ಧ ಪೊಲೀಸ್ ಇಲಾಖೆಯಲ್ಲಿ ದೂರು ಸಲ್ಲಿಸಿದರು ಎಂದು ಹೇಳಲಾಗಿದೆ.

ಆದರೆ ತಾನು ರಿಜಿಸ್ಟ್ರಾರ್‌ರವರ ದೂರಿನ ಮೇರೆಗೆ ಅವರ ಮನೆಗೆ ದೂರವಾಣಿ ದುರಸ್ತಿಗೆಂದು ಹೋದಾಗ ತನ್ನನ್ನು ಅಮಾನುಷ ರೀತಿಯಲ್ಲಿ ನಡೆಸಿಕೊಳ್ಳಲಾಯಿತೆಂದು ಲೈನ್‌ಮ್ಯಾನ್ ಚಂದ್ರಶೇಖರ ಸರಸ್ವತಿಪುರಂ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ.

ಯಲ್ಲಾಪುರ ತಾಲೂಕಿನಲ್ಲಿ ಬರ ಪರಿಹಾರ ಕಾರ್ಯ ಕೈಗೊಳ್ಳಲು ಆಗ್ರಹ

ಯಲ್ಲಾಪುರ, ಅ. 3– ಯಲ್ಲಾಪುರ ತಾಲೂಕಿನ ಪೂರ್ವ ಭಾಗದಲ್ಲಿ ಈ ವರ್ಷ ಸರಿಯಾಗಿ ಮಳೆ ಬೀಳದ್ದರಿಂದ ಭೀಕರ ಬರಗಾಲ ಪರಿಸ್ಥಿತಿ ತಲೆದೋರಿದ್ದು, ಕೂಡಲೇ ಪರಿಹಾರ ಕಾರ್ಯ ಆರಂಭಿಸಬೇಕೆಂದು ಉತ್ತರ ಕನ್ನಡ ಜಿಲ್ಲಾ ಯುವ ಜನತಾ ಅಧ್ಯಕ್ಷ ಪ್ರಮೋದ ಹೆಗಡೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬತ್ತನೆಯ ಬೆಳೆಯೇ ಮುಖ್ಯವಾಗಿರುವ ಕಿರವತ್ತಿ ಹಾಗೂ ಹುಣಶೆಟ್ಟಿ, ಕೊಪ್ಪ ಪಂಚಾಯತ್' ಕ್ಷೇತ್ರಗಳಲ್ಲಿ, ಕಣ್ಣಗೇರಿ ಪಂಚಾಯತ್‌ನ ಬಹುಭಾಗದಲ್ಲಿ ಕಳೆದ ಒಂದು ತಿಂಗಳಿಂದ ಮಳೆ ಇಲ್ಲದೆ ಭತ್ತ ಒಣಗಿ ಶೇ. 25ರಷ್ಟು ಬೆಳೆಯು ಸಿಗದಂಥ ಸ್ಥಿತಿ ತಲೆದೋರಿದೆ ಎಂದು ಅವರು ಹೇಳಿದ್ದಾರೆ.

ಅನೇಕ ಕಡೆಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಕೊರತೆಯಾಗಿದೆ. ಜಾನುವಾರುಗಳು ಮೇವು, ನೀರು ಇಲ್ಲದೆ ಈ ಮಳೆಗಾಲದಲ್ಲೇ ಬಡಕಲಾಗಿವೆ. ಮುಂದಿನ ಮೇ ತಿಂಗಳ ಹೊತ್ತಿಗೆ ಪರಿಸ್ಥಿತಿ ಅಸಹನೀಯವಾಗಬಹುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ರೈತರ ಸಾಲವನ್ನು ಮನ್ನಾ ಮಾಡಬೇಕು ಅಥವಾ ಸಾಲ ಪಾವತಿಗೆ ಇನ್ನಷ್ಟು ಕಾಲಾವಕಾಶ ನೀಡಬೇಕೆಂದು ಅವರು ಆಗ್ರಹ ಪಡಿಸಿದ್ದಾರೆ.

ಪ್ರಮೋದ ಹೆಗಡೆ ಅವರ ನೇತೃತ್ವದಲ್ಲಿ ಯುವಕರ ತಂಡವೊಂದು ಇತ್ತೀಚೆಗೆ ಹುಬ್ಬಳ್ಳಿಗೆ ಹೋಗಿ ಅಲ್ಲಿಗೆ ಆಗಮಿಸಿದ್ದ ಉತ್ತರ ಕನ್ನಡ ಜಿಲ್ಲಾ ಮೇಲ್ವಿಚಾರಣಾ ಸಚಿವ ಆರ್. ವಿ. ದೇಶಪಾಂಡೆ ಅವರಿಗೆ ಪರಿಸ್ಥಿತಿಯನ್ನು ವಿವರಿಸಿದರು.

ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವುದಾಗಿ ದೇಶಪಾಂಡೆ ಯುವಕರ ನಿಯೋಗಕ್ಕೆ ಭರವಸೆ ನೀಡಿದರು.

ಶಿವಮೊಗ್ಗ ಜಿಲ್ಲಾ ಸಹಕಾರ ಬ್ಯಾಂಕ್ : 400 ಲ.ರೂ.ಬೆಳೆಸಾಲ ನೀಡಲು ನಿರ್ಧಾರ

ಶಿವಮೊಗ್ಗ, ಅ. 3-ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, 1985–86ನೇ ಸಾಲಿನಲ್ಲಿ ಒಟ್ಟು 400 ಲಕ್ಷ ರೂ.ಗಳನ್ನು ಬೆಳೆ ಸಾಲವನ್ನಾಗಿ ನೀಡಲು ಉದ್ದೇಶಿಸಿದ್ದು ಈಗಾಗಲೇ 326.92 ಲಕ್ಷ ರೂ.ಗಳನ್ನು 191 ಸಹಕಾರ ಸಂಘಗಳ ಮೂಲಕ ಬೆಳೆ ಸಾಲದ ರೂಪದಲ್ಲಿ ವಿತರಿಸಿದೆ.

ಈ ಸಾಲದಲ್ಲಿ ಶೇ. 50ರಷ್ಟನ್ನು ಸಣ್ಣ ರೈತರಿಗೆ ಕೊಡಲಾಗಿದೆಯಲ್ಲದೆ, 14.14 ಲಕ್ಷ ರೂ.ಗಳನ್ನು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ವಿತರಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಎ. ಕೋಟೋಜಿ ರಾವ್ ಅವರು ಪತ್ರಕರ್ತರಿಗೆ ವಿವರಿಸಿದರು.

ಈ ವರ್ಷಾಂತ್ಯದೊಳಗೆ ಕನಿಷ್ಠ 10 ಲಕ್ಷ ರೂ.ಗಳನ್ನು ಅಂತ್ಯೋದಯ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ [illegible] ಸಾಲದ ರೂಪದಲ್ಲಿ ನೀಡಲು ಬ್ಯಾಂಕ್ ಉದ್ದೇಶಿಸಿದೆ ಎಂದು ತಿಳಿಸಿದ ಅವರು, ಸಣ್ಣ ಪ್ರಮಾಣದ ವ್ಯಾಪಾರಿಗ[illegible] ಸಾಲದ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಅಲ್ಲದೆ ಸರ್ಕಾರವು ಈಗ ಕೈಗೊಂಡಿರುವ [illegible] ರೂಪಾಯಿಗೆ ಒಂದು ಕೆ.ಜಿ. [illegible] ಮತ್ತು ಸಬ್ಸಿಡಿ ದರದಲ್ಲಿ ಸೀರೆ, ಪಂಚೆ[illegible] ಗುರುತಿಸಲಾದ ಬಡವರಿಗೆ [illegible] ಯೋಜನೆಯನ್ನು ಸಹಕಾರ ಸಂಘ[illegible] ಮೂಲಕ ಜಾರಿಗೊಳಿಸಲು ಅಗತ್ಯವಾದ [illegible]ಕ್ಕಾಗಿ 35 ಲಕ್ಷ ರೂ.ಗಳ ಸಾಲ[illegible] 194 ಸಹಕಾರ ಸಂಘಗಳಿಗೆ [illegible] ಮಾಡಲಾಗಿದೆ ಎಂದು ಅವರು [illegible].

[illegible] ವ್ಯಾಪಕವಾದ್ದರಿಂದ [illegible] ಕಳೆದ 3–4 ವರ್ಷಗಳಲ್ಲಿ [illegible] ಸಾಲಗಳ ವಸೂಲಾತಿ ಪ್ರಮಾಣ ಈ ವರ್ಷ ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ ಎಂದು ತಿಳಿಸಿದ ಅವರು, 1981–82 ರಲ್ಲಿ ವಸೂಲಾತಿಯ ಪ್ರಮಾಣವು ಶೇ. 11.7 ಇದ್ದದ್ದು ನಿಧಾನವಾಗಿ ಚೇತರಿಸಿಕೊಳ್ಳುತ್ತಾ 1983–84ರಲ್ಲಿ 25.9 ಮಾತ್ರ ಇತ್ತು. ಆದರೆ ರಾಜ್ಯ ಸರ್ಕಾರ ಪ್ರಕಟಿಸಿದ ಬಡ್ಡಿ ಸಹಾಯ ಧನದಿಂದ ಮತ್ತು ಸಾಲ ಹಂಚಿಕೆಯ ನೀತಿಯನ್ನು ಸಡಿಲಗೊಳಿಸಿದ್ದರಿಂದ ಈ ವರ್ಷ ವಸೂಲಾತಿ ಪ್ರಮಾಣವು ಶೇ. 43.4 ಕ್ಕೆ ಮುಟ್ಟಿದೆ ಎಂದು ಅವರು ತಿಳಿಸಿದರು,

ಈಗ ಬ್ಯಾಂಕಿಗೆ ರೈತರಿಂದ 3 ಕೋಟಿ ರೂ. ಬಾಕಿ ಇದ್ದು, ಇದರ ವಸೂಲಿಗಾಗಿ ಪ್ರಯತ್ನಿಸಲಾಗುತ್ತಿದೆ. ಬಾಕಿ ಸಾಲವನ್ನು ವಸೂಲಿ ಮಾಡಲು ಕಾನೂನು ಕ್ರಮ ಜರಗಿಸುವುದಕ್ಕೆ ಬದಲಾಗಿ, ರೈತರಿಗೆ ಸಾಲವನ್ನು ಹಿಂತಿರುಗಿಸುವುದರಿಂದ ಆಗುವ ಪ್ರಯೋಜನಗಳನ್ನು ವಿವರಿಸಿ, ಅವರಿಂದ ಸಾಲವನ್ನು ವಸೂಲಿ ಮಾಡಲು ಪ್ರಯತ್ನಿಸಲಾಗುವುದು ಎಂದು ಅವರು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಒಂದು ಕೋಟಿ ರೂ. ಠೇವಣಿ ಸಂಗ್ರಹಿಸುವ ಗುರಿಯನ್ನೂ ಹೊಂದಿದೆ ಎಂದು ಕೋಟೋಜಿ ರಾವ್ ತಿಳಿಸಿದರು.

ಪ್ರವಾಹಕ್ಕೆ ಸಿಲುಕಿ ಒಂದೇ ಕುಟುಂಬದ ಐವರ ಸಾವು

ಗುಂಡ್ಲುಪೇಟೆ, ಅ. 3-ಈ ತಾಲೂಕಿನ ತೆರಕಣಾಂಬಿ ಹೋಬಳಿಯ ಹಂಪಕಟ್ಟೆಯ ಸೇತುವೆ ಬಳಿ ಇತ್ತೀಚೆಗೆ ಒಂದೇ ಕುಟುಂಬಕ್ಕೆ ಸೇರಿದ ಐವರು ಪ್ರವಾಹಕ್ಕೆ ಬಲಿಯಾದ ದಾರುಣ ಘಟನೆ ವರದಿಯಾಗಿದೆ.

ಇತ್ತೀಚೆಗೆ ಸಂಜೆ ಧಾರಾಕಾರವಾಗಿ ಬೀಳುತ್ತಿದ್ದ ಮಳೆಯಿಂದ ತಪ್ಪಿಸಿಕೊಳ್ಳಲು ಈ ಐವರು ಹಂಪಕಟ್ಟೆಯ ಕೆಳಗೆ ನೀರು ಹರಿಯಲೆಂದು ಹಾಕಿದ್ದ ಸಿಮೆಂಟ್ ಪೈಪಿನಲ್ಲಿ ಕುಳಿತ್ತಿದ್ದಾಗ ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ನೀರು ನುಗ್ಗಿ ಈ ದುರ್ದೈವಿಗಳು ನೀರಿನಲ್ಲಿ ಕೊಚ್ಚಿ ಹೋದರೆಂದು ತಿಳಿದು ಬಂದಿದೆ.

ಅನಾರೋಗ್ಯದಿಂದ ಬಳಲುತ್ತಿರುವ ಶಿಲ್ಪಿಗೆ ಮುಖ್ಯಮಂತ್ರಿ ಪರಿಹಾರ

ಮೈಸೂರು, ಅ. 3– ಖ್ಯಾತ ಶಿಲ್ಪಿ ಆರ್. ಎಸ್. ನಾಯ್ಡು ಅವರು ಅನಾರೋಗ್ಯದಿಂದ ಬಳಲುತ್ತಿದ್ದು, ಅವರ ಔಷಧೋಪಚಾರಕ್ಕಾಗಿ ರಾಜ್ಯದ ಮುಖ್ಯಮಂತ್ರಿ ಹೆಗಡೆ ಅವರು ಇತ್ತೀಚೆಗೆ ತಮ್ಮ ಪರಿಹಾರ ನಿಧಿಯಿಂದ 4,000 ರೂ.ಗಳನ್ನು ನೀಡಿದ್ದಾರೆ.

BEST WISHES TO

Dr. A. S. Mohammed Iqbal Hussain
M.B.B.S., M.D. (Medicine)

Assistant Professor of Medicine
Kasturba Medical College
Honorary Assistant Medical Officer
Govt. Wenlock Hospital Mangalore

on the occasion of the

[illegible] ಕ್ರಿ

ಮುಂಗಾರು

ಸೋಮವಾರ, ಅಕ್ಟೋಬರ್ 21, 1985

ಕಳಂಕ ತೊಳೆದುಕೊಳ್ಳಿ

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಮಗ ಹಾಗೂ ಇತರ ಸಮೀಪ ಸಂಬಂಧಿಗಳು ಮೆಡಿಕಲ್ ಸೀಟು ಕೊಡಿಸುವುದಾಗಿ ಹೇಳಿ ಹಣ ಸಂಗ್ರಹ ಮಾಡಿ ವಂಚಿಸಿದ ಪ್ರಕರಣದ ದೂರೊಂದು ಬಂದಿದೆ. ಇದನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷ ಸದಸ್ಯ ಎ. ಕೆ. ಸುಬ್ಬಯ್ಯ ಅವರು ರಾಜ್ಯದ ಜನತೆಯ ಗಮನಕ್ಕೆ ತಂದಿದ್ದಾರೆ.

ಬಲು ಗಂಭೀರವಾದ ವಿಚಾರ ಇದಾಗಿದೆ. ಮುಖ್ಯಮಂತ್ರಿಯವರ ಮಗ ಮತ್ತು ಅಳಿಯನೇ ಈ ಪ್ರಕರಣದಲ್ಲಿ ಒಳಗೊಂಡಿರುವ ಆಪಾದನೆ ಬಂದಿರುವುದರಿಂದ ಆಪಾದನೆ ವಾಸ್ತವಿಕವಾಗಿ ಮುಖ್ಯಮಂತ್ರಿಯ ಮೇಲೇ ಬಂದಂತಾಗಿದೆ. ಮೆಡಿಕಲ್ ಸೀಟು ಕೊಡಿಸುವುದಾಗಿ ಹೇಳಿ ಎರಡೂವರೆ ಲಕ್ಷ ರೂಪಾಯಿ ಹಣ ಸಂಗ್ರಹ ಮಾಡಿದ್ದಾರೆನ್ನಲಾದ ಒಂದು ಕೆಲಸ ತಂದೆಯ ಗಮನಕ್ಕೆ ಬಾರದೆ ಮಗನಿಂದ ಆಗುವುದು ಸಾಧ್ಯವೇ ಎಂಬ ಸಂದೇಹವು ಜನಮನದಲ್ಲಿ ಉಂಟಾಗುವುದು ಶಕ್ಯವಿದೆ. ಅಷ್ಟೇ ಅಲ್ಲದೆ ಈ ವ್ಯವಹಾರವೆಲ್ಲ ಮುಖ್ಯಮಂತ್ರಿಯ ಅಧಿಕೃತ ನಿವಾಸದಲ್ಲಿಯೇ ನಡೆಯಿತೆಂದು ದೂರು ಕೊಟ್ಟ ಜನರು ನಮೂದಿಸಿದ್ದಾರೆ. ಹಣ ಸಂಗ್ರಹ ಮಾಡಲು ಮುಖ್ಯಮಂತ್ರಿಯವರು ಅವರ ನಿವಾಸದಲ್ಲಿ ಅಧಿಕಾರಿಯೊಬ್ಬರನ್ನು ನೇಮಿಸಿಕೊಂಡಿದ್ದಾರೆಂದು ಸುಬ್ಬಯ್ಯನವರು ಇನ್ನೊಂದು ಗುರುತರ ಆರೋಪ ಮಾಡಿದ್ದಾರೆ.

ರೂಪಾಯಿ ಕೊಟ್ಟರೂ ಸೀಟು ಸಿಗದೆ ವಂಚನೆಗೊಳಗಾದ ಮಹಿಳಾ ವೈದ್ಯೆ ದೂರು ಕೊಡಲು ಹೋದಾಗ ಕೊಡಗಿನ ಸಿದ್ದಾಪುರ ಠಾಣೆಯ ಪೊಲೀಸರು ಮೊಕದ್ದಮೆ ದಾಖಲು ಮಾಡಿಕೊಳ್ಳಲು ನಿರಾಕರಿಸಿದರೆಂದೂ ಆರೋಪಿಸಲಾಗಿದೆ. ಇದೇ ವೇಳೆ ಮುಖ್ಯಮಂತ್ರಿ ಹೆಗಡೆಯವರು ಸ್ಪಷ್ಟೀಕರಣವೊಂದನ್ನು ಕೊಟ್ಟು ಪೊಲೀಸರು ಪ್ರಕರಣವೊಂದನ್ನು ಈ ತಿಂಗಳ 15ರಂದೇ ದಾಖಲು ಮಾಡಿಕೊಂಡಿದ್ದಾರೆಂದು ತಿಳಿಸಿದ್ದಾರೆ.

ಇಂದೊಂದು "ಬಲು ಕೆಟ್ಟದಾದ ಕಾಲ್ಪನಿಕ ಕತೆ" ಎಂದು ಹೆಗಡೆಯವರು ಪ್ರತಿಕ್ರಿಯೆ ನೀಡಿರುವುದೂ ವರದಿಯಾಗಿದೆ. "ನನ್ನ ಮಗನ ಹೆಸರು ದೂರಲ್ಲಿ ಎಲ್ಲಿಯೂ ಇಲ್ಲ" ಎಂದು ತಿಳಿಸಿರುವ ಅವರು ಉದಯಶಂಕರ್ ಮತ್ತು ಲಕ್ಷ್ಮಣನ್ ಪರಸ್ಪರ ಬಹುಕಾಲದಿಂದ ಸ್ನೇಹಿತರು. ಲಕ್ಷ್ಮಣನ್‌ರಿಂದ ಉದಯಶಂಕರ್ 75,000 ರೂಪಾಯಿ ಸಾಲ ಪಡೆದಿದ್ದರು. ಅದನ್ನು ಮರಳಿಸಿದ್ದಾರೆ. ಈ ಸಂಬಂಧ ಚೆಕ್ಕು ಕೊಡಲಾಗಿತ್ತು ಎಂದು ಬೇರೊಂದು ಹಣದ ವ್ಯವಹಾರವನ್ನು ಸಮರ್ಥಿಸಿದ್ದಾರೆ.

ವ್ಯಕ್ತಿ–ವ್ಯಕ್ತಿಗಳೊಳಗೆ ಹಣದ ವ್ಯವಹಾರ ಇರಬಹುದು. ಅದು ಸಹಜ. ಇಲ್ಲಿ ಅದಲ್ಲ ಪ್ರಶ್ನೆ. ಎರಡೂವರೆ ಲಕ್ಷ ರೂಪಾಯಿಗಳನ್ನು ಸೀಟು ಕೊಡಿಸುವುದಾಗಿ ಉದಯ ಶಂಕರ್ ಪಡೆದಿದ್ದರು. ಸೀಟು ದೊರಕದೆ ಹೋದಾಗ ಐವತ್ತು ಸಾವಿರ ರೂಪಾಯಿ ಮರಳಿಸಿದರು. ಬಾಕಿ ಹಣ ಕೊಟ್ಟಿಲ್ಲ ಎಂಬುದೇ ದೂರಿನಲ್ಲಿರುವ ಮುಖ್ಯಾಂಶ. ಭರತ್ ಹೆಗಡೆ ಪರವಾಗಿ ಉದಯ ಶಂಕರ್ ಹಣ ಸ್ವೀಕರಿಸಿದರು ಎಂದು ಬಂದಿರುವ ಆರೋಪ.

ಈ ಪ್ರಕರಣ ಹೆಗಡೆಯವರಂದಂತೆ ಕಟ್ಟುಕತೆ ಇರಬಹುದು. ನಿಜವೂ ಇರಬಹುದು. ಸುಳ್ಳಿನ ಕಂತೆಯೇ ಆಗಿರಬಹುದು. ನಾವೇನೂ ತೀರ್ಮಾನ ಕೊಡುವ ಹಾಗಿಲ್ಲ, ಕೊಡುವುದೂ ಇಲ್ಲ.

ಆದರೆ ಈ ಪ್ರಕರಣ ತುಂಬಾ ನಿಗೂಢವಾಗಿದೆ ಎಂಬುದನ್ನು ಜನ ಗಮನಿಸುತ್ತಾರೆ. ಅಧಿಕಾರ ಸ್ಥಾನದಲ್ಲಿದ್ದು ಬಲು ಪ್ರಭಾವಶಾಲಿಯಾದ ವ್ಯಕ್ತಿಗಳ ಹಾಗೂ ಅವರ ಸಂಬಂಧಿಕರ ಮೇಲೆ "ಹುಲುಮಾನವ"ರು ಸುಲಭಕ್ಕೆ ವಂಚನೆಯ ಆರೋಪ ಮಾಡಲಾರರು; ಮಾಡಿ ಅರಗಿಸಿಕೊಳ್ಳಲಾರರು. ಅಂತಹ ಆರೋಪ ಬಂದಿರಬೇಕಾದರೆ ಒಂದೋ ಅವರು ಬಲು ಬಲಾಢ್ಯರಾಗಿರಬೇಕು, ಇಲ್ಲವೇ ಆರೋಪದಲ್ಲಿ ಹುರುಳಿರಬೇಕು.

ಅಧಿಕಾರಸ್ಥರ ಮೇಲೆ ಇಂತಹ ಒಂದು ಬಲು ಗಂಭೀರವಾದ ಭ್ರಷ್ಟಾಚಾರದ ಆರೋಪ ಬಂದಾಗ ಸಹಜವಾಗಿಯೇ ಅವರ ರಾಜಕೀಯ ವಿರೋಧಿಗಳು ಮುಗಿಬೀಳುತ್ತಾರೆ. ಈ ಪರಿಸ್ಥಿತಿಯಿಂದ ತಮ್ಮ ರಾಜಕೀಯ ಲಾಭವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಮುಖ್ಯಮಂತ್ರಿ ಹೆಗಡೆಯವರು ಇದಕ್ಕಾಗಿ ಕರುಬಿ ಫಲವಿಲ್ಲ. ಯಾಕೆಂದರೆ ಅವರೂ ಅವರಂತಹ ಎಲ್ಲರೂ ಮಾಡುವುದು ಅದನ್ನೇ ಆಗಿದೆ.

ಈ ಪ್ರಕರಣದಲ್ಲಿ ಆಳುವ ಜನತಾ ಸರಕಾರದ ರಾಜನೈತಿಕತೆಯ ಪ್ರಶ್ನೆ ಒಳಗೊಂಡಿದೆ. ಸರಕಾರದ ಮೇಲೆ ಕಳಂಕ ಹಚ್ಚಲು ಆಸಕ್ತ ಜನ ಪ್ರಯತ್ನ ನಡೆಸಿದ್ದಾರೆ. ಅದು ಹೆಗಡೆಯವರಂದಂತೆ ರಾಜಕೀಯ ಕುತಂತ್ರವಿರಬಹುದು, ಅಲ್ಲದಿರಬಹುದು.

ಒಂದು ಮಾತ್ರ ಸತ್ಯ. ಸರಕಾರ ಇದರಲ್ಲಿ ಆಸಕ್ತ ಪಕ್ಷವಾಗಿದೆ. ಪೊಲೀಸರೂ ಅದೇ ಆಸಕ್ತ ಪಕ್ಷಕ್ಕೆ ಸೇರಿದವರು. ಪ್ರಕರಣವನ್ನು ದಾಖಲು ಮಾಡಿಕೊಳ್ಳಲು ಅವರು ನಿರಾಕರಿಸಿದ ಆರೋಪವಿದೆ. ಪ್ರಕರಣವು ಸಾರ್ವಜನಿಕರ ಗಮನಕ್ಕೆ ದೊಡ್ಡದಾಗಿ ಬಂದ ಮೇಲೆ ಅವರು ಅದನ್ನು ದಾಖಲಿಸಿಕೊಂಡರು ಎಂದು ನಂಬಲು ಸಾಕಷ್ಟು ಕಾರಣಗಳಿವೆ. ಪ್ರಕರಣದ ಮುಂದಿನ ತನಿಖೆಯನ್ನು ಅವರೇ ಮಾಡುವುದರಿಂದ ನ್ಯಾಯವು ಎಲ್ಲಿಯೋ ಹೂತು ಹೋಗುವ ಅಪಾಯ ಖಂಡಿತಾ ಇದೆ. ಅವರು ನ್ಯಾಯ ಪಕ್ಷಪಾತಿಗಳಾಗಿಯೇ ವ್ಯವಹರಿಸಿದರೆಂದೇ ಇಟ್ಟುಕೊಂಡರೂ ಅಂಥ ವಿಶ್ವಾಸ ಜನಮನದಲ್ಲಿ ಮೂಡುವುದು ಕಷ್ಟ.

ಆದ್ದರಿಂದ ಬಂದಿರುವ ಕಳಂಕವನ್ನು ಹೋಗಲಾಡಿಸಲು, ಭ್ರಷ್ಟಾಚಾರ ನಡೆಯದೇ ಇರುವುದನ್ನು ನಿಚ್ಚಳವಾಗಿ ಸಾಬೀತುಪಡಿಸಲು ಈ ಪ್ರಕರಣದ ತನಿಖೆಯನ್ನು ಸರಕಾರ ಮೂರನೆಯ ಸಂಸ್ಥೆಯೊಂದಕ್ಕೆ ವಹಿಸಿಕೊಡಬೇಕು. ಒಂದೋ ಇದರ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಿ ಕೊಡಬೇಕು, ಇಲ್ಲವೇ ತಕ್ಷಣವೇ ನ್ಯಾಯಾಂಗ ಆಯೋಗವೊಂದನ್ನು ನೇಮಿಸಿ ವಿಚಾರಣೆ ನಡೆಸಬೇಕು. ಹಾಗೆ ಮಾಡುವುದರಿಂದ ಮಾತ್ರವೇ ರಾಜಕೀಯ ಮೌಲ್ಯಗಳು ಬೆಳೆದು ಈ ಸರಕಾರಕ್ಕೆ ಇನ್ನಷ್ಟು ಭದ್ರವಾದ ಮೌಲ್ಯಾಧಾರ ದೊರೆಯುವುದು ಸಾಧ್ಯ.

10.85 ಲ.ರೂ.ವೆಚ್ಚದ ಸೇತುವೆ ಉದ್ಘಾಟನೆ

ಕಾರವಾರ, ಅ. 20- ಇಲ್ಲಿಂದ 12 ಕಿ. ಮಿ. ದೂರದಲ್ಲಿರುವ ದೇವಭಾಗದಲ್ಲಿ 10.85 ಲಕ್ಷ ರೂ. ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾದ ಸೇತುವೆಯನ್ನು ರಾಜ್ಯ ಚಿಕ್ಕ ಉದ್ದಿಮೆ ಸಚಿವ ಆರ್. ವಿ. ದೇಶಪಾಂಡೆ ಅವರು ನಿನ್ನೆ ಇತ್ತೀಚೆಗೆ ಉದ್ಘಾಟಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅಂಕೋಲಾದ ಶಾಸಕ ಜಿ. ಎಸ್. ಹೆಗಡೆ ಅಜ್ಜೀಬಾಳ ಅವರು ಮಾತನಾಡುತ್ತ ಖಜನಿ ಭೂಮಿಯ ಅಭಿವೃದ್ಧಿಗಾಗಿ ಜಿಲ್ಲಾ ಖಜನಿ ಭೂಮಿ ಅಭಿವೃದ್ಧಿ ಮಂಡಳಿಯನ್ನು ರಚಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವದೆಂದು ತಿಳಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರವಾರ ಶಾಸಕ ಪಿ. ಎಸ್. ರಾಣೆ ಅವರು ವಹಿಸಿದ್ದರು.

ಪ್ರಾರಂಭದಲ್ಲಿ ಕಾರವಾರ ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜನಿಯರ್ ಬಸಪ್ಪ ಅವರು ಸ್ವಾಗತಿಸಿದರು.

ಅತ್ಯಾಚಾರಕ್ಕೆ ವಿಫಲ ಯತ್ನ

ಸಾಗರ, ಅ. 20– ಗೌರವ್ವ ಎಂಬ ಳ ಮೇಲೆ ಅತ್ಯಾಚಾರದ ಯತ್ನ ನಡೆಸಿ ವಿಫಲನಾದ ಶಿವು ಎಂಬಾತನನ್ನು ಪೊಲೀಸರು ಬಂಧಿಸಿ ಮೊಕದ್ದಮೆ ದಾಖಲು ಮಾಡಿಕೊಂಡಿರುವದಾಗಿ ತಿಳಿದು ಬಂದಿದೆ.

ಮಂತ್ರಿಗಳ ಹೆಸರಿನಲ್ಲಿ ಹಣ ವಂಚನೆ: ಬಂಧನ

ಸೊರಬ, ಅ. 20- ಊರೂರು ಅಲೆದು ಸಚಿವರ ಹೆಸರಿನಲ್ಲಿ ಹಣಗಳಿಸುತ್ತಿದ್ದ ವಂಚಕರೊಬ್ಬರು ಇತ್ತೀಚೆಗೆ ಇಲ್ಲಿನ ಪೊಲೀಸರಿಗೆ ಅತಿಥಿಯಾದ ಪ್ರಕರಣ ವೊಂದು ವರದಿಯಾಗಿದೆ.

ಧಾರವಾಡದ ನರಗುಂದ ತಾಲೂಕಿನ ಚಿಕ್ಕ ನರಗುಂದ ಊರಿನವನೆಂದು ಹೇಳಲಾದ ಗುರುಸಿದ್ದಯ್ಯ ವಿ.ಹಿರೇಮಠ ಎಂಬ ಈ ವ್ಯಕ್ತಿ ತಾವು ಹೋದಲ್ಲಿ ಧಾರವಾಡ ಜಿಲ್ಲಾ ಯುವಜನತಾ ಅಧ್ಯಕ್ಷನೆಂದು

ಅಥವಾ ಮಾಜಿ ಅಧ್ಯಕ್ಷನೆಂದು ಕರೆದು ಕೊಳ್ಳುತ್ತಾ, ಅಲ್ಲಿನ ಪ್ರವಾಸಿ ಮಂದಿರ ದಲ್ಲಿ ತಂಗುತ್ತಿದ್ದರೆಂದು ತಿಳಿದು ಬಂದಿದೆ.

ಈ ಪ್ರವಾಸಿ ಮಂದಿರವನ್ನು ತಮ್ಮ ಕಾರ್ಯ ಚಟುವಟಿಕೆಯ ಕೇಂದ್ರವಾಗಿಸಿ ಕೊಂಡು, ಆಯಾ ಊರಿನ ಗೆಜೆಟೆಡ್ ಅಧಿಕಾರಿಗಳ ಮನೆಗೆ ಸಂಬಂಧ ಪಟ್ಟ ಇಲಾಖೆಯ ಮಂತ್ರಿಗಳ ಆಪ್ತಕಾರ್ಯದರ್ಶಿಗಳ ಪರವಾಗಿ ತಾನು ಬಂದಿರುವೆನೆಂದೂ ಬೇರೆಯವರೊಡನೆ ಚೀಟಿ ಕಳುಹಿಸಿ, ದೇವಸ್ಥಾನದ ಸಲುವಾಗಿ ಹಣ ಸಂಗ್ರಹಿಸುತ್ತಿದ್ದೇನೆ ತಾವು ಇಲ್ಲಿಗೆ ಬರುತ್ತೀರೋ ಅಥವಾ ನಾನೇ ನಿಮ್ಮಲ್ಲಿಗೆ ಬರಬೇಕೆ ಎಂದು ತಿಳಿಸುತ್ತಿದ್ದರೆಂದು ಗೊತ್ತಾಗಿದೆ.

ಸುಮಾರು 25ರೂ.ಗಳಿಂದ 300ರೂ. ತನಕ ಹಣ ಎತ್ತುವ ಈ ವ್ಯಕ್ತಿ ಇತ್ತೀಚೆಗೆ ಸೊರಬದ ಪ್ರವಾಸಿ ಮಂದಿರದಲ್ಲಿ ಉಳಿದು ಇದೇ ಕ್ರಮದಲ್ಲಿ ವಂಚಿಸಲೆತ್ನಿಸಿದಾಗ ಇಲ್ಲಿನ ಪುರಸಭಾಧ್ಯಕ್ಷ ಎಚ್.ಎಸ್. ಮಂಜಪ್ಪ ಅವರಿಗೆ ವಿಷಯ ತಿಳಿದು ಅನುಮಾನ ಬಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಚಂದ್ರಪ್ಪನವರಿಗೆ ತಿಳಿಸಿದರು.

ಆ ಸಮಯದಲ್ಲಿ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿದ್ದ ಈ ವ್ಯಕ್ತಿಯನ್ನು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಚಂದ್ರಪ್ಪ ಅವರು ಬಂಧಿಸುವಲ್ಲಿ ಯಶಸ್ವಿಯಾದರು.

ರಾಜಕೀಯ ಪಕ್ಷದ ಕಾರ್ಯಕರ್ತನಂತೆ ಕಂಡು ಬರುವ ಈ ವ್ಯಕ್ತಿ ಇದೀಗ ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆಂದು ತಿಳಿದು ಬಂದಿದೆ.

ಭದ್ರಾವತಿ ಶಿವಮೊಗ್ಗ ನಗರದ ಮಧ್ಯೆ ಹೆದ್ದಾರಿ ಸಂಪರ್ಕ ಮಾಡಲು 81-82 ರಲ್ಲಿ ಜಮೀನು ಸ್ವಾಧೀನ ಪಡಿಸಿಕೊಂಡು ಈ ಬಗ್ಗೆ ಸರ್ಕಾರದವರು ಪರಿಹಾರ ಧನವನ್ನು ನಾಡುವರೆವಿಗೂ ಕೊಡದೆ ಇದ್ದುದನ್ನು ಪ್ರತಿಭಟಿಸಲು ಜಮೀನು ಕಳೆದು ಕೊಂಡವರು ಇತ್ತೀಚೆಗೆ ಮೆರವಣಿಗೆ ನಡೆಸಿದರು.

ರಾಜೀವ್‌ಗೆ ಹೆಗಡೆ ಪತ್ರ: ಬೆಳಗಾವಿಯಲ್ಲಿ ಉದ್ರಿಕ್ತ ಪರಿಸ್ಥಿತಿ

ಶಿವಮೊಗ್ಗ, ಅ. 20– ಮಹಾಜನ ವರದಿಯನ್ನು ಜಾರಿಗೆ ತರಬೇಕೆಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಪ್ರಧಾನಿಗೆ ಬರೆದ ಪತ್ರದ ಪರಿಣಾಮದಿಂದ ಬೆಳಗಾವಿ ನಗರದಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟಾಗಿದೆ ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷ ಹಾಗೂ ಶಾಸಕ ಆರ್.ಎಸ್.ಮಾನೆ ಅವರು ಮಾಡಿರುವ ಅಪಾದನೆ ಮರಾಠಿಗರ ಹೀನ ಕೃತ್ಯಗಳನ್ನು ಮರೆಮಾಚಲು ಹೂಡಿರುವ ತಂತ್ರ ಎಂದು ಬೆಳಗಾವಿಯ ಕರ್ನಾಟಕ ಜನ ಸಂಘರ್ಷ ಸಮಿತಿ ಸಂಘಟಕ ರೋಹಿದಾಸ್ ಅವರು ಟೀಕಿಸಿದ್ದಾರೆ.

ಇತ್ತೀಚೆಗೆ ಮರಾಠಿಗರು ಹೊಸೂರಿನ ಕನ್ನಡ ಶಾಲೆಯನ್ನು ಸುಟ್ಟು ಹಾಕಿದ್ದಾರೆ. ಇದಕ್ಕೆ ಮುನ್ನ ಕನ್ನಡಿಗರ ಸಮಾವೇಶದಲ್ಲಿ ಕನ್ನಡಿಗರ ಮೇಲೆ ಕಲ್ಲು ತೂರಿದ್ದಾರೆ. ಇಂಥ ಗೂಂಡಾಗಳಿಂದ ಬೆಳಗಾವಿಯಲ್ಲಿ ಉದ್ರಿಕ್ತ ವಾತಾವರಣ ನಿರ್ಮಾಣ ಗೊಂಡಿದೆಯೇ ಹೊರತು ಕನ್ನಡಿಗರಿಂದಲ್ಲ ಎಂದು ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಮಟ್ಟದಲ್ಲಿ ಸಂಘಟನೆಗಾಗಿ ರೋಹಿದಾಸ್ ಅವರು ರಾಜ್ಯದಾದ್ಯಂತ ಪ್ರವಾಸ ಕೈಗೊಂಡಿದ್ದು, ಮಂಗಳವಾರ ನಗರದ ಪ್ರಮುಖ ರಸ್ತೆಗಳಲ್ಲಿ ಜನರ ಗುಂಪುಗಳನ್ನುದ್ದೇಶಿ ಭಾಷಣ ಮಾಡಿ, ಬೆಳಗಾವಿಯಲ್ಲಿ ಕನ್ನಡಿಗರಿಗಾಗುತ್ತಿರುವ ಅನ್ಯಾಯಗಳನ್ನು ವಿವರಿಸಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಶಿಕಾರಿಪುರ, ಅ. 20– ಸ್ಥಳೀಯ ಲಯನ್ಸ್ ಸಂಸ್ಥೆಯ ಆಶ್ರಯದಲ್ಲಿ ವಿಶ್ವ ಸೇವಾ ಸಂಸ್ಥೆ ಅಂಗವಾಗಿ ಇತ್ತೀಚೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಸುಮಾರು 260 ಜನರನ್ನು ಪರೀಕ್ಷಿಸಿ ಅವರಿಗೆ ಸೂಕ್ತ ಔಷಧೋಪಚಾರ ನೀಡಿ ಬೀಡಿ, ಸಿಗರೇಟು, ಮದ್ಯಸೇವನೆ ಮತ್ತು ತಂಬಾಕು ತಿನ್ನುವುದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ವಿವರಿಸಲಾಯಿತು.

ಬಸ್ ದರ ಹೆಚ್ಚಳ: ಉಪವಾಸ ಮುಷ್ಕರ

ಸಿದ್ದಾಪುರ, ಅ. 20.– ಕರ್ನಾಟಕ ಸರಕಾರ ಬಸ್ ದರ ಏರಿಸಿರುವುದರ ವಿರುದ್ಧ ಸ್ಥಳೀಯ ಚಿಂತನ ವೇದಿಕೆ ಇತ್ತೀಚೆಗೆ ಒಂದು ದಿನದ ಉಪವಾಸ ಮುಷ್ಕರ ನಡೆಸಿ ಪ್ರತಿಭಟನೆ ಸೂಚಿಸಿತು.

ಕೂಡಲೆ ಬಸ್ ದರ ಇಳಿಸಬೇಕು ಹಾಗೂ ಬಸ್ ರಾಷ್ಟ್ರೀಕರಣವನ್ನು ಕೈಬಿಡಬೇಕೆಂಬ ಮನವಿಯೊಂದನ್ನು ವೇದಿಕೆಯು ಸರಕಾರಕ್ಕೆ ಸಲ್ಲಿಸಿರುವುದಾಗಿ ತಿಳಿದು ಬಂದಿದೆ.

ಮುಂಗಾರು
ಶುಕ್ರವಾರ, ಅಕ್ಟೋಬರ್ 11, 1985

ವ್ಯವಸ್ಥೆ ಬದಲಾಯಿಸಿ

ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ ಪರೀಕ್ಷೆಗೆ ಮನೆಯಲ್ಲೇ ಉತ್ತರ ಸಿದ್ಧಪಡಿಸಿ, ನಂತರ ಪರೀಕ್ಷಾ ಕೊಠಡಿಗೆ ಸಾಗಿಸಿ ವಿದ್ಯಾರ್ಥಿಗಳ ಉತ್ತರ ಪತ್ರಿಕೆ ಜತೆ ಸೇರಿಸುತ್ತಿದ್ದ ಜಾಲವೊಂದನ್ನು ಪೊಲೀಸರು ಪತ್ತೆ ಹಚ್ಚಿರುವ ಸಂಗತಿ ವರದಿಯಾಗಿದೆ.

ಇತಂಹ ವಿದ್ಯಮಾನ ಹೊಸದೇನೂ ಅಲ್ಲವಾದರೂ, ಉತ್ತರ ಪತ್ರಿಕೆ ಸಿದ್ಧಪಡಿಸುವ ಕಾರ್ಯದಲ್ಲಿ ಶಿಕ್ಷಕರೇ ಪಾಲ್ಗೊಂಡು ಸಿಕ್ಕಿಬಿದ್ದಿರುವುದು ಮಾತ್ರ ಈಗಿನ ಸುದ್ದಿಯ ವಿಶೇಷ.

ಪ್ರಶ್ನೆಪತ್ರಿಕೆ ಬಯಲಾಗುವುದು, ಪರೀಕ್ಷೆ ಮುಂದೂಡುವುದು ಈಚಿನ ವರ್ಷಗಳಲ್ಲಿ ತೀರಾ ಮಾಮೂಲಿ ಸಂಗತಿ ಅನ್ನುವ ಮಟ್ಟಕ್ಕೆ ಬಂದಿರುವುದು ನಮ್ಮ ಶಿಕ್ಷಣ ವ್ಯವಸ್ಥೆ ತಲುಪಿರುವ ಸ್ಥಿತಿಯನ್ನು ಸೂಚಿಸುತ್ತದೆ. ಕಳೆದ ವರ್ಷ ಪಿಯುಸಿ ಪರೀಕ್ಷೆ ಪ್ರಶ್ನೆಪತ್ರಿಕೆಗಳು ಬಯಲಾದ ನಂತರ, ಅದನ್ನು ತಡೆಗಟ್ಟುವ ಕ್ರಮ ಎಂಬಂತೆ ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶ ಪರೀಕ್ಷೆ ಪದ್ಧತಿಯನ್ನು ಜಾರಿಗೊಳಿಸಲಾಯಿತು.

ಪ್ರಶ್ನೆಪತ್ರಿಕೆ ಬಯಲಾದ ಸಂದರ್ಭದಲ್ಲಿ ಎಚ್ಚೆತ್ತು ಸಿಐಡಿ ತನಿಖೆ ನಡೆಸುವುದು, ಶಂಕಿತರ ಬಂಧನ ವಿಚಾರಣೆ ಇವೆಲ್ಲಾ ತಾತ್ಕಾಲಿಕ ಕ್ರಮಗಳಷ್ಟೇ ಆಗುತ್ತವೆ. ಸಮಸ್ಯೆಯ ಮೂಲ ಇರುವುದೇ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ.

ವಿದ್ಯಾರ್ಥಿಗಳ ಮಿದುಳನ್ನು ಕೇವಲ ನೆನಪಿನ ಉಗ್ರಾಣವಾಗಿ ಪರಿಗಣಿಸಿರುವ ಇಂದಿನ ವ್ಯವಸ್ಥೆ ಮೊದಲು ಬದಲಾಗಬೇಕು. ವಿದ್ಯಾರ್ಥಿಗಳು ವರ್ಷವಿಡೀ ಅಧ್ಯಯನ ಮಾಡುವ ವಿಷಯಗಳನ್ನು ಮೂರು ಗಂಟೆಗಳಲ್ಲಿ ಪರೀಕ್ಷಿಸಿ, ಮುಗಿಸಿಬಿಡುವ ಪದ್ಧತಿಗೆ ಪರ್ಯಾಯವೊಂದನ್ನು ರೂಪಿಸಬೇಕು.

ಪರ್ಯಾಯವ್ಯವಸ್ಥೆ ಅಂದರೆ ಹೇಗಿರಬೇಕು ಅನ್ನುವ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಕೇಂದ್ರ ಹಾಗೂ ರಾಜ್ಯ ಎರಡೂ ಸರಕಾರಗಳು ಹೊಸ ಶಿಕ್ಷಣ ನೀತಿಯ ಬಗ್ಗೆ ಸಾಕಷ್ಟು ಸುದ್ದಿ ಮಾಡಿದೆ ಈ ನೀತಿಯನ್ನು ರೂಪಿಸುವ ವೇಳೆ ಪರೀಕ್ಷಾ ಪದ್ಧತಿ ಮಾರ್ಪಾಡಿನ ಬಗ್ಗೆಯೂ ಚರ್ಚೆಯಾಗಲಿ.

ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಂದ ಹೊಸ ಪರೀಕ್ಷಾ ಪದ್ಧತಿ ಹೇಗಿರಬೇಕೆಂಬ ಬಗ್ಗೆ ಅಭಿಪ್ರಾಯ ಸಂಗ್ರಹಿಸುವ ಕಾರ್ಯ ಈಗ ಆರಂಭವಾಗಬೇಕು. ಈ ನಿಟ್ಟಿನಲ್ಲಿ ಸರಕಾರ ಕ್ರಿಯಾಶೀಲವಾಗಲು ಇದು ಸಕಾಲ.

ಈಗಾಗಲೇ ಕೆಲ ವಿಶ್ವವಿದ್ಯಾನಿಲಯಗಳಲ್ಲಿ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿ ಯಶಸ್ವಿಯಾಗಿ ನಿರ್ವಹಿಸುತ್ತಿರುವುದನ್ನು ಮನಗಾಣಬಹುದು. ಮದರಾಸು ವಿಶ್ವವಿದ್ಯಾಲಯದಲ್ಲಿ ಕೇವಲ ಆರು ವರ್ಷಗಳ ಹಿಂದೆ ಅಳವಡಿಸಲಾದ ಸೆಮಿಸ್ಟರ್ ಶಿಕ್ಷಣ ಪದ್ಧತಿ ಸುಸೂತ್ರವಾಗಿ ಸಾಗುತ್ತಿದೆಯಲ್ಲದೆ, ಶಿಕ್ಷಣದಲ್ಲಿನ ಕೆಲವಷ್ಟಾದರೂ ನ್ಯೂನತೆಗಳನ್ನು ಹೋಗಲಾಡಿಸುವಲ್ಲಿ ಪರಿಣಾಮಕಾರಿಯಾಗಿದೆ. ಈ ಪದ್ಧತಿಯಿಂದ ವಿದ್ಯಾರ್ಥಿಗಳ ಹೊರೆಯನ್ನು ವರ್ಷವಿಡೀ ಮಾಡುವ ಬದಲು, ಆರಾರು ತಿಂಗಳಿನಂತೆ ಪಾಠ, ಪ್ರವಚನ ಪರೀಕ್ಷೆಗಳನ್ನು ನಡೆಸಲು ಅನುಕೂಲವಾಗುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷೆ ಪೀಡೆಯಾಗುವ ಬದಲು, ತೀರಾ ಸರಳ ಹಾಗೂ ಕರ್ತವ್ಯವೆಂದು ಮನವರಿಕೆ ಆಗಬೇಕು. ಪ್ರೌಢಶಾಲಾ ಶಿಕ್ಷಣ ಹಂತದಲ್ಲಿ ಸರ್ಕಾರ ಇಂತಹ ಪದ್ಧತಿಯನ್ನು ತರುವುದರ ಕಡೆ ತಲೆಹಾಕಬೇಕು.

ಪ್ರೌಢಶಾಲಾ ಶಿಕ್ಷಣ ನಿಯಂತ್ರಣ ಮಾಡುತ್ತಿರುವ ಬೆಂಗಳೂರೆಂಬ ಗಂಗೋತ್ರಿ ತೀರಾ ಹೊಲಸಾಗಿದೆ. ಇದು ಇಂದು ನಿನ್ನೆಯ ಮಾತಲ್ಲ. ಹಲವಾರು ವರ್ಷಗಳ ಕಥೆ. ಬಹಳ ದೊಡ್ಡ ಜಾಲ ಅದರದ್ದು. ಶಿಕ್ಷಣ ಇಲಾಖೆ ಹಾಗೂ ಪ್ರೌಢ ಶಾಲಾ ಶಿಕ್ಷಣದ ಕೆಲ ಭ್ರಷ್ಟರಿಂದ ಪರೀಕ್ಷೆಗಳಿಗೆ ಸಂಬಂಧಿಸಿದ ಎಂತಹ ರಹಸ್ಯಗಳು ಸಲೀಸಾಗಿ ಬಯಲಾಗುತ್ತಿವೆ. ಇವರ ಮೇಲೆ ಎಂತಹ ನಿಯಂತ್ರಣ, ಜವಾಬ್ದಾರಿ ಇಲ್ಲ. ಇವರಿಗೆ ಯಾರ ಹೆದರಿಕೆ ಇರುವುದಿಲ್ಲ. ಕಾಸಿನ ಆಸೆಗೆ ಪತ್ರಿಕೆಗಳನ್ನೇಕೆ, ಮಾನಮರ್ಯಾದೆಯನ್ನೂ ಮಾರು ಕಾಸಿಗೆ ಮಾರಬಲ್ಲವರಿಂದ ಶಿಕ್ಷಣ ಇಲಾಖೆ ಸುಧಾರಿಸುವುದು ಸಾಧ್ಯವೇ ಇಲ್ಲ.

ಪ್ರತಿಯೊಂದು ಹಗರಣದ ಅಪರಾಧಿಗಳೂ ಸಚಿವರು, ಶಾಸಕರ ಬಾಲ ಹಿಡಿದು ತಮ್ಮ ಭ್ರಷ್ಟತೆಗಳನ್ನು ಮುಚ್ಚಿ ಹಾಕುತ್ತಾರೆ. ಯಾವ ಶಿಕ್ಷೆಯಾಗಲಿ, ಕ್ರಮವಾಗಲಿ ನಡೆಯದೆ ಇಂತಹವರಿಗೆ ಮತ್ತೆ ಮತ್ತೆ ಅವಕಾಶಗಳು ದೊರೆಯುತ್ತಲೇ ಇರುತ್ತವೆ. ಪ್ರಶ್ನೆ ಪತ್ರಿಕೆಗಳ ಬಯಲಾಗುವ ಹೊಲಸು ಕೆಲಸ ಈ ಗಂಗೋತ್ರಿಯಿಂದ ಸದಾ ಹರಿದಿರುವುದು ಗಮನಾರ್ಹ. ಲಂಗು-ಲಗಾಮಿಲ್ಲದಿದ್ದರೆ ಈ ಗಂಗೋತ್ರಿ ಕೊಚ್ಚೆಯಾಗಿ ಇಡೀ ರಾಜ್ಯದ ಶಿಕ್ಷಣ ವ್ಯವಸ್ಥೆಗಳನ್ನು ಕೊಳೆಗೇರಿಗಳನ್ನಾಗಿ ಪರಿವರ್ತಿಸುವಲ್ಲಿ ಆಶ್ಚರ್ಯವಿಲ್ಲ. ಸುಧಾರಣೆ ಮೊದಲು ಇಲ್ಲಿ ಆಗಬೇಕು.

ಪ್ರತಿಸಾರಿ ಒಂದಲ್ಲ ಒಂದು ರೀತಿ ಪರೀಕ್ಷೆಗಳನ್ನು ಬಯಲು ಮಾಡುವಲ್ಲಿ ಜುಜುಬಿ ಕಾಸಿನ ಆಸೆಯ ಶಿಕ್ಷಕರ ಪಾತ್ರ ಇದ್ದೇ ಇದೆ. ಯಾರು ಯಾರು ಎಂತೆಂತಹ ಭ್ರಷ್ಟ ಕಾರ್ಯಗಳನ್ನು ಮಾಡುತ್ತಾರೆಂಬ ಕಥೆಯು ಶಿಕ್ಷಣ ಇಲಾಖೆಗಾಗಲಿ, ಪೊಲೀಸರಿಗಾಗಲಿ, ಜಾಗೃತ ದಳಕ್ಕಾಗಲೀ ಗೊತ್ತೇ ಇರುವುದಿಲ್ಲ ಎಂದೇನೂ ಇಲ್ಲ. ವಿದ್ಯಾರ್ಥಿಗಳಿಂದ ಕೆಲ ದಲ್ಲಾಳಿಗಳವರೆಗೂ ಇಂತಿಂಥವರೇ ಪ್ರಶ್ನೆಪತ್ರಿಕೆ ಮಾರಾಟ ಮಾಡುತ್ತಾರೆ. ವರ್ಷವರ್ಷ ಅವರ ಬಳಿಗೆ ದುಂಬಾಲು ಬೀಳುವುದನ್ನು ಬೆಂಗಳೂರಲ್ಲಿ ಕಾಣಬಹುದು. ಈ ವಿಷ ಜಾಲ ಗೊತ್ತಿದ್ದೂ ಗೊತ್ತಿದ್ದೂ ಕೈಬಿಟ್ಟಿರುವುದೇ ನಮ್ಮ ದುರಂತ.

ಇಂತಹ ಕೃತ್ಯದಲ್ಲಿ ಶಾಮೀಲಾದ ಶಿಕ್ಷಕ ಅಥವಾ ಯಾರೇ ಅಧಿಕಾರಿಯನ್ನು ಮುಲಾಜು ಇಲ್ಲದೆ, ಕ್ಷಮೆ ಇಲ್ಲದೆ ಕೆಲಸದಿಂದ ತೆಗೆದು ಹಾಕಬೇಕು. ನಂತರ ಕಠಿಣ ಕ್ರಮ ಅವರ ಮೇಲಾಗಬೇಕು. ಸರ್ಕಾರ ಈ ದಿಶೆಯಲ್ಲಿ ಯೋಚಿಸದೇ ಸದಾ ಕಾಲ ಪರೀಕ್ಷೆ ಮುಂದೂಡುವುದು, ಪ್ರಶ್ನೆ ಪತ್ರಿಕೆ ಬದಲಾಯಿಸುವುದನ್ನೇ ಮುಂದುವರಿಸಿಕೊಂಡು ಬಂದಿದೆ. ಹೀಗಾಗಿ ಸಪ್ಲಿಮೆಂಟರಿ ಪ್ರಶ್ನೆಪತ್ರಿಕೆಗಳು ಇಂದು ಬಯಲಾಗಿವೆ. ಅಂತಿಮ ಪರೀಕ್ಷೆಯ ಪತ್ರಿಕೆಗಳೂ ಬಯಲಾಗುತ್ತವೆ. ಇದು ಹೀಗೇ ಸಾಗುತ್ತದೆ.



...ಅಧ್ಯಕ್ಷ ಸ್ಥಾನದಿಂದ ದ. ಕ. ಜಿಲ್ಲಾಧಿಕಾರಿ
...' ದಾ ಸ್, ಎ. ರುಜಾರಿಯೋ, ವಿಕಲ ಕೈ

'ಪುಟಾಣಿ ಚೋರ'

ಕೋಟೇಶ್ವರ, ಅ. 10- ಇಲ್ಲಿನ ವೈದ್ಯರಾದ ಡಾ। ಪಿ. ಕೆ. ಕರುಣಾಕರ ನಂಬಿಯಾರರ ಚಿಕಿತ್ಸಾಲಯಕ್ಕೆ ಚಿಕಿತ್ಸೆಗೆ ಬಂದ ಓರ್ವ ಮಹಿಳೆಯ ಪಾಕೇಟನಿಂದ ಆಶ್ಚರ್ಯಕರ ರೀತಿಯಲ್ಲಿ ಹಣ ಲಪಟಾಯಿಸಲಾಗಿದೆ.

ಆಕೆಯನ್ನು ಪರೀಕ್ಷಿಸಲೆಂದು ಒಳ ಕರೆದ ಡಾ। ಪಿ. ಕೆ. ಕೆ. ನಂಬಿಯಾರ್ ಹಾಗೂ ಡಾ। ಸುಧಾಕರ ನಂಬಿಯಾರರು ಆಕೆಯನ್ನು ಪರೀಕ್ಷಿಸಿ ಹೊರ ಬಿಟ್ಟ ಕೆಲವೇ ಕ್ಷಣದಲ್ಲಿ ಪುಟಾಣಿಯೊಬ್ಬ ಓಡುತ್ತಿದ್ದನೆನ್ನಲಾಗಿದೆ. ಹೊರಬಂದ ಆಕೆ ಪಾಕೇಟ್ ತೆರೆದಾಗ ಹಣ ಮಂಗಮಾಯ! ಎಲ್ಲಿ ಹುಡುಕಿದರೂ ಹುಡುಗ ನಾಪತ್ತೆ. ಹೇಗಿದೆ ಪುಟಾಣಿಗಳ ಚಾತುರ್ಯ!

ಉಡುಪಿಯಲ್ಲಿ ರಂಗವಲ್ಲಿ, ಕೀರ್ತನೆ ಸ್ಪರ್ಧೆ

ಉಡುಪಿ, ಅ. 10- ಇಲ್ಲಿಯ ಅಂಬಲಪಾಡಿ ಯುವಕ ಮಂಡಲದ ಆಶ್ರಯದಲ್ಲಿ ನವರಾತ್ರಿಯ ಅಂಗವಾಗಿ ಮಹಿಳೆಯರಿಗಾಗಿ ರಂಗವಲ್ಲಿ ಹಾಗೂ ದಾಸರ ಕೀರ್ತನೆ ಸ್ಪರ್ಧೆಗಳು ಅನುಕ್ರಮವಾಗಿ ಈ ತಿಂಗಳ ತಾ. 17 ಹಾಗೂ 20ರಂದು ಅಂಬಲಪಾಡಿ ದೇವಸ್ಥಾನದಲ್ಲಿ ಜರಗಲಿವೆ.

ಈ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಯಾವುದೇ ವಯೋಮಿತಿ ಇಲ್ಲ. ಪ್ರತಿ ಸ್ಪರ್ಧೆಯಲ್ಲೂ ಮೂರು ಬಹುಮಾನಗಳಿದ್ದು ಅವುಗಳನ್ನು ವಿಜಯದಶಮಿಯಂದು ಜರಗುವ ಸಮಾರಂಭದಲ್ಲಿ ವಿಜೇತರಿಗೆ ವಿತರಣೆ ಮಾಡಲಾಗುವುದು. ಸ್ಪರ್ಧೆಯ ಪ್ರವೇಶ ಪತ್ರಗಳನ್ನು ಹಾಗೂ ಇತರ ಹೆಚ್ಚಿನ ಮಾಹಿತಿಗಳನ್ನು 'ಭಾಸ್ಕರ ರಾವ್ ಕಿದಿಯೂರು, ಪ್ರಧಾನ ಕಾರ್ಯದರ್ಶಿ. ಯುವಕ ಮಂಡಲ (ರಿ), ಅಂಬಲಪಾಡಿ-576103'- ಇವರಿಂದ ಪಡೆಯಬಹುದು. ಪ್ರವೇಶ ಪತ್ರ ತಲುಪಿಸಲು ಅ. 15 ಅಂತಿಮ ದಿನಾಂಕ.

ವಸ್ತು ಪ್ರದರ್ಶನ

ಇದೇ ಯುವಕ ಮಂಡಲದ ಆಶ್ರಯದಲ್ಲಿ ಅ. 18ರಂದು ಶುಕ್ರವಾರ ಬೆಳಿಗ್ಗೆ ಗಂಟೆ 10ರಿಂದ ರಾತ್ರಿ ಗಂಟೆ 8ರ ತನಕ ಅಂಬಲಪಾಡಿ ದೇವಸ್ಥಾನದಲ್ಲಿ ವಸ್ತು ಪ್ರದರ್ಶನವೊಂದು ಜರಗಲಿದ್ದು ಇದರಲ್ಲಿ ಕೋಟೇಶ್ವರದ ಸೀತಾರಾಮ ಅಪ್ಪು ಅವರ ಸಂಗ್ರಹದ ಅಮೂಲ್ಯ ಪ್ರಾಚ್ಯ ವಸ್ತುಗಳನ್ನು ಪ್ರದರ್ಶಿಸಲಾಗುವುದೆಂದು ಅಂಬಲಪಾಡಿ ದೇವಸ್ಥಾನದ ಆಡಳಿತ ಮೊಕ್ತೇಸರ ಅಣ್ಣಾಜಿ ಬಲ್ಲಾಳರು ತಿಳಿಸಿದ್ದಾರೆ.

ಮಾಯಿಪ್ಪಾಡಿಯಲ್ಲಿ ಸ್ವೋದ್ಯೋಗ ತರಬೇತಿ ಕೇಂದ್ರಕ್ಕೆ ಅನುಮತಿ

(ಮುಂಗಾರು ವರದಿ)

ಕಾಸರಗೋಡು, ಅ. 10- ವಿದ್ಯಾಸಂಪನ್ನರಾದ ನಿರುದ್ಯೋಗಿ ಯುವಕರಿಗೆ ಉದ್ಯೋಗ ಒದಗಿಸುವ ದೃಷ್ಟಿಯಿಂದ ಮಾಯಿಪ್ಪಾಡಿಯಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಸ್ವೋದ್ಯೋಗ ತರಬೇತಿ ಕೇಂದ್ರವೊಂದನ್ನು ಆರಂಭಿಸಲು ಕೇರಳ ಸರಕಾರವು ಅನುಮತಿಯನ್ನಿತ್ತಿದೆ.

ಅಕ್ಟೋಬರ್ ತಿಂಗಳಲ್ಲಿ ಆರಂಭಗೊಳ್ಳುವ ಈ ಕೇಂದ್ರವು ಧರ್ಮಸ್ಥಳ ಸ್ವೋದ್ಯೋಗ ತರಬೇತಿ ಕೇಂದ್ರ, ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್‌ಗಳ ಆಶ್ರಯದಲ್ಲಿ ಕಾರ್ಯವೆಸಗುತ್ತದೆ. 45ರಿಂದ 60 ದಿನಗಳ ವರೆಗಿನ ತರಬೇತಿಯಲ್ಲಿ ವಿದ್ಯಾವಂತ ಯುವಕರಿಗೆ ಕೃಷಿ ವಿಚಾರಗಳಲ್ಲದೆ ಸಣ್ಣ ಕೈಗಾರಿಕೋದ್ಯಮಗಳ ಬಗ್ಗೆಯೂ ಮಾಹಿತಿ-ತರಬೇತಿ ನೀಡಲಾಗುವುದು. ಈ ತರಬೇತಿಯ ನಂತರ ಅಭ್ಯರ್ಥಿಗಳು ಸ್ವಂತ ಉದ್ಯೋಗಕ್ಕೆ ತೊಡಗಲು ಸಹಕಾರಿಯಾಗುವುದು.

ಜಿಲ್ಲಾಧಿಕಾರಿ ಕೆ. ನಾರಾಯಣನ್ ಅಧ್ಯಕ್ಷರಾಗಿರುವ ಸಮಿತಿಯು ಈ ಕೇಂದ್ರದ ಉಸ್ತುವಾರಿಯನ್ನು ನೋಡಿಕೊಳ್ಳುವುದು.

ಧರ್ಮಸ್ಥಳದಲ್ಲಿರುವ ಇಂತಹ ತರಬೇತಿ ಕೇಂದ್ರದಲ್ಲಿ ತರಬೇತಿಗೊಂಡ ಹಲವು ಯುವಕರು ದ. ಕ. ಜಿಲ್ಲೆಯ ಹಲವು ಕಡೆಗಳಲ್ಲಿ ಸ್ವಂತ ಉದ್ಯೋಗಗಳಲ್ಲಿ ತೊಡಗಿ ತಮ್ಮ ಜೀವನ ಮಾರ್ಗವನ್ನು ತಾವೇ ಕಂಡುಕೊಂಡ ಉದಾಹರಣೆಗಳು ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

...ಮೂಡಿಸಲು ...ತ್ರೆ ಅಗತ್ಯ'

...ಪುತ್ತೂರು ಪುರಸಭಾಧ್ಯಕ್ಷ ಕೆ. ರಾಮಚಂದ್ರ ಶೆಟ್ಟಿ, ಸಂತ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲ್ ರೆ। ಫಾ। ಜೆ. ಬಿ. ಡ'ಸೋಜ ಹಾಗೂ ಹಾಜಿ ಸಿಮಾಮ್ ಮುಸ್ಲಿಯಾರ್ ಅವರು ಆಗಮಿಸಿದ್ದರು.

ಸಂಸ್ಥೆಯ ಅಧ್ಯಕ್ಷ ಯು. ಅಬ್ದುಲ್ ರಹಿಮಾನ್ ಅವರು ಸ್ವಾಗತಿಸಿ, ಕಾರ್ಯದರ್ಶಿ ಜ। ಮೊಹಮ್ಮದ್ ಅವರು ವಂದಿಸಿದರು.

ಪರ್ಮಿಟ್ ಸೀರಿಯಲ್ ನೀಡಲು ಆಗ್ರಹ

ಮಂಗಳೂರು, ಅ. 10- ಪ್ರಾಮಾಣಿಕವಾಗಿ ದುಡಿಯುವ ರಿಕ್ಷಾ ಚಾಲಕರ ಮೇಲೆ ಅಧಿಕಾರಿಗಳು ಕೇಸು ದಾಖಲು ಮಾಡಿ ಕಿರುಕುಳ ನೀಡುವುದನ್ನು ದ. ಕ ... ಜಿಲ್ಲಾ ಆಟೋರಿಕ್ಷಾ ಚಾಲಕರ ...

ನವರಾತ್ರಿ ಉತ್ಸವ

ಮಂಗಳೂರು, ಅ. 10- 'ಶ್ರೀ ಮಾರಿಕಾಂಬ ದೇವಸ್ಥಾನ' ಅಡು ಮರೋಳಿ ಇಲ್ಲಿ ವರ್ಷಂಪ್ರತಿ ಜರಗುವ ನವರಾತ್ರಿ ಮಹೋತ್ಸವವು ಇದೇ ತಾ. 15-10-85 ರಿಂದ ತಾ. 23-10-85ರ ತನಕ ವಿವಿಧ ಪೂಜೆ ಪುರಸ್ಕಾರಗಳೊಂದಿಗೆ ಜರಗಲಿರುವುದು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಪ್ರತಿ ದಿನವೂ ಹರಿದಾಸ್ ದೇವಕಿ ತನಯ ಕೂಡ್ಲು ಇವರಿಂದ ಹರಿಕಥಾ ಕಾಲಕ್ಷೇಪವು ಜರಗಲಿರುವುದು ಎಂದು ದೇವಸ್ಥಾನದ ಪ್ರಕಟಣೆಯೊಂದು ತಿಳಿಸಿದೆ.

ಆಕಾಶವಾಣಿ

ಮಂಗಳೂರು

(ಶನಿವಾರ) 12-10-85

ಬೆಳಿಗ್ಗೆ 6.35 ವಂದನಾ ಸಿ. ಎಸ್. ಶಾಸ್ತ್ರಿ, ಜಿ. ಆರ್. ಜಯಾ, 7.00 ಭಾರತೀಯ ಕಾರ್ಯಕ್ರಮ, 7.15 ಸಂಗೀತ ಸುಧಾ, 7.45 ಸಂಗೀತಪಾಠ, 8.21 ಚಿತ್ರಗೀತೆ, 8.30 ಶಾಸ್ತ್ರೀಯ ಸಂಗೀತ.

ಮಧ್ಯಾಹ್ನ 12.30 ಶಾಸ್ತ್ರೀಯ ಸಂಗೀತ, 1.00 ಕನ್ನಡ ಗೀತೆಗಳು, 1.20 ಚಿತ್ರಗೀತೆ, 2.10 ಚಿಲಿಪಿಲಿ-ನಾರಾಯಣಗುರು ಸ್ವಾಮಿ ಇಂಗ್ಲಿಷ್ ಮೀಡಿಯಂ ಶಾಲಾ ವಿದ್ಯಾರ್ಥಿಗಳು ಮೂಲ್ಕಿ ಇವರಿಂದ.

ಸಂಜೆ 5.30 ಶಾಸ್ತ್ರೀಯ ಸಂಗೀತ, 6.05 ಕಾರ್ಯಕ್ರಮ ವಿವರಣೆ, 6.15 ಯುವತಿ ಮಂಡಲ ಸುರತ್ಕಲ್ ಇವರಿಂದ ತುಳು ಕಾರ್ಯಕ್ರಮ, 6.50 ಕೃಷಿರಂಗ, 7.20 ಚಿತ್ರಗೀತೆ, 7.45 ಯುವವಾಣಿ, 8.05 ಕ್ರೀಡಾವಾರ್ತೆ, 9.16 ಕೊಂಕಣಿ ಕಾರ್ಯಕ್ರಮ.

ಕಂಪ್ಯೂಟರ್ ಬಳಕೆಯಿಂದ ನಿರುದ್ಯೋಗಿಗಳ ಸೃಷ್ಟಿ

ಮುಂಗಾರು
ಶನಿವಾರ, ಅಕ್ಟೋಬರ್ 19, 1985

ಜನತಾ ತಿಪ್ಪರಲಾಗದ ರಾಜಕೀಯ ದ್ರೋಹ

ಖಾಸಗಿ ರಂಗದಲ್ಲಿ ಹೊಸದಾಗಿ ಎರಡು ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಲು ಅನುಮತಿ ಕೊಟ್ಟಿರುವ ತನ್ನ ಸರಕಾರದ ಕ್ರಮವನ್ನು ಸಮರ್ಥಿಸಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ವೈದ್ಯರ ಅಗತ್ಯದ ಬಗ್ಗೆಯೂ ದೇಶಕ್ಕೆ ವಿದೇಶ ವಿನಿಮಯ ಗಳಿಸಿಕೊಡುವ ಬಗ್ಗೆಯೂ ಕಪ್ಪು ಹಣವನ್ನು ಶಿಕ್ಷಣ ರಂಗದಲ್ಲಿ ಹೂಡುವ ಬಗ್ಗೆಯೂ ಸುದೀರ್ಘ ವ್ಯಾಖ್ಯಾನವನ್ನು ಮಾಡಿದ್ದಾರೆ.

ಜನತಾ ಪಕ್ಷವು ಹಿಂದೆಂದೋ ಕ್ಯಾಪಿಟೇಶನ್ ಶುಲ್ಕದ ಪಿಡುಗನ್ನು ವಿರೋಧಿಸಿದ್ದೇನೋ ನಿಜ. ಅಂದು ರಾಜ್ಯಕ್ಕೆ ಬೇಕಾದಷ್ಟು ಮೆಡಿಕಲ್ ಕಾಲೇಜುಗಳಿದ್ದವು. ಆದರಿಂದು ಮೆಡಿಕಲ್ ಕಾಲೇಜುಗಳು ಬೇಕಾಗಿವೆ. ಅದ್ದರಿಂದ ಸೀಟು ಶುಲ್ಕವೂ ಇರಲಿ ಎಂಬರ್ಥದ ಮಾತನ್ನು ಹೆಗಡೆಯವರು ಆಡಿದ್ದಾರೆ. 'ಕ್ಯಾಪಿಟೇಶನ್ ಎನು ಮಹಾ ಸಾಮಾಜಿಕ ಸಮಸ್ಯೆ. ಬುದ್ಧಿವಂತರು ಓದಿಕೊಳ್ಳುತ್ತಾರೆ. ಓದಲಿ ಬಿಡಿ' ಎಂಬ ಮಾತನ್ನು ಹೆಗಡೆ ಎರಡನೆ ಬಾರಿ ಮುಖ್ಯಮಂತ್ರಿಯಾದ ಹೊಸದರಲ್ಲಿ ಸಂದರ್ಶನವೊಂದರಲ್ಲಿ ಆಡಿದ್ದರು. ಇಂದು ಕೂಡ ಅದೇ ಧಾಟಿಯಲ್ಲಿ ಮಾತನಾಡಿದ್ದಾರೆ.

ಕ್ಯಾಪಿಟೇಶನ್ ಶುಲ್ಕವನ್ನು ಒಂದೇ ಏಟಿಗೆ ತೆಗೆದುಹಾಕುವುದಾಗಿ ಜನರಿಗೆ ಚುನಾವಣಾ ಪ್ರಣಾಳಿಕೆಯ ರೂಪದಲ್ಲಿ ಆಶ್ವಾಸನೆಯೊಂದನ್ನು ಕೊಟ್ಟು, ಅಧಿಕಾರಕ್ಕೆ ಬಂದಾಗ ಕ್ಯಾಪಿಟೇಶನ್ ಶುಲ್ಕವನ್ನು ಐದು ವರ್ಷಗಳಲ್ಲಿ ಹಂತಗಳಲ್ಲಿ ರದ್ದು ಪಡಿಸುವ ನಿಯಮಾವಳಿಯ ವಿಧೇಯಕವೊಂದನ್ನು ಜನತಾ ಸರಕಾರ ತಂದದ್ದು ಈ ನಾಡಿನ ವಿಚಾರ ಶೀಲರೆಲ್ಲರ ನೆನಪಿನಲ್ಲಿ ಹಸಿ ಹಸಿಯಾಗಿದೆ. ವಿದ್ಯೆಯ ವ್ಯಾಪಾರ ಎಂಬುದು ಮಹಾ ಸಾಮಾಜಿಕ, ಶೈಕ್ಷಣಿಕ ನೀಚತನವನ್ನು ಜೀವಂತವಾಗಿ ಉಳಿಸಿಕೊಂಡು ಸ್ವಂತಕ್ಕೆ ಆರ್ಥಿಕವಾಗಿಯೂ ರಾಜಕೀಯವಾಗಿಯೂ ಲಾಭ ಮಾಡಿಕೊಳ್ಳುವ ದೊಡ್ಡ ದುಷ್ಕೃತ್ಯವೇ. ಮೋಸದ ವ್ಯವಹಾರವೇ ಐದು ವರ್ಷಗಳಲ್ಲಿ ಸೀಟು ಶುಲ್ಕ ರದ್ದು ಮಾಡುವ ಮಸೂದೆಯೆಂಬ ಶಿಖಂಡಿ.

ಜನತಾ ಸರಕಾರ ಅಷ್ಟಕ್ಕೇ ನಿಲ್ಲಲಿಲ್ಲ. ಪ್ರತಿಪಕ್ಷ ಸಾಲಿನಲ್ಲಿ ಕೂತಿದ್ದ ವೇಳೆ ಕ್ಯಾಪಿಟೇಶನ್ ಸಂಸ್ಕೃತಿಯನ್ನು ಬೆಳೆಸಿದ್ದಕ್ಕಾಗಿ ಕಾಂಗ್ರೆಸ್ ಸರಕಾರವನ್ನು ಟೀಕೆಗೆ ತೆಗೆದುಕೊಳ್ಳುತ್ತಿದ್ದ ಪ್ರಭೃತಿಗಳು ಇಂದು ಅಧಿಕಾರದಲ್ಲಿ ಕೂತು ಕಾಂಗ್ರೆಸ್ ಸರಕಾರಗಳು ಮಾಡಿದ ಅನ್ಯಾಯವನ್ನೇ ಮಾಡುತ್ತಿದ್ದಾರೆ. ಖಾಸಗಿ ಕ್ಷೇತ್ರದಲ್ಲಿ ಮತ್ತೆರಡು ವೈದ್ಯಕೀಯ ಕಾಲೇಜು ತೆರೆಯಲು ಅವಕಾಶ ಮಾಡಿಕೊಟ್ಟು ಹಣ ಮಾಡಿಕೊಳ್ಳಲು ಅನುಕೂಲ ಮಾಡಿ ಕೊಟ್ಟಿದ್ದಾರೆ.

ಮಂಡ್ಯದ ಹಾಗೂ ಕೋಲಾರದ ಎರಡು ಮೆಡಿಕಲ್ ಕಾಲೇಜುಗಳ ವಿಚಾರ ಮೋಸದ ಕತೆಯೇ ಆಗಿದೆ. ಈ ಕಾಲೇಜುಗಳಿಗೆ ಪರವಾನಿಗೆ ಕೊಡುವ ಬಗ್ಗೆ ಈ ವರ್ಷದ ಜೂನ್ ತಿಂಗಳ 11ರಂದು ಹೆಗಡೆ [illegible] ಚರ್ಚೆ ನಡೆಯಿತು. ಅದನ್ನು ಪತ್ರಿಕೆಗಳು ಬಹಿರಂಗಗೊಳಿಸಿದವು. ಕ್ಯಾಪಿಟೇಶನ್ [illegible] ಮೂವರು ಮಂತ್ರಿಗಳು ತುಟಿ [illegible] ಮೆಡಿಕಲ್ ಕಾಲೇಜುಗಳ ಸಮರ್ಥನೆಯನ್ನು ಹೆಗಡೆ ಬಾಯಿಂದ ಕೇಳಿದರು. ಶಿಕ್ಷಣ ಸಚಿವ ಎಂ. ರಘುಪತಿಯವರು ಮಾತ್ರ ಕ್ಯಾಪಿಟೇಶನ್ ಆಧಾರದ ಮೆಡಿಕಲ್ ಕಾಲೇಜುಗಳ ಪ್ರಸ್ತಾಪವನ್ನು ಖಂಡ ತುಂಡವಾಗಿ ವಿರೋಧಿಸಿದರು. ಈ ವಿಚಾರವನ್ನು ಪತ್ರಿಕೆಗಳು ಹೊರ ಹಾಕಿದಾಗ ಮೆಡಿಕಲ್ ಕಾಲೇಜಿನ ವಿಚಾರವೇ ಚರ್ಚೆಗೆ ಬಂದಿಲ್ಲವೆಂದು ಆರೋಗ್ಯ ಸಚಿವ ಡಾ। ಎಚ್. ಎಲ್. ತಿಮ್ಮೇಗೌಡರು ತಿಪ್ಪೆ ಸಾರಿಸುವ ಪ್ರಯತ್ನ ನಡೆಸಿದರು.

ಇಂದು ಜನತಾ ಸರಕಾರದ ಕ್ಯಾಪಿಟೇಶನ್ ಶುಲ್ಕ ಸಂಬಂಧಿಯಾದ ಬೂಟಾಟಿಕೆ ಬಹಿರಂಗವಾಗಿದೆ. ಎರಡು ಮೆಡಿಕಲ್ ಕಾಲೇಜುಗಳಿಗೆ ಅನುಮತಿಯನ್ನು ಸರಕಾರ ಬಹಿರಂಗವಾಗಿ ಪ್ರಕಟಿಸಿದೆ. ಅಷ್ಟೇ ಅಲ್ಲದೇ "ಅಂದು ಕ್ಯಾಪಿಟೇಶನ್ ಅಗತ್ಯವಿರಲಿಲ್ಲ. ಇಂದು ಅಗತ್ಯವಿದೆ" ಎಂದು ಮುಖ್ಯ ಮಂತ್ರಿ ಹೆಗಡೆಯವರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಕಪ್ಪು ಹಣವನ್ನು ಶಿಕ್ಷಣ ಪ್ರಸಾರಕ್ಕೆ ವಿನಿಯೋಗಿಸುವ ಸಮಾಜೋದ್ಧಾರದ ಮಾತನ್ನಾಡುತ್ತಿದ್ದಾರೆ. ಡಾಕ್ಟರರನ್ನು ದಾದಿಯರನ್ನೂ ಕೊಲ್ಲಿ ದೇಶಗಳಿಗೆ ಕಳಿಸಿ ವಿದೇಶ ವಿನಿಮಯ ಸಂಪಾದಿಸಿ ದೇಶವನ್ನು ಶ್ರೀಮಂತಗೊಳಿಸುವ ಕನಸನ್ನು ಕಾಣುತ್ತಿದ್ದಾರೆ. ತಮ್ಮ ನಿಲುವಿನ ಸಮರ್ಥನೆಗಾಗಿ ಹೆಗಡೆಯವರು ಜನತಾ ಪಕ್ಷವು ಚುನಾವಣಾ ಪ್ರಣಾಳಿಕೆಯಲ್ಲಿ ಕ್ಯಾಪಿಟೇಶನ್ ನಿಷೇಧದ ಮಾತನ್ನೇ ಆಡಿಲ್ಲ ಎಂದಿದ್ದಾರೆ. ಜನರನ್ನು ಮೂರ್ಖರೆಂದು ತಿಳಿಯಬೇಡಿ ಎಂದು ನಾವು ಹೆಗಡೆಯವರಿಗೆ ಹೇಳಬೇಕಾಗಿದೆ.

ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಶಿಕ್ಷಣದ ಸೀಟು ಶುಲ್ಕದ ವಿಚಾರದಲ್ಲಿ ಜನತಾ ಪಕ್ಷವು ಹೊಡೆದಿರುವ ಈ ತಿಪ್ಪರಲಾಗವು ಕರ್ನಾಟಕ ರಾಜಕಾರಣದ ಈ ದಶಕದ ಮಹಾ ಮೋಜಿನ, ಮಹಾ ಮೋಸದ ವ್ಯಾಪಾರಕ್ಕೊಂದು ದೃಷ್ಟಾಂತ. ಈ ಪಕ್ಷ ಯಾವುದರಿಂದ ಆದದ್ದು, ಅದನ್ನು ಆಳುವವರು ಯಾರು ಎಂಬ ಕೋರೆ ಹಲ್ಲುಗಳೆಲ್ಲವನ್ನೂ ಬಿಚ್ಚಿ ತೋರಿಸುವ ವಿಚಾರ ಇದಾಗಿದೆ. ಹೆಗಡೆಯವರು ವಿದ್ಯೆಯ ವ್ಯಾಪಾರವನ್ನು ಸಮರ್ಥಿಸುತ್ತಿರುವುದು ಮಹಾ ರಾಜಕೀಯ ನೀಚತನವಾಗಿದೆ. ಕ್ಯಾಪಿಟೇಶನ್ ಶುಲ್ಕ ಅಂದು ದೊಡ್ಡ ಸಾಮಾಜಿಕ ಪಿಡುಗಾಗಿದ್ದು ಅದನ್ನು ಒಂದೇ ಏಟಿಗೆ ನಿಷೇಧಿಸಬೇಕು ಎಂಬ ನಿಲುವು, ಜನತೆಗೆ ಕೊಟ್ಟ ಭರವಸೆ ಜನತಾ ಪಕ್ಷದ್ದಾಗಿದ್ದರೆ ಇಂದು ಅದೇ ಕ್ಯಾಪಿಟೇಶನ್ ಶುಲ್ಕ ಸಂಗ್ರಹಿಸುವ ಕಾಲೇಜುಗಳು ಸಮಾಜಕ್ಕೆ ಅಗತ್ಯ ಎನ್ನುವ ಹೆಗಡೆಯವರ ಮಾತು ಕರ್ನಾಟಕದ ಸಾಮಾನ್ಯ ಜನತೆಗೆ, ಅವರಿಗೆ ಮತ ಹಾಕಿದ ಮತದಾರರಿಗೆ ಮಾಡಿದ ರಾಜಕೀಯದ್ರೋಹವಾಗಿದೆ.

ಜನತಾ ಪಕ್ಷದ ಮುಖ್ಯ ಮಂತ್ರಿಯೂ ಇತರ ನಾಯಕರೂ ಹೊಡೆದಿರುವ ಈ ತಿಪ್ಪರಲಾಗಕ್ಕೆ ಜನತೆಗೆ ಸಮಜಾಯಿಷಿ ಹೇಳಬೇಕಾದ, ಸ್ಪಷ್ಟೀಕರಣ ನೀಡಬೇಕಾದ ದೊಡ್ಡ ಹೊಣೆಗಾರಿಕೆ ಆ ಪಕ್ಷಕ್ಕೆ ಉಂಟು. ಹೆಗಡೆಯವರು ಇಂದು ತೋರಿಸುತ್ತಿರುವ ಸೀಟು ಶುಲ್ಕ ಸಮರ್ಥನೆಯ ಕೋರೆ ಹಲ್ಲು ಯಾರದ್ದು, ಅದು ಜನತಾ ಪಕ್ಷದ್ದೇ ಎಂದು ಆ ಪಕ್ಷದವರು ಹೇಳಬೇಕು.

ಸಚಿವ ದೇಶಪಾಂಡೆ ಅವರಿಂದ

ಕುಮಟಾ: 20 ಅಂಶ ಕಾರ್ಯಕ್ರಮ ವೀಕ್ಷಣೆ

ಕಾರವಾರ, ಅ. 18 – ಕುಮಟಾ ತಾಲೂಕಿನಲ್ಲಿ ಇತ್ತೀಚೆಗೆ ರಾಜ್ಯ ಸಣ್ಣ ಕೈಗಾರಿಕಾ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಆರ್. ವಿ. ದೇಶಪಾಂಡೆ ಅವರ ಸಮ್ಮುಖದಲ್ಲಿ ನಡೆದ 20 ಅಂಶ ಕಾರ್ಯಕ್ರಮಗಳ ಪ್ರಗತಿ ವೀಕ್ಷಣೆ ಸಭೆಯಲ್ಲಿ ಅಧಿಕಾರಿಗಳ ಬೇಜವಾಬ್ದಾರಿತನದ ಹೂರಣ ಸಂಪೂರ್ಣ ಹೊರ ಬಿದ್ದಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಆರ್. ವಿ. ದೇಶಪಾಂಡೆ ಅವರು ಮೊಟ್ಟ ಮೊದಲಿಗೆ ಸಾರ್ವಜನಿಕರಿಗೆ ಈ ಸಭೆಯಲ್ಲಿ ಪಾಲ್ಗೊಳ್ಳಲು ಪ್ರವೇಶ ಒದಗಿಸಿರುವುದು ಒಂದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು ಅಧಿಕಾರಿಗಳ ಮಧ್ಯೆ ಏನೇ ಭಿನ್ನಾಭಿಪ್ರಾಯಗಳಿದ್ದರೂ ಸರ್ಕಾರದ ಯೋಜನೆಗಳ ಪ್ರಯೋಜನವನ್ನು ದುರ್ಬಲರಿಗೆ ಜನಸಾಮಾನ್ಯರಿಗೆ ಒದಗಿಸುವಾಗ ನೀವೆಲ್ಲರೂ ಒಂದಾಗಿ ಕೆಲಸ ಮಾಡಬೇಕೆಂದು ಕರೆಯಿತ್ತರು.

ನಂತರ ಕುಮಟಾ ತಾಲೂಕಿನ ಪ್ರತಿಯೊಂದು ಇಲಾಖೆಯ ಕಾರ್ಯ-ಪ್ರಗತಿಯನ್ನು ಪರಿಶೀಲಿಸಿ ಸಾರ್ವಜನಿಕರ ದೂರುಗಳನ್ನು ಸ್ವೀಕರಿಸಿದ ಸಚಿವರು ಈ ದೂರುಗಳತ್ತ ತುರ್ತಾಗಿ ಗಮನ ಹರಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿ ಆರ್. ಸುರೇಶ್ ಮತ್ತು ಕುಮಟಾ ವಿಭಾಗಾಧಿಕಾರಿ ಅಶೋಕ ಕುಮಾರ್ ಮನೋಳಿ ಅವರು ಉಪಸ್ಥಿತರಿದ್ದರು.

...ದೊಂದೇ ...ುವ ದಾರಿ

...ಎಸ್. ಎಫ್. ಐ. ಘಟಕದ ಉದ್ಘಾ...ಾ ಸಮಾರಂಭದ ಅಂಗವಾಗಿ ಕಾರ್ಯ...ಮದ ಕೊನೆಗೆ 'ಕತ್ತೆ ಮೋತಿ' ಎಂಬ ...ಸರಿನ ಬೀದಿ ನಾಟಕವನ್ನು ಪ್ರದರ್ಶಿಸ...ಯಿತು. ಬಂಡಾಯ ಸಾಹಿತ್ಯ ಸಂಘಟನೆ ...ಾಗೂ ಎಸ್. ಎಫ್. ಐ. ಘಟಕದ ಕಲಾ...ದರು ಸೇರಿ ರಂಜಿಸಿದ ಈ ನಾಟಕವು ...ುದುರೆ ಮೋತಿ' ಘಟನೆಯನ್ನು ಬಹು ...ಾರ್ಮಿಕವಾಗಿ ವಿಡಂಬಿಸುತ್ತಿತ್ತು.

...ೈತ ಜಾಥಾಕ್ಕೆ ...ದಸಂಸ' ಸ್ವಾಗತ

ಮೈಸೂರು, ಅ. 18 – ರಾಜ್ಯ ರೈತ ...ಘ ಏರ್ಪಡಿಸಿರುವ 'ರೈತ ಜಾಥಾ' ...ನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ...್ವಾಗತಿಸಿ ಬೆಂಬಲಿಸಿದೆ.

...ರೈತ ಜಾಥಾ ವಿವಿಧ ಊರುಗಳಿಗೆ ...ಾಗ ಆಯಾ ಊರಿನ ದಲಿತ ಸಂಘರ್ಷ ...ಿತಿ ಸದಸ್ಯರು ಸ್ವಾಗತಿಸಬೇಕೆಂದು ...ಿತಿ ಅಧ್ಯಕ್ಷ ದೇವನೂರು ಮಹಾದೇವ ...ಿದ್ದಾರೆ.

ದಾವಣಗೆರೆ ಸಿ.ಡಿ.ಬಿ ಅವ್ಯವಹಾರ: ಕ್ರಮಕ್ಕೆ ಆಗ್ರಹ

ದಾವಣಗೆರೆ, ಅ. 18– ರಾಜ್ಯದಲ್ಲಿ ಜನತಾ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಟಿ. ಜಿ. ಶಿವಯೋಗಪ್ಪ ಅವರ ನೇತೃತ್ವದಲ್ಲಿ ಪುನರ್ರಚನೆ ಮಾಡಲಾದ ನಗರಾಭಿವೃದ್ಧಿ ಮಂಡಳಿಯು ಖಾಸಗಿ ಬಡಾವಣೆಗಳನ್ನು ನಿರ್ಮಿಸಲು ನಿರಪೇಕ್ಷಣಾ (ಎನ್. ಓ. ಸಿ.) ಪತ್ರಗಳನ್ನು ನೀಡುವಾಗ ಹಲವಾರು ಅಕ್ರಮಗಳನ್ನು ನಡೆಸಿದ್ದಾರೆಂದು ಜನತಾ ಪಕ್ಷದ ಕಾರ್ಯಕರ್ತ ಬಿ. ಎಂ. ಪ್ರಭುಸ್ವಾಮಿ ಆರೋಪಿಸಿದ್ದಾರೆ.

ದೇವರಾಜ ಅರಸು ಬಡಾವಣೆಯಲ್ಲಿನ ಬೆಲೆಬಾಳುವ ನಿವೇಶನಗಳನ್ನು ಹರಾಜು ಮಾಡದೆ, ತುಂಡು ನಿವೇಶನಗಳನ್ನಾಗಿ ಪರಿವರ್ತಿಸಿ ಹಂಚಲಾಗಿದೆ ಎಂದು ಆರೋಪಿಸಿರುವ ಅವರು ಮುಖ್ಯ ಮಂತ್ರಿಗಳಿಗೆ ಹಾಗೂ ನಗರಾಭಿವೃದ್ಧಿ ಸಚಿವರಿಗೆ ಮನವಿ ಸಲ್ಲಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಪ್ರಸ್ತುತ ಮಂಡಳಿಯು ನಿವೇಶನ ರಹಿತರಿಗೆ ನಿವೇಶನಗಳನ್ನು ಹಂಚುವುದನ್ನು ಧಿಕ್ಕರಿಸಿ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಸುಳ್ಳು ಪ್ರಮಾಣ ಪತ್ರಗಳ ಆಧಾರದ ಮೇಲೆ ಅಧಿಕಾರಿಗಳಿಗೆ ಮತ್ತು ಪ್ರಾಧಿಕಾರದ ಸದಸ್ಯರಿಗೆ ನಿವೇಶನ ನೀಡಿದೆ ಎಂದು ಅವರು ತಮ್ಮ ಮನವಿ ಪತ್ರದಲ್ಲಿ ಆರೋಪಿಸಿದ್ದಾರೆ.

ಶಿಕ್ಷಣ ದರ್ಶನ ವಿಚಾರ ಸಂಕಿರಣ

ಕುಮಟಾ, ಅ. 18 – ಕೇಂದ್ರ ಸರ್ಕಾರದ ಹೊಸ ಶಿಕ್ಷಣದ ಸವಾಲು–ನೀತಿ ದರ್ಶನ ಎನ್ನುವ ವಿಷಯದ ಮೇಲೆ ಶೈಕ್ಷಣಿಕ ವಿಚಾರ ಸಂಕಿರಣವೊಂದು ಇತ್ತೀಚೆಗೆ ಇಲ್ಲಿ ನಡೆಯಿತು.

ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಶಿರಸಿಯ ಕಲೆ ಮತ್ತು ವಿಜ್ಞಾನ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ್ ಎಲ್. ಟಿ. ಶರ್ಮ ಅವರು ವಹಿಸಿದ್ದರು.

ಈ ವಿಚಾರ ಸಂಕಿರಣದಲ್ಲಿ ಇಲ್ಲಿನ ಸಾಮಾಜಿಕ ಕಾರ್ಯಕರ್ತರು, ಶಿಕ್ಷಕರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

ಖಾಸಗಿ ವೈದ್ಯಕೀಯ ಕಾಲೇಜ್ ಪ್ರಾರಂಭಕ್ಕೆ ಎಸ್.ಎಫ್.ಐ. ವಿರೋಧ

ಬೆಂಗಳೂರು, ಅ. 18– ಡಾ॥ ರಾಜ್ ಕುಮಾರ್ ಆಯೋಗದ ಶಿಫಾರಸ್ಸನ್ನು ಉಲ್ಲಂಘಿಸಿ ಜನತಾ ಸರಕಾರವು ಪುನಃ ಎರಡು ಕ್ಯಾಪಿಟೇಷನ್‌ಫೀ ಆಧಾರಿತ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದನ್ನು ಎಸ್. ಎಫ್. ಐ. ರಾಜ್ಯ ಸಮಿತಿ ವಿರೋಧಿಸಿದೆ.

ವೈದ್ಯರ ಕೊರತೆಯ ನೆಪವೊಡ್ಡಿ ಮುಖ್ಯಮಂತ್ರಿಗಳು ಖಾಸಗಿ ಹಾಗೂ ಮತೀಯ ಸಂಸ್ಥೆಗಳಿಗೆ ಶಿಕ್ಷಣ ರಂಗದಲ್ಲಿ ಸುಲಿಗೆ ಮುಂದುವರಿಸಲು ಅವಕಾಶ ನೀಡುತ್ತಿರುವುದು ವಿಷಾದನೀಯ ಎಂದು ಅದು ತಿಳಿಸಿದೆ.

ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್ ರಕ್ಷಿಸಿ

ಪ್ರಿನ್ಸಿಪಾಲ್ ಗಿರೀಶ್ ಕಾಸರವಳ್ಳಿಯ ರಾಜೀನಾಮೆಯಿಂದ ಉಂಟಾಗಿರುವ ಬಿಕ್ಕಟ್ಟನ್ನು ಕೂಡಲೆ ಪರಿಹರಿಸಿ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯನ್ನು ರೂಪಿಸುವುದರೊಂದಿಗೆ ಕರ್ನಾಟಕದ ಹೆಸರಾಂತ ಸಂಸ್ಥೆಯಾಗಿರುವ ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್‌ನ್ನು ಸರ್ಕಾರವೇ ವಹಿಸಿಕೊಂಡು ಅಭಿವೃದ್ಧಿ ಪಡಿಸಬೇಕೆಂದು ಎಸ್. ಎಫ್. ಐ. ಒತ್ತಾಯಿಸಿದೆ.

ಜನತೆ ತೀರ್ಪು ನೀಡಲಿ: ಸರ್ಕಾರಗಳ ಬಗ್ಗೆ ರಾವ್

ಮಡಿಕೇರಿ, ಅ. 18– "ತಮ್ಮ ಹಾಗೂ ...ಗಡೆ ಅವರ ಮೂರು ವರ್ಷಗಳ ಆಡಳಿ...ವನ್ನು ತುಲನೆ ಮಾಡಿ ಯಾವ ...ಸರಕಾರ ಉತ್ತಮ ಎಂದು ಜನತೆ ತೀರ್ಪು ...ನೀಡಲಿ" ಎಂದು ಮಾಜಿ ಮುಖ್ಯಮಂತ್ರಿ ...ರ್.ಗುಂಡೂರಾವ್ ಅವರು ಹೇಳಿದ್ದಾರೆ.

ಇಲ್ಲಿನ ಸುದರ್ಶನ ಅತಿಥಿ ಗೃಹದಲ್ಲಿ ಇತ್ತೀಚೆಗೆ ಪತ್ರಕರ್ತರನ್ನು ಭೇಟಿ ಮಾಡಿ ಅವರು [illegible] ರು. ರಾಜ್ಯದಲ್ಲಿ ...ಸಲು ಮಡಿಕೇರಿಯಲ್ಲಿ ಭಾರೀ ಬಹಿರಂಗ ಸಭೆಯೊಂದನ್ನು ನಡೆಸಲಾಗುವುದು ಎಂದು ವಿವರಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎನ್.ಕೆ. ಮಾಚಯ್ಯ ಶಾಸಕ ಡಿ. ಪಿ. ಚಿಣ್ಣಪ್ಪ, ಸುಂಟಿಕೊಪ್ಪ ಪುರಸಭಾಧ್ಯಕ್ಷ ಕೆ. ಎಂ. ಇಬ್ರಾಹಿಂ ಮೊದಲಾದವರು ಉಪಸ್ಥಿತರಿದ್ದರು.

ಮುಂಗಾರು

ಮಂಗಳವಾರ, ಅಕ್ಟೋಬರ್ 29, 1985

ಈ ಕ್ರಾಂತಿ ಮಾಡಿ

...ನ್ಯಯ ವಿಕ್ರಯವನ್ನು ಕೇಂದ್ರ ಸರಕಾರ ತೀವ್ರ ವಿರೋಧಿಸುವುದೆಂದು ಕೇಂದ್ರದ ಮಾನವ ...ಭಿವೃದ್ಧಿ ಸಚಿವ ಪಿ.ವಿ. ನರಸಿಂಹ ...ಹೇಳಿದ್ದಾರೆ. ಅತಿ ಹೆಚ್ಚು ಸವಾಲು ಕೂಗುವ ಶಿಕ್ಷಣವನ್ನು ವಿಕ್ರಯಿಸುವುದನ್ನು ಕೇಂದ್ರವು ...ದು ಅಪರಾಧವಿದ್ದಾರೆ. ಇತ್ತ ಕರ್ನಾಟಕದ ...ಚಿವ ಬಿ. ರಾಚಯ್ಯನವರು ಬೆಂಗಳೂರಲ್ಲಿ ... ಸಮ್ಮೇಳನವೊಂದರಲ್ಲಿ ಮಾತನಾಡುತ್ತ ...ಂತಿ ಸಾಹಿತ್ಯವನ್ನು ಪಠ್ಯ ಪುಸ್ತಕವಾಗಿ ಮಾಡ... ಕರೆಕೊಟ್ಟಿದ್ದಾರೆ.

ಈ ಎರಡೂ ಸುದ್ದಿಗಳು ನಮ್ಮ ರಾಜಕಾರಣಿ... ...ಯಂಕರ ಬೂಟಾಟಿಕೆಯ ಮಾತು ಹಾಗೂ ...ಕೆನಾನೆ ಅತ್ಯುತ್ತಮ ಸಾಕ್ಷಿಗಳಾಗಿವೆ. ನಮ್ಮ ...ರಗಳು ಪ್ರಚಂಡ ಜನಹಿತದ ಆಗರಗಳೆಂದೂ ...ಹಿತಾಸಕ್ತಿ ಬಿಟ್ಟರೆ ಬೇರೆ ಚಿಂತೆಯೇ ಅವುಗ... ...ವೆಂದೂ ಜನರನ್ನು ನಂಬಿಸಿ ಮೋಸ ಮಾಡುವ ...ಜಾಲಗಳಾಗಿವೆ ಇವು. ದಿನ ಬೆಳಗಾಗುವುದ... ...ೆ ಈ ನಾಡನ್ನು ಸುಖೀ ರಾಜ್ಯವಾಗಿ ಮಾಡುವ ...ತ ಕಳಕಳಿ ತಮಗಿದೆಯೆಂದು ತೋರಿಸುವ ಅವು ...ವ್ವ ನಿದರ್ಶನಗಳಾಗಿವೆ.

...ರು ಕಾಲು ಶತಮಾನದ ಹಿಂದೆ ವೈದ್ಯಕೀಯ ...ಯ ವ್ಯಾಪಾರದಂಗಡಿಯೊಂದು ದಕ್ಷಿಣ ಕನ್ನಡ ...ದ ಮೂಲೆಯಲ್ಲೊಂದೆಡೆ ಸದ್ದಿಲ್ಲದೆ ತೆರೆಯಿತು. ...ಯ ಸಮಾಜದ ಮಹಾಸಂಕಟವಾಗಿ ಪರಿಣ... ...ದ ಕ್ಯಾಪಿಟೇಶನ್ ಕ್ಯಾನ್ಸರನ್ನು ಹುಟ್ಟಿಸಿದ ಕಳಂಕ ...ಗೆ ಈ ಜಿಲ್ಲೆಯ ಜನ ಇಂದು ಹೊತ್ತು ದಿನ... ...ನಾಚಿಕೆಯಿಂದ ತಲೆತಗ್ಗಿಸಿ ಬಾಳಬೇಕಾಗಿದೆ. ...ಕ್ಯಾಪಿಟೇಶನ್ ರೋಗ ದೇಶದ ಹಲವು ಕಡೆಗ... ...ದೆ. ಹಣದ ಮೂಟೆ ತುಂಬಿಸಿಕೊಳ್ಳಲು ಎಂ. ...ಸ್ ಹಾಗೂ ಬಿ.ಇ. ಡಿಗ್ರಿಗಳನ್ನು ಹರಾಜು ...ವುದು ಬಲು ಸುಲಭವಾದ ಒಳ್ಳೆಯ ಉಪಾಯ ...ಕಂಡು ಕೊಂಡಿರುವ ಹಲವು ಮಂದಿ ಕರ್ನಾಟ... ...ಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇ... ...ಡಿಗ್ರಿ ಹರಾಜು ಅಂಗಡಿಗಳನ್ನು ತೆರೆದಿ... ...ಯಿಂದಾಗಿಯೂ ಈ ಪಿಡುಗು ಹಬ್ಬಿದೆ. ...ನ್ನು ತಾವೇ ಹೊಂದಿಸಿಕೊಳ್ಳುವ ಕಾಲೇಜು ...ಟ್ಟದ ಹೆಸರಿಂದ ಅವುಗಳನ್ನು ಅಲ್ಲಿ ...ಸುತ್ತಿದೆ. ಈ ರೋಗ ಕೇರಳಕ್ಕೂ ದಬ್ಬಿದೆ. ...ಸರಕಾರ ಇತ್ತೀಚೆ ತಾನೇ 15 ಪಾಲಿಟೆಕ್ನಿಕ್ ...ಖಾಸಗಿ ರಂಗದಲ್ಲಿ ಸ್ಥಾಪಿಸಲು ಅನುಮತಿ ...ಕೊಟ್ಟಿತು. ಅವುಗಳಲ್ಲಿ ಸೀಟು ಶುಲ್ಕ ಸಂಗ್ರ... ...ಅವಕಾಶವಿದೆಯೆಂಬುದು ನಿಸ್ಸಂದೇಹ. ಈ ...ರ ಬಂದಾಗ ಅಲ್ಲಿನ ಮುಖ್ಯಮಂತ್ರಿ ಕರ್ನಾಟಕ ...ನಡೆಯುತ್ತಿರುವ ಸೀಟು ಶುಲ್ಕ ಸಂಗ್ರಹವನ್ನು ...ತನ್ನ ನಡವಳಿಕೆಯನ್ನು ಸಮರ್ಥಿಸಿ... ...ಕ್ಯಾಪಿಟೇಶನ್ ಶುಲ್ಕ ಪಡೆಯುವ ಮೆಡಿ... ...ಗಳು ಮುಂಬಯಿ ಮಹಾನಗರದ ...ತೆರೆದಿವೆ. ದೇಶದ ಇತರೆಲ್ಲ ...ಈ ರೋಗ ಬೇಗನೇ ಹಬ್ಬಬಹುದು.

...ಕಲ್ ಹಾಗೂ ಇಂಜಿನಿಯರಿಂಗ್ ಸೀಟು ...ನ್ನು ಮಾರುವ ಈ ವ್ಯವಸ್ಥೆಯಿಂದ ...ನ ಸಾಮಾನ್ಯರಿಗೆ ಸಾಮಾಜಿಕವಾಗಿ ... ಮಾಡಿದಂತಾಗಿದೆ. ಜನರ ...ಬೇಕಾದ ವೈದ್ಯಕೀಯ ಸೇವೆಯೂ ಅಭಿವೃದ್ಧಿಯ ವಿನ್ಯಾಸವನ್ನು ಹಾಕಿಕೊಟ್ಟು ನಿರ್ಮಾಣದ ಉಸ್ತುವಾರಿ ವಹಿಸುವ ಇಂಜಿನಿಯರಿಂಗ್ ವೃತ್ತಿಯೂ ಹಣವುಳ್ಳವರ ಮಕ್ಕಳ ತೊತ್ತಾಗಿಸಿ ಇಷ್ಟಪಟ್ಟ ಹಣವನ್ನು ಆ ಮೂಲಕ ಸಾಮಾಜಿಕ ಪ್ರತಿಷ್ಠೆಯನ್ನೂ ತರುವ ದಂಧೆಯೆನಿಸಿದೆ.

ಸಾಮಾಜಿಕ ಸ್ವಾಸ್ಥ್ಯಕ್ಕೂ ನಾಡಿನ ಅಭಿವೃದ್ಧಿಗೂ ಬೇಕಾದ ಪರಿಣತಿಯನ್ನೂ ವಿದ್ಯೆಯನ್ನೂ ಜನಸಮುದಾಯಕ್ಕೆ ಒದಗಿಸುವ ಹೊಣೆಗಾರಿಕೆಯನ್ನು ಹೀಗೆ ಖಾಸಗಿ ವ್ಯಾಪಾರಿಗಳ ಕೈಯಲ್ಲಿ ಕೊಡದೆ ತಾನೇ ವಹಿಸಿಕೊಂಡು ಸಾಮಾಜಿಕ ನ್ಯಾಯ ಒದಗಿಸುವ ಹೊಣೆಗಾರಿಕೆ ಸರಕಾರದ್ದಾಗಿತ್ತು. ಹೊಸ ಬಾತಿ ನಿಯಮದನ್ವಯ ಹಿಂದುಳಿದವರಿಗೂ ಪರಿಶಿಷ್ಟ ಜಾತಿ ಹಾಗೂ ಪಂಗಡಗಳವರಿಗೂ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಸೀಟುಗಳನ್ನು ಹಂಚಿಕೊಟ್ಟಿದ್ದರೆ ಇಂದು ಈ ದಂಧೆಗಳಲ್ಲಿರುವವರ ಅರ್ಧಾಂಶಕ್ಕಿಂತಲೂ ಹೆಚ್ಚು ಮಂದಿ ಕೆಳವರ್ಗಕ್ಕೆ ಸೇರಿದವರಾಗಿ ಒಂದು ದೊಡ್ಡ ಸಾಮಾಜಿಕ ಕ್ರಾಂತಿಯೇ ನಡೆಯುತ್ತಿತ್ತು. ಅಂಥ ಅವಕಾಶಕ್ಕೆ ಸರಕಾರ ಬಾಗಿಲು ಮುಚ್ಚಿ ಕೂತಿದೆ. ಶ್ರೀಮಂತರೆನಿಸಿದ ಪ್ರತಿಷ್ಠಿತ ವರ್ಗದವರ ಮಕ್ಕಳು ಮಾತ್ರ ವೈದ್ಯರೂ ಇಂಜಿನಿಯರರೂ ಆಗಿ ಈ ಸಮಾಜವನ್ನು ಆಳುವ ಹಕ್ಕು ಅವರಿಗೆ ಪಿತ್ರಾರ್ಜಿತವಾಗಿ ಬರುತ್ತಿದೆ.

ಈ ದೇಶದ ಎಲ್ಲ ಜನರಿಗೂ ಕಡ್ಡಾಯವಾಗಿ ಶಿಕ್ಷಣವನ್ನು ಒದಗಿಸುವ ಹಾಗೂ ವೃತ್ತಿ ಸಂಬಂಧವಾದ ತಾಂತ್ರಿಕ ಶಿಕ್ಷಣದಲ್ಲಿ ಕೆಳವರ್ಗದವರಿಗೆ ಮೀಸಲಾತಿ ಒದಗಿಸಿ ಅವರ ಅಭ್ಯುದಯಕ್ಕೆ ಚಾಲನೆ ಕೊಡಬೇಕಾದ ಹೊಣೆಗಾರಿಕೆ ಸರಕಾರದ್ದಾಗಿತ್ತು. ಅದನ್ನು ಯಾವ ಸರಕಾರವು ಸಮರ್ಪಕವಾಗಿ ಮಾಡಿಲ್ಲ. ಮೂವತ್ತೈದು ವರ್ಷಗಳಿಗೂ ಹೆಚ್ಚು ಸಮಯ ಈ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ಎಂದೂ ಈ ಬಗ್ಗೆ ಗಂಭೀರವಾದ ಹೆಜ್ಜೆಯನ್ನು ಇರಿಸಿದ್ದೇ ಇಲ್ಲ. ನರಸಿಂಹರಾಯರಂತವರು ಆಗೊಮ್ಮೆ ಈಗೊಮ್ಮೆ ಕ್ಯಾಪಿಟೇಶನ್ ವಿರೋಧಿ ಬೂಟಾಟಿಕೆಯ ಮಾತನ್ನು ಆಡಿದ್ದು ಬಿಟ್ಟರೆ ಬೇರಾವ ಕೆಲಸವೂ ಆಗಿಲ್ಲ. ಅವರದ್ದೇ ಪಕ್ಷದ ಸರಕಾರವಿದ್ದ ವೇಳೆ ಕರ್ನಾಟಕದಲ್ಲಿ ಕ್ಯಾಪಿಟೇಶನ್ ಕಾಲೇಜುಗಳು ಅಣಬೆಗಳಂತೆ ಹುಟ್ಟಿಕೊಂಡವು.

ಬಿ. ರಾಚಯ್ಯನವರ ಮಾತೂ ಅಷ್ಟೇ. ಅವರೀಗ ಕ್ರಾಂತಿ ಸಾಹಿತ್ಯವನ್ನು ಪಠ್ಯ ಪುಸ್ತಕ ಮಾಡುವ ಮಾತಾಡುತ್ತಿದ್ದಾರೆ. ಮೊದಲು ಅವರ ಸರಕಾರ ಪ್ರಾಥಮಿಕ ಶಿಕ್ಷಣವನ್ನು ಈ ರಾಜ್ಯದ ಎಲ್ಲಾ ಹಳ್ಳಿಗಳ ಎಲ್ಲಾ ಬಡವರ ಮಕ್ಕಳಿಗೆ ಒದಗಿಸುವ ಕೆಲಸ ಮಾಡಬೇಕು. ಅದೇ ದೊಡ್ಡ ಕ್ರಾಂತಿಯಾಗುತ್ತದೆ. ಎರಡನೆಯದಾಗಿ ತಾಂತ್ರಿಕ ವಿದ್ಯೆಯನ್ನು ಹರಾಜು ಹಾಕುವ ಅಂಗಡಿಗಳನ್ನೆಲ್ಲಾ ವಶಕ್ಕೆ ತೆಗೆದುಕೊಂಡು ಕೆಳವರ್ಗದ ಮಕ್ಕಳಿಗೆ ನ್ಯಾಯ ಸಮ್ಮತವಾದ ಸೀಟುಗಳನ್ನು ಹಂಚಿಕೊಡಲಿ. ಅದು ಇನ್ನೊಂದು ಕ್ರಾಂತಿಯಾಗುತ್ತದೆ. ಕ್ಯಾಪಿಟೇಶನ್ ಶುಲ್ಕ ನಿಷೇಧದ ಚಾಪೆಯನ್ನು ಕೊಟ್ಟು ಆ ಮೇಲೆ ಅಂಥ ಮಾತೇ ಆಡಿಲ್ಲವೆಂದು ಮಂಚನೆ ಮಾಡಿರುವ ಈ ಸರಕಾರದ ಈ ಸಚಿವರು ಕ್ರಾಂತಿ ಸಾಹಿತ್ಯವನ್ನು ಪಠ್ಯಪುಸ್ತಕ ಮಾಡುವ ಮಾತಾಡುವುದನ್ನು ನೋಡಿ ಈ ನಾಡಿನ ಜನ ನಗಬಹುದು.

ಜಿಲ್ಲಾಮಟ್ಟದ ಒಕ್ಕಲಿಗರ ಸಮ್ಮೇಳನ

...ಸಾಕ್ಷರತೆ ಸಾಧಿಸಿ ಸಂಪ್ರದಾಯ ...ವಿರೋಧಿಸಿ: ಸಚಿವ ದೇವೇಗೌಡ

ಹೊನ್ನಾವರ, ಅ. 28- ಶೈಕ್ಷಣಿಕವಾಗಿ ...ಮಾಜಿಕವಾಗಿ ಮುಂದುವರಿದು ಸಾಂಪ್ರ...ಯಿಕ ಚೌಕಟ್ಟುಗಳನ್ನು ತೊರೆದು ...ಂದಾಗ ಮಾತ್ರ ಮನುಷ್ಯರಲ್ಲಿ ಆರ್ಥಿಕ ...ದೃತೆ ತನ್ನಿಂದ ತಾನೇ ಒದಗಿ ಬರು...ತ್ತದೆ. ಆರ್ಥಿಕ ಶಕ್ತಿ ಹೆಚ್ಚಾದಾಗ ಸಮಾ...ದ ಕಟ್ಟುಪಾಡುಗಳು ಬದಲಾಗುತ್ತವೆ ...ಂದು ರಾಜ್ಯದ ಲೋಕೋಪಯೋಗಿ ...ಚಿವ ಹೆಚ್. ಡಿ. ದೇವೇಗೌಡ ಅವರು ...ಹೇಳಿದ್ದಾರೆ.

ಅವರು ಅಕ್ಟೋಬರ್ 27ರಂದು ...ಲ್ಲಿ ಸಮಾವೇಶಗೊಂಡಿದ್ದ ಉತ್ತರ ...ನ್ನಡ ಜಿಲ್ಲಾ ಒಕ್ಕಲಿಗರ ಸಂಘದ ಮಹಾ...ವೇಶನದ ಅಧ್ಯಕ್ಷ ಸ್ಥಾನದಿಂದ ಮಾತ...ನಾಡುತ್ತಿದ್ದರು.

ನಿರಕ್ಷರತೆ ಮತ್ತು ಸಾಂಪ್ರದಾಯ...ಗಳು ಮನುಷ್ಯನನ್ನು ಶೋಷಣೆಗೆ ಒಯ್ಯು...ತ್ತದೆ. ಸಾಕ್ಷರತೆ ಬೆಳೆಸಿಕೊಂಡು ಸಾಂಪ್ರದಾಯಿಕತೆಯ ಚೌಕಟ್ಟಿನಿಂದ ಹೊರಬರಲು ಪ್ರಯತ್ನಿಸಬೇಕಾಗಿದೆ. ಮೊಟ್ಟ ಮೊದಲು ಬೇಕಾದುದು ರಾಜಕೀಯ ಸಂಘಟನೆ. ...ದೀಗ ನಿಮ್ಮಿಂದ ಸಾಧ್ಯವಾಗಿದೆ. ಆದರೆ ...ನಿಮ್ಮ ಈ ಶಕ್ತಿಯನ್ನು ಮುರಿಯಲು ...ಹಲವು ಪ್ರತಿಗಾಮಿಗಳು, ಪಟ್ಟಭದ್ರರು ಪ್ರಯತ್ನಿಸಬಹುದು. ಆದರೆ ಎಂದೆಂದೂ ...ವಿಚಲಿತರಾಗದೆ ನಿಮ್ಮ ನಿಮ್ಮಲ್ಲಿಯ ಉಪ...ಜಾತಿಯನ್ನು ಮೀರಿ ಒಂದಾಗಲು ಪ್ರಯ...ತ್ನಿಸಬೇಕು ಎಂದು ಒಕ್ಕಲಿಗರ ಸಮೂಹಕ್ಕೆ ...ಸಚಿವರು ಕರೆ ಕೊಟ್ಟರು.

ನೀವು ಇತರ ಸಮಾಜದ ಜೊತೆ ಸರಿ...ಸಮಾನರಾಗಿ ಬಾಳಲು ಆಶಿಸುವುದು ಖಂ...ಡಿತಾ ತಪ್ಪಲ್ಲ. ಆದರೆ ನಿಮ್ಮ ಹೋರಾಟ ...ಇತರ ಜನಾಂಗವನ್ನು ತುಳಿಯುವುದಕ್ಕೆ ...ಶೋಷಿಸುವುದಕ್ಕೆ ಅಲ್ಲ ಎನ್ನುವುದೇ ...ನಾವೆಲ್ಲಾ ಮೆಚ್ಚುವಂತಹದು. ನೀವು ನಾವು ...ಎಲ್ಲ ದುಡಿವ ಜನಕ್ಕೆ ಉಳಿದವರಿಗೆ ಸರಿ...ಸಮಾನರಾಗಿ ಬಾಳುವ ಹಕ್ಕು, ಆತ್ಮವಿಶ್ವಾಸ ನಮಗೂ ಇದೆ ಎಂಬುದನ್ನು ತೋರಿಸಲು ಒಕ್ಕಲಿಗರು ಮುಂದಾಗಿರುವುದು ಶುಭ ಸೂಚನೆ. ಆದರೆ ಪರಿಶಿಷ್ಟ ವರ್ಗಕ್ಕೆ ನಿಮ್ಮನ್ನು ಸೇರಿಸಿದಕ್ಕಾಗಿ ನಿಮ್ಮ ಸಮಗ್ರ ಉದ್ಧಾರ ಆಗಿ ಬಿಡುತ್ತದೆ ಎಂದು ಭಾವಿಸಬೇಕಿಲ್ಲ. ಇಂತಹ ಸಂಘಟನೆಯ ಮೂಲಕ ರಾಜಕೀಯ ಆರ್ಥಿಕ ಶೈಕ್ಷಣಿಕ ವಿಕಾಸ ಪಡೆಕೊಂಡಾಗಲೇ ನಿಜವಾದ ಅರ್ಥದಲ್ಲಿ ನಿಮ್ಮ ಉದ್ಧಾರ ಸಾಧ್ಯ ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮೀನುಗಾರಿಕಾ ಸಚಿವ ಭೈರೇಗೌಡ ಅವರು ಮಾತನಾಡುತ್ತ, ನಿಮಗಿಂತ ಹಿಂದುಳಿದವರು ಹೆಚ್ಚು ವಿದ್ಯಾವಂತರಾಗಿದ್ದಾರೆ. ನಿಮ್ಮ ಈ ಸಂಘಟನೆಗೆ ಮತ್ತು ಜನಾಂಗಕ್ಕೆ ಬಲ ಒದಗಬೇಕಾದರೆ ಶಿಕ್ಷಣ ಅತ್ಯವಶ್ಯವೆಂದು ಅಭಿಪ್ರಾಯಪಟ್ಟರು.

ಸಮಾವೇಶವನ್ನು ಉದ್ಘಾಟಿಸಿದ ಸಣ್ಣ ಕೈಗಾರಿಕಾ ಸಚಿವ ಆರ್. ವಿ. ದೇಶಪಾಂಡೆ ಅವರು ಎಲ್ಲ ದೃಷ್ಟಿಯಿಂದಲೂ ಈ ಒಕ್ಕಲಿಗ ಸಮಾಜ ಅತಿ ಹಿಂದುಳಿದಿದೆ. ಈ ಸಮಾಜ ಮುಂದೆ ಬರಬೇಕಾದರೆ ಈ ಸಂಘಟನೆ ಕೈಕೊಂಡ ಮುಂದಿನ ಪ್ರಾಮಾಣಿಕ ಪ್ರಯತ್ನದ ಅಗತ್ಯವಿದೆ ಎಂದರು.

ಪ್ರಾರಂಭದಲ್ಲಿ ಕುಮಟಾ ಕ್ಷೇತ್ರದ ಶಾಸಕ ಎನ್. ಎಚ್. ಗೌಡ ಅವರು ಸ್ವಾಗತಿಸಿದರು. ಒಕ್ಕಲಿಗರ ಸಂಘದ ಅಧ್ಯಕ್ಷ ಕೆ. ಜಿ. ಗೌಡರು ವರದಿ ಅರ್ಪಿಸಿದರು. ಶಂಭು ಗೌಡ ಅವರು ನೆನಪಿನ ಕಾಣಿಕೆ ನೀಡಿದರು. ನ್ಯಾಯವಾದಿ ಕೆ. ಟಿ. ಗೌಡ ಅವರು ಮಾತನಾಡಿದರು.

ಈ ಅಧಿವೇಶನದಲ್ಲಿ ಜಿಲ್ಲೆಯ ಮೂಲೆ ಮೂಲೆಗಳಿಂದ 12 ಸಾವಿರಕ್ಕೂ ಮಿಕ್ಕಿ ಒಕ್ಕಲಿಗರು ಪಾಲ್ಗೊಂಡಿದ್ದರು.

ಸಿಂಡಿಕೇಟ್ ಬ್ಯಾಂಕಿನಿಂದ ರಫ್ತುಗಾರರ ತರಬೇತಿ

ಬೆಂಗಳೂರು, ಅ. 28– ಯಶಸ್ವಿ ರಫ್ತಿನ ಸಮಗ್ರ ಪರಿಚಯ ಹಾಗೂ ರಫ್ತುಗಾರರ ತರಬೇತಿ ಕಾರ್ಯಕ್ರಮವೊಂದು ಇಂದಿಲ್ಲಿ ಆರಂಭಗೊಂಡಿತು. ಸಿಂಡಿಕೇಟ್ ಬ್ಯಾಂಕಿನ ಬೆಂಗಳೂರು ವಲಯದ ಉಪ ಜನರಲ್ ಮ್ಯಾನೇಜರ್ ಕೆ. ಸಿ. ಪೈ ಅವರು ಅದರ ಉದ್ಘಾಟನೆಯನ್ನು ನೆರವೇರಿಸಿದರು.

ಬ್ಯಾಂಕಿನ ಗ್ರಾಹಕರ ಸೇವೆಯನ್ನು ಉತ್ತಮ ಗೊಳಿಸುವುದು ಹಾಗೂ ರಾಷ್ಟ್ರೀಯ ಆದ್ಯತೆ ಮತ್ತು ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ರಫ್ತಿಗೆ ಹೆಚ್ಚಿನ ಒತ್ತು ನೀಡುವುದರ ಅಂಗವಾಗಿ ಈ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ರಫ್ತು ಬ್ಯಾಂಕಿಂಗಿನ ವಿಶೇಷ ಕ್ಷೇತ್ರವಾಗಿದ್ದು ಸಿಗುವ ಸವಲತ್ತುಗಳ ಪರಿಚಯ ಇಲ್ಲವಾದಲ್ಲಿ ರಫ್ತುಗಾರರಿಗೆ ಹಾನಿಯಾಗುವ ಸಂಭವವಿದೆ. ರಫ್ತು ವಿಧಾನ ಅವರಿಗೆ ತಿಳಿಯುವುದು ಅವಶ್ಯ ಎಂದ ಕೆ. ಸಿ. ಪೈ ಇದು ಸಿಂಡಿಕೇಟ್ ಬ್ಯಾಂಕಿನ ಪ್ರಥಮ ರಫ್ತು ಗ್ರಾಹಕರ ತರಬೇತಿ ಎಂದು ತಿಳಿಸಿದರು.

ಬ್ಯಾಂಕಿನ ಪ್ರಧಾನ ಕಚೇರಿಯ (ಮಣಿಪಾಲ) ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ ಹಾಗೂ ಬೆಂಗಳೂರು ವಲಯ ಕಚೇರಿಗಳ ಜಂಟಿ ಆಶ್ರಯದಲ್ಲಿ ಪ್ರಸ್ತುತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯು ಆಗಾಗ ಬದಲಾಗುತ್ತಿದ್ದು ಅದರ ಗರಿಷ್ಠ ಪ್ರಯೋಜನ ಪಡೆಯುವ ಸಲುವಾಗಿ ಅದನ್ನು ತಿಳಿದುಕೊಳ್ಳುವುದವಶ್ಯ. ವಾಣಿಜ್ಯ ಹಾಗೂ ಹಣಕಾಸು ವ್ಯವಹಾರಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ತೊಡಗಿದವರಿಗೆ ಪ್ರಾಯೋಗಿಕ ಜ್ಞಾನ ಅವಶ್ಯ ಎಂದವರು ಹೇಳಿದರು.

ವಿದೇಶ ವಿನಿಮಯವು ಬೆಲೆಗಳ ಏರಿಳಿತಕ್ಕೆ ಕಾರಣವಾಗುವ ಮೂಲಕ ಇತ್ತೀಚೆಗೆ ವಿಶೇಷ ಗಮನ ಸೆಳೆಯುತ್ತಿದೆ. ಸರಕಾರ ಕೂಡಾ ಆಮದು ರಫ್ತುಗಳನ್ನು ಉದಾರಗೊಳಿಸುತ್ತಿದ್ದು ಅದರಿಂದಾಗಿ ದೇಶದ ಆರ್ಥಿಕತೆ ಅಂತರರಾಷ್ಟ್ರೀಯ ಸ್ವರೂಪ ಪಡೆಯುತ್ತಿದೆ ಎಂದು ಕೆ.ಸಿ. ಪೈ ಹೇಳಿದರು.

ರಫ್ತುಗಾರರ ತರಬೇತಿಗೆ ಯಾವುದೇ ಅಂಗೀಕೃತ ಸಂಸ್ಥೆ ಇಲ್ಲವಾಗಿದ್ದು ಸಿಂಡಿಕೇಟ್ ಬ್ಯಾಂಕ್ ಆ ಕೊರತೆಯನ್ನು ತುಂಬಲು ಮುಂದಾಗಿದೆ ಎಂದವರು ತಿಳಿಸಿದರು.

ನ. 2ರಂದು ಮುಷ್ಕರ ನಡೆಸಲು ಮೆಸ್ ವರ್ಕರ್ಸ್ ಯೂನಿಯನ್ ನಿರ್ಧಾರ

ಮಂಗಳೂರು, ಅ. 28- ತಮ್ಮನ್ನು ಕಾಲೇಜಿನ ನೌಕರರೆಂದು ಪರಿಗಣಿಸಿ ಸರಕಾರದ ವೇತನ ಶ್ರೇಣಿಯಂತೆ ಸಂಬಳ ನೀಡಬೇಕೆಂದು ಆಡಳಿತ ವರ್ಗವನ್ನು ಒತ್ತಾಯಿಸಲು ಸುರತ್ಕಲ್‌ನ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಹಾಸ್ಟೆಲ್ ಮೆಸ್ ವರ್ಕರ್ಸ್ ಯೂನಿಯನ್ ನ. 2ರಿಂದ ಮುಷ್ಕರ ನಡೆಸಲು ನಿರ್ಧರಿಸಿದೆ.

ಯೂನಿಯನಿನ ಕಾರ್ಯದರ್ಶಿ ಪುರುಷೋತ್ತಮ ಶೆಟ್ಟಿ ಅವರು [illegible]

...ರ ಹಕ್ಕು ...ಗೊಳಿಸಿ

...ರಾವ್‌ಜೀರಾವ್. ಕುಶಾಲಪ್ಪ ಮುಂತಾ...ದವರು ಈ ಸಂದರ್ಭದಲ್ಲಿ ಉಪಸ್ಥಿತ...ರಿದ್ದರು. ಕೊನೆಯಲ್ಲಿ ಕಾರ್ಯದರ್ಶಿ ...ಶೇಖರ್ ಅವರು ವಂದಿಸಿದರು.



ಮುಂಗಾರು

ಶುಕ್ರವಾರ ಜುಲೈ 12, 1985

ವಿದ್ಯೆಯ ವ್ಯಾಪಾರ ಸಂಪೂರ್ಣ ನಿಲ್ಲಿಸಿ

ರಾಜ್ಯದ ಅನುದಾನ ಪಡೆಯದಿರುವ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಶುಲ್ಕ ವಿಲ್ಲದ ಸೀಟುಗಳ ಪ್ರಮಾಣವನ್ನು ಈಗಿನ ಶೇಕಡ 40ರಿಂದ ಶೇಕಡ 60ಕ್ಕೇರಿಸುವ ಆಜ್ಞೆಯನ್ನು ಕರ್ನಾಟಕ ಸರಕಾರ ಹೊರಡಿಸಿ ತಾಂತ್ರಿಕ ಶಿಕ್ಷಣ ರಂಗದಲ್ಲಿ ಸಾಮಾಜಿಕ ನ್ಯಾಯವನ್ನು ಹೆಚ್ಚಿಸುವ ಮಹತ್ವದ ಹೆಜ್ಜೆಯೊಂದನ್ನು ಶಿಕ್ಷಣ ಸಚಿವ ಎಂ. ರಘುಪತಿ ಅವರು ಇಟ್ಟಿದ್ದಾರೆ. ಸರಕಾರ ನಡೆಸಿರುವ ಪ್ರವೇಶ ಪರೀಕ್ಷೆಯ ಆಧಾರದಲ್ಲಿ ಸಿದ್ಧವಾದ ಅರ್ಹತೆಯುಳ್ಳವರ ಪಟ್ಟಿಯಿಂದ ಹಾಗೂ ಮೀಸಲಾತಿ ವಿಭಾಗದಲ್ಲಿ ಬರುವವರ ಪಟ್ಟಿಯಿಂದ ಈ ಶೇಕಡಾ 60 ಸ್ಥಾನಗಳಿಗೆ ಭರತಿ ಮಾಡಿಕೊಳ್ಳಲಾಗುವುದು. ಹೀಗೆ ಸರಕಾರ ನೇಮಿಸುವ ಶಿಕ್ಷಣಾರ್ಥಿಗಳ ಸಂಖ್ಯೆ ಈ ವರ್ಷ 3735 ಇರುತ್ತದೆ. ಒಟ್ಟು 22 ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಈ ಆಜ್ಞೆ ಅನ್ವಯವಾಗಲಿದ್ದು, ಅವುಗಳ ಆಡಳಿತಗಳವರು ತಾವೇ ಅಭ್ಯರ್ಥಿಗಳನ್ನು ಆರಿಸಬಹುದಾದ ಸೀಟುಗಳ ಸಂಖ್ಯೆ 2480.

ಅನುದಾನ ಪಡೆಯದ ಖಾಸಗಿ ಕಾಲೇಜುಗಳವರು ಸಂಸ್ಥೆಗಳನ್ನು ನಡೆಸುವುದಕ್ಕೆ ಅಪಾರ ಖರ್ಚಿದೆ ಎಂಬ ಸಬೂಬು ಹೇಳುತ್ತ ಈ ತನಕವೂ ವಿದ್ಯಾರ್ಥಿಗಳನ್ನು ಸುಲಿದು ಹಣದ ಚೀಲ ತುಂಬಿಸಿಕೊಂಡು ಬಂದಿದ್ದರೆನ್ನುವುದು ನಿರ್ವಿವಾದ. ಪ್ರತಿ ಕಾಲೇಜಿಗೂ ಸರಾಸರಿ 334 ರಷ್ಟು ಸ್ಥಾನಗಳಿದ್ದು ಮೊನ್ನೆ ಮೊನ್ನೆ ತನಕವೂ ವಸ್ತುತಃ ಈ ಎಲ್ಲಾ ಸ್ಥಾನಗಳಿಗೂ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಅಧಿಕಾರ ಅವುಗಳಿಗಿತ್ತು. ಪ್ರತಿ ವಿದ್ಯಾರ್ಥಿಯಿಂದ ಪ್ರತಿ ವರ್ಷವೂ ಸಂಗ್ರಹಿಸುವ ಹತ್ತಾರು ಸಾವಿರ ರೂಪಾಯಿಯ ಒಟ್ಟು ಮೊತ್ತವೇ ಕೋಟ್ಯಾಂತರ ರೂಪಾಯಿಯಾಗುತ್ತದೆ. ಸೀಟು ಶುಲ್ಕದ ಲೆಕ್ಕ ಬೇರೆಯೇ. ಈ ರಾಜ್ಯದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳವರು ವಿದ್ಯಾದಾನದ ಹೆಸರಿನಲ್ಲಿ ರಾಜ್ಯದ ಮಕ್ಕಳನ್ನು ಕಡೆಗಣಿಸಿ ಹೊರಗಿನವರ ಸೇವೆಯನ್ನು ಮಾಡಿಕೊಂಡು ಬಂದಿರುವುದನ್ನು ಸಚಿವ ರಘುಪತಿಯವರು ಅಂಕಿ ಅಂಶಗಳ ಸಮೇತ ಬಯಲುಗೊಳಿಸಿದ್ದಾರೆ. 81-82 ನೇ ಸಾಲಿನಲ್ಲಿ ಈ ಕಾಲೇಜುಗಳವರು ರಾಜ್ಯದ 2320 ಮಂದಿಗೂ, ಹೊರ ರಾಜ್ಯಗಳ 2972 ಮಂದಿಗೂ ಪ್ರವೇಶ ಕೊಟ್ಟವು. 1982-83ನೇ ಸಾಲಿನಲ್ಲಿ ರಾಜ್ಯದ 2965 ವಿದ್ಯಾರ್ಥಿಗಳಿಗೂ, ಹೊರಗಿನ 3758 ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶ ನೀಡಿದರು. 83-84 ನೇ ಸಾಲಿನಲ್ಲಿ ಈ ಸಂಖ್ಯೆ ಅನುಕ್ರಮವಾಗಿ 2552 ಮತ್ತು 4429. ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳವರ ವಿದ್ಯಾಪ್ರಸಾರದ ಕಳಕಳಿಯನ್ನು ಮೇಲಿನ ಅಂಕಿ ಅಂಶಗಳೇ ಸಾಬೀತು ಪಡಿಸುತ್ತವೆ.

ಎರಡು ವರ್ಷಗಳ ಹಿಂದೆ ರಾಜ್ಯ ಸರಕಾರ ತಂದ ಕ್ಯಾಪಿಟೇಷನ್ ಶುಲ್ಕ ನಿಯಂತ್ರಣ ಕಾಯಿದೆಯ ಪರಿಣಾಮವಾಗಿ ಈ ಕಾಲೇಜುಗಳವರು ಹೊರಗಿನವರಿಗೆ ಕೊಡುವ ಸೀಟುಗಳ ಸಂಖ್ಯೆ ಒಂದು ಸಾವಿರದಷ್ಟು ಕಡಿಮೆಯಾಯಿತೆಂದು ಶಿಕ್ಷಣ ಸಚಿವರು ಹೇಳುತ್ತಾರೆ.

ಇಂಜಿನಿಯರಿಂಗ್ ಕಾಲೇಜೊಂದನ್ನು ನಡೆಸಲು ವರ್ಷಕ್ಕೆ 30 ರಿಂದ 35 ಲಕ್ಷ ರೂಪಾಯಿ ಬೇಕ... ವೆಚ್ಚ ತಗಲುತ್ತದೆ. ಆವರ್ತಕ ವೆಚ್ಚ ಹಾಗೂ ಆದಾಯದ ಇವೆಲ್ಲವನ್ನು ಲೆಕ್ಕ ಹಾಕಿ ವೆಚ್ಚವನ್ನು ಸರಿದೂಗಿಸಲು ಅಗತ್ಯವುಳ್ಳಷ್ಟು ಸೀಟುಗಳನ್ನು ಆಡಳಿತಕ್ಕೆ ಬಿಟ್ಟು ಉಳಿದವನ್ನು ಅರ್ಹತೆ ಹಾಗೂ ಮೀಸಲಾತಿ ನೆಲೆಯಲ್ಲಿ ವಿತರಿಸುವುದಕ್ಕೆ ಸರಕಾರಕ್ಕೆ ಬಿಡುವ ಬಗ್ಗೆ ಖಾಸಗಿ ಕಾಲೇಜುಗಳ ಆಡಳಿತಗಳೊಂದಿಗೆ ಸರಕಾರ ಮಾತುಕತೆ ನಡೆಸಿತ್ತು. ಸರಕಾರಿ ನಿಯಂತ್ರಣದ ಸೀಟು ಸಂಖ್ಯೆ ಏರಿಸಲು ಆಡಳಿತಗಳವರು ಸರ್ವಥಾ ಒಪ್ಪದ ಪರಿಣಾಮವಾಗಿಯೆ ಸರಕಾರದ ಆಜ್ಞೆ ಬಂದಿದೆ. ಸಂಸ್ಥೆಗಳನ್ನು ಅನುದಾನ ಪಡೆಯುವವುಗಳಾಗಿ ಪರಿವರ್ತಿಸುವ ಅಥವಾ ಸರಕಾರಿ ಸೀಟು ಪ್ರಮಾಣವನ್ನು ಶೇಕಡ 55ಕ್ಕೆ ಮಿತಿಗೊಳಿಸುವ ಕೊಡುಗೆಯನ್ನು ರಘುಪತಿ ನೀಡಿದ್ದರೆನ್ನಲಾಗಿದೆ. ಇದಾವುದಕ್ಕೂ ಕಾಲೇಜುಗಳವರು ಬಗ್ಗಲಿಲ್ಲ.

ವಿದ್ಯೆಯ ವ್ಯಾಪಾರಕ್ಕೆ ಒಗ್ಗಿ ಹೋದವರಿಗೆ ವಿಚಾರದ ಗುಣ ಎಲ್ಲಿ ಬಂದೀತು? ವಿವೇಕದ ಮಾತು ಎಲ್ಲಿ ಹಿಡಿಸೀತು? ವಿದ್ಯೆಯು ಸಾಮಾಜಿಕ ಉತ್ಕರ್ಷಕ್ಕೆ ಪೂರಕವಾದ ಒಂದು ವಿಚಾರವೆಂದೂ ಸಾಮಾಜಿಕವಾಗಿ ದುರ್ಬಲರಾದವರಿಗೆ ಅದನ್ನು ಪಡೆಯುವ ವಿಶೇಷ ಹಕ್ಕು ಇದೆಯೆಂತಲೂ ಈ ವಿದ್ಯಾವರ್ತಕರನ್ನು ಒಪ್ಪಿಸುವೆವೆಂಬ ಸಾಮದಾನಗಳ ದಾರಿಯನ್ನು ಸರಕಾರ ಎಷ್ಟು ಬೇಗ ಬಿಟ್ಟರೆ ಅಷ್ಟು ಒಳಿತು. ಸಮಾಜಕ್ಕೆ ಹಿತಕರವಾದ ಶಿಕ್ಷಣಧೋರಣೆ ಏನು, ಎಷ್ಟು ತಾಂತ್ರಿಕ ಶಿಕ್ಷಣ ಕಾಲೇಜುಗಳಿರಬೇಕು, ಯಾವ ತರಬೇತಿಗಳನ್ನೆಲ್ಲ ನೀಡಬೇಕು, ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು, ಇಂತಹ ಪ್ರವೇಶಕ್ಕೆ ಅನುಸರಿಸಬೇಕಾದ ಮಾನ ದಂಡ ಯಾವುದು ಎಂಬುದನ್ನೆಲ್ಲ ಹಣದ ಮೂಟೆ ಕಟ್ಟುವ, ಡಿಗ್ರಿಗಳನ್ನು ಚಕ್ಕುಲಿಯಂತೆ ಬಿಕರಿ ಮಾಡುವ ವ್ಯಾಪಾರಿಗಳ ನಿರ್ಧಾರಕ್ಕೆ ಬಿಡದೆ ಸರಕಾರವೇ ಸಮಾಜದ ಸಮೂಹ ಚಿಂತನೆಯ ನೆಲೆಯಲ್ಲಿ ತೀರ್ಮಾನಿಸಬೇಕಾದ ಅಗತ್ಯ ಇಂದು ಬಹಳಷ್ಟಿದೆ. ಹೀಗೆ ಮಾಡುವ ತೀರ್ಮಾನಕ್ಕೆ ಖಾಸಗಿಯವರ ಒಪ್ಪಿಗೆ ಇಲ್ಲವೆಂದಾದರೆ ಅಂತಹ ಸಂಸ್ಥೆಗಳನ್ನು ಅವರ ಕೈಯಿಂದ ಕಿತ್ತು ಒಟ್ಟು ಸಮಾಜದ ನಿಯಂತ್ರಣಕ್ಕೊಳಪಡಿಸಬೇಕು.

ಈ ನಿಟ್ಟಿನಲ್ಲಿ ಸಚಿವ ರಘುಪತಿ ಅವರು ಕೈಗೊಂಡಿರುವ ಕಾರ್ಯ ಶ್ಲಾಘನೀಯವಾದದ್ದು. ಅವರ ಕೆಲಸ ಇಲ್ಲಿಗೇ ನಿಲ್ಲಬಾರದು. ಇಂಗ್ಲೀಷ್ ಮಾಧ್ಯಮದ ಪ್ರಾಥಮಿಕ ಶಿಕ್ಷಣದಲ್ಲಿ ಮಾಡಿದಂತೆ ಎಲ್ಲಾ ರೀತಿಯ ದೇಣಿಗೆಗಳನ್ನು ಬಹಿರ್ಗತಗೊಳಿಸಿ ಶಕ್ತಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಶಿಕ್ಷಣ ಶುಲ್ಕಕ್ಕೆ ಅವಕಾಶ ಕೊಡುವ ವ್ಯವಸ್ಥೆಯನ್ನು ತರಬೇಕಲ್ಲದೆ ಮೆಡಿಕಲ್ ಕಾಲೇಜುಗಳ ವಿಚಾರದಲ್ಲಿಯೂ ಇಂತಹದೇ ಕ್ರಮ ಕೈಗೊಳ್ಳಬೇಕು.

ಸರಕಾರ ತಂದಿರುವ ಆಜ್ಞೆಯ ವ್ಯಾಪ್ತಿಯಿಂದ ಭಾಷಾ ಅಲ್ಪಸಂಖ್ಯಾತರು ನಡೆಸುತ್ತಿರುವ ಸಂಸ್ಥೆಗಳು ಎಂಬ ನೆಲೆಯಲ್ಲಿ ಆರು ಕಾಲೇಜುಗಳು ಹೊರಗುಳಿದಿವೆ. ಅಲ್ಪ ಸಂಖ್ಯಾತರು ಎಂಬ ಕಾರಣ ಎಷ್ಟು ಸಮಂಜಸ ಎಂಬ ವಿಚಾರ ಮರು ಪರಿಶೀಲನೆಗೆ ಯೋಗ್ಯವಾದದ್ದು. ಈ ಸಂಸ್ಥೆಗಳನ್ನು ನಡೆಸುವವರು ನಿಜವಾಗಿಯೂ ಅಲ್ಪಸಂಖ್ಯಾತರೇ. ಇವರ ಸಂಸ್ಥೆಗಳಲ್ಲಿ ಅಲ್ಪ ಸಂಖ್ಯಾತರಿಗೆ ಮಾತ್ರವೇ ಪ್ರವೇಶ [illegible] ಎಂಬುದನ್ನೇ ತೀರ್ಮಾನವಾಗಬೇಕು. ಅಲ್ಪ ಸಂಖ್ಯಾ[illegible] ರೆಂಬ ಸೋಗಿನ ಮರೆಯಲ್ಲಿ ಹಣಮಾಡುವ ದಂಧೆ[illegible] ಪ[illegible] ಮಾಡಿಯದಂತೆ ನೋಡಿಕೊಳ್ಳಬೇಕಾದ [illegible] [illegible] ಸರಕಾರದ್ದೇ ಆಗಿದೆ.

ಪುರಸಭೆ ಮುಖ್ಯಾಧಿಕಾರಿಗಳ ಸಮಾವೇಶ:

ಸಂಪನ್ಮೂಲ ಹೆಚ್ಚಿಸಿ: ಲಕ್ಷ್ಮೀಸಾಗರ್ ಸಲಹೆ

ಮಂಗಳೂರು, ಜು. 11– ಪುರಸಭೆ ಗಳು ಹಾಗೂ ನಗರಸಭೆಗಳು ತಮ್ಮಲ್ಲಿರುವ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು, ಅಭಿ ವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕೆಂದು ರಾಜ್ಯದ ಕಾನೂನು, ಸಂಸದೀಯ ವ್ಯವ ಹಾರ ಹಾಗೂ ನಗರಾಭಿವೃದ್ಧಿ ಸಚಿವ ...ಲಕ್ಷ್ಮೀಸಾಗರ್ ಅವರು ಹೇಳಿ ...ದ್ದಾರೆ.

ಇತ್ತೀಚೆಗೆ ಜಿಲ್ಲಾಧಿಕಾರಿಗಳ ಕಚೇರಿ ...ಲ್ಲಿ ಸಮಾವೇಶಗೊಂಡ ಪುರಸಭೆಗಳ ಮುಖ್ಯಾಧಿಕಾರಿಗಳ ಮತ್ತು ಅಧ್ಯಕ್ಷರು ...ನ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳು ...ವಾಗ ಪುರಸಭೆ ಹಾಗೂ ನಗರಸಭೆಗಳು ರಾಜ್ಯ ಸರಕಾರವನ್ನು ಅವಲಂಬಿಸಬೇಕಾದ ...ಅಗತ್ಯವಿಲ್ಲವೆಂದು ಹೇಳಿದ ಅವರು ಪುರ ಸಭೆ ಮುಖ್ಯಾಧಿಕಾರಿಗಳ ಆಡಳಿತವನ್ನು ...ಚ್ಚು ಚುರುಕುಗೊಳಿಸಲು ಮುಂದಿನ ಆಗಸ್ಟ್ ತಿಂಗಳಿನಿಂದ ಮೈಸೂರಿನ ಆಡ ...ಳಿತ ತರಬೇತಿ ಸಂಸ್ಥೆಯಲ್ಲಿ ತರಬೇತಿ ...ನೀಡುವ ವ್ಯವಸ್ಥೆಯೊಂದನ್ನು ರೂಪಿಸಲಾ ...ಗಿದೆಯೆಂದು ತಿಳಿಸಿದರು.

ಕಡಿಮೆ ಆದಾಯವಿರುವ ಪುರಸಭೆಗ ಳನ್ನು ನಗರ ಪಂಚಾಯತ್‌ಗಳಾಗಿ ಪರಿವ ರ್ತಿಸುವುದರಿಂದ ಅಂತಹ ಸಂಸ್ಥೆಗಳ ಆರ್ಥಿಕ ಮಟ್ಟ ಹೆಚ್ಚಾಗುವುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ತೋಡುವ ಕಾರ್ಯವನ್ನು ಸಾರ್ವಜನಿಕ ಜನಾರೋಗ್ಯ ಇಲಾಖೆಗೆ ವಹಿಸಿಕೊಡಲಾಗಿದ್ದು, ಈ ಸಂಬಂಧ ರಾಜ್ಯದ ವಾರ್ಷಿಕ ಅನುದಾನವನ್ನು ಪುರ ಸಭೆಗಳ ಬದಲು ಮೇಲ್ಕಂಡ ಇಲಾಖೆಗೇ ವಹಿಸಿಕೊಡಲಾಗುವುದೆಂದು ಸಚಿವರು ತಿಳಿಸಿದರು.

ಪುರಸಭೆಗಳು ಬ್ಯಾಂಕ್ ನೆರವಿನಿಂದ ತಮ್ಮ ವ್ಯಾಪ್ತಿಯಲ್ಲಿ ಅಂಗಡಿಗಳನ್ನು ನಿರ್ಮಿಸಿ, ಅವುಗಳನ್ನು ಸೂಕ್ತ ಫಲಾನು ಭವಿಗಳಿಗೆ ನೀಡಿ ತಮ್ಮ ಆರ್ಥಿಕ ಮಟ್ಟ ವನ್ನು ಹೆಚ್ಚಿಸಬಹುದೆಂದು ಅವರು ಸಲಹೆ ಮಾಡಿದ್ದಾರೆ.

ಸಭೆಯಲ್ಲಿ ಜಿಲ್ಲಾಧಿಕಾರಿ ಸುಧೀರ್ ಕೃಷ್ಣ, ಶಾಸಕ ಅಮರನಾಥ ಶೆಟ್ಟಿ ಹಾಗೂ ಮಂಗಳೂರು ಮೇಯರ್ ಅಬ್ದುಲ್ ಖಾದರ್ ಅವರು ಉಪಸ್ಥಿತರಿದ್ದರು.

ಮೇ ತಿಂಗಳಲ್ಲಿ ನಡೆದ ಕನ್ನಡ ಬೆರಳಚ್ಚು ಕಿರಿಯ ದರ್ಜೆ ಪರೀಕ್ಷೆ ಯಲ್ಲಿ 8ನೇ ರ್‍ಯಾಂಕ್ ಗಳಿಸಿದ ತೊಕ್ಕೊಟ್ಟು ಅರ್ಚನಾ ಸ್ಕೂಲ್ ಆಫ್ ಕಾಮರ್ಸ್‌ನ ವಿದ್ಯಾರ್ಥಿನಿ ಗೀತಾ ಕುಮಾರಿ ಹಾಗೂ ಕನ್ನಡ ಪ್ರೌಢ ದರ್ಜೆ ಬೆರಳಚ್ಚು ಪರೀಕ್ಷೆ ಯಲ್ಲಿ 5ನೇ ರ್‍ಯಾಂಕ್ ಗಳಿಸಿದ ಕೊಕ್ಕರ್ಣೆ ವಿಷ್ಣುಮೂರ್ತಿ ಸ್ಕೂಲ್ ಆಫ್ ಕಾಮರ್ಸ್‌ನ ವಿದ್ಯಾರ್ಥಿ ಕೆ. ಪ್ರಕಾಶ್. ಪ್ರಕಾಶ್ ಅವರು ಉಡುಪಿಯ ಕಲಾ ...ರಂದ ಏರ್ಪಡಿಸಿದ ರಾಜ್ಯ ಮಟ್ಟದ ಕನ್ನಡ ಬೆರಳಚ್ಚು ಸ್ಪರ್ಧೆಯಲ್ಲೂ ಪ್ರಥಮ ಸ್ಥಾನ ಪಡೆದಿದ್ದಾರೆ.

ಅಂಗನವಾಡಿ ಕಾರ್‍ಯಕರ್ತೆಯರ ಸಮಸ್ಯೆಗಳ ಚರ್ಚೆ

ಮಂಗಳೂರು, ಜು. 11 – ಅಂಗನ ವಾಡಿ ಕಾರ್ಯಕರ್ತೆಯರ ಹಿತವೇದಿಕೆ, ...ಗಳೂರು ಇದರ ವಾರ್ಷಿಕ ಮಹಾ ಸಭೆಯು ಈ ತಿಂಗಳ ತಾ. 13ರಂದು ಸಂಜೆ ...ಗೆ 3ಕ್ಕೆ ...ಲ್‌ಬಾಗ್‌ನಲ್ಲಿರುವ ಹಿಂದಿ ...ಚಾರ ಸಭಾದ ಭವನದಲ್ಲಿ ನಡೆಯಲಿದೆ ...ದು ವೇದಿಕೆಯ ಪ್ರಕಟಣೆಯೊಂದು ತಿಳಿ ...ದೆ.

ಈ ಸಭೆಯಲ್ಲಿ ಅಂಗನವಾಡಿ ಕಾರ್ಯ ...ಕರ್ತೆಯರ ಸಮಸ್ಯೆಗಳ ಬಗ್ಗೆ ಅಮೂಲ ...ಗ್ರ ಚರ್ಚೆ ನಡೆಯಲಿಕ್ಕಿರುವುದರಿಂದ ...ರ ಮತ್ತು ಗ್ರಾಮಾಂತರ ಅಂಗನವಾಡಿ ...ಕಾರ್ಯಕರ್ತೆಯರು ಮತ್ತು ಸಹಾಯಕಿ ...ರು ಸಭೆಯಲ್ಲಿ ಬಹುಸಂಖ್ಯೆಯಲ್ಲಿ ...ಬೇಕೆಂದು ಪ್ರಕಟಣೆಯಲ್ಲಿ ...ಲಾಗಿದೆ.

● ಕಾಟಪಳ್ಳ, ಜು. 11–ಇಲ್ಲಿನ ಸರಕಾರಿ ಜೂನಿಯರ್ ಕಾಲೇಜ್ ಹಳೆವಿದ್ಯಾರ್ಥಿ ಸಂಘದ ವತಿಯಿಂದ ಇತ್ತೀಚೆಗೆ ವನ ಮಹೋತ್ಸವವನ್ನು ಆಚರಿಸಲಾಯಿತು.

ಸಾರ್ವಜನಿಕರಿಗೆ ವಿವಿಧ ರೀತಿಯ 5,000 ಸಸಿಗಳನ್ನು ಉಚಿತವಾಗಿ ವಿತರಿ ಸಲಾಯಿತು.

...ಾಲದಲ್ಲಿ ಅಪಘಾತ

...ಕ ಕಿಸ್ಟರಿ'

ಬಂಗಾರಪ್ಪ ಅವರಿಗೆ ಮುಂಬೈನಲ್ಲಿ ಸನ್ಮಾನ

ಮುಂಬೈ, ಜು. 11– ಇಲ್ಲಿನ ಭಾರತ ಕೋ ಆಪರೇಟಿವ್ ಬ್ಯಾಂಕ್ ಮತ್ತು ಬಿಲ್ಲವರ ಅಸೋಸಿಯೇಶನಿನ ಜಂಟಿ ಆಶ್ರ ಯದಲ್ಲಿ ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಎಸ್. ಬಂಗಾರಪ್ಪ ಅವರನ್ನು ಇತ್ತೀಚೆಗೆ ಸನ್ಮಾ ನಿಸಲಾಯಿತು.

ಈ ಸಂದರ್ಭದಲ್ಲಿ ಭಾರತ ಕೋ ಆಪ ರೇಟಿವ್ ಬ್ಯಾಂಕಿನ ಪದಾಧಿಕಾರಿಗಳೊಡನೆ ವಿಚಾರ ವಿನಿಮಯ ನಡೆಸಿದ ಬಂಗಾರಪ್ಪ ಅವರು ಆರ್ಥಿಕವಾಗಿ ಹಿಂದುಳಿದವರಿಗೆ ನೆರವಾಗಲೆಂದು ಸ್ಥಾಪನೆಯಾದ ಬ್ಯಾಂಕಿನ ಪ್ರಗತಿಯನ್ನು ಕಂಡು ಸಂತೋಷ ವ್ಯಕ್ತ ಪಡಿಸಿದರಲ್ಲದೆ, ಬಡಜನರನ್ನು ಬಡತನ ದಿಂದ ಮೇಲೆತ್ತುವ ಕಾರ್ಯವನ್ನು ಬ್ಯಾಂಕ್ ಮುಂದುವರಿಸಿಕೊಂಡು ಹೋಗ ಬೇಕೆಂದು ಮನವಿ ಮಾಡಿದರು.

ಬಿಲ್ಲವರ ಅಸೋಸಿಯೇಶನಿನ ಕಾರ್ಯಾ ಲಯಕ್ಕೂ ಭೇಟಿ ನೀಡಿದ ಅವರು ಅಸೋ ಯೇಶನಿನ ಚಟುವಟಿಕೆಗಳನ್ನು ತಿಳಿದು ಕೊಂಡು, ಸಂಘಟನೆಯ ಕಾರ್ಯಕರ್ತರ ತ್ಯಾಗಬುದ್ಧಿ ಮತ್ತು ಕರ್ತವ್ಯಶೀಲ ಮನೋ ಭಾವವನ್ನು ಶ್ಲಾಘಿಸಿದರು.

ಬಿಲ್ಲವರ ಅಸೋಸಿಯೇಶನ್‌ನಲ್ಲಿ ಗೌರವ ಪ್ರಧಾನ ಕಾರ್ಯದರ್ಶಿ ಜಯಕರ ಪೂಜಾರಿ ಸ್ವಾಗತಿಸಿದರು. ಅಧ್ಯಕ್ಷ ಎಲ್. ಡಿ. ಕೋಟ್ಯಾನ್ ಸಂಘದ ಚಟುವಟಿಕೆಗಳ ಪರಿ ಚಯ ಮಾಡಿದರು. ಕೊನೆಯಲ್ಲಿ ಜೊತೆ ಕಾರ್ಯದರ್ಶಿ ಜೆ. ಎಸ್. ಕರ್ಕೇರ ವಂದಿಸಿ ದರು.

ಬದ್ಯಾರು ಶಾಲೆಯಲ್ಲಿ ವನಮಹೋತ್ಸವ

ಬಂಟ್ವಾಳ, ಜು. 11– ಬದ್ಯಾರು ಸಂತ ರಫಾಯೆಲರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ವನಮಹೋತ್ಸ ವವನ್ನು ಆಚರಿಸಲಾಯಿತು.

ಈ ಸಮಾರಂಭದ ಅಧ್ಯಕ್ಷತೆ ವಹಿ ಸಿದ್ದ ವೇಣೂರು ಲಯನ್ಸ್ ಕ್ಲಬ್ಬಿನ ಅಧ್ಯಕ್ಷ ಭೋಜರಾಜ ಹೆಗ್ಡೆ ಅವರು ಮಾತನಾಡಿ 'ಅರಣ್ಯಗಳನ್ನು ಹಣಕ್ಕಾಗಿ ಉಪಯೋಗಿಸುತ್ತಿದ್ದೇವೆ. ಮನಸ್ಸಿಗೆ ಬೇಕಾದ ಶಾಂತಿಯು ಐಶ್ವರ್ಯದಿಂದ ಸಿಗುವುದಿಲ್ಲ. ಆದರೆ ಅರಣ್ಯಗಳಿಂದ ಲಭಿ ಸುತ್ತದೆ' ಎಂದು ಹೇಳಿದ ಅವರು ಸಸಿಗಳನ್ನು ನೆಡುವುದು ಮುಖ್ಯವಲ್ಲ ಅವುಗಳನ್ನು ರಕ್ಷಿಸುವುದು ಅತೀ ಮುಖ್ಯ ಎಂದರು.

ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ನಾಯಕ ಪ್ರಕಾಶ್ ಪಿಂಟೋ ಅವರು ವನಮಹೋತ್ಸವದ ಔಚಿತ್ಯದ ಬಗ್ಗೆ ಮಾತನಾಡಿದರು. ಪ್ರಾರಂಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಜಾ ಸಿಕ್ವೇರಾ ಅವರು ಸ್ವಾಗತಿಸಿದರು. ಕೊನೆ ಯಲ್ಲಿ ಶಾಲಾ ಅಧ್ಯಾಪಕಿ ವೆರೊನಿಕಾ ಗೋವಿಯಸ್ ಅವರು ವಂದಿಸಿದರು.

ಶಾಲೆಯ ಸಂಚಾಲಕರಾದ ಫಾ| ಜೆರಾಲ್ಡ್ ಲೋಬೊ ಹಾಗೂ ಭೋಜ ರಾಜ ಹೆಗ್ಡೆ ಅವರು ಶಾಲಾ ವಠಾರದಲ್ಲಿ ಸಸಿಗಳನ್ನು ನೆಡುವುದರ ಮೂಲಕ ನೆರ ವೇರಿಸಿದರು. ಅರಣ್ಯ ಇಲಾಖೆ ಬೇಕಾದ ಸಸಿಗಳನ್ನು ಒದಗಿಸಿತ್ತು.



ಮುಂಗಾರು

ಸೋಮವಾರ ಜುಲೈ 8, 1985

ತತ್ವಕ್ಕಾದ ಆಘಾತ

ಕಳೆದ ನಾಲ್ಕು ವರ್ಷಗಳಿಂದ ಈ ದೇಶದಲ್ಲಿ ಶಾಶ್ವತವಾಗಿ ನೆಲೆಸಿದ ಸಾಮಾಜಿಕ ವಿಕೃತಿಯ ಉಳಿವಿಗಾಗಿ ಗುಜರಾತಿನ ಮೇಲ್ವರ್ಗದ ಜನ ನಡೆಸಿದ ಮೀಸಲಾತಿ ವಿರೋಧಿ ಸಮರದಲ್ಲಿ ಅಲ್ಲಿನ ಮುಖ್ಯಮಂತ್ರಿಯಾಗಿದ್ದ ಮಾಧವಸಿನ್ಹ ಸೋಳಂಕಿ ಈಗ ಸೋತಿದ್ದಾರೆ. ಸೋಳಂಕಿಯವರ ಈ ಸೋಲಿನಲ್ಲಿ ಮೀಸಲಾತಿ ತತ್ವಕ್ಕೆ ದೊಡ್ಡ ಆಘಾತವಾಗಿದೆಯೆನ್ನಬಹುದು.

ಸಾಮಾಜಿಕವಾಗಿ ದುರ್ಬಲರಾದ ಜನವರ್ಗಕ್ಕೆ ವಿದ್ಯೆ ಮತ್ತು ಉದ್ಯೋಗದ ಅವಕಾಶಗಳಲ್ಲಿ ಮೀಸಲಾತಿಯ ಸೌಲಭ್ಯ ಸಿಗಬೇಕೆಂಬುದು ಭಾರತದ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿಯೇ ಅಂಗೀಕೃತವಾದ ತತ್ವ. ಶತಮಾನಗಳಿಂದ ಎಲ್ಲ ಅವಕಾಶಗಳಿಂದ ವಂಚಿತರಾದ ಶೂದ್ರ ಸಮೂಹಕ್ಕೆ ಇಂದಿನ ಆಧುನಿಕ ಯುಗದಲ್ಲಾದರೂ ನ್ಯಾಯ ದೊರಕಿಸಿಕೊಡಬೇಕೆಂಬುದು ಇದರ ಉದ್ದೇಶ. ರಾಜ್ಯಾಂಗದಲ್ಲಿ ಈ ಉದ್ದೇಶದ ನಿರೂಪಣೆ ಬಹಳ ನಿಖರವಾಗಿ ಆಗಿದೆ. ಇಂತಹ ಒಂದು ಅಂಗೀಕೃತ ತತ್ವದ ಅನುಸರಣೆ ಪ್ರಾಮಾಣಿಕವಾಗಿ ನಡೆದಿಲ್ಲವೆಂಬುದು ಕಣ್ಣಿಗೆ ಕಟ್ಟುತ್ತಿರುವ ಸತ್ಯ.

ದಕ್ಷಿಣದ ಕೆಲವು ರಾಜ್ಯಗಳನ್ನು ಬಿಟ್ಟರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ದೊರಕಿಸುವ ಕ್ರಮವನ್ನು ಉತ್ತರ ಭಾರತದ ಬಹುತೇಕ ರಾಜ್ಯಗಳು ಇದುವರೆಗೆ ಕೈಗೊಂಡಿಲ್ಲ. 1977ರಲ್ಲಿ ಬಿಹಾರದಲ್ಲಿ ಅಧಿಕಾರಕ್ಕೆ ಬಂದ ದಿಟ್ಟ ಕ್ರಾಂತಿಕ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ನೀಡುವ ಹೆಜ್ಜೆ ಇಟ್ಟ ಅಪರಾಧಕ್ಕಾಗಿ ಪದಚ್ಯುತರಾದರು. ಈಗ ಅದೇ ಗತಿ ಮಾಧವಸಿನ್ಹ ಸೋಳಂಕಿಯವರಿಗೂ ಬಂದಿದೆ.

ಸೋಳಂಕಿಯವರು ಸಾಮಾಜಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದವರಲ್ಲ. ಆದರೆ ಈ ದೇಶದಲ್ಲಿ ಶತಮಾನಗಳಿಂದ ಕತ್ತಲಕೂಪದಲ್ಲಿ ಕೊಳೆತ ಶೂದ್ರ ಸಮೂಹಕ್ಕೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡಬೇಕೆಂಬ ತತ್ವದಲ್ಲಿ ನಿಷ್ಠೆಯುಳ್ಳವರು. ನಿಷ್ಠೆಯಂತೆ ನಡೆದುಕೊಳ್ಳಲು ಯತ್ನಿಸಿದ "ಅಪರಾಧಕ್ಕಾಗಿ" ಅವರಿಗೀಗ ಶಿಕ್ಷೆಯಾಗಿದೆ. 1977ರಲ್ಲಿ ಕರ್ಪೂರಿ ಠಾಕೂರರ ವಿರುದ್ಧ ಬಿಹಾರದ ಬ್ರಾಹ್ಮಣರು, ಭೂಮಿಹಾರರು ಮತ್ತು ಕಾಯಸ್ಥರು ಸಮರ ಹೂಡಿದರು. ಗುಜರಾತಿನಲ್ಲಿ ಸಾಮಾಜಿಕ ಪ್ರತಿಷ್ಠಿತರಾಗಿರುವ ಬ್ರಾಹ್ಮಣರು, ಬನಿಯರು ಮತ್ತು ಪಟೇಲರ ಕೂಟ ಸೋಳಂಕಿಯವರನ್ನು ಸೋಲಿಸಿದೆ.

ಗುಜರಾತಿನ ಮೀಸಲಾತಿ ವಿರೋಧಿ ಚಳವಳಿಯಲ್ಲಿ ಸಾಮಾಜಿಕ ನ್ಯಾಯದ ತತ್ವಕ್ಕೆ ಸೋಲಾಗಿದೆಯೆಂಬುದಕ್ಕಿಂತ ಮಿಗಿಲಾಗಿ ಈ ದೇಶದಲ್ಲಿ ಹಿಂದುಳಿದ ವರ್ಗಗಳ ಜನರಿಗೆ ಉತ್ತಮ ಮಾನವರಾಗಿ ಬದುಕುವ ಎಲ್ಲ ಅವಕಾಶಗಳ ಬಾಗಿಲನ್ನು ಮತ್ತೆ ಮುಚ್ಚುವ ಒಂದು ತಂತ್ರವೇ ನಡೆದಿದೆಯೆಂಬುದು ಚಿಂತೆಗೆ ಕಾರಣವಾದ ವಿಚಾರ.

ಗುಜರಾತಿನ ಮೇಲ್ವರ್ಗದ ಜನರು ಅಂಗಡಿ ಬಾಗಿಲು ಮುಚ್ಚಿ ಬೀದಿಗಳಲ್ಲಿ ನಡೆಸಿದ ಪುಂಡಾಟಿಕೆಯನ್ನು ಗುಜರಾತಿನ ಜನತಾ ಚಳವಳಿಯಾಗಿ ಚಿತ್ರಿಸುವಲ್ಲಿ ಈ ದೇಶದ ಪತ್ರಿಕೆಗಳು ಮಹತ್ವದ ಪಾತ್ರ ವಹಿಸಿವೆ. ಬನಿಯಾ ವ್ಯಾಪಾರಿಗಳು ಅಂಗಡಿಗಳನ್ನು ಮುಚ್ಚಿದಾಗ ಪತ್ರಿಕೆಗಳು ಅದರಲ್ಲಿ ಜನಸಮೂಹದ ಸಹಭಾಗಿತ್ವವನ್ನು ಕಂಡವು. ಆದರೆ ಅಲ್ಲಿನ ಶೂದ್ರಜನ ಮೀಸಲಾತಿ ಪರವಾಗಿ ಕಾರ್ಖಾನೆಗಳಲ್ಲಿ ಮುಷ್ಕರ ನಡೆಸಿ ಬೀದಿಗಿಳಿದಾಗ ಪತ್ರಿಕೆಗಳು ಅದನ್ನು ಪುಂಡಾಟಿಕೆಯೆಂದು ವರ್ಣಿಸಿದವು. ಬಾಯಿ ಬಲವಿಲ್ಲದ ಶೂದ್ರ ಸಮೂಹಕ್ಕೆ ತಮಗಾಗುತ್ತಿರುವ ಅನ್ಯಾಯವನ್ನು ಹೇಳಿಕೊಳ್ಳುವ ಅವಕಾಶ ಇಲ್ಲದಾಯಿತು. ಹೀಗಾಗಿ ಈಗ ಇಡೀ ದೇಶದಲ್ಲಿ ಮೀಸಲಾತಿ ವಿರೋಧಿಗಳ ಕೈ ಮೇಲಾಗುವಂತಾಯಿತು.

ರಾಷ್ಟ್ರಪತಿ ಜೈಲ್‌ಸಿಂಗ್, ಪ್ರಧಾನಿ ರಾಜೀವ್ ಗಾಂಧಿ ಮೊದಲಾದ ಮಹನೀಯರು ಮೀಸಲಾತಿ ವಿಚಾರದಲ್ಲಿ ಮರುಚಿಂತನೆಯ ಮಾತನಾಡಲಾರಂಭಿಸಿದ್ದಾರೆ. ನಮ್ಮ ದೃಷ್ಟಿಯಲ್ಲಿ ಇದೊಂದು ಮೋಸದ ಮಾತು. ಆರ್ಥಿಕ ದೌರ್ಬಲ್ಯಕ್ಕೂ ಮೀಸಲಾತಿಗೂ ನೆಂಟಸ್ತಿಕೆ ಮಾಡುವ ತಂತ್ರ. ಈ ದೇಶದ ಇತಿಹಾಸವನ್ನು ಬುದ್ಧಿಪೂರ್ವಕವಾಗಿ ಓದಿದ ಯಾರೇ ಆದರೂ ಸಹಸ್ರಾರು ವರ್ಷಗಳಿಂದ ಶೂದ್ರ ಸಮೂಹದಲ್ಲಿ ಬೆಳೆದುಬಂದಿರುವ ಸಾಮಾಜಿಕ ದೌರ್ಬಲ್ಯವನ್ನು ಗುರುತಿಸದೆ ಇರಲಾರ. ಇಂತಹ ದುರ್ಬಲರಿಗೆ ಅವಕಾಶಗಳ ದೊಡ್ಡ ಬಾಗಿಲನ್ನು ತೆರೆಯಬೇಕೆಂಬುದನ್ನು ಒಪ್ಪದಿರಲಾರ.

ಭಾಷಾ ಪ್ರೌಢಿಮೆಯು ಅಳತೆಗೋಲಾಗಿರುವ ನಮ್ಮ ಇಂದಿನ ಪರೀಕ್ಷಾ ಪದ್ಧತಿಯಲ್ಲಿ ಈಗಷ್ಟೇ ಜ್ಞಾನಜಗತ್ತಿಗೆ ಪ್ರವೇಶ ಪಡೆಯುತ್ತಿರುವ ಹಿಂದುಳಿದವರ ಮಕ್ಕಳು ಸಾಮಾಜಿಕ ಪ್ರತಿಷ್ಠಿತರ ಮಕ್ಕಳೊಡನೆ ಸ್ಪರ್ಧೆ ನಡೆಸಲಾರರೆಂಬುದು ವಾಸ್ತವ ಸಂಗತಿ. ಸಹಸ್ರಾರು ವರ್ಷಗಳಿಂದ ಬೆಳೆದುಬಂದಿರುವ ಇಂತಹ ಸಾಮಾಜಿಕ ಅಸಮತೆಯನ್ನು ಹೋಗಲಾಡಿಸಲು ಸಾಮಾಜಿಕ ದುರ್ಬಲರನ್ನು ಗುರುತಿಸಿ ಅವರಿಗೆ ಮೀಸಲಾತಿ ಸೌಲಭ್ಯ ನೀಡುವುದೊಂದೇ ಮಾರ್ಗ. ಸರಳವಾದ ಈ ಸೂತ್ರವ ಕೈಬಿಟ್ಟು ಮೀಸಲಾತಿಗೆ ಆರ್ಥಿಕ ಹಿಂದುಳಿದಿರುವಿಕೆ ಆಧಾರವಾಗಬೇಕೆಂಬ ಮೋಸದ ಜಾಲವನ್ನು ಈಗ ಸೃಷ್ಟಿಸಲಾಗಿದೆ. ಆರ್ಥಿಕವಾಗಿ ಸಮಾನರಾಗಿರುವ ಬ್ರಾಹ್ಮಣ ಹುಡುಗರು ಮತ್ತು ಮೊಗವೀರ ಅಥವಾ ಬಿಲ್ಲವರ ಹುಡುಗರ ಅರ್ಹತೆ ಅಳೆಯಲು ಒಂದೇ ಅಳತೆಗೋಲಿನ ಬಳಕೆ ಮಾಡಿದರೆ ಏನಾಗುವುದೆಂಬುದನ್ನು ಹೇಳಬೇಕಾಗಿಲ್ಲ. ಆರ್ಥಿಕವಾಗಿ ದುರ್ಬಲರಾದ ಸಾಮಾಜಿಕ ಪ್ರತಿಷ್ಠಿತರ ಮಕ್ಕಳ ವಿದ್ಯಾಭ್ಯಾಸಕ್ಕೆ ಸರಕಾರ ಉದಾರವಾಗಿ ಧನಸಹಾಯ ಮಾಡಬೇಕೆಂಬುದರಲ್ಲಿ ಅರ್ಥವಿದೆ. ಅದನ್ನು ಬಿಟ್ಟು ಇವರಿಗೂ ಮೀಸಲಾತಿ ಬೇಕೆಂದು ವಾದಿಸುವುದು ಮೋಸದ ಮಾತಾಗುತ್ತದೆ.

ಹೀಗೆ ಮಾಡುವುದರಿಂದ ಉನ್ನತ ಶಿಕ್ಷಣ ಮತ್ತು ಸರಕಾರಿ ಹುದ್ದೆಗಳೆಲ್ಲ ಹಿಂದೆ ಇದ್ದಂತೆ ಸಾಮಾಜಿಕ ಪ್ರತಿಷ್ಠಿತರ ಗುತ್ತಿಗೆಯಾಗಿಯೇ ಉಳಿಯುತ್ತವೆ. ಸಮಗ್ರ ಶೂದ್ರ ಸಮೂಹ ಪ್ರತಿಷ್ಠಿತರ ಅಡಿಯಾಳುಗಳು—ಕಾಲಾಳುಗಳಾಗಿಯೇ ಉಳಿಯಬೇಕಾಗುತ್ತದೆ.

ಬಾಯಿ ಬಲವುಳ್ಳವರು, ಪತ್ರಿಕೆಗಳು ಮತ್ತು ಸಂಧಿಸಾಧಕ ರಾಜಕಾರಣಿಗಳು ಚಾಲನೆ ಕೊಡುತ್ತಿರುವ "ಮೀಸಲಾತಿಗೆ ಆರ್ಥಿಕ ಹಿಂದುಳಿದಿರುವಿಕೆ ಆಧಾರ"ದ ವಿಚಾರ ನಮ್ಮ ಭವಿಷ್ಯದ ಮೇಲೆ ಶಾಶ್ವತವಾಗಿ ಬರೆ ಎಳೆಯಲು ಹೂಡಿರುವ ತಂತ್ರವೆಂಬುದನ್ನು ಹಿಂದುಳಿದ ವರ್ಗಗಳ ಜನರು ಇನ್ನಾದರೂ ಅರಿಯಬೇಕು. ತಮ್ಮ ಹಿತದ ಪ್ರಜ್ಞೆಗಳಿಸಿ ಸಾಮಾಜಿಕ ನ್ಯಾಯಕ್ಕಾಗಿ ಸೆಟೆದು ನಿಲ್ಲಬೇಕು. ಹೋರಾಟದ ಹಾದಿ ಹಿಡಿಯಬೇಕು.

ಇಲ್ಲವಾದರೆ ಗುಜರಾತಿನಲ್ಲಿ ಹುಟ್ಟಿದ [illegible] ಶೀಘ್ರವೇ ಕರ್ನಾಟಕಕ್ಕೂ ಹರಡೀತು. ರಾಜಕೀಯ ದಾರ್ಶನಿಕ ದೇವರಾಜ ಅರಸು ಮಾಡಿದ ಮೀಸಲಾತಿ ನಿಯಮ ಕಸದ ಬುಟ್ಟಿಗೆ ಸೇರೀತು. ಸರಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು ಹೆಚ್ಚಿಸುವುದರ ಮೂಲಕ [illegible] ಹೆಗಡೆಯವರು ಈಗಾಗಲೇ ಕರ್ನಾಟಕ[illegible] ಸಮಾಧಿಗೆ ನೆಲ ಅಗೆ[illegible] ಜನವರ್ಗ ಇದನ್ನೊಂದು ಕಾರಣ[illegible]ತು.

ಕಾರ್ಕಳದ ಅಭಿವೃದ್ಧಿ ಕಾರ್ಯಕ್ಕೆ ರೂ. 40 ಲಕ್ಷ

ಕಾರ್ಕಳ, ಜು. 7–ಕಾರ್ಕಳ ಶಾಸನ [illegible] ಕ್ಷೇತ್ರದ ಸಮಗ್ರ ಅಭಿವೃದ್ಧಿ ಕಾಮ [illegible]ಗಾರಿ ರಾಜ್ಯ ಸರ್ಕಾರವು 40 [illegible] ರೂ. ಗಳನ್ನು ಮಂಜೂರು ಮಾಡಿದೆ [illegible] ಶಾಸಕ ಹಾಗೂ ರಾಜ್ಯದ ಮಾಜಿ [illegible] ಸಚಿವ ವೀರಪ್ಪ ಮೊಯ್ಲಿ [illegible]ಸಿದ್ದಾರೆ.

ಕಾರ್ಕಳ ಪಶ್ಚಿಮ ಘಟ್ಟ ವಿಭಾಗದ [illegible] ಪ್ರದೇಶಗಳಲ್ಲಿ ಈಗಾಗಲೇ 15 [illegible] ಸೇತುವೆಗಳ ಕೆಲಸ ನಡೆಯುತ್ತಿದ್ದು [illegible] 16 ಲಕ್ಷ ರೂ.ಗಳು [illegible] ಎಂದು ಅವರು ತಿಳಿಸಿದರು.

[illegible] 13 ಲಕ್ಷ ರೂ. ವೆಚ್ಚದ [illegible] ಸೇತುವೆಯ ಕೆಲಸ ಈ [illegible] ಆರಂಭ [illegible]. [illegible] ಈ ಸೇತುವೆ [illegible] ಈ ಯೋಜ[illegible] [illegible] ವಿಭಾಗದ ವಿಶೇಷ ಕಾರ್ಯದರ್ಶಿ [illegible] ವಿವಿಧ ಅಧಿಕಾರಿ[illegible] ಈ ಸೇತುವೆಯ ಅವಶ್ಯಕತೆಯನ್ನು [illegible] ಮಾಡಿದ್ದು ಇಂತಹ ತಡೆಯಾಚ್ಚೆ [illegible] ಎಂದು ಅವರು ಹೇಳಿದ್ದಾರೆ.

[illegible] ಬರುವ [illegible] [illegible] ಸೇತುವೆಯ ಬಗ್ಗೆ ಪತ್ರಕರ್ತ[illegible]ರೊಬ್ಬರು ಶಾಸಕರ ಗಮನ ಸೆಳೆದಾಗ, ಈ ಸೇತುವೆ ಈಗಾಗಲೆ ಆಗಬೇಕಿತ್ತು. ಆದರೆ ಕಂಟ್ರಾಕ್ಟ್‌ದಾರರ ತಪ್ಪಿನಿಂದ ಹೀಗಾಗಿದೆ ಎಂದ ಅವರು ಸಂಬಂಧಪಟ್ಟ ಕಂಟ್ರಾಕ್ಟರನ್ನು ಈಗಾಗಲೇ 'ಟರ್ಮಿನೇಟ್' ಮಾಡಿದ್ದು ಹೊಸದಾಗಿ ಟೆಂಡರ್ ಕರೆಯಲಾಗಿದೆ ಎಂದರು.

ಈ ಯೋಜನೆ ಪುನರ್ವಿಮರ್ಶಿತ ನೂತನ ವೆಚ್ಚದೊಂದಿಗೆ ಅತಿ ಶೀಘ್ರದಲ್ಲಿ ಆರಂಭವಾಗಲಿದ್ದು ಬರುವ ವರ್ಷದ ಆರಂಭದಲ್ಲಿ ಇದನ್ನು ಸಂಚಾರಕ್ಕೆ ಬಿಟ್ಟು ಕೊಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ವಿದ್ಯಾರ್ಥಿಗೂ [illegible]ಲ ಸಿಗಲಿ

[illegible] ಶೆಣೈ ಅವರು ಸ್ವಾಗತಿಸುತ್ತಾ [illegible] ಅಭಿಪ್ರಾಯ ತಿಳಿಯಲು ಕೆನರಾ [illegible] ಪ್ರಸ್ತಾವನೆಯೊಂದನ್ನು ಸಿದ್ಧ [illegible] ಸೂಕ್ತ ಕ್ರಮ ಕೈಗೊಂಡಿದೆಯೆಂದು [illegible] ಸುರೇಶ ಭಟ್ ವಂದಿಸಿದರು.

ಪುತ್ತೂರು ರೈತರ ಸಮಾವೇಶ

ಪುತ್ತೂರು, ಜು. 7–ಈ ತಿಂಗಳ 21 ರಂದು ನಡೆಯಲಿರುವ ಪುತ್ತೂರು ತಾಲೂಕು ರೈತ ಸಂಘದ ಸಮಾವೇಶವನ್ನು ಯಶಸ್ವಿಗೊಳಿಸಲು ಇಲ್ಲಿನ ರೈತ ಸಂಘ ಕರೆ ನೀಡಿದೆ.

ಇತ್ತೀಚೆಗೆ ರೈತಸಂಘ ಹಾಗೂ ಪುತ್ತೂರು ತಾಲೂಕು ಕೆಲಸಗಾರರ ಸಂಘದ ಜಂಟಿ ಸಭೆಯೊಂದು ಪಿ. ಕೆ. ಸತೀಶನ್ ಅವರ ಅಧ್ಯಕ್ಷತೆಯಲ್ಲಿ ನಡೆದು ರೈತರ ಮತ್ತು ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚಿಸಿತು.

ಪುತ್ತೂರು ಸರಹದ್ದಿನಲ್ಲಿರುವ ಮರದ ಮಿಲ್ಲು, ಗೇರುಬೀಜ ಕಾರ್ಖಾನೆ, ಕೊಕ್ಕೊ ಹಾಗೂ ಇನ್ನಿತರ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಆಡಳಿತ ವರ್ಗ ಕೂಡಲೇ ಖಾಯಂಗೊಳಿಸಬೇಕೆಂದು ಸಭೆ ಒತ್ತಾಯಿಸಿತು.

ನವಮಂಗಳೂರು ಬಂದರದಲ್ಲಿ ನಡೆಯುತ್ತಿರುವ ಕಾರ್ಮಿಕರ ನಿರಶನಕ್ಕೆ ಸಭೆ ತನ್ನ ಬೆಂಬಲ ವ್ಯಕ್ತಪಡಿಸಿದೆ.

ಶಿಕ್ಷಣ ಸುಧಾರಣೆ ಅತ್ಯಗತ್ಯ

ಕಾರ್ಕಳ, ಜು. 7– ಮಕ್ಕಳ ಸಮಗ್ರ ಅಭಿವೃದ್ಧಿಯ ನಿಟ್ಟಿನಲ್ಲಿ ಇಂದಿನ ಶಿಕ್ಷಣ ಸುಧಾರಣೆಯು ದಾರಿ ಹಿಡಿಯಬೇಕಾಗಿದೆ ಎಂದು ಮಂಗಳೂರು ಮಿಲಾಗ್ರಿಸ್ ಚರ್ಚ್‌ನ ಧರ್ಮಗುರು ಹಾಗೂ ಕ್ಯಾಥೋಲಿಕ್ ಬೋರ್ಡ್ ಆಫ್ ಎಜುಕೇಶನಿನ ಮಾಜಿ ಕಾರ್ಯದರ್ಶಿ ರೆ। ಫಾ। ಮೊರಾಸ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿನ ಅತ್ತೂರು ಸ್ಯೆಂಟ್ ಲಾರೆನ್ಸ್ ಹೈಸ್ಕೂಲಿನ ರಜತ ವರ್ಷದ ಆರಂಭೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಶೈಕ್ಷಣಿಕವಾಗಿ ಹಿಂದುಳಿದಿರುವ ಕುಟುಂಬಗಳ ಮಕ್ಕಳಿಗೆ ವಿಶೇಷ ಗಮನ ಕೊಟ್ಟು, ಸಮಾಜದಲ್ಲಿ ಹಿಂದುಳಿದವರನ್ನು ಮುಂದೆ ತರುವ ಪರಿಣಾಮಕಾರಿ ಆಂದೋಳನದಲ್ಲಿ ವಿದ್ಯಾ ಸಂಸ್ಥೆಗಳ ಪಾತ್ರವೂ ಮಹತ್ವದ್ದು ಎಂದು ಅವರು ಈ ಸಂದರ್ಭದಲ್ಲಿ ನುಡಿದರು.

ಭಾರತ ಬೀಡಿ ವರ್ಕ್ಸ್‌ನ ಮಾಲಿಕರಾದ ಗಣಪತಿ ಪೈ ಅವರು ಜ್ಯೋತಿ ಬೆಳಗಿಸಿ ರಜತ ಸಮಾರಂಭವನ್ನು ಉದ್ಘಾಟಿಸಿದರು.

ಇಂದು ದ.ಕ. ಕಾನೂನು ನೆರವು ಸಮಿತಿ ಸಭೆ

ಮಂಗಳೂರು, ಜು. 7–ದಕ್ಷಿಣ ಕನ್ನಡ ಜಿಲ್ಲಾ ಕಾನೂನು ನೆರವು ಸಮಿತಿಯ ಪದಾಧಿಕಾರಿಗಳ ಸಭೆಯೊಂದು ಜುಲೈ 8ರಂದು (ನಾಳೆ) ಇಲ್ಲಿ ನಡೆಯಲಿದೆ.

ಸಭೆಯನ್ನು ಉದ್ದೇಶಿಸಿ ರಾಜ್ಯದ ಕಾನೂನು, ಸಂಸದೀಯ ವ್ಯವಹಾರ ಹಾಗೂ ನಗರಾಭಿವೃದ್ಧಿ ಸಚಿವ ಪ್ರೊ। ಲಕ್ಷ್ಮೀಸಾಗರ್ ಅವರು ಮಾತನಾಡಲಿದ್ದಾರೆ.

ಸಭೆಯಲ್ಲಿ ಸೇವಾ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿ, ಉಚಿತ ಕಾನೂನು ನೆರವು ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವಲ್ಲಿ, ಸಲಹೆ ಸೂಚನೆಗಳನ್ನು ನೀಡಲು ಜಿಲ್ಲಾ ಕಾನೂನು ನೆರವು ಸಮಿತಿಯ ಕಾರ್ಯದರ್ಶಿ ಅವರು ವಿನಂತಿಸಿದ್ದಾರೆ.



[illegible] ಸತ್ಕಾರ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸಾಮಾಜಿಕ

ಮುಂಗಾರು
ಶುಕ್ರವಾರ, ಜುಲೈ 5, 1985

ಮುಂದರಿದ "ಕಾಂಗ್ರೆಸ್ ಸಂಸ್ಕಾರ"

ಕಳೆದ ಐದು ತಿಂಗಳುಗಳಿಂದ ಅನಿಶ್ಚಯತೆಯ ನೆರಳಲ್ಲಿ ವಿರಮಿಸಿದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಇದೀಗ ಪೂರ್ಣವಾಗಿ ರಚಿತವಾದ ಸುದ್ದಿ ಬಂದಿದೆ. ಉನ್ನತ ಮಟ್ಟದಲ್ಲಿ ಸುದೀರ್ಘ ಯೋಜನೆ-ಸಮಾಲೋಚನೆಯ ನಂತರ ಪುನರ್ರಚಿತವಾದ ಈ ಪ್ರದೇಶ ಕಾಂಗ್ರೆಸ್ ಸಮಿತಿ ಮುಂದಿನ ದಿನಗಳಲ್ಲಿ ಸುದ್ದಿ ಮಾಡುವಷ್ಟಾದರೂ ಸಕ್ರಿಯವಾಗಬಹುದು.

ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದಾಗ ಪ್ರದೇಶ ಕಾಂಗ್ರೆಸ್ ಸಮಿತಿಯ ನೇಮಕ ಅಥವಾ ರಚನೆಗೆ ಇರುತ್ತಿದ್ದ ಆಸಕ್ತಿ-ಕುತೂಹಲ ಈಗ ವಿರೋಧ ಪಕ್ಷವಾಗಿರುವ ಈ ಪಕ್ಷದ ಸಮಿತಿಯ ಪುನರ್ರಚನೆಯ ವಿಚಾರದಲ್ಲಿ ಕಂಡು ಬಂದಿಲ್ಲ. ಅಧಿಕಾರದ ಆಸೆಯ ಮೂಲವಾದ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಇದು ಸಹಜ ಕೂಡಾ.

ಅಧಿಕಾರದಲ್ಲಿರುವ ರಾಜಕೀಯ ಪಕ್ಷವೊಂದರ ಸ್ತುತಿ ಮಾಡುತ್ತ ಸುತ್ತ ತಿರುಗುವ ಮಂದಿ ಬಹಳ ಇರುತ್ತಾರೆ. ಅಂತಹ ಪಕ್ಷದ "ನಿಷ್ಠಾವಂತರ" ದೊಡ್ಡ ಸೇನೆಯ ಸೃಷ್ಟಿಯೂ ಆಗುತ್ತದೆ. ಆ ಪಕ್ಷದಲ್ಲಿರುವವರಿಗೂ ಉತ್ಸಾಹದ ರೆಕ್ಕೆ-ಪುಕ್ಕ ಬಂದು ಅವಕಾಶಗಳಿಗಾಗಿ ಹಾರಾಟ ನಡೆಯುತ್ತದೆ. ಈಗ ಯಾವುದೇ ತೆರನ ಅವಕಾಶಗಳ ಆಕರ್ಷಣೆ ಇಲ್ಲದೆ ತನ್ನ ಉಳಿವಿಗೆ ತತ್ವದ ನೆಲೆ ಹಿಡಿದು ಶ್ರಮದ ದಾರಿಯಲ್ಲಿ ನಡೆಯಬೇಕಾದ ಕಾಂಗ್ರೆಸ್ ಪಕ್ಷ ಕಳೆಗುಂದಿ ಕೂತಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಆ ಪಕ್ಷದ ಪ್ರಮುಖರೆಲ್ಲಾ ಅಧಿಕಾರ ಸ್ಥಾನಗಳಲ್ಲಿ ವಿಹರಿಸಿ ಮೈ ಮನಸ್ಸನ್ನು ಬೆಳೆಸಿಕೊಂಡವರು. ರಾಜಕೀಯವೆಂದರೆ ಅಧಿಕಾರ ಗ್ರಹಣದ ಆಟವೆಂದು ನಂಬಿ ನಡೆಕೊಂಡು ಬಂದವರು. ರಾಜ್ಯದಲ್ಲಿ ವಿರೋಧ ಪಕ್ಷವಾಗಿ ಸೆಟೆದು ನಿಂತು, ಜನಪರವಾದ ನಿಲುವು ತಳೆದು ಅಧಿಕಾರಸ್ಥರಿಂದ ಆಗುವ ಅನ್ಯಾಯಗಳನ್ನು ಬಯಲಿಗೆಳೆವ ಕೆಚ್ಚನ್ನು ಕಳೆಕೊಂಡವರು. ವಿರೋಧ ಪಕ್ಷವೊಂದಕ್ಕೆ ಅನಿವಾರ್ಯ ಸಂಕಟವೆನ್ನಬಹುದಾದ ಜನಪರ ಹೋರಾಟದ ಹಾದಿ ಹಿಡಿಯಲಾಗದೆ ತೆವಳುತ್ತಿರುವರು.

ಇಂತಹ ಒಂದು ಪಕ್ಷ ರಾಜಕೀಯವಾಗಿ ಪ್ರಚಲಿತ ಸ್ಥಿತಿಗೆ ಪ್ರಸ್ತುತವಾಗಬೇಕಾದರೆ ಅದಕ್ಕೊಂದು ಕಾಯಕಲ್ಪದ ಅಗತ್ಯವಿತ್ತು. ಅದರಲ್ಲಿ ಆಂತರಿಕವಾಗಿ ಯಾವುದಾದರೂ ವಿಚಾರ ಮಂಥನ ನಡೆದು ಹೊಸ ಚೇತನ ಉಗಮಕ್ಕೆ ದಾರಿ ಮಾಡಬೇಕಿತ್ತು. ಆದರೆ ಈ ಪಕ್ಷ ಕಳೆದ ಹನ್ನೆರಡು ವರ್ಷಗಳಿಂದ ತನ್ನ ಸುತ್ತ ಹೆಣೆದುಕೊಂಡಿರುವ ನೇಮಕದ ಬಲೆಯಿಂದ ಇನ್ನೂ ಬಿಡಿಸಿಕೊಳ್ಳಲಾಗದ ಕಷ್ಟದಲ್ಲಿರುವುದು ಈಗ ಸ್ಪಷ್ಟವಾಗಿ ಕಾಣುತ್ತಿದೆ. ಹಿಂದೆ ಎಲ್ಲದಕ್ಕೂ "ಮ್ಯಾಡಮ್" ಮುಖ ನೋಡಿ ತಲೆ ಅಲ್ಲಾಡಿಸುತ್ತಿದ್ದ ಈ ಕಾಂಗ್ರೆಸ್ ಜನರು ಈಗ "ಮಿಸ್ಟರ್ ಕ್ಲೀನ್" ಅವರ ಕೃಪೆಗೆ ಅಂಗಲಾಚುತ್ತಿದ್ದಾರೆ. ಪಕ್ಷದಲ್ಲಿ ಯಾರು-ಏನಾಗಿ ಇರಬೇಕೆಂಬುದನ್ನೆಲ್ಲಾ ರಾಜೀವ ಗಾಂಧಿಯವರೇ ಗೆರೆ ಎಳೆದು ಗೊತ್ತುಪಡಿಸಬೇಕಾದ ದುಸ್ಥಿತಿಯಲ್ಲಿ? ಆ ಪಕ್ಷ ಇದೆಯೆನ್ನುವುದನ್ನು ಪುನರ್ರಚಿತ ಪ್ರದೇಶ ಕಾಂಗ್ರೆಸ್ ಸಮಿತಿ ಎತ್ತಿ ತೋರಿಸುತ್ತದೆ.

ಈ ಪುನರ್ರಚಿತ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಹೊಸತನವನ್ನು ಕಣ್ಣಿಗೆ ಎಣ್ಣೆ ಹಾಕಿ ಹುಡುಕಬೇಕಾಗಿದೆ. ಅಧಿಕಾರ ಸ್ಥಾನದಲ್ಲಿ ಸಲ್ಲದ ಅಬ್ಬರ ನಡೆಸಿ ಜನ ಸಮೂಹದ ಮನಸ್ಸು ರೋಸಿ ಹೋಗುವಂತೆ ಮಾಡಿದ ಜನರ "ಸಣ್ಣ ಸಂತೆ" ಈ ಕಾಂಗ್ರೆಸ್ ಸಮಿತಿ ಎನ್ನಬಹುದು. ಅಧಿಕಾರದಲ್ಲಿದ್ದಾಗ ಈ ಪಕ್ಷಕ್ಕೆ ಅಂಟಿದ "ಕಳಂಕದ ಪರೆಯನ್ನು" ಕಳಚಿಕೊಳ್ಳಲು ಈ ಪಕ್ಷಕ್ಕಾಗಿಲ್ಲವೆಂಬುದು ಈಗ ಸ್ಪಷ್ಟವಾಗಿದೆ.

ಒಂದು ಕಾಲದಲ್ಲಿ "ಇಂದಿರಾಗಾಂಧಿಯವರ ಜೀತದಾಳುಗಳು" ಎಂಬ ಅಪಖ್ಯಾತಿಗೆ ಈಡಾದ ಈ ಕಾಂಗ್ರೆಸ್ಸಿಗರು ಇಂದಿನ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಾದರೂ ತಮ್ಮ ಸ್ವಂತಿಕೆಯನ್ನು ತೋರಿಸಬೇಕಿತ್ತು. ನಮ್ಮ ಜನ ಬಯಸುವ ಜನತಂತ್ರಕ್ಕೆ ತಮ್ಮ ಬುದ್ಧಿಪೂರ್ವಕ ಒಲವು ಇದೆಯೆಂಬುದರ ಸಂಜ್ಞೆಯನ್ನಾದರೂ ಹೊರ ಹೊಮ್ಮಿಸಬೇಕಿತ್ತು.

ಮೇ 20ರಂದು ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಕೆ. ಎಚ್. ರಂಗನಾಥ್ ಅವರು ತಮ್ಮ ಸಮಿತಿಯ ರಚನೆಗೆ ಹೊಸದಿಲ್ಲಿಗೆ ಎರಡು ಯಾತ್ರೆ ನಡೆಸಿದರು. ಪಕ್ಷದ ನಾಯಕನನ್ನು ಕಂಡು ಮಾತನಾಡಲು ವಾರಗಟ್ಟಲೆ ಕಾದು ಕುಳಿತರು. ಕೊನೆಗೂ ಪ್ರಯಾಸಪಟ್ಟು ಪಕ್ಷದ "ಮಹಾನಾಯಕನ" ದರ್ಶನ ಪಡೆದು ತಾವು ತಯಾರಿಸಿದ ಪಟ್ಟಿಯನ್ನು ತೋರಿಸಿ, ಅವರು ಹೇಳಿದ ಬದಲಾವಣೆಗೆ ತಲೆಬಾಗಿ ಪಟ್ಟಿಗೆ ಅವರ ಒಪ್ಪಿಗೆಯ ತೀರ್ಥ ಪ್ರೋಕ್ಷಣೆ ಮಾಡಿಸಿಕೊಂಡು ಬಂದರು.

ಈ ಮಹಾ ಕಾಯಕದಲ್ಲಿ ತಯಾರಾದ ಪಟ್ಟಿಯಾದರೂ ಎಂತಹದ್ದು ? ಇದರಲ್ಲಿ "ಕಾಂಗ್ರೆಸ್ ಸಂಸ್ಕೃತಿ"ಯ ಒಸರೇ ಹೆಚ್ಚಾಗಿ ಕಾಣುತ್ತಿದೆ. ಕಾಂಗ್ರೆಸ್ ಜನರ ದೌರ್ಬಲ್ಯವಾಗಿ ಬೆಳೆದು ಬಂದಿರುವ "ಸ್ಥಾನಾಪೇಕ್ಷೆ"ಯನ್ನು ತಣಿಸುವ ಪ್ರಯತ್ನ ಇದರಲ್ಲಿ ಎದ್ದು ಕಾಣುತ್ತದೆ. ರಾಜ್ಯದಲ್ಲಿ ಒಂದು ವಿರೋಧ ಪಕ್ಷವಾಗಿ ಕೆಲಸ ಮಾಡಬೇಕಾದ ಕಾಂಗ್ರೆಸ್‌ಗೆ ನಾಲ್ವರು ಉಪಾಧ್ಯಕ್ಷರ ಅಗತ್ಯವಾದರೂ ಏನಿದೆ? ಒಬ್ಬರೂ ಮೈಕೊಡವಿ ಕೆಲಸ ಮಾಡಲಾಗದ ಸ್ಥಿತಿಯಲ್ಲಿರುವ ಒಂದು ರಾಜ್ಯ ಸಮಿತಿಯಲ್ಲಿ ಆರು ಮಂದಿ ಪ್ರಧಾನ ಕಾರ್ಯದರ್ಶಿಗಳು ಮಾಡಬಹುದಾದ ಕೆಲಸವಾದರೂ ಏನು ? ಹಲವರು ಕೈ ಹಾಕಿದ ಅಡುಗೆ ಹದಗೆಡುವುದೆಂಬ ಮಾತಿದೆ. ಪದವಿಗಾಗಿ ಪೈಪೋಟಿ ನಡೆಸುವುದರಲ್ಲಿ ನಿಸ್ಸೀಮರೆನ್ನಿಸಿರುವ ಕಾಂಗ್ರೆಸ್ ಜನರ ಜಗಳಕ್ಕೆ ಇದು ದಾರಿ ಮಾಡೀತಲ್ಲದೆ ಮತ್ತೇನೂ ಇಲ್ಲ. ನಲ್ವತ್ತು ಮಂದಿ ಸದಸ್ಯರ ಸಮೂಹದಲ್ಲೂ ಅಧ್ಯಕ್ಷ ರಂಗನಾಥ್ ಹೇಳಿದ ಹೊಸತನವನ್ನು ಕಾಣಲು ನಮ್ಮಿಂದ ಸಾಧ್ಯವಾಗಿಲ್ಲ. ಮಾಜಿ ಮುಖ್ಯಮಂತ್ರಿಗಳನ್ನೆಲ್ಲ ಒಳಗೊಂಡಿರುವ ಈ ಸಮಿತಿ ರಂಗನಾಥ್ ಅವರ ರಕ್ತದ ಒತ್ತಡವನ್ನು ಹೆಚ್ಚಿಸಬಲ್ಲುದೇ ಹೊರತು ಕಾಂಗ್ರೆಸ್ ಪಕ್ಷವನ್ನು ಇಂದಿನ ರಾಜಕೀಯ ಸ್ಥಿತಿಗೆ ಪ್ರಸ್ತುತವಾಗಿ ಮಾಡಲಾರದು. ಯಾಕೆಂದರೆ ಈ ಪುನರ್ರಚಿತ ಕಾಂಗ್ರೆಸ್ ಸಮಿತಿಯಲ್ಲಿ ಆ ಪಕ್ಷವನ್ನು ಬಾಧಿಸುತ್ತ ಬಂದಿರುವ "ಬುದ್ಧಿ ಬಡತನ"ವನ್ನು ನಿವಾರಿಸುವ ಯಾವ ಗುಣವೂ ಇಲ್ಲವೆನ್ನಬೇಕಾಗಿದೆ.

...ದಲ್ಲಿ ದೂರವಾಣಿ ವಿನಿಮಯ ಕೇಂದ್ರವನ್ನು ಶಾಸಕ ಸಿ. ಟಿ. ಅಹಮ್ಮದ್ ಅಲಿ ಅವರು ... ಕೃಷ್ಣ ನಾಯ್ಕ್, ಪದ್ಮನಾಭನ್ ಹಾಗೂ ಡಾ॥ ವೈ. ಕೇಶವ ಭಟ್ ಅವರೂ ಇದ್ದಾರೆ.

ಅಖಂಡತಾ ಪಕ್ಷಾಚರಣೆ:

ಜುಲೈ 7ಕ್ಕೆ ಬಿಜೆಪಿ ಸಾರ್ವಜನಿಕ ಸಭೆ

ಮಂಗಳೂರು, ಜು. 4– ಬಿ. ಜೆ. ಪಿ. ವಿಧಾನಸಭಾ ಕ್ಷೇತ್ರ ಸಮಿತಿಯ ಹಾಗೂ ಪಕ್ಷದ ಕಾರ್ಪೊರೇಟರರ ಜಂಟಿ ಸಭೆಯೊಂದು ಸ್ಟಾನ್ಲಿ ಡಿ'ಸೋಜ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆಯಿತು.

ದೇಶದ ಅಖಂಡತೆಗಾಗಿ ಬಲಿದಾನ ಮಾಡಿದ ಹುತಾತ್ಮ ಡಾ॥ ಶಾಮ ಪ್ರಸಾದ್ ಮುಖರ್ಜಿ ಅವರ ಜಯಂತಿಯ ದಿನವಾದ ಜುಲೈ 7ರಂದು ಬಿ. ಜೆ. ಪಿ. ಮಂಗಳೂರು ಘಟಕದ ಆಶ್ರಯದಲ್ಲಿ 'ರಾಷ್ಟ್ರೀಯ ಅಖಂಡತಾ ಪಕ್ಷಾಚರಣೆ' ಪ್ರಯುಕ್ತ ಸಾರ್ವಜನಿಕ ಸಭೆಯನ್ನು ಏರ್ಪಡಿಸಬೇಕೆಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಮಾಜಿ ಶಾಸಕ ವಿ. ಧನಂಜಯ ಕುಮಾರ್ ಅವರು ರಾಷ್ಟ್ರೀಯ ಅಖಂಡತಾ ಪಕ್ಷಾಚರಣೆಯನ್ನು ಪಕ್ಷದ ಕೇಂದ್ರ ಸಮಿತಿ ಆಚರಿಸಲು ಕರೆಕೊಟ್ಟ ಹಿನ್ನೆಲೆಯನ್ನು ವಿವರಿಸುತ್ತಾ, ರಾಷ್ಟ್ರೀಯ ಅಖಂಡತೆಯ ಭಾವನೆಯನ್ನು ಜನತೆಯಲ್ಲಿ ಜಾಗೃತಿಗೊಳಿಸುವಲ್ಲಿ ಈ ಕಾರ್ಯಕ್ರಮ ಮಹತ್ವಪೂರ್ಣವಾಗಿದ್ದು, ಇದರ ಯಶಸ್ಸಿಗೆ ಎಲ್ಲರೂ ಕಾರ್ಯಪ್ರವೃತ್ತರಾಗಬೇಕೆಂದು ವಿನಂತಿಸಿದ್ದಾರೆ.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ. ನಾರಾಯಣ ಶೆಟ್ಟಿ ಅವರೂ ಸಭೆಯನ್ನುದ್ದೇಶಿಸಿ ಮಾತನಾಡಿದರು.

...ಧರ್ಮವನ್ನು ...ಬೇಕಾಗಿದೆ

...ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ರಘುನಾಥ್ ಬಾಯರು ಅವರು ಸ್ವಾಗತಿಸಿ, ಶಿವಾಜಿರಾವ್ ಮೋರೆ ಅವರು ವಂದಿಸಿದರು.

ಕುದ್ರೆ ಕೂಡ್ಲು ವಿಷ್ಣು ಭಟ್ ಮತ್ತು ಬಳಗದವರಿಂದ ಸಂಗೀತ ಕಛೇರಿ ನಡೆಯಿತು.

ಲಯನ್ಸ್ ವತಿಯಿಂದ ವನಮಹೋತ್ಸವ

ಬಂಟ್ವಾಳ, ಜು. 4– ಬಂಟ್ವಾಳ ಲಯನ್ಸ್ ಕ್ಲಬ್ ವತಿಯಿಂದ ವನಮಹೋತ್ಸವ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು.

ರೋಟರಿ ಕ್ಲಬ್ ಬಂಟ್ವಾಳ ಇದರ ನೂತನ ಅಧ್ಯಕ್ಷರಾದ ಅನಂತರಾಜ ಇಂದ್ರ ಅವರು ಬಿ. ಸಿ. ರೋಡು ರೈಲ್ವೇ ಬ್ರಿಜ್ ಬಳಿ ದೇವದಾರು ಸಸಿ ನೆಡುವ ಮೂಲಕ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಮಾರಂಭದಲ್ಲಿ ಸ್ಥಳೀಯ ರಾಜಕೀಯ ಪಕ್ಷಗಳ ಮುಖಂಡರು ಹಾಜರಿದ್ದು ಕಾರ್ಯಕ್ರಮದ ಉದ್ದೇಶವನ್ನು ಸ್ವಾಗತಿಸಿ, ಯಶಸ್ಸನ್ನು ಕೋರಿದರು.

ಮಾರ್ಕ್ಸಿಸ್ಟ್ ಕಾರ್ಯದರ್ಶಿ ಬಿ. ವಾಸು ಗಟ್ಟಿ, ಬಿ. ಜೆ. ಪಿ. ಬಂಟ್ವಾಳ ವಲಯಾಧ್ಯಕ್ಷ ಬಿ. ಪಾಂಡುರಂಗಪ್ರಭು ಹಾಗೂ ಸಿ. ಪಿ. ಐ. ಕಾರ್ಯದರ್ಶಿ ವಿಶ್ವನಾಥ ನಾಯಕ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಹೆಬ್ರಿ, ಜು. 4- ಹೆಬ್ರಿಯ ಸರಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಪ್ರಥಮ ಪದವಿ ತರಗತಿಗೆ ವಿದ್ಯಾರ್ಥಿಗಳ ಸೇರ್ಪಡೆಗೆ ಸರಕಾರದಿಂದ ನಿರ್ದೇಶನ ಬಂದಿರುವುದಾಗಿ ಕಾಲೇಜು ಅಭಿವೃದ್ಧಿ ಸಮಿತಿಯ ಕೋಶಾಧಿಕಾರಿ ಗೋಪಾಲ ಭಂಡಾರಿ ಅವರು ತಿಳಿಸಿದ್ದಾರೆ.

ಕಾಲೇಜು ಕಟ್ಟಡದ ನಿರ್ಮಾಣ ಕೆಲಸ ಭರದಿಂದ ನಡೆಯುತ್ತಿದ್ದು ಶೀಘ್ರದಲ್ಲೇ ಹೊಸ ಕಟ್ಟಡದಲ್ಲಿ ಕಾಲೇಜು ತರಗತಿಗಳು ಆರಂಭವಾಗಲಿವೆಯೆಂದೂ ಅವರು ಹೇಳಿದ್ದಾರೆ.

ಸರಕಾರದ ಈ ನಿರ್ದೇಶನದಿಂದಾಗಿ ಕಾಲೇಜಿನ ತರಗತಿ ಆರಂಭದ ಬಗ್ಗೆ ಸಾರ್ವಜನಿಕರಲ್ಲಿ ಇದ್ದ ಅನಿಶ್ಚಿತತೆ ದೂರವಾದಂತಾಗಿದೆ.

ಶೇ.100 ಫಲಿತಾಂಶ

ಶಿವಮೊಗ್ಗ, ಜು. 4– 1985ನೇ ಮೇ ತಿಂಗಳಲ್ಲಿ ನಡೆದ ಕನ್ನಡ ಟೈಪ್ ರೈಟಿಂಗ್ ಪರೀಕ್ಷೆಯಲ್ಲಿ ಗುರುದೇವ ವಾಣಿಜ್ಯ ವಿದ್ಯಾಲಯದ ... ವಿದ್ಯಾರ್ಥಿಗಳು ಶೇಕಡಾ 100 ಫಲಿತಾಂಶ ತಂದಿದ್ದಾರೆ. ಇಂಗ್ಲೀಷ್ ಟೈಪ್ ರೈಟಿಂಗ್ ಜೂನಿಯರ್ ಮತ್ತು ಸೀನಿಯರ್ ಹಾಗೂ ಇಂಗ್ಲಿಷ್ ಶೀಘ್ರಲಿಪಿ ಪರೀಕ್ಷೆಗಳಲ್ಲಿ ಕೂಡಾ ಈ ಶಾಲೆ ಉತ್ತಮ ಫಲಿತಾಂಶ ಗಳಿಸಿದೆ ಎಂದು ತಿಳಿದು ಬಂದಿದೆ.

ದೆಹಲಿಗೆ ಬ್ಯಾನರ್ಜಿ

ಬೆಂಗಳೂರು, ಜು. 4– ಶುಕ್ರವಾರ ದೆಹಲಿಯಲ್ಲಿ ನಡೆಯಲಿರುವ ರಾಜ್ಯಪಾಲರುಗಳ ಸಮಾವೇಶದಲ್ಲಿ ಪಾಲ್ಗೊಳ್ಳಲು ಎ. ಎನ್. ಬ್ಯಾನರ್ಜಿಯವರು ಇಂದು ರಾಜಧಾನಿಗೆ ತೆರಳಿದರು.

ರಾಜ್ಯಪಾಲರ ಸಮಾವೇಶದ ಅಧ್ಯಕ್ಷತೆಯನ್ನು ರಾಷ್ಟ್ರಪತಿ ಗ್ಯಾನಿ ಜೈಲ್‌ಸಿಂಗ್ ಅವರು ವಹಿಸಲಿದ್ದಾರೆ.



ಸಾರ್ವಜನಿಕರ ಅವಗಾಹನೆಗೆ

ನನ್ನ ವೈಯಕ್ತಿಕ ಹೆಸರಲ್ಲಿ ಹಾಗೂ ಕಟೀಲು ಗೋಪಾಲಕೃಷ್ಣ ಆಸ್ರಣ್ಣ ಚಾರಿಟೇಬಲ್ ಟ್ರಸ್ಟ್ (ರಿ.) ...

ಮುಂಗಾರು

ಸಣ್ಣ ಮನಸ್ಸು ಸಲ್ಲದು

ಕರ್ನಾಟಕದ ಆರ್ಥಿಕ ಅಭಿವೃದ್ಧಿಗೆ ದೊಡ್ಡ ಪ್ರಮಾಣದಲ್ಲಿ ಚಾಲನೆ ನೀಡುವ ಉದ್ದೇಶದಿಂದ 1971 ರಲ್ಲಿ ಹೊಸ ಪೇಟೆಯಲ್ಲಿನ ವಿಜಯನಗರ ಉಕ್ಕು ಕಾರ್ಖಾನೆಗೆ ಅಂದಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅಡಿಗಲ್ಲು ಹಾಕಿದರು. ಅಂದಿನಿಂದ ಇಂದಿನ ವರೆಗೂ ಈ ಯೋಜನೆ ನೆನೆಗುದಿಗೆ ಬಿದ್ದಿದೆ.

ಈ ಯೋಜನೆಗಾಗಿ ಸಾವಿರಾರು ಎಕರೆ ಕೃಷಿ ಭೂಮಿಯನ್ನು ಸರಕಾರ ವಶಕ್ಕೆ ತೆಗೆದು ಕೊಂಡಿದೆ. ನೀಲಿ ನಕಾಶೆ ತಯಾರಿಸಲು, ಸಮೀಕ್ಷೆ ನಡೆಸಲು, ಜಮೀನು ವಶಪಡಿಸಲು ಹಾಗೂ ಪ್ರಾರಂಭಿಕ ಕೆಲಸ ಗಳಿಗಾಗಿ ಈಗಾಗಲೇ ಎಂಟೂವರೆ ಕೋಟಿ ರೂಪಾಯಿ ವಿನಿಯೋಗ ಮಾಡಲಾಗಿದೆ. ಯೋಜನೆಗೆ ಸಂಬಂಧಿಸಿ ಕಚೇರಿಗಳೂ, ವಾಹನಗಳೂ, ಸಿಬ್ಬಂದಿ ವರ್ಗವೂ ಇದ್ದು ಸಂಬಳ ಸಾರಿಗೆಗಾಗಿ ಈ ವರ್ಷವೂ ಒಂದು ಕೋಟಿ ರೂಪಾಯಿಯನ್ನು ಕೇಂದ್ರ ಆಯವ್ಯಯ ಮುಂಗಡ ಪತ್ರದಲ್ಲಿ ಕೊಡಲಾಗಿದೆ.

ಹದಿನಾಲ್ಕು ವರ್ಷಗಳ ಹಿಂದೆ ಅಡಿಗಲ್ಲು ಹಾಕಿ ದರೂ 1983 ರ ತನಕ ಈ ಕಾರ್ಖಾನೆಯ ಕೆಲಸ ವೇನೂ ನಡೆಯಲಿಲ್ಲ. ಕೇಂದ್ರದಲ್ಲಿಯೂ ರಾಜ್ಯದ ಲ್ಲಿಯೂ ಎರಡು ಕಡೆ ಈ ಅವಧಿಯಲ್ಲಿ ಕಾಂಗ್ರೆಸ್ ಸರಕಾರಗಳೇ ಇದ್ದುದರಿಂದಲೋ ಏನೋ ಕಾರ್ಖಾನೆ ಯನ್ನು ಕೈಬಿಟ್ಟು ತಮ್ಮ ಬೆನ್ನಿಗೆ ಚೂರಿ ಹಾಕಿಯಾರು ಎಂಬ ಭಾವನೆ ಕರ್ನಾಟಕದ ಜನರಿಗೆ ಬರಲಿಲ್ಲ. ಎಂ ದಾದರೊಂದು ದಿನ ಆದೀತು ಎಂಬ ನಿರಾಶ ಮನಸ್ಸಿ ನಿಂದಲೇ ಕಾದು ಕುಳಿತರು.

1983 ರಲ್ಲಿ ರಾಜ್ಯದಲ್ಲಿ ಜನತಾ ಪಕ್ಷ ಸರಕಾರ ಬಂದ ಹೊಸತರಲ್ಲಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಪತ್ರಿಕಾ ಗೋಷ್ಠಿಯೊಂದರಲ್ಲಿ "ಈ ಯೋಜನೆ ಲಾಭದಾಯಕ ವಲ್ಲ, ಆದ್ದರಿಂದ ಕಾರ್ಯ ಸಾಧ್ಯವಲ್ಲ" ಎಂದು ಉದ್ಗರಿಸಿ ಕಣಜದ ಗೂಡಿಗೆ ಕಲ್ಲೆಸೆಯುವ ಕೆಲಸ ಮಾಡಿದರು. ಸರಕಾರದ ಮನಸ್ಸಿ ನಲ್ಲಿ ಏನಿದೆ ಅನ್ನುವುದು ಅಂದು ಅವರ ಉದ್ಗಾರದ ರೂಪದಲ್ಲಿ ಹೊರಬಿತ್ತೆಂದು ಹೇಳಿದರೆ ಹೆಚ್ಚು ಸರಿ ಅನಿಸಬಹುದೇನೋ. ಈ ಹಿನ್ನೆಲೆಯಲ್ಲಿ ಕರ್ನಾಟಕ ದಲ್ಲಿ ಕ್ಷೋಭೆ ಕಾಣಿಸಿಕೊಂಡು ಚಳವಳಿಗಳು ನಡೆ ದವು. ಕಾರ್ಖಾನೆಯನ್ನು ಕೈ ಬಿಟ್ಟಿಲ್ಲ. ಖಂಡಿತಾ ಕಟ್ಟು ತ್ತೇವೆ ಎಂಬ ಭರವಸೆ ಈ ಚಳವಳಿಯ ಪರಿಣಾಮ ವಾಗಿ ಅಂದಿನ ಕೇಂದ್ರ ಕೈಗಾರಿಕಾ ಸಚಿವ ಎನ್.ಡಿ. ತಿವಾರಿ ಅವರಿಂದ ಬಂತು. ಪರಿಣಾಮವಾಗಿ ಚಳವ ಳಿಗಳು ತಣ್ಣಗಾದವು. ಕರ್ನಾಟಕದ ಜನ ಮತ್ತೆ ಮಲಗಿ ದರು. ಆದರೆ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಯಲ್ಲಿ ಆಸಕ್ತರಾದ ಆರ್. ವೈ. ಘೋರ್ಪಡೆಯಂತಹವರು ನಿದ್ದೆ ಮಾಡಲಿಲ್ಲ. ಇವರು ಕಾಂಗ್ರೆಸ್ ಪಕ್ಷದ ಎಂಪಿಯಾ ದರೂ ವಿಜಯ ನಗರ ಕಾರ್ಖಾನೆ ವಿಷಯದಲ್ಲಿ ಕೇಂ ದ್ರವನ್ನು ಸದಾ ಚುಚ್ಚುತ್ತಲೇ ಬಂದರು. ಉಪವಾಸ ಸತ್ಯಾಗ್ರಹ ಮಾಡುವುದಾಗಿಯೂ ಬೆದರಿಕೆ ಹಾಕಿ ದರು.

ಕಾರ್ಖಾನೆಗೆ ಮೊದಲು ಯೋಜಿಸಿದ್ದ ತಂತ್ರ ಜ್ಞಾನ ಹಳೆಯದಾಯಿತು. ಹೊಸ ತಂತ್ರಜ್ಞಾನ ಅಳವ ಡಿಸಲಾಗುವುದು, ಅದಕ್ಕಾಗಿ ಯುರೋಪಿನಲ್ಲಿ ಹುಡು ಕುತ್ತಿದ್ದೇನೆ ಎಂಬ ಹೊಸ ನಾಟಕವನ್ನು ಅಂದಿನ ಕೇಂದ್ರ ಸರಕಾರದ ಮುಖಂಡರು ಆಡಿದರು. ಸಮಸ್ಯೆ ಮತ್ತೆ ಮಲಗಿತು.

ಯೋಜನೆಯನ್ನು ಮತ್ತೆ ಮಲಗಿಸಲು ಈಗಿನ ಉಕ್ಕು ಮಂತ್ರಿ ವಸಂತಸಾಠೆಯವರಿಗೆ ಕರ್ನಾಟಕದಲ್ಲಿರುವ ಅಪಾರ ವಿದ್ಯುತ್ ಅಭಾವ ಸುಲಭವಾದ ನೆಪವಾಗಿ ಕೈಗೆ ಸಿಕ್ಕಿದೆ. ಅದನ್ನವರು ಹೇಳಿಯೇ ಬಿಟ್ಟಿದ್ದಾರೆ, ವಿದ್ಯುತ್ ಕೊಡುವ ಭರವಸೆ ರಾಜ್ಯದಿಂದ ಬಾರದಿರುವುದೆ ಯೋಜನೆ ಏಳದಿರಲು ಕಾರಣವೆಂದು ಅವರೀಗ ಹೇಳಿದ್ದಾರೆ. ಅದನ್ನು ವಿದ್ಯುತ್ ಮಂತ್ರಿ ಜೆ. ಎಚ್. ಪಟೇಲ್ ಅಲ್ಲಗಳೆದು ನಿಜ ಬಣ್ಣ ಬಯಲು ಮಾಡಿದ್ದಾರೆ.

ಯೋಜನೆಯ ವೆಚ್ಚ ಹೆಚ್ಚಾಗಿರುವುದರಿಂದ ಅದರ ಲಾಭದಾಯಕತೆ ನಷ್ಟವಾಗಿದೆ. ಆದ್ದರಿಂದ ಕಾರ್ಖಾನೆ ನಿರ್ಮಾಣ ಕಷ್ಟಸಾಧ್ಯವೆಂದು ಈಗಿನ ಪ್ರಧಾನಿ ರಾಜೀವಗಾಂಧಿ ಮುಖ್ಯಮಂತ್ರಿ ರಾಮ ಕೃಷ್ಣಹೆಗಡೆಯವರಿಗೆ ತಿಳಿಸಿದ್ದಾರೆ. ಈ ಯೋಜನೆ ಯನ್ನು ಕೈಬಿಟ್ಟ ಪಕ್ಷದಲ್ಲಿ ಕರ್ನಾಟಕಕ್ಕೆ ಅಂತಹುದೇ ಬೇರೊಂದು ಹೊಸ ಯೋಜನೆಯನ್ನು ಕೊಡಲಾಗು ವುದೆಂದು ಕೂಡ ಪ್ರಧಾನಿ ಆಶ್ವಾಸನೆ ಕೊಟ್ಟಿದ್ದಾ ರೆಂಬ ಸುದ್ದಿಯೂ ಉಂಟು.

ಕೇಂದ್ರದಲ್ಲಿ ಜನತಾ ಸರಕಾರ ಆಳ್ವಿಕೆಯಲ್ಲಿದ್ದ ಎರಡು ವರ್ಷಗಳ ಸಂಕ್ಷಿಪ್ತ ಕಾಲದಲ್ಲಿಯೂ ವಿಜಯ ನಗರ ಕಾರ್ಖಾನೆ ವಿಷಯದಲ್ಲಿ ಮೋಸವೆ ನಡೆಯಿತು. ಅಂದಿನ ಉಕ್ಕಿನ ಮಂತ್ರಿಯಾಗಿದ್ದ ಬಿಜು ಪಟ್ನಾ ಯಕ್ ಈ ಕಾರ್ಖಾನೆಯನ್ನು ಬದಿಗೊತ್ತಿ ತನ್ನ ರಾಜ್ಯವಾದ ಒರಿಸ್ಸಾದ ಪರದೀಪ್‌ನಲ್ಲಿ ಹೊಸ ಉಕ್ಕಿನ ಕಾರ್ಖಾನೆಯೊಂದಕ್ಕೆ ಚಾಲನೆ ಕೊಟ್ಟರು. ಅದು ಈಗ ಕಟ್ಟಿ ಸಿದ್ಧವಾಗುತ್ತಿದೆ. ಈ ಮೋಸವನ್ನು ಮರೆ ಮಾಚಲು ಅಂದಿನ ಕೈಗಾರಿಕಾ ಮಂತ್ರಿ ಜಾರ್ಜ್ ಫೆರ್ನಾಂಡಿಸ್ "ಉಕ್ಕು ಕಾರ್ಖಾನೆಗೆ ಕಲ್ಲಿದ್ದಲು ತರಲು ಸಮುದ್ರಬೇಕು, ಆದ್ದರಿಂದ ಮಂಗಳೂರಲ್ಲಿ ಮಾಡುತ್ತೇವೆ" ಎಂದು ಹುಸಿ ಬಾಂಬೊಂದನ್ನು ಹಾರಿಸಿದರು.

ಇದು ವಿಜಯನಗರ ಉಕ್ಕಿನ ಕಾರ್ಖಾನೆಯ ಕರ್ಮ ಕಥೆ. ಎಲ್ಲರೂ ಕರ್ನಾಟಕದ ಜನರನ್ನು ಮೋಸ ಮಾಡುತ್ತಲೇ ಬಂದಿದ್ದಾರೆ. ಅವರ ಮೂಗಿಗೆ ತುಪ್ಪ ಹಚ್ಚಿ ಬಿಟ್ಟಿದ್ದಾರೆ. ವಿಜಯನಗರ ಕಾರ್ಖಾನೆಯ ಜತೆಗೇ ಅಡಿಗಲ್ಲು ಹಾಕಲಾದ ತಮಿಳ್ನಾಡಿನ ಸೇಲಂ ಕಾರ್ಖಾನೆ ಈಗ ಉತ್ಪಾದನೆ ನಡೆಸುತ್ತಿದೆ. ವಿಶಾಖ ಪಟ್ಟಣದಲ್ಲಿಯೂ ಒಂದು ದೊಡ್ಡ ಉಕ್ಕಿನ ಕಾರ್ಖಾನೆ ಎದ್ದಿದೆ. ಇದೀಗ ಕೇಂದ್ರ ಸರಕಾರ ಘೋಷಣೆ ಹಾಕುತ್ತಿರುವ ಮಂಗಳೂರಿನ ತೈಲಾಗಾರಕ್ಕೂ ಇದೇ ಗತಿ ಆಗದು ಎಂಬುದಕ್ಕೆ ಆಧಾರಗಳಿಲ್ಲ. ಯಾದಿಯಲ್ಲಿ ಎರಡನೆ ಸ್ಥಾನದಲ್ಲಿದ್ದ ಹರ್‍ಯಾನಾದ ತೈಲಾಗಾರದ ಕೆಲಸ ಈಗಾಗಲೇ ಆರಂಭ ವಾಗಿದೆ.

ಇದು ನಮ್ಮ ದೇಶದಲ್ಲಿ ನಡೆದು ಬಂದಿರುವ ಸಂಪ್ರದಾಯ. ಅಭಿವೃದ್ಧಿಯ ಕೆಲಸಗಳು ರಾಜ ಕೀಯ ಆಟಕ್ಕೆ ಆಹಾರವಾಗುತ್ತವೆ. ಪರಿಣಾಮ ದಲ್ಲಿ ನಾಡು ಸೊರಗಿ ಹೋಗುತ್ತದೆ. ಈಗ ಕೇಂದ್ರ ದಲ್ಲಿ ಬಂದ ಹೊಸ ದೃಷ್ಟಿಯ ಹೊಸ ಸರಕಾರವಾ ದರೂ ಇಂಥ ಆಮಿಷಗಳಿಗೆ ಬಲಿಯಾಗದೆ, ಸಣ್ಣ ಮನಸ್ಸನ್ನು ಪ್ರದರ್ಶಿಸದೆ ನೇರ ನಡೆಯನ್ನು ಹಿಡಿದು ವಿಜಯ ನಗರ ಸ್ಥಾವರಕ್ಕೆ ಅತ್ಯಂತ ಬೇಗ ಮಂಜೂ ರಾತಿ ಕೊಟ್ಟು ಕಟ್ಟಿ ನಿಲ್ಲಿಸುವುದೆಂದು ಕರ್ನಾಟಕದ ಜನ ನಿರೀಕ್ಷಿಸುತ್ತಾರೆ.

ವಿಷ್ಣು-ಭವ್ಯ ಜೋಡಿ

"ದ್ವಾರಕೀಶ್ ಚಿತ್ರ" ಸಂಸ್ಥೆಯ 25ನೆಯ ವರ್ಣ ಚಿತ್ರ "ನೀ ಬರೆದ ಕಾದಂಬರಿ" ಸಂಗೀತಮಯ ಪ್ರಣಯ ಪ್ರಧಾನ ವರ್ಣ ಚಿತ್ರದ ಚಿತ್ರೀಕರಣವು ಮದರಾಸಿನ ವಾಹಿನಿ ಬಂಗಲೆಯೊಂದರಲ್ಲಿ ಕಳೆದ ತಿಂಗಳ 21 ರಂದು ಸದ್ದು ಗದ್ದಲವಿಲ್ಲದೆ ಸರಳವಾದ ಪೂಜಾ ಸಮಾರಂಭದೊಡನೆ ಆರಂಭವಾಯಿತು. ಈ ತನಕ ನಟ, ನಿರ್ಮಾಪಕರಾಗಿದ್ದ ದ್ವಾರಕೀಶ್ ಈ ಚಿತ್ರವನ್ನು ನಿರ್ದೇಶಿಸುವುದರ ಮುಖಾಂತರ ನಿರ್ದೇಶಕನ ಪಟ್ಟವನ್ನೂ ಅಲಂಕರಿಸಿದ್ದಾರೆ.

ವಿಷ್ಣುವರ್ಧನ್, ಮಾ॥ ಅರ್ಜುನ್ ಭಾಗವಹಿಸಿದ್ದ ಚಿತ್ರದ ಮೊದಲ ದೃಶ್ಯಕ್ಕೆ ವಾಣಿಜ್ಯೋದ್ಯಮಿ ಕಿಶೋರ್ ಅವರು ಆರಂಭಫಲಕ ತೋರಿಸಿದರು. ದ್ವಾರಕೀಶ್ ಅವರ ಮಾತೋಶ್ರೀ ಜಯಮ್ಮ ಅವರು ಕ್ಯಾಮರಾ ಚಾಲನೆ ಮಾಡುವುದರ ಮುಖೇನ ಮಗನ ಚಿತ್ರಕ್ಕೆ ಶುಭ ಹಾರೈಸಿದರು. ಮದರಾಸಿನ ಪ್ರಸಾದ್ ರಿಕಾರ್ಡಿಂಗ್ ಥಿಯೇಟರ್‌ನಲ್ಲಿ ವಿಜಯಾನಂದ್ ಅವರ ಸಂಗೀತ ಸಂಯೋಜನೆಯಲ್ಲಿ ಚಿ. ಉದಯಶಂಕರ್ ಹಾಗೂ ಆರ್. ಎನ್. ಜಯಗೋಪಾಲ್ ಅವರುಗಳು ಬರೆದಿರುವ ಐದು ಹಾಡುಗಳ ಧ್ವನಿ ಮುದ್ರಣ ಕಾರ್ಯ ಈಗಾಗಲೇ ಮುಗಿದಿದೆ.

ಚಿ. ಉದಯಶಂಕರ್ ಸಂಭಾಷಣೆ ದೇವಿಪ್ರಸಾದ್ ಅವರ ಛಾಯಾಗ್ರಹಣವಿರುವ ಈ ಚಿತ್ರದಲ್ಲಿ ಮೊಟ್ಟ ಮೊದಲ ಬಾರಿಗೆ ವಿಷ್ಣುವರ್ಧನ್-ಭವ್ಯ ಜೋಡಿಯಾಗಿ ನಟಿಸುತ್ತಿದ್ದಾರೆ. ಚಿತ್ರದ ಉಳಿದ ತಾರಾ ಬಳಗದಲ್ಲಿ ಸಿ. ಆರ್. ಸಿಂಹ, ಸುಂದರರಾಜ್, ಹೇಮಾ ಚೌದುರಿ ಮುಂತಾದವರಿದ್ದಾರೆ.

ಖುರೋಸಾವ ಅವರ 'ರ್‍ಯಾನ್'

16ನೇ ಶತಮಾನದ ಒಬ್ಬ ಯೋಧನ ಯುದ್ಧ ನೈಪುಣ್ಯತೆ ಮತ್ತು ಅವನ ಮಕ್ಕಳ ಜೀವನದ ಸುತ್ತ ಹೆಣೆಯಲಾದ 'ರ್‍ಯಾನ್' ಎಂಬ ಚಿತ್ರ ಜಪಾನಿನ ಅಂತ ರಾಷ್ಟ್ರೀಯ ಖ್ಯಾತಿಯ ನಿರ್ದೇಶಕ ಅಕಿರಾ ಖುರೊಸಾವ ಅವರ ಮುಂದಿನ ಸಾಹಸವಾಗಲಿದೆ.

ಸ್ವದೇಶೀ ನಿರ್ಮಾಪಕರ ಕೀಳು ಅಭಿರುಚಿಗೆ ಸೊಪ್ಪು ಹಾಕದ ಖುರೋಸಾವಾ ಚಿತ್ರ ನಿರ್ಮಾಣದ ಹೊಣೆಯನ್ನು ಫ್ರೆಂಚ್ ನಿರ್ಮಾಪಕರೊಬ್ಬರು ವಹಿಸಿಕೊಂಡಿದ್ದು, ಚಿತ್ರದ ಒಟ್ಟು ವೆಚ್ಚ 82 ಲಕ್ಷ ಡಾಲರ್‌ಗಳೆನ್ನಲಾಗಿದೆ.

ಸಿಗೆಮುಷಾ, ರಾಷೋಮಾನ್ ಮುಂತಾದ ಅಂತರ್‍ರಾಷ್ಟ್ರೀಯ ಮಟ್ಟದ ಚಿತ್ರಗಳನ್ನು ತೆರೆಗಿತ್ತು, ತಮ್ಮ ಅತ್ಯದ್ಭುತ ಪ್ರತಿಭೆಯನ್ನು ಪ್ರದರ್ಶಿಸಿರುವ ಖುರೋಸಾವ ಅವರ ಪ್ರಸ್ತುತ ಚಿತ್ರ ರ್‍ಯಾನ್ (ಕ್ಷೋಭೆ) ಮಹತ್ವಾಕಾಂಕ್ಷೆಯದ್ದು ಎನ್ನಲಡ್ಡಿಯಿಲ್ಲ.

ಹೊಸ ನಿರ್ದೇಶಕನ 'ಹೊಸ ಅನುಭವ'

ಹಲವು ವರ್ಷಗಳಿಂದ ಅಂಧಕಾರದಲ್ಲಿದ್ದ ಪ್ರೀಮಿಯರ್ ಸ್ಟುಡಿಯೋ ಕಳೆದ 24ರ ಭಾನುವಾರ ಎಲ್ಲಿಲ್ಲದ ಕಳೆ. ಪ್ರೀಮಿಯರ್ ಸ್ಟುಡಿಯೋದ ಶ್ರೀಧರ ಕೃಪಾ ಕಂಬೈನ್ಸ್ ಆವರಣದಲ್ಲಿ ಮೈಸೂರಿನ "ಕೆ. ಎಸ್. ಪ್ರೊಡಕ್ಷನ್ಸ್" ಅವರ "ಹೊಸ ಅನುಭವ" ವರ್ಣ ಚಿತ್ರಕ್ಕೆ ಅದ್ದೂರಿಯಾಗಿ ಮುಹೂರ್ತ ನೆರವೇರಿತು. ದೇವರ ಮೇಲೆ ಚಿತ್ರಿಸಲಾದ ಮೊದಲ ದೃಶ್ಯಕ್ಕೆ ಜನಪ್ರಿಯ ನಟ ಡಾ॥ ರಾಜ್‌ಕುಮಾರ್ ಆರಂಭಫಲಕ ತೋರಿಸಿದರು. ಬೆಂಗಳೂರು ಕಿರ್ಲೋಸ್ಕರ್ ವಿದ್ಯುತ್ ಕಾರ್ಖಾನೆ ನೌಕರರ ಗೃಹ ನಿರ್ಮಾಣ ಸಂಘದ ಅಧ್ಯಕ್ಷರಾದ ವೆಂಕಟಸ್ವಾಮಿ ಅವರು ಕ್ಯಾಮರಾ ಚಾಲನೆ ಮಾಡಿದರು.

ಮುಹೂರ್ತದ ನಂತರ ಸರೋಜ ಭಾಗವಹಿಸಿದ್ದ ದೃಶ್ಯಗಳನ್ನು ಚಿತ್ರಿಸಿಕೊಳ್ಳಲಾಯಿತು. ಶಾಂತಾ ಕೇಶವ ಹಾಗೂ ಮುನಿಯಪ್ಪ ಶ್ರೀನಿವಾಸ್ ಅವರುಗಳು ನಿರ್ಮಿಸುತ್ತಿರುವ ಈ ಚಿತ್ರದ ಮುಖಾಂತರ ಕನ್ನಡ ಚಿತ್ರರಂಗಕ್ಕೆ ಕೆ. ಅಣ್ಣಾಜಿ ಎಂಬ ನೂತನ ನಿರ್ದೇಶಕನ ಆಗಮನವೂ ಆಗುತ್ತಿದೆ. ಕೆ. ಅಣ್ಣಾಜಿ ಅವರೇ ಈ ಚಿತ್ರದ ಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ಬರೆದಿದ್ದಾರೆ.

ಹೊಸ ನಿರ್ದೇಶಕರೊಂದಿಗೆ ಹೊಸ ಛಾಯಾಗ್ರಾಹಕರಿಗೂ ಈ ಚಿತ್ರದಲ್ಲಿ ಅವಕಾಶ [illegible]. ಬಿ. ಸಿ. ಗೌರೀಶಂಕರ್ ಸಹಾಯಕರಾಗಿ ದುಡಿಯುತ್ತಿರುವ "[illegible]" ಈ ಚಿತ್ರದ ಮುಖಾಂತರ [illegible] ದಲ್ಲಿ ವಿಜಯಕಾಶಿ, "ಅನುಭವ" ಶಿವಕುಮಾರ್, ರವಿಚಂದ್ರ, ರವಿರಾಜ್, ಶಿವರಾಂ, ಅರವಿಂದ್, ತಾರಾ, ಸರೋಜ, ಕೋಕಿಲ ಮುಂತಾದವರಿದ್ದಾರೆ. ನೃತ್ಯ ಸಂಯೋಜಕರು ಕೃಷ್ಣಕುಮಾರ್.

ಚಕಮುಕಿ ರಾಧ

ಚಿಕ್ಕಮಗಳೂರಿಗೆ 3 ಕಿ. ಮೀ. ದೂರದಲ್ಲಿರುವ ನೆಲ್ಲೂರು ಹೊರಾಂಗಣದಲ್ಲಿ ಚಕಮುಕಿ ರಾಧಾ ಎಂಬ ನವನಟಿಯ ಅಭಿನಯದ ನೃತ್ಯ ಗೀತೆಯ ಚಿತ್ರಣದೊಂದಿಗೆ ಕಳೆದ ತಿಂಗಳ 10 ರಂದು 28 ದಿನಗಳ ಸುದೀರ್ಘ ಕಾಲದ ಒಂದೇ ಹಂತದ ಚಿತ್ರಣದೊಡನೆ "ಮಣಿಪದ್ಮ ಫಿಲಂಸ್" ಅವರ "ದೇವರ ಮನೆ" ವರ್ಣ ಚಿತ್ರದ ಚಿತ್ರೀಕರಣ ಮುಕ್ತಾಯ ಗೊಂಡಿತು.

"ಚಕಮುಕಿ ರಾಧಾ" ಎಂಬ ನಟಿಯನ್ನು ಈ ಚಿತ್ರದ ಮುಖಾಂತರ ಬೆಳ್ಳಿತೆರೆಗೆ ನಿರ್ಮಾಪಕರು ಪರಿಚಯಿಸಿದ್ದಾರೆ. ಈ ತಿಂಗಳ 28 ರಿಂದ ಮಾತುಗಳ ಧ್ವನಿ ಮುದ್ರಣ ಕಾರ್ಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ನಡೆಯಲಿದೆ.

ಸಂಭಾಷಣೆಯನ್ನು ಹೆಚ್. ವಿ. ಸುಬ್ಬರಾವ್ ಬರೆದಿದ್ದಾರೆ. ಗೀತಪ್ರಿಯ, ಶ್ಯಾಮಸುಂದರ ಕುಲಕರ್ಣಿ ಹಾಗೂ ದೊಡ್ಡರಂಗೇಗೌಡ ಅವರುಗಳು ಬರೆದ ಗೀತೆಗಳಿಗೆ ಜಾರ್ಜ್ ಸಂಗೀತ ಸಂಯೋಜನೆ ಮಾಡಿದ್ದಾರೆ. ನೃತ್ಯ: ಪಾಲ್‌ರಾಜ್, ಸಾಹಸ: ಸಾಹುಲ್, ನಿರ್ಮಾಣ, ನಿರ್ದೇಶನ: ವಿ. [illegible]

ಗುಸು ಗುಸು

ಕನ್ನಡ ನಟಿ ಭವ್ಯಾ ಮತ್ತು ನಿರ್ದೇಶಕ ಜೋಸೈಮನ್ ನಡುವೆ ಇದೆ ಎನ್ನಲಾದ ಪ್ರೇಮದ ಪ್ರಕರಣ ಈಗ ಬೇರೊಂದು ದಿಕ್ಕಿನೆಡೆ ಸಾಗಿದೆ. ದ್ವಾರಕೀಶ್ ಅವರ ಹೊಸ ಚಿತ್ರದಲ್ಲಿ ವಿಷ್ಣುವರ್ಧನ್ ಅವರ ಜೋಡಿಯಲ್ಲಿ ನಟಿಸಲಿರುವ ಭವ್ಯಾಳ ಮೇಲೆ ಭಾರತಿ ಸಹೋದರ ಹರ್ಷವರ್ಧನ್ ಅವರಿಗೆ ಮೆಚ್ಚುಗೆ ಇದೆ ಎನ್ನಲಾಗಿದ್ದು, ಈ ಬಗ್ಗೆ ಕುತೂಹಲ ವರದಿಯೂ ಹೊರ ಬಿದ್ದಿದೆ. ಮದರಾಸಿನಲ್ಲಿ ಪಂಚತಾರಾ ಹೋಟೇಲೊಂದರಲ್ಲಿ ಇತ್ತೀಚೆಗೆ ಹರ್ಷವರ್ಧನ್ ಮತ್ತು ಭವ್ಯಾ ಅವರು ಪತ್ರಕರ್ತರೊಬ್ಬರಿಗೆ ಕಾಣಸಿಕ್ಕಿದರು. ಭವ್ಯಾಳ ಮುಖ ಕೆಂಪಡರಿ "ಏನೂ ಇಲ್ಲ ಸಾರ್" ಎಂದು ತೊದಲ ರಾರಂಭಿಸಿದಳು. ಹರ್ಷವರ್ಧನ್ ಮಾತ್ರ ತನ್ನ ಮುಂದಿನ ಚಿತ್ರದಲ್ಲಿ ಭವ್ಯಾಳೇ ನಾಯಕಿ ಸಾರ್ ಎಂದು ಘೋಷಿಸಿಯೇ ಬಿಟ್ಟ. ಜೋಸೈಮಾನ್ ಅವರ ಕಿವಿಗೆ ಈ ಸುದ್ದಿ ಬಿದ್ದಾಗ ಕತೆ ಹೊಸ ರೂಪ ಪಡೆಯಬಹುದು ಎಂದು ಚಿತ್ರರಂಗದಲ್ಲೀಗ ಗುಲ್ಲು.

x x x

ನೀತಾ ಮೆಹ್ತಾ ನಕಾರಾತ್ಮಕ ಉತ್ತರ ಹೇಳಿದ್ದರಿಂದ ಭಗ್ನ ಪ್ರೇಮಿಯಾದ ಹಿಂದಿ ಚಿತ್ರ ನಟ ಸಂಜೀವ ಕುಮಾರ್ ಹೃದಯಾಘಾತಕ್ಕೆ ಒಳಗಾದರು. ಸಂಜೀವ ಚೇತರಿಸಿಕೊಳ್ಳಬೇಕಾದರೆ ಅವರನ್ನು ಮನಸಾರೆ ಪ್ರೀತಿಸುವ ಹುಡುಗಿ ಬೇಕು. ಹೇಮಮಾಲಿನಿ, ರಾಖಿ, ರೀನಾ, ಸಾರಿಕಾ, ರತಿ ಎಲ್ಲರ ಕಾಲ್‌ಶೀಟ್ ಈಗಾಗಲೇ ಮುಗಿದಾಗಿದೆ. ಸಂಜೀವ್ ಅವರನ್ನು ಉಳಿಸಲು ಯಾರು ಸಮರ್ಥರು ಎಂದು ಹಳೆಯ ಪ್ರೇಯಸಿಯರು ತಲೆಬಿಸಿ ಮಾಡಿಕೊಳ್ಳುತ್ತಿದ್ದಾರೆ. ಸಂಜೀವ್ ತಿರಸ್ಕರಿಸಿದರೂ ಅಥವಾ ಇವರಾಗಿ ಅವನ ತ್ಯಜಿಸಿದರೂ, "ಆತ ಒಳ್ಳೆಯವ" ಎಂದೂ, ಎಲ್ಲರ ಒಕ್ಕೊರಲ ಅನಿಸಿಕೆ. ಬಹುಶಃ ಪ್ರೇಮದ ಹೊರತಾಗಿ ಎಂದು ಸಿನಿತಲೆಗಳ ಅಂಬೋಣ.

x x x

ತಮಿಳು ಚಿತ್ರರಂಗದ ಹುಲಿಗಳಾದ ರಜನೀಕಾಂತ್ ಮತ್ತು ಕಮಲ್‌ಹಾಸನ್ ಅವರಿಗೆ ಬದ್ಧ ವೈರವಿದ್ದ ಒಂದು ಕಾಲವಿತ್ತು. ಕಮಲ್ ಹಿಂದಿಗೆ ಹಾರಿದಾಗ ಅಲ್ಲಿಗೂ ನುಗ್ಗಿದ ರಜನಿ, ತೀವ್ರ ಸ್ಪರ್ಧೆ ನೀಡಿದ. ಆದರೆ ಈಗ ಇವರಿಬ್ಬರೂ ಮದ್ರಾಸಿನಲ್ಲಿ ಜೊತೆಯಾಗಿ ತಮಿಳು ಚಿತ್ರವೊಂದರಲ್ಲಿ ನಟಿಸಲು ತಯಾರಾಗಿದ್ದಾರೆ. ಹಿಂದಿ ಚಿತ್ರರಂಗದಲ್ಲಿ ಇವರಿಬ್ಬರೂ ತಮ್ಮ ಭವಿಷ್ಯ ಸೀಮಿತ ಎಂದು ಅರಿತುಕೊಂಡು ಪುನಃ ತಮಿಳಿಗೆ ಬಂದಿರುವುದರಿಂದ ವೈಯುಕ್ತಿಕ ಮನಸ್ತಾಪ ಸರಿಯಿಲ್ಲ ಅಂತ ತೀರ್ಮಾನಿಸಿದ್ದಾರೆ. ಕೊನೆಗಾದರೂ ಇವರಿಗೆ ಬುದ್ಧಿ ಬಂತಲ್ಲ. ದ್ವೇಷವನ್ನೇ ಮುಂದುವರೆಸುವ ಮೂರ್ಖತನ ಮಾಡಿಲ್ಲ. ನಿಜವಾಗಿ ಇವರು ಬುದ್ಧಿವಂತರು. ಇಬ್ಬರಿಗೂ ವಣಕ್ಕಂ ಎನ್ನುತ್ತಿದ್ದಾರೆ. ಮದರಾಸಿನ ಸಿಲ್ಕ್ ಜುಬ್ಬಾದ ನಿರ್ಮಾಪಕರು.

x x x

ಮಲೆಯಾಳೀ ಮೂಲದ ತಮಿಳು [illegible]

ಮುಂಗಾರು

ರಾಜಕೀಯ ಸಣ್ಣತನ

ಕರ್ನಾಟಕದ ರಾಮಕೃಷ್ಣ ಹೆಗಡೆ ಅವರ [illegible] ಸಂಪುಟ ಈಗ ಪೂರ್ಣ ಪ್ರಮಾಣವನ್ನು [illegible] ಕೊಂಡಿದೆ. ಜನರಿಂದ ಹೊಸ ತೀರ್ಪು ಗಳಿಸಿ [illegible] ಆತ್ಮವಿಶ್ವಾಸದೊಡನೆ ಅಧಿಕಾರಕ್ಕೇರಿದ ಪಕ್ಷ [illegible] ಅವರ ನಾಯಕತ್ವ ತಾನು ಮತದಾರರಿಗೆ [illegible] ಭರವಸೆಗಳನ್ನು ಈಡೇರಿಸುವುದಕ್ಕಾಗಿ [illegible]ವಾದ, ಹೊಸ ಚೈತನ್ಯಶಾಲಿ ರಕ್ತ ಹರಿ[illegible] ಪ್ರಗತಿಪರ ವಿಚಾರಗಳನ್ನು ಮೈಗೂಡಿಸಿ[illegible] ವ್ಯಕ್ತಿಗಳನ್ನು ಸೇರಿಸಿಕೊಂಡು ಸರಕಾರ [illegible]ಬೇಕಾಗಿತ್ತು. ಜನರ ನಿರೀಕ್ಷೆ ಅದಾಗಿತ್ತು. [illegible] ಹೊಸ ಸಚಿವ ಸಂಪುಟ ನೋಡಿದರೆ ನಿರಾಶೆ [illegible]ತ್ತದೆ.

ಸಂಪುಟ ದರ್ಜೆಯಲ್ಲಿ ಇಬ್ಬರನ್ನು ಹೊರತು [illegible] ಉಳಿದವರೆಲ್ಲ ಹಳೆಯ ಮುಖಗಳೇ.

ನಾಡಿಗೆ ದೂರದೃಷ್ಟಿಯುಳ್ಳ, ಸ್ವಚ್ಛವಾದ, [illegible]ವಾದ ಹಾಗೂ ಪ್ರಗತಿಶೀಲವಾದ ಆಳ್ವಿಕೆ [illegible] ಕೊಡುತ್ತೇನೆಂದು ಕೊಟ್ಟ ಭರವಸೆಯನ್ನು ಈಡೇರಿಸಬೇಕೆಂದು ಜನ ಬಯಸುತ್ತಾರೆ. ಸಬೂಬು [illegible] ಅವರಿಗೆ ಬೇಕಿಲ್ಲ. ಹಳೆಯ ಮಂತ್ರಿಗಳ ಪೈಕಿ [illegible] ಅಸಮರ್ಥರು ಹಾಗೂ ಸ್ವಜನ ಪಕ್ಷಪಾತಿಗಳು [illegible] ಸಚಿವ ಸಂಪುಟದಲ್ಲಿ ಸ್ಥಾನ ಗಿಟ್ಟಿಸಿರುವುದನ್ನು [illegible]ವಾಗಿ ಕಾಣಬಹುದಾಗಿದೆ. ಹೊಸ [illegible] ತುಲನಾತ್ಮಕವಾಗಿ ತುಂಬಾ ಕಮ್ಮಿಯಿದೆ.

ಆಸೆ, ಆಮಿಷಗಳಿಗೆ ಬಗ್ಗದೆ ಜನಹಿತವೊಂದ[illegible] ದೃಷ್ಟಿಯಿಟ್ಟು ನೇರದಾರಿಯಲ್ಲಿ ನಡೆಯುವ ಮುಖಂಡರು ಬೇಕಾಗಿದ್ದಾರೆ. ಕಳೆದ ಬಾರಿ ಅಂಕುಶ [illegible] ಇರಲಿಲ್ಲ ಅನ್ನುವುದು ಜನತಾ ಸರಕಾರ [illegible]ಗಳನ್ನು ಕಾರ್ಯರೂಪಕ್ಕೆ ಇಳಿಸಬೇಕಾದ [illegible] ಸ್ಪಷ್ಟವಾಯಿತು. ತಾಂತ್ರಿಕ [illegible] ಸಂಸ್ಥೆಗಳಲ್ಲಿ ಕ್ಯಾಪಿಟೇಶನ್ ಶುಲ್ಕ ನಿಷೇಧಿಸುವ [illegible] ಸರಕಾರ [illegible]. ಒಂದೇ [illegible] ಕ್ಯಾಪಿಟೇಶನ್ ಪಾರಿಯನ್ನು ನಿರ್ಣಾಮ [illegible] ಬದಲಾಗಿ ಐದು ವರ್ಷಗಳಲ್ಲಿ [illegible] ಹಂತಗಳಲ್ಲಿ ರದ್ದುಪಡಿಸಲಾಗುವ [illegible] ನಡವಳಿಕೆಯನ್ನು ಪ್ರದರ್ಶಿಸಿತು. [illegible] ಖಾಲಿಯಿದ್ದ ಸುಮಾರು [illegible] ಸಾವಿರ ಸ್ಥಾನಗಳನ್ನು ಭರ್ತಿ ಮಾಡದಿರು[illegible] ಮೂರು ವರ್ಷಗಳಲ್ಲಿ ಮತ್ತೆ [illegible] ಸಾವಿರ ಹುದ್ದೆಗಳು ಖಾಲಿಯಾ[illegible] ತಪ್ಪಿಸಿದ ನಿವೃತ್ತಿ ವಯಸ್ಸಿನ ಏರಿಕೆ [illegible].

[illegible] ನಿಭಾಯಿಸಬೇಕಾದ ಹೊಣೆಗಾರಿಕೆ ಜನತಾ ಸರಕಾರದ ಮೇಲಿದೆ. ಸಮಾಜದಲ್ಲಿ ಹಿಂದು[illegible] ಏಳಿಗೆಗಿರುವ ಇಂತಹ ಕಾರ್ಯಕ್ರಮಗಳನ್ನು [illegible] ಯಾರ ಮುಲಾಜಿಗೂ ಒಳಗಾಗದೆ [illegible]. ಜತೆಗೆ ಆಡಳಿತವನ್ನು [illegible] ನಡೆಸಿಕೊಂಡು ಹೋಗಬೇಕಾದ ಹೊಣೆಗಾರಿಕೆಯೂ ನಾಡಿನ ಸರ್ವತೋಮುಖ ಅಭಿ[illegible] ಯೋಜನೆಗಳನ್ನು [illegible] ಅದಕ್ಕಿದೆ.

[illegible] ಸಂಪುಟವನ್ನು ಗಮನಿಸಿ[illegible] ಈ ಸರಕಾರ ಯಶಸ್ವಿಯಾದೀತೆಂಬ ಭರವಸೆ ಹುಟ್ಟುವುದಿಲ್ಲ. ಹೊಸ ರಕ್ತದ ಅಭಾವ [illegible]ಗಳಿಗೆ [illegible] ಅಧಿಕ ಪ್ರಾತಿನಿಧ್ಯವನ್ನೂ ಕೊಟ್ಟಿರುವುದು ಕಂಡು ಬರುತ್ತದೆ.

ಕರ್ನಾಟಕದಂತಹ ವಿಶಾಲವಾದ ರಾಜ್ಯದಲ್ಲಿ ಸರಕಾರದಲ್ಲಿ ಪ್ರಾತಿನಿಧ್ಯ ಹಂಚಿಕೊಡಬೇಕಾದ ಅಗತ್ಯ ಬಹಳವಿದೆ. ಭೌಗೋಲಿಕವಾಗಿ, ಹವಾಮಾನದಲ್ಲಿ ಸಾಂಸ್ಕೃತಿಕವಾಗಿ ಈ ರಾಜ್ಯ ಐದಾರು ನಮೂನೆಯ ಪ್ರದೇಶಗಳನ್ನು ಹೊಂದಿದೆ. ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳು ಭೌಗೋಲಿಕವಾಗಿಯೂ ಹವಾಮಾನದಲ್ಲಿಯೂ ಸಂಸ್ಕೃತಿಯಲ್ಲಿಯೂ ಇತರ ಭಾಗಕ್ಕಿಂತ ಭಿನ್ನತೆಯನ್ನು ಹೊಂದಿವೆ. ಮಲೆನಾಡಿನ ಪಟ್ಟಿ ಇನ್ನೊಂದು ವಿಶಿಷ್ಟ ವಿಭಾಗವಾಗಿದ್ದರೆ ಹಳೆ ಮೈಸೂರು ಇನ್ನೊಂದೇ ಸ್ವರೂಪವನ್ನು ಪಡೆದಿದೆ. ಉತ್ತರ ಕರ್ನಾಟಕದ ಪೀಠಭೂಮಿ ಬೇರೆಯೇ ಪ್ರದೇಶವೊಂದರ ಗುಣಗಳನ್ನು ಹೊಂದಿದ್ದು ಬಹಳ ಹಿಂದುಳಿದಿದೆ.

ವಿಧಾನಸೌಧದಲ್ಲಿ ಆಡಳಿತೆಯ ನಿಯಂತ್ರಣ ಹಿಡಿದು ಕೂತವರಿಗೆ ರಾಜ್ಯದ ಎಲ್ಲ ಮೂಲೆ ಮೂಲೆಗಳ ಪರಿಚಯ ಇರಬೇಕು. ಅಲ್ಲಿನ ಭೌಗೋಲಿಕ ಹಾಗೂ ಹವಾಮಾನಕ್ಕೆ ಸಂಬಂಧಿಸಿದ ವೈಪರೀತ್ಯಗಳ ಅರಿವು ಇರಬೇಕು. ಜನಜೀವನದ ಹಾಗೂ ಸಂಸ್ಕೃತಿಯ ಭಿನ್ನತೆಯ ತಿಳಿವಳಿಕೆ ಇರಬೇಕು. ಒಂದೊಂದು ಪ್ರದೇಶಕ್ಕೂ ಅದರದ್ದೇ ಆದ ವಿಶೇಷ ಅಗತ್ಯಗಳಿರುತ್ತವೆ. ಅದಕ್ಕನುಗುಣವಾಗಿ ಆಡಳಿತೆಯ ನಿಯಮಗಳಲ್ಲಿಯೂ ಕಾನೂನುಗಳಲ್ಲಿಯೂ ಸೂಕ್ತ ಬದಲಾವಣೆ ಬೇಕಾಗುತ್ತದೆ. ಇದನ್ನು ಸರಕಾರದವರು ಗಮನಿಸದೆ ಹೋದರೆ, ಎಲ್ಲಾ ಕಡೆಗೆ ಒಂದೇ ಅಳತೆಗೋಲನ್ನು ಅನ್ವಯಿಸಿದರೆ ಜನರಿಗೆ ತೊಂದರೆಗಳು ಉಂಟಾಗುತ್ತವೆ. ಇದಕ್ಕೆ ಈ ತನಕದ ಆಡಳಿತದಲ್ಲಿನ ಅನೇಕ ವಿಚಾರಗಳ ನಿದರ್ಶನ ಉಂಟು.

ಇದೀಗ ರಚಿತವಾದ ಸಚಿವಸಂಪುಟದಲ್ಲಿ ದಕ್ಷಿಣ ಕನ್ನಡ ಹಾಗೂ ಕಲ್ಬುರ್ಗಿ ಜಿಲ್ಲೆಗಳಿಗೆ ಒಂದೇ ಒಂದು ಪ್ರಾತಿನಿಧ್ಯವನ್ನೂ ಕೊಟ್ಟಿಲ್ಲ. ಈಯೆರಡೂ ಜಿಲ್ಲೆಗಳು ಹೆಚ್ಚಾಗಿ ಕಾಂಗ್ರೆಸ್ (ಐ) ಅಭ್ಯರ್ಥಿಗಳನ್ನೇ ಆರಿಸಿದ್ದವು ಎಂಬುದು ಇಲ್ಲಿ ಮಹತ್ವದ ವಿಚಾರ. ಬೆಂಗಳೂರು ಒಂದೇ ಜಿಲ್ಲೆಗೆ ಆರು ಸ್ಥಾನ ಕೊಡಲಾಗಿದೆ.

ಕಳೆದ ಬಾರಿ ಜನತಾ ಆಳ್ವಿಕೆಯ ಎರಡು ವರ್ಷದ ಅವಧಿಯಲ್ಲಿ ದಕ್ಷಿಣ ಕನ್ನಡದ ಅಮರನಾಥ ಶೆಟ್ಟಿಯವರಿಗೆ ಕೊನೆಯ ಐದು ತಿಂಗಳ ಕಾಲ ರಾಜ್ಯ ದರ್ಜೆಯ ಮಂತ್ರಿಸ್ಥಾನ ಕೊಡಲಾಯಿತು. ಈ ಅವಧಿಯಲ್ಲಿ ಅವರು ದಕ್ಷರೂ ಪ್ರಾಮಾಣಿಕರೂ ಎನಿಸಿ ಆಡಳಿತೆಯನ್ನು ಸಮರ್ಥವಾಗಿ ನಿರ್ವಹಿಸಿದರು. ಜನತಾ ಸರಕಾರದ ಸ್ವಚ್ಛರೆನಿಸಿದ, ಸಚ್ಚಾರಿತ್ರ್ಯವಿರುವ ಕೆಲವೇ ಸಚಿವರ ಪೈಕಿ ಅವರೊಬ್ಬರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ಸಿನಿಂದ ಜನರನ್ನು ತನ್ನತ್ತ ಸೆಳೆದು ಹಿಡಿದು ಆಯ್ಕೆಗೊಳ್ಳುವ ಸಾಮರ್ಥ್ಯ ಜನತಾದವರ ಪೈಕಿ ಅವರೊಬ್ಬರಿಗೆ ಮಾತ್ರವೆ ಇದ್ದಿತು. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಕ್ಯಾಬಿನೆಟ್ ದರ್ಜೆಗೆ ಭಡ್ತಿ ದೊರೆಯಬೇಕೆಂಬ ಆಶೆ ಭರವಸೆ ಜನರಿಗಿದ್ದವು.

ಇಂದು ಅದೆಲ್ಲ ಹುಸಿಯಾಗಿದೆ. ವಿರೋಧ ಪಕ್ಷದ ಪಾಲಾಗಿರುವ ದಕ್ಷಿಣ ಕನ್ನಡವನ್ನು ನಡೆಸಿಕೊಳ್ಳುವ ವಿಚಾರದಲ್ಲಿ ಜನತಾಪಕ್ಷ ನಾಯಕತ್ವ ಸಣ್ಣತನವನ್ನೂ ತಮ್ಮ ರಾಜಕೀಯದಲ್ಲಿ ಮೈಗೂಡಿರುವ ದ್ವೇಷವನ್ನು ಪ್ರಕಟಪಡಿಸಿದೆ. ಇದರಿಂದ ತಮ್ಮ ಆಡಳಿತಕ್ಕೂ ನಾಡಿನ ಹಿತಕ್ಕೂ ಹಾನಿಯಾಗುತ್ತಿದ್ದೆ ಎಂಬ ಸತ್ಯ ಅವರ ಕಣ್ಣಿಗೆ ಕಾಣಿಸಿ[illegible]

ಮಾಲು ಸಹಿತ ಲಾರಿ ಕಳವು

ಮಂಗಳೂರು, ಮಾ. 16 – ಶುಕ್ರವಾರ ರಾತ್ರಿ ಮಲ್ಲಿಕಟ್ಟೆಯ ಮಹಾಬಲೇಶ್ವರ [illegible] ಒಂದು ಲಾರಿ ಸೊತ್ತುಗಳ ಸಹಿತ ಕಳವು ಆಗಿರುವುದಾಗಿ ತಿಳಿದು ಬಂದಿದೆ.

ಲಾರಿಯಲ್ಲಿ 125 ಚೀಲ ತೆಂಗಿನ ಕಾಯಿ ಇದ್ದು ಲಾರಿ ಸಹಿತ ಕಳವಾದ ಸೊತ್ತಿನ ಒಟ್ಟು ಬೆಲೆ 2 ಲಕ್ಷ ರೂಪಾಯಿ ಎಂದು ಅಂದಾಜು ಮಾಡಲಾಗಿದೆ. ಲಾರಿ ಎಚ್. ಮಂಜುನಾಥ ಶೆಟ್ಟಿ ಎಂಬವರಿಗೆ ಸೇರಿದ್ದಾಗಿ [illegible] ಕಳವಿನ ಬಗ್ಗೆ ವಿಜಯ ಎಂಬ [illegible] ಮೇಲೆ ಸಂದೇಹ ಪಡಲಾಗಿದೆ ಎಂದು ಕದ್ರಿ ಪೊಲೀಸರು ತಿಳಿಸಿದ್ದಾರೆ.

ಬಂದರು ಕಾರ್ಮಿಕರ ಮಾತುಕತೆ ವಿಫಲ

ಮಂಗಳೂರು, ಮಾ. 16 – ಇಂದು ಜಿಲ್ಲಾಧಿಕಾರಿ ಸುಧೀರ್ ಕೃಷ್ಣ ಅವರ ನೇತೃತ್ವದಲ್ಲಿ ನಗರದ ಬಂದರಿನ ತಲೆಹೊರೆ ಕಾರ್ಮಿಕರ ಮುಷ್ಕರದ ಬಗ್ಗೆ ನಡೆದ ಮಾತುಕತೆ ವಿಫಲಗೊಂಡಿದೆ. ಸಭೆಯು ಮೆನೇಜ್ [illegible], ಕಾರ್ಮಿಕಸಂಘ, ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಇರುವ ತ್ರಿಪಕ್ಷೀಯ ಸಮಿತಿಯನ್ನು ನೇಮಿಸಿ [illegible] ವರದಿ ನೀಡಬೇಕೆಂದು ಆದೇಶ ನೀಡಿತು.

ಪ್ರತಿಯೊಂದು ವೃತ್ತಿಯೂ ಸಮಾಜ ಸೇವಾ ಸಾಧನ

ಲಯನ್ಸ್ ಸಮ್ಮೇಳನದಲ್ಲಿ ರಾಮ್ ಜೋಯ್ಸ್

ಮಂಗಳೂರು, ಮಾ. 16– ಪ್ರತಿಯೊಂದು ವೃತ್ತಿಯೂ ಸಮಾಜ ಸೇವೆಗಾಗಿ ಒಂದು ಸಾಧನ ಎಂದು ಪರಿಗಣಿಸಿ ದೇಶದ ಅಭ್ಯುದಯಕ್ಕಾಗಿ ಅದನ್ನು ಬಳಸಬೇಕು ಎಂದು ಕರ್ನಾಟಕ ಹೈಕೋರ್ಟಿನ ನ್ಯಾಯಾಧೀಶ ರಾಮ ಜೋಯಿಸ್ ಇಂದಿಲ್ಲಿ ಹೇಳಿದರು.

ಮಂಗಳೂರಿನ ಕಂಕನಾಡಿ – ಪಡೀಲ್ ಲಯನ್ಸ್ ಕ್ಲಬ್ ನೇತೃತ್ವದಲ್ಲಿ ಏರ್ಪಡಿಸಲಾದ ಲಯನ್ಸ್ ಕ್ಲಬ್ [illegible] 324–ಡಿ4 ಜಿಲ್ಲಾ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಗೌರವ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು. ಮನುಷ್ಯ ತನ್ನ ಅವಶ್ಯಕತೆಗಳನ್ನು ಸಂಪಾದಿಸಿಕೊಳ್ಳುವಲ್ಲಿ ಮಾನವಕುಲಕ್ಕೆ ಸೇವೆಗೈಯುವ ತನ್ನ ಗುಣವನ್ನು ಕಳೆದುಕೊಳ್ಳದಂತೆ ಎಚ್ಚರದಿಂದಿರಬೇಕು. ಅದಕ್ಕಾಗಿ ತನ್ನಲ್ಲಿ ನೈತಿಕತೆಯನ್ನು ಬೆಳೆಸಿಕೊಳ್ಳಬೇಕು. ಇತರರ ಸಂಕಷ್ಟಗಳನ್ನು ಅರಿತುಕೊಂಡಾಗ ಮಾತ್ರ ಗಣ್ಯ ವ್ಯಕ್ತಿಯ ಹೃದಯ ಕರಗಬಲ್ಲುದು. ಸ್ವಾರ್ಥರಹಿತ ಸೇವಾಮನೋಭಾವವನ್ನು ರೂಢಿಸಿಕೊಳ್ಳಬೇಕೆಂದು ಅವರು ಹೇಳಿದರು.

ಲಯನ್ಸ್ ತತ್ವವು ನೈಜ ಮತ್ತು ಪರಿಣಾಮಕಾರಿ ಶಕ್ತಿಯಾಗಿದೆ. ವಿಶ್ವಶಾಂತಿ, ಮಾನವೀಯತೆ ಮತ್ತು ಮಾನವಕುಲದ ಅಭ್ಯುದಯದಲ್ಲಿ ಅದು ಪ್ರಮುಖ ಪಾತ್ರ ವಹಿಸಬಲ್ಲುದು. ಲಯನ್ಸ್ ಸಂಸ್ಥೆಯಲ್ಲಿ ಅಪ್ರಾಮುಖ್ಯರು ಅಥವಾ ಪ್ರಾಮುಖ್ಯರು ಎಂಬ ಭೇದವಿಲ್ಲ. ಎಲ್ಲರೂ ಸಮಾನ ಪ್ರಾಮುಖ್ಯತೆ ಹೊಂದಿದ್ದಾರೆ ಎಂದು ಮುಖ್ಯ ಅತಿಥಿಯಾಗಿ ಭಾಗವಹಿಸಿದ ಲಯನ್ಸ್ ಸಂಸ್ಥೆಯ ಮಾಜಿ ಅಂತರ್‌ರಾಷ್ಟ್ರೀಯ ನಿರ್ದೇಶಕ ಸಿಂಗಾಪುರದ ಲಯನ್ ಓಂಗ್ ಆಹ್ ಕ್ಯೂನ್ ಹೇಳಿದರು. ಬಡ ಜನರಿಗೆ ನೆರವಾಗುವುದರೊಂದಿಗೆ ನಿಮ್ಮ ಘನತೆಯನ್ನು ವ್ಯಕ್ತಪಡಿಸಿಕೊಳ್ಳಿ. ಆ ಬಗ್ಗೆ ಹೆಮ್ಮೆಪಟ್ಟುಕೊಳ್ಳಿ ಎಂದು ಅವರು ಹೇಳಿದರು.

324–ಡಿ4 ಲಯನ್ಸ್ ಜಿಲ್ಲೆಗೆ ಸೇರಿದ 500ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ ಸಮ್ಮೇಳನದ ಅಧ್ಯಕ್ಷತೆಯನ್ನು ಜಿಲ್ಲಾ ಗವರ್ನರ್ ವಿ. ಕೆ. ರೇವಣ್‌ಕರ್ ವಹಿಸಿದ್ದರು. ಅನುರಾಧಾ ರೇವಣ್‌ಕರ್ ಅವರು ದೀಪ ಬೆಳಗಿಸಿ ಸಮ್ಮೇಳನವನ್ನು ಉದ್ಘಾಟಿಸಿದರು. ವೇದಿಕೆಯಲ್ಲಿ ಮಾಜಿ ಜಿಲ್ಲಾ ಗವರ್ನರ್‌ಗಳಾದ ಕೆ. ಪಿ. ಪೈ, ಎಂ.ಸಿ. ಶಾಸ್ತ್ರಿ, ಗುರ್ಜಾರ್, ಬಾಬು ಶೆಟ್ಟಿ, ಎಂ. ಡಿ. ಬಾಲಕೃಷ್ಣ, ಸಿ.ಎ. ಮುತ್ತಣ್ಣ, ದಿವಾಕರ ಶೆಟ್ಟಿ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಸಮ್ಮೇಳನ ಸಮಿತಿ ಅಧ್ಯಕ್ಷ ಲಿ। ಡಾ। ಜಯಪ್ರಕಾಶ ಭಂಡಾರಿ ಆರಂಭದಲ್ಲಿ ಸ್ವಾಗತಿಸಿ, ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ಲಿ। ಜೆ. ಬಿ. [illegible] ವಂದಿಸಿದರು.

ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್‌ಗೆ ಸೋಲು ಬಂದಿಲ್ಲ: ಮೊಯ್ಲಿ

ಕಾರ್ಕಳ, ಮಾ. 16 – ರಾಜ್ಯದಲ್ಲಿ [illegible] ಅಧಿಕಾರಕ್ಕೆ ಬಂದರೂ [illegible] ಎಂದು [illegible] ಸಭಾ ಸದಸ್ಯ [illegible] ಮೊಯ್ಲಿ [illegible].

[illegible] ಪ್ರಚಾರದಲ್ಲಿರುವ ಮೊಯ್ಲಿ ಅವರು [illegible] ನಡೆದ ಕಾಂಗ್ರೆಸ್ ವಿಜಯೋತ್ಸವ ಸಮಾರಂಭಗಳಲ್ಲಿ ಮಾತನಾಡುತ್ತಿದ್ದರು.

ರಾಷ್ಟ್ರದಲ್ಲಿ ಮೂರು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಸೋತಿದ್ದು ಉಳಿದ [illegible] ವಿರೋಧಿ ಪಕ್ಷಗಳ [illegible]. ರಾಷ್ಟ್ರದ ರಾಜಕೀಯದಲ್ಲಿ [illegible] ನಿಂತಿರುವ ಕಾಂಗ್ರೆಸ್ ಈ [illegible] ಬೇರೂರಿ [illegible]. ರಾಷ್ಟ್ರ [illegible] ಕಾಂಗ್ರೆಸ್‌ಗೆ ಸೋಲು ಬಂದಿಲ್ಲ ಎಂದು ಅವರು ಹೇಳಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯ [illegible] ಪ್ರಜಾಪ್ರಭುತ್ವ ವ್ಯವಸ್ಥೆ [illegible] ಕಾಂಗ್ರೆಸ್ ಪಕ್ಷದ [illegible] ಪಕ್ಷದ [illegible] ಎಂದು [illegible] ಅಭಿಪ್ರಾಯ ಪಟ್ಟರು.

[illegible]

ತ್ರ್ಯವನ್ನು ಕಸಿದು ಕೊಂಡಂತಾಗುತ್ತದೆ ಎಂದ ಅವರು ರಾಜ್ಯದ ಜನತಾ ಕಾಂಗ್ರೆಸ್‌ಗಿಂತ ಕೇವಲ ಶೇಕಡಾ 2 ಹೆಚ್ಚಿನ ಮತಗಳಿಸಿ ಕಾಂಗ್ರೆಸನ್ನು ಲೋಕಸಭೆಯ ಚುನಾವಣಾ ವಿಜಯಕ್ಕಿಂತ ಹಿಂದೆ ಹಾಕಲಾಗಲಿಲ್ಲ ಎಂದು ಹೇಳಿದರು.

ಅಧಿಕಾರದ ಮೇಲೆ ಸವಾರಿಮಾಡುವ, ಅಧಿಕಾರ ಸಿಕ್ಕಿಲ್ಲ ಎಂದು ಕೊರಗುವ ಮಂದಿ ಯಾರೇ ಇದ್ದರೂ ಅವರು ಕಾಂಗ್ರೆಸ್ಸಿನಲ್ಲಿರಲು 'ನಾಲಾಯಕ್ಕು' ಎಂದು ಮೊಯ್ಲಿ ಹೇಳಿದರು.

ತನ್ನ ಅಧಿಕಾರಕ್ಕೆ ಮುಖ್ಯವಾಗಿ ಪರಿಣಾಮಿಸಿದ ಭಾರತೀಯ ಜನತಾ ಪಕ್ಷವನ್ನು ಹೆಗ್ಡೆ ಉಪಾಯದಿಂದ ಸೋಲಿಸಿದರೆ ಕಾಂಗ್ರೆಸನ್ನು ಮಣ್ಣು ಮುಕ್ಕಿಸಬೇಕೆಂದು ಬಯಸಿದ ಭಾರತೀಯ ಜನತಾ ಪಕ್ಷ ತಾನೇ ನೆಲಕಚ್ಚಿದೆ ಎಂದ ಅವರು ವಿವರಿಸಿದರು.

ಜನತಾ ಸರಕಾರಕ್ಕೆ ಮಹಾನಗರ ಪಾಲಿಕೆ ಬೆಂಬಲ

ಮಂಗಳೂರು, ಮಾ. 16–ಇಂದು ಇಲ್ಲಿ ನಡೆದ ಮಂಗಳೂರು ಮಹಾನಗರಪಾಲಿಕೆಯ ಸಭೆಯು ಕರ್ನಾಟಕದ ರಾಮಕೃಷ್ಣ ಹೆಗಡೆಯವರ ನೂತನ ಸರಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಿದೆ. ಬಿಜೆಪಿಯ ಕಾರ್ಪೊರೇಟರ್ ಕೆ. ನಾರಾಯಣ ಶೆಟ್ಟಿಯವರು ಮಂಡಿಸಿದ ಗೊತ್ತುವಳಿಯನ್ನು ಸಭೆ ಅಂಗೀಕರಿಸಿತು.

ಇತ್ತೀಚೆಗೆ ನಡೆದ ವಿಶ್ವಕಪ್‌ನಲ್ಲಿ 'ಚಾಂಪಿಯನ್ ಆಫ್ ದಿ ಚಾಂಪಿಯನ್ಸ್' ಪ್ರಶಸ್ತಿಗೆ ಪಾತ್ರರಾದ ರವಿಶಾಸ್ತ್ರಿಯವರಿಗೆ ಪೌರಸನ್ಮಾನ ನೀಡುವ ಬಗ್ಗೆ ಕೂಡಾ ಸಭೆ ತೀರ್ಮಾನಿಸಿತು. ಮೇಯರ್ ಬಿ. ಅಬ್ದುಲ್ ಖಾದರ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

'ಕಿರಿಯರನ್ನು ತಿದ್ದುವ ತಾಳ್ಮೆ ಹಿರಿಯರಲ್ಲಿ ಮೂಡಿ ಬರಬೇಕು'

ಪುತ್ತೂರು, ಮಾ. 16- ಯುವಕರ ಮನಸ್ಸು ಸದಾ ಚಟುವಟಿಕೆಯಿಂದಿದ್ದು, ಹಲವಾರು ಆಕರ್ಷಣೆಗಳತ್ತ ಹರಿಯುತ್ತದೆ [illegible] ಅವರು [illegible] ಸಂದರ್ಭದಲ್ಲಿ [illegible]

ಹಿರಿಯರಿಗೆ ಅವರ ಚಟುವಟಿಕೆ [illegible] ಅವರನ್ನು ತಿದ್ದುವ ತಾಳ್ಮೆ [illegible]

ಬಹುಮಾನ ವಿತರಣೆ ಮಾಡಿದ ಸ್ಥಳೀಯ ಕಾರ್ಯಕರ್ತ ರಂಗಮೂರ್ತಿಯವರು [illegible] ಕಾರ್ಯಕ್ರಮಗಳಿಗೆ ಪ್ರೋತ್ಸಾಹ [illegible]. ಸಹಕಾರ ಭಾವನೆಯಿಂದ ಸಾರ್ವತ್ರಿಕ ಅಭಿವೃದ್ಧಿಗಾಗಿ ದುಡಿಯಬೇಕೆಂದು [illegible] ಕೊಟ್ಟರು.

ಅಧ್ಯಕ್ಷತೆ ವಹಿಸಿದ್ದ ಬೈಲಗುತ್ತು [illegible] ಯುವಕರು [illegible] ರಚನಾತ್ಮಕ ಕಾರ್ಯಗಳಿಗೆ [illegible]

ಮುಂಗಾರು

ನಗರ ಭೋಗದ ಆರ್ಥಿಕ ವ್ಯವಸ್ಥೆ

"ಇಂದು ನಮ್ಮ ದೇಶದಲ್ಲಿ ಅನುಸರಿಸಲಾಗುತ್ತಿರುವ ವೇತನ ವ್ಯವಸ್ಥೆ ಉದ್ಯೋಗದಲ್ಲಿ ಇಲ್ಲದವರನ್ನು ಬಲಿಕೊಟ್ಟು ಉದ್ಯೋಗದಲ್ಲಿರುವವರನ್ನು ಸಂರಕ್ಷಿಸುವಂತಿದೆ" ಎಂದು ಡಾ॥ ಎಂ. ಡಿ. ನಂಜುಂಡಪ್ಪನವರು ಹೇಳಿದರೆಂಬ ವರದಿಯಾಗಿದೆ.

ಡಾ॥ ನಂಜುಂಡಪ್ಪ ಈ ದೇಶದ ಅರ್ಥಶಾಸ್ತ್ರಜ್ಞರ ಸಣ್ಣ ಸಾಲಿನಲ್ಲಿ ಒಬ್ಬ ದೊಡ್ಡ ವ್ಯಕ್ತಿ. ಅರ್ಥಶಾಸ್ತ್ರಜ್ಞರಾಗಿ ಇವರ ದೊಡ್ಡಸ್ತಿಕೆಯನ್ನು ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞರು ಮನ್ನಿಸಿದ್ದಾರೆ. ಭಾರತದಲ್ಲಿ ಮಾತ್ರ ಇವರ ವಿದ್ವತ್ತಿಗೆ ಇದುವರೆಗೆ ಮನ್ನಣೆ ಸಿಕ್ಕಿಲ್ಲ. ಇವರು ದೇಶದಲ್ಲೀಗ ಆಚರಣೆಯಲ್ಲಿರುವ ನಗರ ಪ್ರಧಾನ ಅರ್ಥ ವ್ಯವಸ್ಥೆಯನ್ನು ವಿರೋಧಿಸುತ್ತಿರುವುದು ಮತ್ತು ಸಾಮಾಜಿಕ ಪರಿವರ್ತನೆಯ ಒತ್ತು ಇರುವ ಗ್ರಾಮ ಪುನರ್‌ರಚನೆಯ ಆರ್ಥಿಕ ಸಿದ್ಧಾಂತವನ್ನು ಪ್ರತಿಪಾದಿಸುತ್ತ ಬಂದಿರುವುದೇ ಇದಕ್ಕೆ ಕಾರಣ.

1982ರಲ್ಲಿ ಡಾ॥ ನಂಜುಂಡಪ್ಪನವರು ಕರ್ನಾಟಕ ವಿಶ್ವವಿದ್ಯಾನಿಲಯದ ಉಪ ಕುಲಪತಿಯಾಗಿದ್ದಾಗ ಭಾರತದ ಅರ್ಥಶಾಸ್ತ್ರಜ್ಞರ ಕಾಂಗ್ರೆಸ್ಸಿನಲ್ಲಿ ಗ್ರಾಮ ಭಾರತದ ಆರ್ಥಿಕ ಅಭ್ಯುದಯಕ್ಕೆ ಒಂದು ತರ್ಕಬದ್ಧ ಸೂತ್ರದ ಪ್ರತಿಪಾದನೆ ಮಾಡಿದ್ದರು. ಸ್ವಾರಸ್ಯವೆಂದರೆ ಡಾ॥ ನಂಜುಂಡಪ್ಪನವರು ಅಂದು ಪ್ರತಿಪಾದಿಸಿದ ಸರಳ ಆರ್ಥಿಕ ಸೂತ್ರವನ್ನು ಕಾಂಗ್ರೆಸ್ಸಿನಲ್ಲಿ ಭಾಗವಹಿಸಿದ ಇತರ ಅರ್ಥಶಾಸ್ತ್ರಜ್ಞರು ವಿರೋಧಿಸಲಿಲ್ಲ. ಆದರೆ ಇವರ ಸೂತ್ರಕ್ಕೆ ವ್ಯವಸ್ಥೆಯ ಮನ್ನಣೆ ಸಿಗದಂತೆ ಮಾಡುವುದರಲ್ಲಿ ಯಶಸ್ವಿಯಾದರು.

ಡಾ॥ ನಂಜುಂಡಪ್ಪ ಈಗ ಕರ್ನಾಟಕ ಸರಕಾರದ ಹಣಕಾಸಿನ ಇಲಾಖೆಯಲ್ಲಿ ಯೋಜನಾ ಕಾರ್ಯದರ್ಶಿಯಾಗಿದ್ದಾರೆ. ತಮಗೆ ನಂಬಿಕೆ ಇರುವ ಆರ್ಥಿಕ ಸೂತ್ರಕ್ಕೆ ನೀತಿಯ ನೆಲೆ ನೀಡುವ ಅಧಿಕಾರ ಹೊಂದಿದ್ದಾರೆ. ಆದರೂ ಅವರು ಮೊನ್ನೆ ಕಾರ್ಕಳದ ಕಾಲೇಜಿನಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ತಮ್ಮ ನೆಚ್ಚಿನ ಆರ್ಥಿಕ ಚಿಂತನೆಯನ್ನು ಜನರ ಮುಂದಿಟ್ಟಿದ್ದಾರೆ. ಉನ್ನತ ಹುದ್ದೆಯಲ್ಲಿದ್ದರೂ ತಮಗೆ ಪ್ರಾಮಾಣಿಕವಾಗಿ ಅನ್ನಿಸಿದನ್ನು ಆಚರಣೆಗೆ ತರಲಾಗದ ಕಷ್ಟದ ಸ್ಥಿತಿಯಲ್ಲಿ ಅವರಿರುವರೆಂಬುದು ಇದರಿಂದ ಸ್ಪಷ್ಟ.

ಈ ದೇಶ ಸ್ವತಂತ್ರಗೊಂಡ ಮೇಲೆ ಅನುಸರಿಸುತ್ತ ಬಂದಿರುವ ಪಾಶ್ಚಿಮಾತ್ಯ ಆರ್ಥಿಕ ಸೂತ್ರ ಗ್ರಾಮಭಾರತವನ್ನು ನಗರ ಭಾರತದ ವಸಾಹತುವಾಗಿ ಮಾಡಿದೆಯೆಂಬುದನ್ನು ಡಾ॥ ನಂಜುಂಡಪ್ಪ ಅನೇಕ ಬಾರಿ ಹೇಳಿದ್ದಾರೆ. ದೇಶದ ಒಟ್ಟು ವಾರ್ಷಿಕ ಆದಾಯವಾದ ಸುಮಾರು ಒಂದು ಲಕ್ಷ ಮೂವತ್ತು ಸಾವಿರ ಕೋಟಿ ರೂಪಾಯಿಗಳಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳ ಚಲಾವಣೆ ನಗರ ಭಾರತದಲ್ಲೇ ನಡೆದು ಗ್ರಾಮ ಭಾರತೀಯರ ಅಥವಾ ಕೃಷಿ ಕಸುಬಿನವರ ಶೋಷಣೆ ಸತತವಾಗಿ ನಡೆಯುತ್ತಿದೆಯೆಂಬುದನ್ನು ಅವರು ಹಿಂದೆ ಹಲವಾರು ಬಾರಿ ಹೇಳಿದ್ದರು.

ಸರಕಾರ ಅನುಸರಿಸುತ್ತಿರುವ ವೇತನ ನೀತಿ ನಗರಗಳಲ್ಲಿರುವ ಉದ್ಯೋಗಸ್ಥರ ಸುಖ ಜೀವನಕ್ಕೆ ಹಾಗೂ ವಾಣಿಜ್ಯ ಉದ್ಯಮಿಗಳ ಭೋಗ ಜೀವನಕ್ಕೆ ಸಾಧಕವಾಗಿದೆ. ನಿಶ್ಚಿತ ಆದಾಯವಿಲ್ಲದ ಗ್ರಾಮ ಭಾರತದ ಅರೆ–ಬರೆ ಉದ್ಯೋಗಸ್ಥರ ಕನಿಷ್ಠ ಅವಶ್ಯಕತೆಯನ್ನೂ ಈಡೇರಿಸುವ ಗುರಿ ಇಲ್ಲ. ದೇಶದ ಒಟ್ಟು ಆದಾಯಕ್ಕೆ ಈಗಲೂ ಶೇಕಡಾ 70ರಷ್ಟು ಕಾಣಿಕೆ ಸಲ್ಲಿಸುತ್ತಿರುವ ವ್ಯವಸಾಯಗಾರರಿಗೆ ಯಾವ ರಕ್ಷಣೆಯೂ ಇಲ್ಲ. ಅವರ ಉತ್ಪನ್ನಗಳ ನೈಜ ವೆಚ್ಚವನ್ನು ಭರಿಸುವ ಬೆಲೆಯೂ ಅವರಿಗೆ ಇಂದು ಸಿಗುತ್ತಿಲ್ಲ. ಕೈಗಾರಿಕೆ ಉತ್ಪನ್ನ ಬೆಲೆಗೂ ವ್ಯವಸಾಯ ಉತ್ಪನ್ನಗಳ ಬೆಲೆಗೂ ಶೇಕಡಾ ಮುನ್ನೂರರಿಂದ ಎಂಟು ನೂರರ ವರೆಗಿನ ಅಂತರವಿದೆ. ಪರಿಣಾಮವಾಗಿ ಗ್ರಾಮ ಭಾರತ ಬಡವಾಗುತ್ತಲೇ ಬಂದಿದೆ.

ಭಾರತದ 70 ಕೋಟಿ ಜನಸಮೂಹದಲ್ಲಿ ಶೇಕಡಾ 50ರಷ್ಟು ಮಂದಿ ಬಡತನದ ರೇಖೆಯ ಕೆಳಗೆ ನರಳುತ್ತಿರುವರೆಂಬುದು ಎಲ್ಲ ಆರ್ಥಿಕ ಸಮೀಕ್ಷೆಗಳಲ್ಲಿ ಕಂಡು ಬಂದ ಸತ್ಯ. ಹೀಗೆ ಬಡತನದ ರೇಖೆಯ ಕೆಳಗಿನವರೆಲ್ಲ ಗ್ರಾಮ ಭಾರತೀಯರೆಂಬುದೂ ಒಂದು ಅಪ್ರಿಯ ಸತ್ಯ. ಇಂತಹ ಸತ್ಯವನ್ನು ಎತ್ತಿ ಹಿಡಿವ ಕಾಯಕವನ್ನು ಡಾ॥ ನಂಜುಂಡಪ್ಪನವರಂತಹ ಮೇಧಾವಿ ಮಾಡುತ್ತಿರುವರೆಂಬುದೊಂದು ಸಮಾಧಾನದ ಸಂಗತಿ.

ಆದರೆ ಇದರಿಂದ ನಮ್ಮ ದೇಶದ ಆರ್ಥಿಕ ನೀತಿಗೆ ಗ್ರಾಮ ಭಾರತದ ಒಲವು ಬರುವುದೆಂಬ ಭ್ರಮೆ ನಮಗಿಲ್ಲ. ಇದು ಸುಲಭದಲ್ಲಿ ಆಗುವ ಕೆಲಸವಲ್ಲವೆಂಬುದರ ಅರಿವೂ ನಮಗಿದೆ. ಇದು ಆಗಬೇಕಾದರೆ ಡಾ॥ ನಂಜುಂಡಪ್ಪನವರಂತಹ ಭಾರತೀಯ ಅರ್ಥಶಾಸ್ತ್ರಜ್ಞರ ಸಂಖ್ಯೆ ಬೆಳೆಯಬೇಕು. ಸರಕಾರದ ಆರ್ಥಿಕ ನೀತಿ ನಿರೂಪಣೆಯಲ್ಲಿ ಇಂತವರ ಅಂಬೋಣಕ್ಕೆ ಅವಕಾಶ ಬೇಕು. ಆಡಳಿತದ ಸೂತ್ರ ಹಿಡಿವ ರಾಜಕೀಯ ಪ್ರಭುಗಳಿಗೆ ಅರ್ಥಶಾಸ್ತ್ರದ ಪ್ರಾಥಮಿಕ ಜ್ಞಾನವಾದರೂ ಇರಬೇಕು. ಸದ್ಯ ನಮ್ಮಲ್ಲಿ ಇದಾವುದೂ ಇಲ್ಲ. ನಗರವಾಸಿಗಳ ಆರ್ಥಿಕ ಸ್ವಾಸ್ಥ್ಯದ ರಕ್ಷಣೆಯೇ ಅಧಿಕಾರಸ್ಥರ ಮೊದಲ ಹೊಣೆಯಾಗಿ ಉಳಿದಿದೆ.

ಆಳವಾಗಿ ಬೇರೂರಿದ ಈ ವ್ಯವಸ್ಥೆಯ ಬದಲಾವಣೆಗೆ ಸಾಮೂಹಿಕ ಚಿಂತನೆ-ಜಿಜ್ಞಾಸೆ ಬೇಕಾಗಿದೆ. ವ್ಯವಸಾಯ ಕಸುಬಿನಲ್ಲಿರುವವರಾದರೂ ತಮಗಾಗುತ್ತಿರುವ ಅನ್ಯಾಯವನ್ನು ಹೇಳುವ ಬಾಯಿಬಲವನ್ನು ಗಳಿಸಿಕೊಂಡರೆ ಸಾಕು.

ಕ್ಯಾಮರಾ ಚಾಲನೆ ಮಾಡುತ್ತಿರುವ ಪಾರ್ವತಮ್ಮ ರಾಜ್‌ಕುಮಾರ್, ಕ್ಲಾಪ್ ಮಾಡುತ್ತಿರುವ ಎಸ್.ಎ. ಚಿನ್ನೇಗೌಡ, ಛಾಯಾ, ಹಾಗೂ ಚಿತ್ರದ ನಿರ್ದೇಶಕ ರೇಣುಕಾ ಶರ್ಮ.

ಸಂಬಂಧಸೆರೆ ಆರಂಭ

ಮದರಾಸ್‌ನ ವಿಖ್ಯಾತ ಚಲನಚಿತ್ರ ಸಂಸ್ಥೆಯಾದ 'ಜೆಮಿನಿ ಪಿಕ್ಚರ್ಸ್ ಸರ್ಕ್ಯೂಟ್ ಪ್ರೈವೇಟ್ ಲಿಮಿಟೆಡ್'ರವರ ಪ್ರಪ್ರಥಮ ಕನ್ನಡ ಚಿತ್ರವಾದ "ಸಂಬಂಧ ಸೆರೆ" ಇದೇ ಜನವರಿ ಇಪ್ಪತ್ತೆರಡರ ಮಂಗಳವಾರದಂದು ನಗರದ ಕಬ್ಬನ್‌ಪಾರ್ಕ್‌ನ ರೆಸ್ಟೋರೆಂಟ್‌ನಲ್ಲಿ ವಿಧಿವತ್ತಾದ ಪೂಜಾ ಸಮಾರಂಭದೊಡನೆ ಆರಂಭವಾಯಿತು.

ಶಂಕರ್‌ನಾಗ್ ಅಭಿನಯಿಸಿದ ಮುಹೂರ್ತದ ಮೊದಲ ದೃಶ್ಯಕ್ಕೆ ನಿರ್ಮಾಪಕ ಹಾಗೂ ವಿತರಕರಾದ ದ್ವಾರಕನಾಥ್ ಅವರು ಆರಂಭ ಫಲಕ ತೋರಿಸಿದಾಗ "ಅಜಂತಾ ಕಂಬೈನ್ಸ್‌"ನ ಎ. ಆರ್. ರಾಜು ಕ್ಯಾಮರಾ ಚಾಲನೆ ಮಾಡಿದರು. ಮುಹೂರ್ತದ ಸಮಯದಲ್ಲಿ ಚಿತ್ರರಂಗದ ಅನೇಕ ಗಣ್ಯರು ಆಗಮಿಸಿ ಚಿತ್ರಕ್ಕೆ ಶುಭ ಕೋರಿದರು. ಫೆಬ್ರವರಿ ಇಪ್ಪತ್ತರವರೆಗೆ ನಿರಂತರ ಚಿತ್ರೀಕರಣ ನಡೆಸಿ, ಸಂಪೂರ್ಣ ಚಿತ್ರೀಕರಣವನ್ನು ಒಂದೇ ಹಂತದಲ್ಲಿ ಮುಗಿಸುವ ಯೋಜನೆ ನಿರ್ಮಾಪಕರದು. ಈಗಾಗಲೇ ಮದರಾಸ್‌ನ ಪ್ರಸಾದ್ 70 ಎಂ.ಎಂ. ಥಿಯೇಟರ್‌ನಲ್ಲಿ ದೊಡ್ಡರಂಗೇಗೌಡ ಅವರು ಬರೆದಿರುವ

"ಕಳ್ಳ ಬಂದ ಕಳ್ಳ
ಸುತ್ತ ಮುತ್ತ ಕತ್ತಲೆ ಕವಿದಾಗ"

ಎಂದು ಆರಂಭವಾಗುವ ಗೀತೆಯನ್ನು ಹಾಗೂ

"ನಗುತಾ – ನಗುತ ಅನುರಾಗ ಮೂಡಿದೆ
ಚೆಲುವು–ಒಲವು ಒಡನಾಟ ಕಂಡಿದೆ"

ಎಂದು ಪ್ರಾರಂಭವಾಗುವ ಗೀತೆಯನ್ನು ಮಂಜುಳಾ ಮತ್ತು ಎಂ. ರಮೇಶ್ ಇವರುಗಳು ಹಾಡಿದಾಗ ಜಿ. ಕೆ. ವೆಂಕಟೇಶ್ ಅವರ ಸಂಗೀತ ನಿರ್ದೇಶನದಲ್ಲಿ [illegible]ಗಾಗಿದೆ.

ಮುಹೂರ್ತದ ನಂತರ

"ಹೊಟ್ಟೆ ಹಸಿವು ತಾಳದೆ ಹೋದಾಗ
ಕದ್ದ[illegible] ಕಳ್ಳನ ?" ಎಂಬ

ಹಾಡಿನ ಸನ್ನಿವೇಶದೊಂದಿಗೆ ಚಿತ್ರದ ಚಿತ್ರೀಕರಣ ಪ್ರಾರಂಭವಾಯಿತು.

ಪಳನಿಯಪ್ಪನ್ ರಾಮಸ್ವಾಮಿ ಅರ್ಪಿಸುತ್ತಿರುವ ಈ ಚಿತ್ರವನ್ನು ಈಗಾಗಲೇ 'ಪರಮೇಶಿ ಪ್ರೇಮ ಪ್ರಸಂಗ' ಚಿತ್ರವನ್ನು ನಿರ್ದೇಶಿಸಿ ಸಿದ್ಧಪಡಿಸಿರುವ ರಮೇಶ್ ಭಟ್ ನಿರ್ದೇಶಿಸುತ್ತಿದ್ದಾರೆ. ಕಥೆಯನ್ನು ಜಯರಾಘವನ್ ಅವರು ಬರೆದಿದ್ದು ಚಿತ್ರಕಥೆಯನ್ನು ಸೋಮು ರಚಿಸಿದ್ದಾರೆ. ಸಂಭಾಷಣೆ ಹಾಗೂ ಗೀತೆ ರಚನೆಕಾರರು ದೊಡ್ಡರಂಗೇಗೌಡ. ದೇವಧರ್ ಅವರು ಛಾಯಾಗ್ರಹಣ ಒದಗಿಸುತ್ತಿರುವ ಈ ಚಿತ್ರಕ್ಕೆ ವೈ. ಶಿವಯ್ಯ ಸಾಹಸ ಸಂಯೋಜಿಸುತ್ತಿದ್ದಾರೆ. ಸಂಕಲನಕಾರರು ಪಿ. ಭಕ್ತವತ್ಸಲಂ.

ರಮೇಶ್‌ಭಟ್ ಅವರ ನಿರ್ದೇಶನದ ಎರಡನೇ ಚಿತ್ರ ಹಾಗೂ ಹೊಸ ವರ್ಷದಲ್ಲಿ ಸೆಟ್ ಏರಿದ ಆರನೇ ಚಿತ್ರವಾದ ಈ ಚಿತ್ರದಲ್ಲಿ ಅನಂತನಾಗ್, ಶಂಕರ್‌ನಾಗ್, ಗೀತಾ, ಸುಶೀಲೇಂದ್ರ ಜೋಷಿ, ಸಿ. ಆರ್. ಸಿಂಹ ಮುಂತಾದವರ ತಾರಾಗಣವಿದೆ. ಸುಹಾಸಿನಿ ಮತ್ತು ಆರತಿ ಈ ಚಿತ್ರದಲ್ಲಿ ಗೌರವ ನಟಿಯರಾಗಿ ಅಭಿನಯಿಸುತ್ತಿದ್ದಾರೆ.

ಮರೆಯದ ಮಾಣಿಕ್ಯ

ಚಿತ್ರೀಕರಣವನ್ನು ಸಂಪೂರ್ಣಗೊಳಿಸಿಕೊಂಡಿರುವ "ಮರೆಯದ ಮಾಣಿಕ್ಯ" ಇದೇ ತಿಂಗಳ 26ರಂದು ಚಾಮುಂಡೇಶ್ವರಿ ಸ್ಟುಡಿಯೋದ ಮಾತುಗಳ ಧ್ವನಿಮುದ್ರಣ ಕೇಂದ್ರಕ್ಕೆ ಹೋಗಲಿದೆನೆ. ಫೆಬ್ರವರಿ ಮೊದಲ ವಾರದಲ್ಲಿ ರೀರೆಕಾರ್ಡಿಂಗ್ ಕಾರ್ಯ ಆರಂಭವಾಗಲಿದೆ.

ಫೆಬ್ರವರಿ ಕೊನೆಯ ವಾರದಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆ ನಿರ್ಮಾಪಕರದು. ಸಮಾಜದಲ್ಲಿ ನಡೆಯುವ ಅಕೃತ್ಯಗಳ ವಿರುದ್ಧ ಹೋರಾಡಿ ಜನಜಾಗೃತಿ ಮೂಡಿಸುವ ಯುವಕನ ಸಾಹಸದ ಕುರಿತ ಈ ಚಿತ್ರ ಮಲೆಯಾಳಂನಲ್ಲಿ 24 ಚಿತ್ರ, ತಮಿಳಿನಲ್ಲಿ 5 ಚಿತ್ರ ನಿರ್ಮಿಸಿರುವ ಹೆಸರಾಂತ ನಿರ್ಮಾಪಕ ಕೆ. ಸಿ. ಕೊಟ್ಟಾರ್ಕರ್‌ರವರ ಚೊಚ್ಚಲ ಕನ್ನಡ ಕಲಾಕೃತಿ. "ಜೈ ದೇವಿ ಫಿಲಂಸ್" ಲಾಂಛನದಲ್ಲಿ ಶಾರದಾ ಕೊಟ್ಟಾರ್ಕರ್ ನಿರ್ಮಿಸಿರುವ ಈ ಚಿತ್ರದ ನಿರ್ದೇಶನ ವಿಜಯ ಅವರದು. ಛಾಯಾಗ್ರಹಣ: ಮನೋಹರ್, ಹಾಡುಗಳು: ಆರ್. ಎನ್. ಜಯಗೋಪಾಲ್, ಸಂಗೀತ: ಶಂಕರ್–ಗಣೇಶ್ ಅವರುಗಳದ್ದು.



[illegible]

ಮುಂಗಾರು

ಸಬೂಬು ಬೇಡ: ಪರಿಹಾರ ಬೇಕು

ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದ ಪಂಜಾಬು ಮತ್ತು ಅಸ್ಸಾಂ ಸಮಸ್ಯೆಗಳ ಇತ್ಯರ್ಥಕ್ಕೆ ಕೇಂದ್ರ ಸರಕಾರ ಮುತುವರ್ಜಿ ವಹಿಸಿರುವುದು ಗೊತ್ತಾಗಿದೆ. ಪಂಜಾಬು ಪ್ರಶ್ನೆಯ ಅಧ್ಯಯನಕ್ಕೆ ಕೇಂದ್ರ ಸಚಿವ ಸಂಪುಟದ ಸಮಿತಿಯೊಂದನ್ನು ನೇಮಿಸಲಾಗಿದೆ. ಅಸ್ಸಾಂ ಬಿಕ್ಕಟ್ಟಿನ ವಿಚಾರದಲ್ಲಿ ಮಾತುಕತೆಗೆ ಪೂರ್ವಭಾವಿ ರಂಗುಸಿದ್ಧತೆ ಮಾಡುವಂತೆ ಮುಖ್ಯಮಂತ್ರಿ ಹಿತೇಶ್ವರ ಸೈಕಿಯಾ ಅವರಿಗೆ ಕೇಂದ್ರ ಸರಕಾರ ನಿರ್ದೇಶನೀಡಿದೆ.

ಬಹಳ ವರ್ಷಗಳಿಂದ ಕೊಳೆಯುತ್ತ ಬಂದ ಈ ಎರಡು ರಾಷ್ಟ್ರೀಯ ಸಮಸ್ಯೆಗಳನ್ನು ಬೇಗ ಬಗೆಹರಿಸಬೇಕಾದ್ದು ಸರಕಾರದ ಕರ್ತವ್ಯವೂ ಹೌದು. ಅದನ್ನು ಅದು ಈ ಮೊದಲೇ ಮಾಡಬೇಕಾಗಿತ್ತು. ಯಾಕೆ ಮಾಡಿಲ್ಲ ಎಂಬುದಕ್ಕೆ ಸಬೂಬುಗಳನ್ನು ಹೇಳಿದರೆ ಅದು ಕುಂಟು ನೆಪವಷ್ಟೆ ಆಗುತ್ತದೆ. ಈ ತನಕ ವಿಳಂಬ ಮಾಡಿದ್ದೇ ಅಕ್ಷಮ್ಯ. ಇನ್ನೂ ವಿಳಂಬ ಮಾಡಿದರೆ ಮಹಾಪರಾಧವೆ ಆಗುತ್ತದೆ.

ಪಂಜಾಬು ಸಮಸ್ಯೆಯ ನಿರ್ವಹಣೆಯಲ್ಲಿ ಸರಕಾರ ಜಾಣ್ಮೆಯಿಂದ ವ್ಯವಹರಿಸಿಲ್ಲವಾದ್ದರಿಂದಲೆ ಅದು ಭೂತಾಕಾರವಾಗಿ ಬೆಳೆದಿದೆ. ದೇಶವನ್ನು ಮತ್ತೆ ಒಡೆಯುವ ಅಂಚಿನ ತನಕವೂ ಈ ಸಮಸ್ಯೆ ಬೆಳೆದಿತ್ತು. ಅದನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುವ ಇರಾದೆ ಸರಕಾರಕ್ಕೆ ಇರಲಿಲ್ಲವಾದ್ದರಿಂದ ಅದಿಂದು ವಿಷವೃಕ್ಷವಾಗಿ ಬೇರೂರಿದೆ. ಸಮಸ್ಯೆಯ ಮೂಲವನ್ನು ಹುಡುಕುವ ಯತ್ನವನ್ನು ಸರಕಾರ ಮಾಡದೆ ಅಥವಾ ಗೊತ್ತಿದ್ದೂ ಕಣ್ಣು ಮುಚ್ಚಿ ಸಮಸ್ಯೆ ಬೆಳೆದ ಬಳಿಕ ಮಿಲಿಟರಿ ಪರಿಹಾರವನ್ನು ಕೈಗೆತ್ತಿಕೊಂಡಿತು.

ಪರಿಣಾಮವಾಗಿ ಒಂದು ಜನಸಮುದಾಯವೆ ಭಾರತದ ಹಿಂದೂ ಸಮುದಾಯದ ಬಗೆಗೆ ಮನಸ್ಸು ಮುರಿದುಕೊಂಡು ಪ್ರತ್ಯೇಕ ನಿಂತಿದೆ. ದೇಶದ ನೆಲ ಮಾತ್ರ ಇಂದು ಒಡೆದಿಲ್ಲ, ಅಷ್ಟೇ. ಮನಸ್ಸು ಒಡೆದಿದೆ. 1947ರಲ್ಲಿ ಎರಡಾಗಿ ಒಡೆದ ಭಾರತದ ಮನಸ್ಸು 1984ರಲ್ಲಿ ಮೂರಾಗಿ ಒಡೆಯಿತು.

ಹಾಗೆ ಆಗಬೇಕಾದ ಅಗತ್ಯ ಇರಲಿಲ್ಲ. ಪಂಜಾಬಿನ ಸಮಸ್ಯೆ ಮೂಲತಃ ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಪಟ್ಟದ್ದು. ಮತಾಂಧತೆಯೆಂದು ಕರೆಯಬಹುದಾದ ಅಂಶಗಳು ಆನಂದಪುರ ಸಾಹಿಬ್ ನಿರ್ಣಯದಲ್ಲಿ ಇದ್ದವಾದರೂ ಅಧಿಕಾರ ವಿಕೇಂದ್ರೀಕರಣವಾಗಬೇಕೆಂದು ಹೇಳುವ ಅನೇಕ ವಿಚಾರಗಳು ಅದರಲ್ಲಿದ್ದವು. ಪಂಜಾಬಿನ ನದೀ ನೀರಿನ ಪಾಲು, ನೆಲದ ಪಾಲು ಹಾಗೂ ಅಧಿಕಾರದಲ್ಲಿ ಪಾಲು ಸಿಗಬೇಕು ಎಂಬ ನ್ಯಾಯ ಸಮ್ಮತ ಕೇಳಿಕೆಗಳಿದ್ದವು.

ಯಾವುದೇ ವಿವೇಕಯುತ ಸರಕಾರ ನಿಷ್ಕಪಟವಾಗಿ ಸಮಾಲೋಚನೆಗಿಳಿದು ಈ ಬೇಡಿಕೆಗಳನ್ನು ಪೂರೈಸಬಹುದಾಗಿತ್ತು. ಹಾಗೆ ಮಾಡಿದ್ದರೆ ಅಸ್ವೀಕಾರಾರ್ಹವಾದ ಉಳಿದ ಬೇಡಿಕೆಗಳ ವಿಚಾರದಲ್ಲಿ ಅಕಾಲಿಗಳ ಮನವೊಲಿಸಲು ಸಾಧ್ಯವಿತ್ತು. ಆದರೆ ಸರಕಾರಕ್ಕೆ ಅದು ಪ್ರತಿಷ್ಠೆಯ ಪ್ರಶ್ನೆಯಾಯಿತು ಮಾತ್ರವಲ್ಲದೆ ಇರುವ ಅಧಿಕಾರಗಳನ್ನು ಮುಷ್ಟಿಯಿಂದ ಬಿಟ್ಟುಕೊಡಬಾರದೆನ್ನುವ ಸ್ವಾರ್ಥ ಲಾಲಸೆಯ ಪ್ರಶ್ನೆಯೂ ಆಯಿತು.

ಜತೆಗೆ ಆ ವೇಳೆಗಾಗಲೆ ಅಧಿಕಾರದ ಕೇಕ್‌ನಲ್ಲಿ ತಮಗೂ ಪಾಲು ಕೊಡಿ ಎಂದು ವಿರೋಧ ಪಕ್ಷಗಳವರು ಅಧಿಕಾರದಲ್ಲಿದ್ದ ಕಾಶ್ಮೀರ, ಆಂಧ್ರ ಪ್ರದೇಶ, ಪಶ್ಚಿಮಬಂಗಾಳ ಮತ್ತು ಕರ್ನಾಟಕಗಳವರೂ ಕೇಂದ್ರವನ್ನು ಕೇಳತೊಡಗಿದ್ದರು. ಸುತ್ತಲಿನವರೆಲ್ಲ ಬಂದು ಎಳೆದು ಕೊಂಡಾರೆಂಬ ಭಯದಿಂದ ತಿಂಡಿಯನ್ನು ಕದ್ದು ಮುಚ್ಚಿ ತಿನ್ನುವ ಆಸೆಬುರುಕ ಮಗುವಿನಂತೆ ಅಂದು ಕೇಂದ್ರ ಸರಕಾರ ವ್ಯವಹರಿಸಿತು. ಯಾರ ವಿವೇಕವೂ ಅದರ ಕಿವಿಗೆ ನಾಟಲಿಲ್ಲ. ವಿವೇಕದ ನುಡಿಗಳೆಲ್ಲವೂ ತನ್ನನ್ನು ಹಾಳು ಮಾಡುವ ಕೆಟ್ಟ ಉದ್ದೇಶದಿಂದ ಹೇಳಿದ್ದೆಂಬ ಹಟಮಾರಿತನವನ್ನು ಅದು ಮಾಡುತ್ತಲೇ ಬಂದಿದೆ.

ಅಸ್ಸಾಂ ಸಮಸ್ಯೆ ಕೂಡಾ ಅಷ್ಟೆ. ತೀರ್ಮಾನಿಸಬೇಕೆಂಬ ಇರಾದೆ ಸರಕಾರಕ್ಕೆ ಇದ್ದದ್ದೆ ಆಗಿದ್ದರೆ ಎಂದೋ ತೀರಿಸಬಹುದಾಗಿತ್ತು. ದೇಶದ ಮೂಲೆಯ ಆ ರಾಜ್ಯವನ್ನು ಬಹಳಷ್ಟು ಕಡೆಗಣಿಸುತ್ತ ಬಂದು ಸಮಸ್ಯೆ ಒಮ್ಮೆಲೇ ವಿದೇಶೀಯರ ಪ್ರಶ್ನೆಯ ರೂಪದಲ್ಲಿ ಸ್ಫೋಟಗೊಂಡಾಗ ಒಮ್ಮೆಗೇ ಸರಕಾರ ಬೆಚ್ಚಿಬಿತ್ತು. ಆ ಮೇಲೆ ವಿರೋಧ ಪಕ್ಷಗಳವರು ಸಹಕಾರ ನೀಡಲಿಲ್ಲವೆಂದೋ, ಅಂತರ್ರಾಷ್ಟ್ರೀಯ ಬದ್ಧತೆಗಳಿವೆಯೆಂದೋ ಸಬೂಬು ಹೇಳುತ್ತಾ ಕಾಲ ತಳ್ಳಿತು.

ಸಮಸ್ಯೆಗಳನ್ನು ಸರ್ವ ಪ್ರಯತ್ನ ಮಾಡಿ ಬಗೆಹರಿಸಬೇಕಾದ ದೊಡ್ಡ ಹೊಣೆಗಾರಿಕೆ ಹಿಂದಿನ ಸರಕಾರಕ್ಕಿತ್ತು. ಈಗಿನದಕ್ಕೂ ಇದೆ. ಸಬೂಬು, ಕುಂಟುನೆಪಗಳಿಲ್ಲಿ ನಡೆಯದು. ತನ್ನ ತಾಯಿಯ ಸರಕಾರದ ಅಸಾಮರ್ಥ್ಯ, ಆಲಸಿತನಗಳ ದೊಡ್ಡ ಹೊರೆ ಈಗ ರಾಜೀವ ಗಾಂಧಿಯ ಹೆಗಲ ಮೇಲಿದೆ. ಅದನ್ನು ಹೊತ್ತು ಅವರು ಗುರಿ ಮುಟ್ಟಬೇಕು.

ರಕ್ಷಣೆಯಲ್ಲಿ ಮೊದಲ ಹೆಜ್ಜೆ

... ಭಾರತದ ಪೂರ್ವ ಕರಾವಳಿಯಲ್ಲಿ ...ಕ ಸಂಶೋಧನೆಗಳು ನಡೆದಿದ್ದರೂ ಪಶ್ಚಿಮ ಕರಾವಳಿಯಲ್ಲಿ ಈ ಕಡಲ ಆಮೆಗಳ ಬಗ್ಗೆ ವಿವರಗಳೇನೂ ದೊರೆತಿಲ್ಲ.

ಇದೀಗ ಮಂಗಳೂರು ವಿಶ್ವವಿದ್ಯಾನಿಲಯದ ಬಯೋಸೈನ್ಸ್ ವಿಭಾಗದವರು ಪ್ರೊ। ಎಂ. ಎನ್. ಮಧ್ಯಸ್ಥ ಅವರ ನೇತೃತ್ವದಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.

ಕಳೆದ ಎರಡು ತಿಂಗಳ ಸತತ ಪರಿಶ್ರಮದ ಫಲವಾಗಿ ಮಂಗಳೂರಿನ ಸಮೀಪದ ಬೆಂಗರೆಯಲ್ಲಿ ಕಡಲ ಆಮೆಗಳ ಮೊಟ್ಟೆಗಳನ್ನು ಸಂರಕ್ಷಿಸಿ ಅವುಗಳಿಂದ ಮರಿಗಳನ್ನು ಪಡೆಯುವಲ್ಲಿ ಸಫಲರಾಗಿದ್ದಾರೆ.

ಪಶ್ಚಿಮ ಕರಾವಳಿಯಲ್ಲಿ ಕಡಲು ಕೊರೆತ ತಡೆಗಟ್ಟಲು ನಿರ್ಮಿಸಿರುವ ತಡೆಗೋಡೆಗಳಿಂದಾಗಿ ಕಡಲಾಮೆಗಳಿಗೆ ಮರಿಗಳನ್ನಿಡಲು ಸೂಕ್ತ ಸ್ಥಳದ ಅಭಾವ ಉಂಟಾಗಿರುವುದರಿಂದ ಈ ರೀತಿಯ ಮರಿಗಳ ಉತ್ಪಾದನೆ ಹಾಗೂ ಸಂರಕ್ಷಣೆಯ ಕಾರ್ಯಕ್ಕೆ ವಿಶೇಷ ಮಹತ್ವವಿದೆ.

ಕರ್ನಾಟಕದ ಕರಾವಳಿಯಲ್ಲಿ ಕಡಲು ಆಮೆಗಳ ಸಂತತಿಯ ವೃದ್ಧಿಗಾಗಿ ಇಂತಹ ಸಂರಕ್ಷಣಾ ಕಾರ್ಯಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುವುದು ಅಗತ್ಯವಾಗಿದೆ.

ಬ್ಯಾಂಕ್ ಅಧಿಕಾರಿಗಳ ವೇತನ ಪರಿಷ್ಕರಣೆ

ಮಂಗಳೂರು, ಜ. 5- ಬ್ಯಾಂಕ್ ಅಧಿ...ಗಳ ವೇತನ ಪರಿಷ್ಕರಣೆಗೆ ಸಂಬಂಧಿ...ತೆ ಭಾರತೀಯ ಬ್ಯಾಂಕುಗಳ ಸಂಸ್ಥೆ (...ಎ) ಹಾಗೂ ಅಖಿಲ ಭಾರತೀಯ ...ಕ್ ಅಧಿಕಾರಿಗಳ ಒಕ್ಕೂಟ (...ಓ) ಇವುಗಳ ನಡುವೆ ಮಾತುಕತೆ ... ಡಿಸೆಂಬರ್ 28ರಂದು ಮುಗಿದು ...ವ ವೇತನ ಶ್ರೇಣಿಗಳನ್ನೂ ಒಮ್ಮತ... ಒಪ್ಪಿಕೊಳ್ಳಲಾಯಿತು ಎಂದು ... ಬಂದಿದೆ.

ಪರಿಷ್ಕರಿಸಿದ ವೇತನ ಶ್ರೇಣಿಗಳಿಂದಾಗಿ ಬ್ಯಾಂಕುಗಳಿಗೆ ಪ್ರತಿ ವರ್ಷ 95ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಆರ್ಥಿಕ ಹೊರೆ ಬೀಳುತ್ತದೆ. ಬ್ಯಾಂಕು ಅಧಿಕಾರಿಗಳ ಒಟ್ಟು ವೇತನದಲ್ಲಿ ಶೇಕಡಾ 16.5ರಷ್ಟು ಹೆಚ್ಚಳ ವಾಗುತ್ತದೆ.

ರಾಷ್ಟ್ರೀಕೃತ ಬ್ಯಾಂಕುಗಳ ಸುಮಾರು 1.80 ಲಕ್ಷ ಅಧಿಕಾರಿಗಳು ಮತ್ತು ಖಾಸಗಿ ಬ್ಯಾಂಕುಗಳ ಸುಮಾರು 60ಸಾವಿರ ಅಧಿಕಾರಿಗಳು ಈ ವೇತನ ಪರಿಷ್ಕರಣೆಯಿಂದ ಪ್ರಯೋಜನ ಪಡೆಯುತ್ತಾರೆ ಎಂದು ಐಕೊಬೊ ದ.ಕ.ಜಿಲ್ಲಾ ಕಾರ್ಯದರ್ಶಿ ಕೆ.ವೇಣುಗೋಪಾಲ್ ಅವರು ತಿಳಿಸಿದ್ದಾರೆ.

ಹೊಸ ವೇತನ ಶ್ರೇಣಿ ಈ ಕೆಳಗಿನಂತಿದೆ. (ಪ್ರಸ್ತುತ ವೇತನ ಶ್ರೇಣಿಯನ್ನು ಆವರಣದಲ್ಲಿ ಸೂಚಿಸಲಾಗಿದೆ)

1) ರೂ 1175–2775 (700–1800)
2) ರೂ 1850-3000 (1200-2000)
3) ರೂ 2275-3450 (1800-2250)
4) ರೂ 3000-3600(2000-2400)
5)ರೂ 3750-4050 (2500–2700)
6)ರೂ 4100–4800(2750–3150)
7)ರೂ 4450–5150(3000–3500)

332 ಬಿಂದುಗಳಿಂದ ಮೇಲ್ಪಟ್ಟು ... ಬೆಲೆ ಸೂಚ್ಯಂಕ (1960–

ಕಳ್ಳಿಗೆ ಮಹಾಬಲ ಭಂಡಾರಿ ಪುಣ್ಯದಿನ

...ಸರಗೋಡು, ಜ. 5 ಕಾಸರಗೋಡು ... ಚಳವಳಿಯ ನೇತಾರ ದಿ। ಕಳ್ಳಿಗೆ ...ಬಲ ಭಂಡಾರಿಯವರ ಏಳನೇ ... ದಿನಾಚರಣೆಯು ತಾ. 7ರಂದು ...ಹ್ನ 2.30ರಿಂದ ಸೋಮವಾರ ಪಿತ... ...ಯ ... ಸ್ಕೂಲ್‌ನ ಆವರಣ... ನಡೆಯಲಿದೆ.

...ರ್ನಾಟಕ ರಾಜ್ಯದ ಪ್ರವಾಸೋದ್ಯಮ ... ಸಾರ್ವಜನಿಕ ಪತ್ರಿಕಾತೆ ಸಚಿವ ಕೆ. ... [illegible]

ಮಹಾಸಭೆ

ಮಂಗಳೂರು, ಜ. 5- ದ.ಕ. ಜಿಲ್ಲಾ ಕೋಳಿ ಸಾಕಣೆದಾರರ ಸಹಕಾರಿ ಸಂಘದ ಮಹಾಸಭೆಯು ಇತೀಚಿಗೆ ಸಹಕಾರಿ ಸಂಘಗಳ ಸಹಾಯಕ ರಿಜಿಸ್ಟಾರ್ ಮಂಜುನಾಥ ನ್ಯಾಕ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಳೆದ ಜೂನ್ 30ಕ್ಕೆ ಅಂತ್ಯವಾಗುವ ವರ್ಷದಲ್ಲಿ ಸಂಘವು ನಡೆಸುವ ಕೋಳಿಯ ಆಹಾರ, ಪಶುಗಳ ಆಹಾರ, ಕೋಳಿಯ ಔಷಧ ಮುಂತಾದುವುಗಳ ಮಾರಾಟದಲ್ಲಿ ಹೆಚ್ಚಳವಾಗಿದ್ದು ವ್ಯಾಪಾರದ ಮೊತ್ತ 13 ಲಕ್ಷ ರೂ. ಮೀರಿದೆ. ಸದಸ್ಯರಿಗೆ ಶೇ. 9 ಲಾಭಾಂಶ ಹಂಚಲಾಗುವುದು ಎಂದು ತಿಳಿಸಲಾಯಿತು.

ನಂತರ ಆಡಳಿತ ಮಂಡಳಿಯ ಚುನಾವಣೆ ನಡೆದು ಬಿ. ಪ್ರತಾಪಚಂದ್ರ ಶೆಟ್ಟಿ (ಅಧ್ಯಕ್ಷ), ಸ್ಟ್ಯಾನಿ ಪ್ಯಾಸ್ ಪಿಂಟೋ (ಉಪಾಧ್ಯಕ್ಷ), ಜೇಮ್ಸ್ ಅರಾನ್ಹಾ, ಕಸ್ತೂರಿ ಮಾರ್ಲ, ಜಿ. ಜಿ. ವಾಸುದೇವ ಪ್ರಭು, ಕೆ. ಗಂಗಾಧರ ರೈ, ಲಾರೆನ್ಸ್ ಡಿಸೋಜ ಹಾಗೂ ಎಸ್. ಬಿ. ರಂಗ (ನಿರ್ದೇಶಕರು) ಆಯ್ಕೆಯಾದರು. ಡಾ। ಎಸ್. ಸದಾಶಿವ ನಾವಡ ಅವರನ್ನು ಅಧಿಕಾರಿ ನಿರ್ದೇಶಕರಾಗಿ ಆರಿಸಲಾಯಿತು.

ಕಿವಾಡನಾಥ
ಮಂಗಳೂ...

ಅನುಭವ, ಯುವಶಕ್ತಿ ಸಮ್ಮಿಲನ

ಯುವ ಪ್ರಧಾನಿ ರಾಜೀವ ಗಾಂಧಿ ಚುನಾವಣೆಯಲ್ಲಿ ಅಪೂರ್ವವೆನಿಸುವಂತಹ ಜಯವನ್ನು ಸಂಪಾದಿಸಿದ ಅನತಿಕಾಲದಲ್ಲಿಯೆ ತನ್ನ ಸಚಿವ ಸಂಪುಟವನ್ನು ಪ್ರಕಟಿಸಿದ್ದಾರೆ. ಯಾವುದೆ ಸಚಿವ ಸಂಪುಟದ ಕಾರ್ಯಕ್ಷಮತೆಯನ್ನು ಕೆಲವಾರು ದಿನಗಳ ಕಾರ್ಯನಿರ್ವಹಣೆಯಿಂದಲೆ ತೀರ್ಮಾನಿಸುವುದು ಮಾತ್ರವೆ ನ್ಯಾಯ ಸಮ್ಮತವಾದರೂ ರಚಿತವಾಗಿರುವ ಸಚಿವ ಸಂಪುಟದ ಸ್ವರೂಪದ ಆಧಾರದಲ್ಲಿ ಕೆಲವು ತೀರ್ಮಾನಗಳನ್ನು ಕೈಕೊಳ್ಳಬಹುದಾಗಿದೆ.

ಸಮರ್ಥ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ಮಿತಗಾತ್ರದ ಸಂಪುಟವನ್ನು ರಾಜೀವ ಗಾಂಧಿ ರಚಿಸಿದ್ದಾರೆ. ಯಾವುದೇ ವ್ಯವಸ್ಥೆ ನಿಯಂತ್ರಣಕ್ಕೆ ಮೀರಿ ಬೆಳೆದರೆ ಅದರಿಂದ ಕೆಲಸ ಕಾರ್ಯಗಳು ಸಮರ್ಥವಾಗಿ ಆಗುವುದಿಲ್ಲವೆಂಬುದು ಸರ್ವವೇದ್ಯವಾದ ಮಾತು. ಉಪಸಚಿವರಿಗೆ ಸಾಮಾನ್ಯವಾಗಿ ಕೈಗೆ ಕೆಲಸವೇ ಸಿಗುವುದಿಲ್ಲ ಎಂಬುದನ್ನು ರಾಜೀವ ಗಾಂಧಿ ಸ್ಪಷ್ಟ ಪಡಿಸಿದ್ದಾರೆ. ತನ್ನ ತಾಯಿಯ ಅಧಿಕಾರಾವಧಿಯಲ್ಲಿನ ಸಂಪುಟ ಕಾರ್ಯನಿರ್ವಹಣೆಯನ್ನು ಕಂಡೇ ಉಪಸಚಿವರು ಬೇಡ ಎಂಬ ತೀರ್ಮಾನಕ್ಕೆ ರಾಜೀವ ಗಾಂಧಿ ಬಂದಿರಬಹುದು. ಉಪಸಚಿವರ ಪೈಕಿ ಕೆಲವು ಮಂದಿ ಸಮರ್ಥವಾಗಿ ಕೆಲಸಮಾಡಿ ಹೆಸರು ಗಳಿಸಿದವರು ಇರಬಹುದಾದರೂ ಉಪಸಚಿವ ಖಾತೆಯೆಂಬುದು ಶರಲೆ ಮಾಡುವವರ ಖಾತೆಯೆಂದೇ ಜನಜನಿತವಾಗಿದೆ.

ಪಿ. ವಿ. ನರಸಿಂಹರಾವ್, ಎಸ್. ಬಿ. ಚವಾಣ್, ಬನ್ಸೀಲಾಲ್, ಕೆ. ಸಿ. ಪಂತ್, ವಸಂತ ಸಾಠೆ, ಜನಾರ್ದನ ಪೂಜಾರಿ, ವೀರೇಂದ್ರ ಪಾಟೀಲ್ ವಿ. ಎನ್. ಗಾಡ್ಗೀಳ್, ವಿ. ಪಿ. ಸಿಂಗ್ ಹಾಗೂ ಶಿವರಾಜ ಪಾಟೀಲ್‌ರಂತಹ ಅನುಭವಿಗಳನ್ನು ರಾಜೀವ್ ಗಾಂಧಿ ಸೇರಿಸಿಕೊಂಡಿದ್ದಾರೆ. ಯಾವ ಕೆಲಸಕ್ಕಾದರೂ ಅನನುಭವಿಗಳಿಂದ ಕಾರ್ಯ ಸಾಗದು ಎಂದು ಬೇರೆ ಹೇಳಬೇಕಾಗಿಲ್ಲ. ಆಡಳಿತದ ಸೂತ್ರವನ್ನು ವಹಿಸಿಕೊಂಡವರಿಗೆ ಯಾವ ಸೂತ್ರವನ್ನೆಳೆದರೆ ಯಾವ ಬೊಂಬೆ ಕುಣಿಯುತ್ತದೆ ಎಂಬ ಸ್ಪಷ್ಟ ತಿಳುವಳಿಕೆ ಇರಬೇಕಾಗುತ್ತದೆ.

ಯುವ ಶಕ್ತಿಯನ್ನು ಸೇರಿಸಿಕೊಂಡಿರುವುದು ರಾಜೀವರ ಸಂಪುಟದ ಇನ್ನೊಂದು ವೈಶಿಷ್ಟ್ಯ. ಮಾಧವರಾವ್ ಸಿಂಧ್ಯ, ಮಾರ್ಗರೆಟ್ ಆಳ್ವ, ಅರುಣ್ ನೆಹರೂ ಅಶೋಕ್ ಗೆಹ್ಲಾಟ್, ಗುಲಾಂ ನಬಿ ಆಜಾದ್, ಬೀರ್‌ಸಿಂಗ್ ಮುಂತಾದ ಯುವಕರನ್ನು ಒಳಪಡಿಸಿ ಆಡಳಿತಕ್ಕೆ ಚುರುಕು ಮುಟ್ಟಿಸುವ ಕೆಲಸವನ್ನೂ ಮಾಡಲಾಗಿವೆ.

ಜತೆಗೆ ಜನಾರ್ದನ ಪೂಜಾರಿ, ಅಬ್ದುಲ್ ಗಫೂರ್, ಮೊಹ್ಸೀನಾ ಕಿದ್ವಾಯಿ, ಅಶೋಕ್ ಸೇನ್ ಮೊದಲಾದ ಪರಿಶುದ್ಧ ಚಾರಿತ್ರ್ಯವುಳ್ಳವರು ಸಂಪುಟದಲ್ಲಿದ್ದು ಅದಕ್ಕೊಂದು ಶುಚಿಯಾದ ಸ್ವರೂಪವನ್ನೊದಗಿಸಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ನೆಲೆಯೂರಿದ ಕೆಲವು ಗಟ್ಟಿ ಕುಳಗಳನ್ನು ಕಿತ್ತೆಸೆಯುವ ಧೈರ್ಯವನ್ನೂ ಈ ಯುವ ನಾಯಕ ಮಾಡಿದ್ದಾರೆ. ಇದಕ್ಕೆ ಕಾರಣಗಳೇನು ಎಂದು ಶೋಧಿಸುವ ಕೆಲಸ ಸದ್ಯಕ್ಕೆ ಅಪ್ರಸ್ತುತವೆನಿಸುತ್ತದೆ. ಒಬ್ಬ ನಾಯಕ ಹೋಗಿ ಇನ್ನೋರ್ವ ನಾಯಕ ಬರುವ ವೇಳೆಗೆ ಆತ ತನಗೆ ಸಹಾಯಕರಾಗಿ ವ್ಯಕ್ತಿಗಳನ್ನು ಆರಿಸುವ ವೇಳೆ ಹಲವಾರು ಪರಿಗಣನೆಗಳಿರಬಹುದು. ಇದೆಲ್ಲವೂ ರಾಷ್ಟ್ರದ ಒಟ್ಟು ಹಿತದ ಪರಿಗಣನೆ ದೃಷ್ಟಿಯಿಂದ ಗೌಣ.

ಸರಕಾರ ಹೇಗೆ ಕೆಲಸ ಮಾಡುತ್ತದೆ ಎಂಬುದಷ್ಟೆ ಜನರ ಅರಿವಿಗೆ ಬರುವ ವಿಚಾರ. ಯಾವುದೇ ಸರಕಾರದಲ್ಲಿ ಜನರು ಮುಖ್ಯವಲ್ಲ. ಅವರಿಂದ ಸಮಗ್ರ ಸಮಾಜದ ಹಿತರಕ್ಷಣೆ ಆಗಿದೆಯೆ ನಾಡಿನ ಮುನ್ನಡೆಗೆ ಆಡಳಿತ ಚಾಲನೆ ಕೊಟ್ಟಿದೆಯೆ, ನಮ್ಮ ಸಮಾಜದಲ್ಲಿ ಇರುವಂತಹ ಅಸಮಾನತೆಗಳೂ ವಿಕೃತಿಗಳೂ ಕಡಿಮೆಯಾಗಿವೆಯೆ ಎಂಬುದನ್ನು ಮಾತ್ರ ಜನ ಗಮನಿಸುತ್ತಾರೆ.

ಚುನಾವಣೆಯ ವಿಜಯಕ್ಕೆ ಮೊದಲು ಮತ್ತು ಅನಂತರ ರಾಜೀವ ಗಾಂಧಿ ಹೇಳಿರುವ ಮಾತುಗಳನ್ನು ದೇಶದ ಜನ ಇಂದು ನಂಬಬೇಕಾಗಿದೆ. ಶುಚಿಯಾದ ಆಳ್ವಿಕೆ ಕೊಡುವುದಾಗಿ ಅವರು ಹೇಳಿದ್ದಾರೆ. ಆಡಳಿತದಲ್ಲಿ ಪುಢಾರಿಗಳ ಹಸ್ತಕ್ಷೇಪ ನಡೆಯದು ಎಂದಿದ್ದಾರೆ. ಭ್ರಷ್ಟಾಚಾರ ಕಿತ್ತು ಒಗೆಯುವುದಾಗಿಯೂ ಸಾರಿದ್ದಾರೆ, "ಮಿಸ್ಟರ್ ಕ್ಲೀನ್" ಆಗಲು ಹೊರಟಿರುವ ರಾಜೀವ ಗಾಂಧಿಯವರ ನಿರ್ಧಾರಕ್ಕೆ ಕರ್ನಾಟಕದ ವಿದ್ಯಮಾನಕ್ಕೆ ಸಂಬಂಧಿಸಿ ಅವರು ತೆಗೆದುಕೊಂಡಿರುವ ನಿಲುವು ಒಂದು ನಿದರ್ಶನ. ಈ ಪ್ರವೃತ್ತಿ ಮುಂದುವರಿಯುವುದೇ - ಕಾದು ನೋಡೋಣ. ಅದು ಬಿಕ್ಕಟ್ಟು ಬಂದಾಗ ಗೊತ್ತಾಗುತ್ತದೆ.

ನಿರ್ಜೀವ ಕಾರ್ಯಾಗಾರಕ್ಕೆ ಜೀವತುಂಬಿ

ಪುತ್ತೂರು, ಜ. 1– ವೃತ್ತಿ ಶಿಕ್ಷಣದಲ್ಲಿ ಮಹತ್ವರ ಪಾತ್ರವನ್ನು ವಹಿಸಬಲ್ಲ ಇಲ್ಲಿನ ಸರ್ಕಾರಿ ಕೈಗಾರಿಕಾ ಕಾರ್ಯಾಗಾರ ಆರಂಭ ದ ಎಲ್ಲಾ ನಿರೀಕ್ಷೆಗಳನ್ನು ಹುಸಿಮಾಡಿ ಈಗ ಸಂಪೂರ್ಣ ನಿಷ್ಕ್ರಿಯವಾಗಿದೆ ಎಂದು ಊರ ಜನ ದೂರುತ್ತಿದ್ದಾರೆ.

ಇಪ್ಪತ್ತೈದು ವರ್ಷಗಳ ಹಿಂದೆ ಸ್ಥಾಪನೆ ಯಾದ ಈ ಕೇಂದ್ರ ಪುತ್ತೂರು ಹಾಗೂ ಸರೆಯ ಊರುಗಳ ವೃತ್ತಿ ಶಿಕ್ಷಣಾಕಾಂಕ್ಷಿ ಯುವಕರಿಗೆ ಕೈಗಾರಿಕಾ ತರಬೇತಿಯನ್ನು ನೀಡುತ್ತಾ ಬಂದಿದೆ. ಆದರೆ ಕಳೆದ ಒಂದು ವರ್ಷದಿಂದ ಈ ಕಾರ್ಯಗಾರದ ಕಾರ್ಯ ವಿಧಾನವೇ ಬದಲಾಗಿದೆ ಎಂದು ಇಲ್ಲಿಯ ವಿದ್ಯಾರ್ಥಿಗಳ ಅಸಮಾಧಾನ.

ರಾಜ್ಯ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಂಗಸಂಸ್ಥೆಯಾದ ಇದು ಈಗ ಸರ್ಕಾರಿ ಇಲಾಖೆಗಳ ಎಲ್ಲಾ ದುರವಸ್ಥೆಗಳನ್ನು ಒಳಗೊಂಡಿರುವ ಗೂಡಾಗಿದೆ.

ಆರು ತಿಂಗಳ ತರಬೇತಿಗಾಗಿ ಈ ಕಾರ್ಯಾಗಾರವನ್ನು ಸೇರಿರುವ ವಿದ್ಯಾರ್ಥಿಗಳು ತರಬೇತಿಗೆ ಅಗತ್ಯವಾದ ಸಲಕರಣೆಗಳಿಲ್ಲದೆ ನಾಲ್ಕು ತಿಂಗಳಿಗಿಂತಲೂ ಹೆಚ್ಚಿನ ಅವಧಿಯನ್ನು ವ್ಯರ್ಥವಾಗಿ ಕಳೆದಿದ್ದಾರೆ.

ಹಿಂದೆ ಈ ಕಾರ್ಯಗಾರದಲ್ಲಿ ತರಬೇತಿ ನಿರತ ವಿದ್ಯಾರ್ಥಿಗಳೇ ನಿರ್ಮಿಸಿದ ವಿವಿಧ ಪೀಠೋಪಕರಣಗಳು ಮತ್ತು ಮನೆಬಳಕೆ ಸಾಮಾಗ್ರಿಗಳ ಮಾರಾಟದಿಂದ ಕೇಂದ್ರಕ್ಕೆ ತಿಂಗಳಿಗೆ ಸರಾಸರಿ ನಾಲ್ಕು ಸಾವಿರ ರೂಪಾಯಿ ವರಮಾನ ಸಿಗುತ್ತಿದ್ದು ಈಗ ಈ ವರಮಾನ ಸಂಪೂರ್ಣ ನಿಂತಿದ್ದು, ಕಾರ್ಯಾಗಾರ ಹಣಕಾಸಿನ ಬಿಕ್ಕಟ್ಟನ್ನು ಎದುರಿಸುತ್ತಿದೆ.

ಈ ನಿರ್ಜೀವ ಕಾರ್ಯಗಾರಕ್ಕೆ ಜೀವ ತುಂಬಿ ನಿರುದ್ಯೋಗಿ ಯುವಕರ ಭವಿಷ್ಯಕ್ಕೊಂದು ದಾರಿ ಮಾಡಿ ಕೊಡಬೇಕಾಗಿರುವುದು ಸರ್ಕಾರದ ಮುಂದಿರುವ ಮುಖ್ಯ ಜವಾಬ್ದಾರಿ.

ಮಂಗಳೂರು ವಿ.ವಿ.ಯಲ್ಲಿ ಇನ್ನಷ್ಟು ವಿಷಯ ಬೋಧನೆ

ಮಂಗಳೂರು, ಜ. 1– ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಭೌತವಿಜ್ಞಾನ, [illegible]ಹ ಸಂಪರ್ಕ ಹಾಗೂ ಪತ್ರಿಕೋದ್ಯಮ, ಅನ್ವಯಿತ ಸಸ್ಯಶಾಸ್ತ್ರ ಮತ್ತು ಅನ್ವಯಿತ ಜೀವಶಾಸ್ತ್ರಗಳ ಶಿಕ್ಷಣವನ್ನು ಆರಂಭಿಸಲು ಸೆನೆಟ್ ತನ್ನ ಒಪ್ಪಿಗೆ ನೀಡಿದೆ.

ಈಗ ವಿ.ವಿ.ಗೆ ಅವುಗಳನ್ನು ಆರಂಭಿಸುವ ಸಾಮರ್ಥ್ಯವಿಲ್ಲ. ಆದ್ದರಿಂದ ಆ ಪ್ರಸ್ತಾಪವನ್ನು ಪುನರ್ಪರಿಶೀಲನೆಗೆ ಒಪ್ಪಿಸಬೇಕು ಎನ್ನುವ ಪ್ರೊ। ಎಂ.ಎ.ರಾಮಚಂದ್ರನ್ ಅವರ ಗೊತ್ತುವಳಿಯನ್ನು ಸೆನೆಟ್ 11:25 ಮತಗಳ ಅಂತರದಿಂದ ತಿರಸ್ಕರಿಸಿತು.

ಸೆನೆಟ್ ಸಭೆ ಇಂದು ಇಲ್ಲಿನ ಸೈಂಟ್ ಎಲೋಶಿಯಸ್ ಕಾಲೇಜಿನ ಸಭಾಂಗಣದಲ್ಲಿ ಉಪಕುಲಪತಿ ಡಾ।ಬಿ. ಶೇಕ್ ಅಲಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಿಶ್ವವಿದ್ಯಾಲಯಕ್ಕೆ ಹಣದ ಕೊರತೆ ಇದ್ದು, ಇರುವ ವಿಭಾಗಗಳಿಗೇ ಸಾಕಷ್ಟು ಸವಲತ್ತನ್ನು ಒದಗಿಸಲಾಗುತ್ತಿಲ್ಲ. ಗ್ರಂಥಾಲಯ ಬಡವಾಗಿದೆ. ಆದ್ದರಿಂದ ಹೊಸ ಕೋರ್ಸುಗಳು ಈಗ ಬೇಡ ಎಂದು ಪ್ರೊ। ರಾವ್ [illegible]

ಸೆನ್ಸಾರ್ ರಹಿತ ಚಿತ್ರ ಪ್ರದರ್ಶನಕ್ಕೆ ದಂಡ

ಮಂಗಳೂರು, ಜ. 1–ಸೆನ್ಸಾರ್ ಆಗದ ಚಿತ್ರಗಳ ಪ್ರದರ್ಶನ ಮಾಡುವವರಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿದೆ ಎಂದು ಇಲ್ಲಿ ನೀಡಲಾದ ಒಂದು ಪ್ರಕಟನೆ ತಿಳಿಸಿದೆ.

ಹಿಂದೆ ಎರಡು ವರ್ಷ ಸೆರೆಮನೆವಾಸ ಅಥವಾ 20 ಸಾವಿರ ರೂ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತಿತ್ತು. ಅಪರಾಧವನ್ನು ಮುಂದುವರಿಸಿದಲ್ಲಿ ಪ್ರತಿದಿನಕ್ಕೆ ಐದು ಸಾವಿರ ರೂ. ದಂಡವನ್ನು ನಿಗದಿಪಡಿಸಲಾಗಿತ್ತು.

ಈಗ ಅದನ್ನು ಅನುಕ್ರಮವಾಗಿ ಮೂರು ವರ್ಷ, ಒಂದು ಲಕ್ಷ ರೂಪಾಯಿ ಹಾಗೂ 20 ಸಾವಿರ ರೂ.ಗಳಿಗೇರಿಸಲಾಗಿದೆ.

ವಿಡಿಯೋ ಚಿತ್ರ ಪ್ರದರ್ಶನಕ್ಕೆ ಮೂರು ತಿಂಗಳಿಂದ ಮೂರು ವರ್ಷದ ವರೆಗಿನ ಸಜೆ

ಮುಂಗಾರು

ಹೊಸ ಹಾದಿಯ ಆಶ್ವಾಸನೆ

ಭಾರತ ಸ್ವತಂತ್ರವಾದಾಗ ಇದೊಂದು ಸಂಸದೀಯ ಪ್ರಜಾಪ್ರಭುತ್ವವಾಗಬೇಕೆಂದೂ ಒಕ್ಕೂಟ ಸ್ವರೂಪದ ಗಣರಾಜ್ಯವಾಗಬೇಕೆಂದೂ ರಾಷ್ಟ್ರದ ನಾಯಕರು ಯೋಜನೆ ಹಾಕಿದ್ದರು. ದೇಶದ ಜನರ ಆಕೋಕ್ಷೆಯೂ ಅದಾಗಿತ್ತು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೆ ಇಂತಹ ಪ್ರಜಾಪ್ರಭುತ್ವದ ಬೀಜ ಅಡಗಿತ್ತು. ಸ್ವಂತ ಆಳ್ವಿಕೆ ಬೇಕೆಂದು ಬಯಸಿ ಪರದೇಶದ ಪ್ರಭುಗಳನ್ನು ಓಡಿಸಿ ಗೆದ್ದ ಜನಶಕ್ತಿ ಪ್ರಜಾಪ್ರಭುತ್ವವನ್ನಲ್ಲದೆ ಬೇರಾವ ಆಡಳಿತ ವ್ಯವಸ್ಥೆಯನ್ನೂ ಒಪ್ಪಿಕೊಳ್ಳುತ್ತಿರಲಿಲ್ಲ.

ಪರಿಣಾಮವಾಗಿ ದೇಶಕ್ಕೊಂದು ಸಂವಿಧಾನದ ರಚನೆಯಾಯಿತು. ನಮಗೆ ಸಂಸದೀಯ ಪದ್ಧತಿಯ ಪ್ರಜಾಪ್ರಭುತ್ವ ಬಂದಿತು. ಎರಡು ಪಕ್ಷಗಳ ವ್ಯವಸ್ಥೆಯ ಪ್ರಜಾಪ್ರಭುತ್ವ ಇದಾಗಿರಬೇಕೆಂಬ ಸ್ಪಷ್ಟ ಕಲ್ಪನೆ, ಉದ್ದೇಶಗಳು ಅಂದು ಇದ್ದರೂ ಎರಡು ಪಕ್ಷಗಳ ವ್ಯವಸ್ಥೆಯನ್ನು ಕಟ್ಟಿ ಬೆಳೆಸುವ ಯಾವ ಆಂತರಿಕ ವ್ಯವಸ್ಥೆಯನ್ನು ನಮ್ಮ ಸಂವಿಧಾನದಲ್ಲಿ ಅದರ ನಿರ್ಮಾತರು ಸೇರಿಸಲಿಲ್ಲ. ಇದರ ಪರಿಣಾಮವಾಗಿಯೇ ಇಂದು ವಿರೋಧ ಪಕ್ಷಗಳೆಲ್ಲ ಚೂರು ಚೂರಾಗಿ ನೆಲ ಕಚ್ಚಿ ಭಾವತಃ ವಸ್ತುಶಃ ಏಕಪಕ್ಷ ಪ್ರಜಾಸತ್ತೆ ಬಂದಿದೆ.

ಜಾತಿ ವ್ಯವಸ್ಥೆಯ ಆಧಾರದಲ್ಲಿ ಒಡೆದು ಹೋಳುಗಳಾಗಿರುವ ಭಾರತೀಯ ಸಮಾಜದಲ್ಲಿ ರಾಜಕೀಯ ಪಕ್ಷಗಳು ಒಡೆದು ಚೂರುಗಳಾಗಲು ಕೂಡ ಜಾತಿ ವ್ಯವಸ್ಥೆಯೆ ಕಾರಣವೆಂಬುದು ಇತಿಹಾಸವನ್ನು ಅಧ್ಯಯನ ಮಾಡಿದವರಿಗೆ ಸ್ಪಷ್ಟವಾಗಿ ಕಾಣಿಸುವ ವಿಚಾರ. ಇಂದು ಬೃಹತ್ತಾಗಿ ಬೆಳೆದಿರುವಂತಹ ಕಾಂಗ್ರೆಸ್ ಪಕ್ಷ ಕೂಡಾ 1969ರಲ್ಲಿ ಒಡೆದದ್ದು ಜಾತಿಯ ನೆಲೆಯಲ್ಲಿ ಎಂಬುದು ಸಮಾಜ ಶಾಸ್ತ್ರದ ಅಧ್ಯಯನ ಆಸಕ್ತರಿಗೆ ಕುತೂಹಲದ ವಿಷಯ. ಅಂದು ಇಂಡಿಕೇಟ್-ಸಿಂಡಿಕೇಟ್ ಎಂದು ಕಾಂಗ್ರೆಸ್ ಎರಡಾಗಿ ಹೋಳಾದಾಗ ಹಿಂದುಳಿದ ಜಾತಿಗಳ ನಾಯಕರು ಸಿಂಡಿಕೇಟಿನಲ್ಲಿಯೂ ಮುಂದುವರಿದ ಜಾತಿಗಳವರು ಇಂಡಿಕೇಟ್‌ನಲ್ಲಿಯೂ ಸೇರಿಕೊಂಡು ಧ್ರುವೀಕರಣವಾದದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಇಂದಿರಾ ಗಾಂಧಿಯವರಿಗೆ ಅಂದು ಸಮಯಕ್ಕೊದಗುವವರೆಲ್ಲ ಬೇಕಾಗಿದ್ದರು ಎಂಬುದು ನಿಜವಾದರೂ ಈ ವಿಷಯ ಮುಂದುವರಿದವರ ಜಾಣತನವನ್ನೂ ತೋರಿಸುತ್ತದೆ.

ಇಂದಿರಾ ಗಾಂಧಿಯವರು ಆ ಮೇಲೆ ಬಡ ಜನರನ್ನೂ ಹಿಂದುಳಿದ ವರ್ಗದವರನ್ನೂ ಹತ್ತಿರಕ್ಕೆ ಸೆಳೆಯಲು ಕೆಲವು ತಂತ್ರಗಳನ್ನು ಮಾಡಿದ್ದು ಮತ್ತು ಹತ್ತಿರ ಸೇರಿಕೊಂಡ ನಾಯಕ ಗಣವನ್ನು ದೂರಕ್ಕೆ ಬಿಸಾಡಿದ್ದು ಬೇರೆಯೇ ವಿಚಾರ.

ಕಾಂಗ್ರೆಸ್ ಒಂದೇ ಅಲ್ಲದೆ ಇತರ ಎಲ್ಲ ರಾಜರಾಜಕೀಯ ಪಕ್ಷಗಳ ವಿಭಜನೆಯೂ ಜಾತೀಯ ನೆಲೆಯಲ್ಲಿಯೆ ಆಗಿದೆ. ಕಮ್ಯೂನಿಸ್ಟರು ಕೂಡಾ ಇದಕ್ಕೆ ಹೊರತಾಗಿಲ್ಲ.

ಇಂದು ಮಾತ್ರ ವಿಶಿಷ್ಟ ಪರಿಸ್ಥಿತಿ ಭಾರತದಲ್ಲಿ ತಳವೂರಿದೆ. ದಲಿತರು, ದಮನಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಬಡವರೆಲ್ಲರೂ ಕಾಂಗ್ರೆಸ್ ಪಕ್ಷದ ನೆರಳಿನಾಶ್ರಯ ಬಯಸಿದ್ದಾರೆ. ಶ್ರೀಮಂತರು ಮತ್ತು ಉಚ್ಚ ವರ್ಗದವರು ವಿರೋಧ ಪಕ್ಷಗಳ ಶಿಬಿರದಲ್ಲಿದ್ದಾರೆ.

ವಿರೋಧ ಪಕ್ಷಗಳವರು ತಾತ್ವಿಕವಾಗಿ ಮತ್ತು ಸೈದ್ಧಾಂತಿಕವಾಗಿ ಹಾಗೂ ಕಾರ್ಯಕ್ರಮಗಳ ಮೂಲಕ ಬಡಜನರನ್ನೂ ಹಿಂದುಳಿದವರನ್ನೂ ಸೆಳೆದುಕೊಳ್ಳಲು ಅಸಮರ್ಥರಾದುದೆ ಅವರ ಸೋಲಿಗೆ ಕಾರಣವಾಯಿತು.

ಈ ಹಿನ್ನೆಲೆಯಲ್ಲಿ ಎಂಟನೆ ಲೋಕಸಭೆಯ ಮೊದಲ ಅಧಿವೇಶನ ಮಂಗಳವಾರ ಪ್ರಾರಂಭವಾಗಿದೆ. ವಿರೋಧಿಗಳೆಲ್ಲರನ್ನೂ ಮುರಿದು ಮುಕ್ಕಿದ ಸರ್ವಶಕ್ತ ಬಹುಮತ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕಿದೆ. ಈ ಪಕ್ಷದ ಹಿನ್ನೆಲೆಯನ್ನೂ ಚರಿತ್ರೆಯನ್ನೂ ನೋಡಿದವರಿಗೆ ಇಂದು ದೊರೆತಿರುವ ಪ್ರಚಂಡ ಬಹುಮತವು ಎದೆಯಲ್ಲಿ ಭಯವನ್ನು ಬಿತ್ತಿದೆ. ದೇಶವ ಏಕಸತ್ತಾಧಿಕಾರದತ್ತಲೂ ಸರ್ವಾಧಿಕಾರದತ್ತಲೂ ಹೋಗಲು ಅನುಕೂಲವಾಗುವ ಎಲ್ಲ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಸತ್ತಿನಲ್ಲಿ ವಿರೋಧವೆಂಬ ಸದ್ದೇ ಇಲ್ಲದಂತಾಗಿದೆ. ಯಾವ ಕಾನೂನನ್ನಾದರೂ ಲೀಲಾಜಾಲವಾಗಿ ತರಬಲ್ಲ ಸಾಮರ್ಥ್ಯ ಸರಕಾರಕ್ಕೆ ಬಂದಿದೆ.

ಈ ಕತ್ತಲೆಯಲ್ಲಿ ಮಿನುಗುತ್ತಿರುವ ಒಂದೇ ಒಂದು ಬೆಳಕಿದೆ. ಅದುವೆ ಹೊಸ ನಾಯಕತ್ವ. ಹಳೆಯ ಕೆಟ್ಟ ಸಂಪ್ರದಾಯ ಬಿಡುವುದಾಗಿಯೂ ಪ್ರಜಾತಂತ್ರವನ್ನು ಗೌರವಿಸುವ ಹೊಸ ಹಾದಿ ತುಳಿಯುವುದಾಗಿಯೂ ಈ ನಾಯಕತ್ವ ಈಗಾಗಲೆ ಸ್ಪಷ್ಟಪಡಿಸಿರುವುದಲ್ಲದೆ ಆ ನಿಟ್ಟಿನಲ್ಲಿ ಕಾರ್ಯಕ್ಕೆ ಮುಂದಾಗಿರುವುದು- ಇಷ್ಟು ಮಾತ್ರ ನಮ್ಮ ಮುಂದೆ ಇರುವಂತಹ ಶುಭ ಸೂಚನೆಗಳು. ಮುಂದಿನ ಸುಮಾರು ಒಂದು ವರ್ಷದಲ್ಲಿ ಈ ಹೊಸ ನಾಯಕತ್ವ ತುಳಿಯುವ ದಾರಿಯೂ ಅದರ ಸಾಮರ್ಥ್ಯವೂ ಜನರಿಗೆ ಮನದಟ್ಟಾಗಲಿದೆ,

ಎಲ್ಲರಂತಲ್ಲದ ವಿಠಲ ಹೆಗ್ಡೆ

ಚಿಪ್ಪಿನಲ್ಲಡಗಿರುವ ಮುತ್ತಿನಂತಹ ಅಪೂರ್ವ ವ್ಯಕ್ತಿತ್ವವನ್ನು ಬೆಳೆಸಿಕೊಂಡ ಅಂತರ್ಮುಖಿ ಮಟ್ಟಾರು [illegible] ಅವರ ನಿಧನದಿಂದ ಕನ್ನಡನಾಡು ಒಬ್ಬ ಅಪ್ರತಿಮ ಪತ್ರಕರ್ತರನ್ನು ಕಳೆದುಕೊಂಡು ಬಡವಾಗಿದೆ. ಈ ದೇಶದಲ್ಲಿಂದು ವಿರಳವಾಗುತ್ತಿರುವ "ಪೂರ್ಣ [illegible]".

ಎಂ. ವಿ. ಹೆಗ್ಡೆಯವರು ಎಲ್ಲರಂತಲ್ಲ. ಪತ್ರಕರ್ತರಾಗಿ ಅವರು ಸಾಧನೆಯ ಮೇರು ಪರ್ವತಕ್ಕೇರಿದವರು. ಆದರೂ ತಮ್ಮ ಸುತ್ತಲಿನ ಜನಸಾಮಾನ್ಯರಿಗೆ ಈ ಪರ್ವತದ ಪರಿಚಯವಾಗದೆ ಅದೃಶ್ಯರಾಗಿ ಉಳಿದವರು. ಪ್ರಾಮಾಣಿಕತೆ ಮತ್ತು ಸರಳತೆಯ ಸಾಕಾರ ಮೂರ್ತಿಯಾಗಿ ತಿರುಗಾಡಿದವರು. ಆದರೂ ಎಲ್ಲರ ಕಣ್ಣಿಗೆ ಬಿದ್ದವರಲ್ಲ. ಬಡತನದ ಬಾಳಿನಲ್ಲಿ ಹೃದಯ ಶ್ರೀಮಂತಿಕೆಯ ಸುಖಾನುಭವ ಪಡೆದವರು. ಸದ್ಭಾವನೆಗಳ ಚಿರಂತನ ಒಸರಿನಂತೆ ಹರಿದು ಜನ ಸಮೂಹದ ಮನಸ್ಸಿಗೆ ತಿಳಿ ಹಾಸ್ಯದ ರಸ ಪೋಷಣೆ ಮಾಡಿದವರು.

ಶಾಲೆಯಲ್ಲಿ ಕಲಿತುದಕ್ಕಿಂತ ಹೆಚ್ಚಾಗಿ ಸಮಾಜದ ಒಳ ಹೊಕ್ಕು ಅದರಲ್ಲಡಕವಾಗಿರುವ ಕಸಗಳು ಮತ್ತು ರಸವನ್ನು ಗುರುತಿಸಿ ರಸವನ್ನು ಮಾತ್ರ ಹೀರಿ ಜ್ಞಾನ ಭಂಡಾರವನ್ನು ಬೆಳೆಸಿಕೊಂಡವರು. ಪತ್ರಿಕಾ ವೃತ್ತಿಯಲ್ಲಿ ಎಂ. ವಿ. ಹೆಗ್ಡೆಯವರಂತಹ ಸರಳ-ಸರಸ-ಸುಂದರ ಶೈಲಿಯನ್ನು ರೂಢಿಸಿಕೊಂಡವರು ಇನ್ನೊಬ್ಬರಿಲ್ಲವೆನ್ನಬಹುದು. ಸೂಕ್ತ ಉಪಮೆಗಳಿಂದ ಪೋಷಿತವಾದ ಅವರ ಬರೆವಣಿಗೆಯಲ್ಲಿ ಓದುಗನ ಮನಸ್ಸನ್ನು ಮಿಡಿಸುವ ಶಕ್ತಿ ಇತ್ತು. ಹೆಗ್ಡೆಯವರನ್ನು ಹತ್ತಿರದಿಂದ ಕಂಡ ಪತ್ರಕರ್ತರು ಅವರನ್ನು "ಕನ್ನಡ ಪದಗಳ ಮಹಾಸಾಗರ"ವೆಂದು ವರ್ಣಿಸಿದ್ದುಂಟು. ವಿಷಯ ನಿರೂಪಣೆ ನಿಖರವಾಗಿದ್ದರೂ ಅದು ನಿಷ್ಠುರವೆನ್ನುವ ವ್ಯಾಖ್ಯೆಗೆ ಸೇರದಿರುವ ವಿಶಿಷ್ಟ ಶೈಲಿಯನ್ನು ರೂಢಿಸಿಕೊಂಡಿರುವುದು ಪತ್ರಕರ್ತರಾಗಿ ಹೆಗ್ಡೆಯವರ ವ್ಯಕ್ತಿತ್ವದ ಒಂದು ಹೆಗ್ಗುರುತು.

ಅಪಾರವಾದ ಅನುಭವ ಜನ್ಯಜ್ಞಾನ ಮತ್ತು ಅಪೂರ್ವವಾದ ಪದ ಸಂಪತ್ತು ಇದ್ದರೂ ಹೆಗ್ಡೆಯವರು ಹೆಸರು ಗಳಿಕೆಗಾಗಿ ಬರೆದವರಲ್ಲ. ಎಲ್ಲರಿಂದಾಗದ ಬರೆವಣಿಗೆಯಲ್ಲಿ ಬೆಳಗಿದವರು. ಬರೆವಣಿಗೆ ಅವರ ಬದುಕಿನ ಒಂದು ಬಗೆಯಾಗಿತ್ತಾದರೂ ಅದನ್ನೊಂದು ಮೇಲೇರುವ ಮೆಟ್ಟಿಲಾಗಿ ಬಳಸಿಕೊಂಡವರಲ್ಲ. ಆಚಾರ-ವಿಚಾರದಲ್ಲಿ ಸನ್ಯಾಸಿಯ ಸ್ಥಿತಪ್ರಜ್ಞತೆಯನ್ನು ಉಳಿಸಿಕೊಂಡು ಆದರ್ಶ ಸಂಸಾರಿಯಾಗಿ ಬದುಕಿದವರು.

ಇಂತಹ ಒಬ್ಬ ಮಹಾ ಮಾನವ ನಮ್ಮೊಡ[illegible] ರೆಂಬುದರ ಪ್ರಜ್ಞೆ ನಮ್ಮ ಸಮಾಜಕ್ಕೆ ಇಲ್ಲವೆಂ[illegible] ಸೋಮವಾರ ಸಂಜೆ ಅವರು ನಿಧನರಾದಾಗ [illegible] ಕಂಡಿತು. ನಮ್ಮ ಸಮಾಜಕ್ಕೆ ಅಂಟಿರುವ ಜಾ[illegible] ಪರಿಚಯವಾಗುವುದು ಇಂತಹ ಸಂದರ್ಭಗಳಲ್ಲಿ.

‘ಅಭಿರುಚಿಗೆ ತಕ್ಕಂತೆ ಪ್ರೋತ್ಸಾಹ ನೀಡಿ’

ಕಿಂಜಾರು, ಜ. 15– ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಚಿಕ್ಕಂದಿನಲ್ಲೆ ಗುರುತಿಸಿ ಅವರಿಗೆ ಪ್ರೋತ್ಸಾಹ ನಿಡಬೇಕಾದುದು ಹಿರಿಯರ ಹಾಗೂ ಸುತ್ತಲಿನ ಸಮಾಜದ ಆದ್ಯ ಕರ್ತವ್ಯ. ಅವರ ಅಭಿರುಚಿಗೆ ತಕ್ಕಂತೆ ಪ್ರೋತ್ಸಾಹ ನೀಡುವುದರಿಂದ ಮುಂದೆ ಅವರು ಪ್ರತಿಭಾವಂತರೆನಿಸಿ ಒಳ್ಳೆಯ ಹೆಸರುಗಳಿಸಿ ನಮ್ಮ ನಾಡಿನ ಉತ್ತಮ ಪ್ರಜೆಗಳಾಗಲು ಸಾಧ್ಯ ಎಂದು ಶಾಸಕ ಲೋಕಯ್ಯ ಶೆಟ್ಟಿಯವರು ಹೇಳಿದರು.

ಅವರು ಇತ್ತೀಚಿಗೆ ಸ್ಥಳೀಯ ಮುಖ್ಯ ಪ್ರಾಣ ಶಾಲಾ ಮತ್ತು ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಿದ್ದರು.

ಹಳ್ಳಿಯ ಮಕ್ಕಳಲ್ಲಿ ಕಲಿಯುವಿಕೆಗೆ ಬೇಕಾದಂತಹ ಹುರುಪು, ಚೈತನ್ಯ ಇರುತ್ತದೆ. ಇಂತಹ ವಾರ್ಷಿಕೋತ್ಸವ ಸಮಾರಂಭಗಳಿಂದ ಅವರು ಸ್ವಚ್ಛಂದವಾಗಿ ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ದೊರೆಯುತ್ತದೆ ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎನ್. ಎಂ. ಸಿ. ಟಿ.ಯ ಡಾ| ಕಿಶೋರ್ ಅವರು ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ಮಾಡಿ ಮಾತನಾಡುತ್ತಾ, ಶಾಲೆಯಲ್ಲಿ ಅಧ್ಯಾಪಕರ ಪಾತ್ರ ಹಿರಿದು. ಮಕ್ಕಳು ತಮ್ಮ ಒಳ್ಳೆಯ ಅಧ್ಯಾಪಕರು ನಡೆದು ಬಂದ ದಾರಿಯನ್ನೇ ಅನುಸರಿಸಬೇಕು. ಮನೆಯಲ್ಲಿ ತಂದೆ ತಾಯಿಗಳಿಂದ ಶಿಸ್ತಿನ ಪಾಠ ಕಲಿಯುತ್ತಾರೆ. ಶಾಲೆಯಲ್ಲಿ ಅವರ ಮಾನಸಿಕ ಬೆಳವಣಿಗೆಯಾಗುವಂತಹ ಶಿಕ್ಷಣ ಅಗತ್ಯ. ಗ್ರಾಮೀಣ ಪ್ರದೇಶದಲ್ಲಿ ಇಂತಹ ಸಮಾರಂಭಗಳು ಅತೀ ಪ್ರಾಮುಖ್ಯವಾದುದು ಎಂದು ತಿಳಿಸಿದರು.

ಕಾರ್ಯಕ್ರಮದ ಮೊದಲಿಗೆ ಶಾಲಾ ಮುಖ್ಯೋಪಾಧ್ಯಾಯರಾದ ಸ್ಟೇನಿಸ್ಲಸ್ ಡಿ'ಸೋಜ ಅವರು ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು. ಮನರಂಜನಾ ಕಾರ್ಯಕ್ರಮದ ಅಂಗವಾಗಿ ಮಕ್ಕಳಿಂದ ವಿವಿಧ ವಿನೋದಾವಳಿ ಮತ್ತು ಹಳೇ ವಿದ್ಯಾರ್ಥಿಗಳಿಂದ ‘ಮಂಗಳ–ಜ್ಯೋತಿ’ ಎಂಬ ತುಳು ನಾಟಕವು ಅಭಿನಯಿಸಲ್ಪಟ್ಟಿತು.

ಮಂಜೂರಾತಿ

ಸುಳ್ಯ, ಜ. 15–ಕರ್ನಾಟಕ ಸರಕಾರದಿಂದ ಸುಳ್ಯ ಕಾಯರ್ತೋಡಿ ಮಹಾವಿಷ್ಣು ಮೂರ್ತಿ ದೇವಸ್ಥಾನ, ಎಡಮಂಗಲ ಕೇರ್ಪಡ ದುರ್ಗಾಪರಮೇಶ್ವರಿ ದೇವಸ್ಥಾನ ಹಾಗೂ ಪಂಜ ಪಂಚಲಿಂಗೇಶ್ವರ ದೇವಸ್ಥಾನಗಳ ಜೀರ್ಣೋದ್ಧಾರ ಹಾಗೂ ಪುನರ್‌ನಿರ್ಮಾಣಕ್ಕಾಗಿ ಹಣ ಮಂಜೂರು ಮಾಡಿರುವುದಾಗಿ ಕ್ಷೇತ್ರದ ಮಾಜಿ ಶಾಸಕ ಬಾಕಿಲ ಹುಕ್ರಪ್ಪ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉತ್ಸವದ ವಿಶೇಷಗಳು

ಏಳನೇ ಶತಮಾನೋತ್ಸವದ ಸಲುವಾಗಿ ಏರ್ಪಡಿಸಿದ್ದ ಮೆರವಣಿಗೆ ಮಲ್ಪೆ ವಡಭಾಂಡೇಶ್ವರದಿಂದ ಉಡುಪಿಗೆ ಸಮಯಕ್ಕೆ ಸರಿಯಾಗಿ ವೈಭವೋಪೇತವಾಗಿ ಆಗಮಿಸಿತು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಸಂಗಿಕೋಲು, ನವಿಲು, ಕೀಲುಕುದುರೆ, ಕುದುರೆ ಸಾರೋಟು, ಹುಲಿವೇಷ ತಾಲೀಮು, ಕರಡಿ, ದ್ವಾದಶಸ್ತೋತ್ರ, ಭಜನೆ ಮುಂತಾದ ವಿಶೇಷಗಳಿದ್ದುವು. ಮಾರ್ಗದ ಇಕ್ಕೆಲಗಳಲ್ಲಿ ಜನರು ಬೃಹತ್ ಸಂಖ್ಯೆಯಲ್ಲಿ ನೆರೆದಿದ್ದರು. ಹೆಲಿಕಾಪ್ಟರ್‌ನಿಂದ ಪುಷ್ಪವೃಷ್ಟಿ ಒಂದು ಮುಖ್ಯ ಆಕರ್ಷಣೆಯಾಗಿತ್ತು.

ಸಭೆಯಲ್ಲಿ ಮಾತನಾಡಿದ ಬನ್ನಂಜೆ ಗೋವಿಂದಾಚಾರ್ಯರು ಅಂದು ಅನಂತೇಶ್ವರದಲ್ಲಿ ಮಧ್ವಾಚಾರ್ಯರು ಪಾಠ ಹೇಳುವಾಗ ಹೂ ಮಳೆ ಸುರಿದಿತ್ತು. ಇಂದು ಮೆರವಣಿಗೆಯ ಮೇಲೆ ಹೂ ಮಳೆ ಆಯಿತು ಎಂದರು.

ಮೆರವಣಿಗೆಯು ಉಡುಪಿಯ ಜೋಡುಕಟ್ಟೆಯಿಂದ ತೆಂಕಪೇಟೆ, ಮಾರ್ಗವಾಗಿ ರಥ ಬೀದಿಗೆ ತಲುಪಿ ಅಲ್ಲಿಂದ ಮಧ್ವಸರೋವರ ಬಳಿ ಮುಕ್ತಾಯವಾಯಿತು. ಅಲ್ಲಿ ಪೂಜೆ ನಡೆದು ನಂತರ ರಾಜಾಂಗಣ ಸಭಾ ಮಂಟಪದ ಬಳಿ ಮಧ್ವಾಚಾರ್ಯ ಹಾಗೂ ಕೃಷ್ಣನ ವಿಗ್ರಹಗಳನ್ನು ಸ್ಥಾಪಿಸಲಾಯಿತು.

ಊರು, ಪರವೂರಿನ ಜನ ಬೃಹತ್ ಸಂಖ್ಯೆಯಲ್ಲಿ ನೆರೆದಿದ್ದರು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿದೆ ಪರರಾಜ್ಯಗಳಿಂದಲೂ ಆಗಮಿಸಿದ್ದ ಭಕ್ತವೃಂದ 13ನೇ ಶತಮಾನದಲ್ಲಿ ಕೃಷ್ಣನನ್ನು ಪ್ರತಿಷ್ಠಾಪಿಸಿದಾಗಿನ ವಾತಾವರಣ ಇಲ್ಲಿ ಉಂಟಾಗಿದೆ ಎಂದು ಉದ್ಗರಿಸುತ್ತಿತ್ತು.

ಸಭೆಯಲ್ಲಿ ಸ್ವಾಮೀಜಿಗಳವರ ನಡುವೆ ಒಂದು ಚರ್ಚೆಯೇ ಏರ್ಪಟ್ಟಿತ್ತು. ಪಲಿಮಾರು ಮಠಾಧೀಶರು ಮಾತನಾಡುತ್ತಾ, [illegible] ಮಠಾಧೀಶರು ಮತ್ತು ಬನ್ನಂಜೆ ಗೋವಿಂದಾಚಾರ್ಯರು ಪರ[illegible] ರೂಪಧಾರಣೆ ಮಾಡುತ್ತಾರೆ [illegible]. ಅದರ ಮೊದಲು ರೂಪ ಇಲ್ಲ [illegible]ವಾಗುತ್ತದೆ. ಅದು ಸರಿಯಲ್ಲ [illegible] ರೂಪ ಇತ್ತು ಎಂದರು. ಅದರ [illegible] ಉತ್ತರಿಸುತ್ತ [illegible] ಇತ್ತು. ಅದರ ವ್ಯಕ್ತ [illegible] ನಂತರ ಎಂದು ತಮ್ಮ ಅಭಿ[illegible].

ಕನ್ನಡ ಭಾಷಣ ಸ್ಪರ್ಧೆ

ವಿಟ್ಲ, ಜ. 15–ವಿಠಲ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್‌ನ ಆಶ್ರಯದಲ್ಲಿ ದಿವಂಗತ ವಿಟ್ಲ ಬಾಬು ಶೆಟ್ಟಿ ಸ್ಮಾರಕ ದ. ಕ. ಜಿಲ್ಲಾ ಮಟ್ಟದ ಕನ್ನಡ ಭಾಷಣ ಸ್ಪರ್ಧೆಯನ್ನು ಕಾಲೇಜು ವಿದ್ಯಾರ್ಥಿಗಳಿಗಾಗಿ ಈ ತಿಂಗಳ 26ರಂದು ವಿಟ್ಲ ಜೂನಿಯರ್ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ.

ಆಸಕ್ತರು ಸ್ಪರ್ಧೆಯ ಸಂಯೋಜಕ ಯು. ಎಸ್. ಭಟ್, ವಿ. ಜೆ. ಸಿ. ವಿಟ್ಲ ಇವರನ್ನು ಸಂಪರ್ಕಿಸಬಹುದೆಂದು ಕೋರಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಮಂಗಳೂರು, ಜ. 15- ಕೇಂದ್ರ ಲೋಕ ಸೇವಾ ಆಯೋಗ, ಕರ್ನಾಟಕ ಲೋಕಸೇವಾ ಆಯೋಗ ಹಾಗೂ ಇನ್ನಿತರ ಇಲಾಖೆಗಳು ನಡೆಸುವ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಗಳಿಗೆ ಹಾಜರಾಗುವ ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ನಿರುದ್ಯೋಗಿ ಪದವೀಧರರಿಗೆ ಪೂರ್ವಭಾವೀ ತರಬೇತಿಯನ್ನು ನೀಡಲು ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯು ಮಂಗಳೂರಲ್ಲಿ ತರಬೇತಿ ಕೇಂದ್ರವೊಂದನ್ನು ಆರಂಭಿಸಿದೆ.

ಬ್ಯಾಂಕಿಂಗ್ ನೇಮಕಾತಿ ಸಮೂಹ, ದಕ್ಷಿಣವಲಯ ಬೆಂಗಳೂರು ಇವರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಖಾಲಿ ಇರುವ ಗುಮಾಸ್ತ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗಿ ಅರ್ಜಿಗಳನ್ನು ಕರೆದಿದ್ದು ದಿನಾಂಕ 24ರಂದು ಲಿಖಿತ ಪರೀಕ್ಷೆಗಳನ್ನು ನಡೆಸುವರು.

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದು ಲಿಖಿತ ಪರೀಕ್ಷೆಗೆ ಹಾಜರಾಗಬಯಸುವ ಹಿಂದುಳಿದ ಕೋಮು, ಹಿಂದುಳಿದ ಜಾತಿ, ಹಿಂದುಳಿದ ಬುಡಕಟ್ಟು ಮತ್ತು ಹಿಂದುಳಿದ ವಿಶೇಷ ಪಂಗಡಗಳ ಗುಂಪಿಗೆ ಸೇರಿದ ಅರ್ಹ ನಿರುದ್ಯೋಗಿ ಪದವೀಧರರಿಗೆ 3ರಿಂದ 4 ವಾರಗಳ ಪೂರ್ವಭಾವೀ ತರಬೇತಿಯನ್ನು ಈ ತರಬೇತಿ ಕೇಂದ್ರದಲ್ಲಿ ಕೊಡಲಾಗುವುದು.

ಮೇಲ್ಕಾಣಿಸಿದ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳು ಅರ್ಜಿಗಳನ್ನು ಭರ್ತಿ ಮಾಡಿ ದಿನಾಂಕ 19ರ ಒಳಗೆ ಪ್ರಾಚಾರ್ಯರು, ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ತರಬೇತಿ ಕೇಂದ್ರ, ಮಂಗಳೂರು 575001 ಇವರಿಗೆ ಕಳುಹಿಸಿಕೊಡಬೇಕು.

ತರಬೇತಿ ಕಾಲಕ್ಕೆ ಸರಕಾರಿ ನಿಯಮಾನುಸಾರ ತರಬೇತಿ ಭತ್ಯೆಯನ್ನು ಕೊಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

17ರ ಒಳಗೆ ಬಿ. ಜೆ. ಪಿ. ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ

ಮಂಗಳೂರು, ಜ. 15– ಮುಂಬರಲಿರುವ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವ ಜವಾಬ್ದಾರಿ ಹೊತ್ತು ಜಿಲ್ಲೆಯ ಎಲ್ಲಾ ಕ್ಷೇತ್ರಗಳಿಂದಲೂ ಈ ತಿಂಗಳ 17ರ ಒಳಗೆ ಸಂಭಾವೀ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾಕೇಂದ್ರಕ್ಕೆ ತಲಪಿಸುವಂತೆ ಬಿ.ಜೆ.ಪಿ. ಆದೇಶ ನೀಡಿದೆ.

ಭಾನುವಾರ ಇಲ್ಲಿ ಜರುಗಿದ ದಕ್ಷಿಣ ಕನ್ನಡ ಜಿಲ್ಲಾ ಬಿ.ಜೆ.ಪಿ.ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು.

ಜಿಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರು ಕ್ಷೇತ್ರ ಸಮಿತಿಯ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಮಾಜಿ ಶಾಸಕರು ಭಾಗವಹಿಸಿದ್ದ ಸಭೆಯ ಅಧ್ಯಕ್ಷತೆಯನ್ನು ಪಕ್ಷದ ಜಿಲ್ಲಾ ಅಧ್ಯಕ್ಷ ಡಾ| ಬಿ. ಬಿ. ಶೆಟ್ಟಿ ಅವರು ವಹಿಸಿದ್ದರು.

ಹಿಂದಿನ ಶಾಸಕರು ಹತ್ತು ವರ್ಷಗಳಲ್ಲಿ ಸಾಧಿಸಲಾರದಷ್ಟನ್ನು ಬಿ.ಜೆ.ಪಿ. ಶಾಸಕರು ಎರಡು ವರ್ಷಗಳಲ್ಲಿ ಸಾಧಿಸಿ ತೋರಿಸಿದ್ದಾರೆ ಎಂದು ಸಭೆ ಅಭಿಪ್ರಾಯಪಟ್ಟಿತು.

ವಿಸರ್ಜಿತ ವಿಧಾನ ಸಭೆಯಲ್ಲಿ ಬಿಜೆಪಿ ಶಾಸಕಾಂಗ ಗುಂಪಿನ ನಾಯಕರಾಗಿದ್ದ ಡಾ| ವಿ. ಎಸ್. ಆಚಾರ್ಯ ಅವರು ಆರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕೊನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ನಾರಾಯಣ ಶೆಟ್ಟಿ ಅವರು ಧನ್ಯವಾದ ಅರ್ಪಿಸಿದರು.

ನಾಟಕ ಸ್ಪರ್ಧೆ

ಮಂಗಳೂರು, ಜ. 15 – ಕರ್ನಾಟಕ ನಾಟಕ ಸಭಾ, ಬೋಳೂರು – ಅದರ ಸುವರ್ಣ ಮಹೋತ್ಸವವು ಎಪ್ರಿಲ್‌ನಲ್ಲಿ ನಡೆಯಲಿದ್ದು ಅದರ ಅಂಗವಾಗಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆ ನಡೆಯಲಿದೆ.

ನಾಟಕವು ಪೌರಾಣಿಕ ಅಥವಾ ಚಾರಿತ್ರಿಕ ಆಗಿದ್ದು 45 ನಿಮಿಷಕ್ಕೆ ಮೀರಬಾರದು. ಸ್ಪರ್ಧೆಯಲ್ಲಿ ಭಾಗವಹಿಸಲು ಬಯಸುವವರು ಈ ತಿಂಗಳ 30 ರೊಳಗೆ ನಾಗೇಶ ರಾವ್, ಕಾರ್ಯದರ್ಶಿ, ಕರ್ನಾಟಕ ನಾಟಕ ಸಭಾ, ಬೋಳೂರು, ಮಂಗಳೂರು–3 ಅವರಿಗೆ ಅರ್ಜಿ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ಮುಂಗಾರು

ಸೋಮವಾರ, ಅಕ್ಟೋಬರ್ 14, 1985

ತಿರುಳಿಲ್ಲದ ನಮ್ಮ ಜನತಂತ್ರ

ರಾಜ್ಯಗಳ ಮೇಲೆ ಒತ್ತಡ ಹೇರಿ ಮಣಿಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಸರಕಾರವು ಹೆಚ್ಚು ಹೆಚ್ಚು ರಾಜಕೀಯ ಹಾಗೂ ಹಣಕಾಸಿನ ಅಧಿಕಾರಗಳನ್ನು ಕೈಯಲ್ಲಿ ತೆಗೆದುಕೊಳ್ಳುತ್ತಿದೆಯೆಂದು ಜನತಾ ಪಕ್ಷದ ಅಧ್ಯಕ್ಷ ಚಂದ್ರ ಶೇಖರ್ ಅವರು ಬಾಲಿಯಾದಲ್ಲಿ ನಡೆದ ಅವರ ಪಕ್ಷದ ರಾಷ್ಟ್ರೀಯ ಅಧಿವೇಶನದಲ್ಲಿ ಟೀಕಿಸಿದ್ದಾರೆ.

ಆಂತರಿಕ ಭದ್ರತೆಗೆ ಒಂದು ಪ್ರತ್ಯೇಕ ಸಚಿವ ಖಾತೆಯನ್ನು ನಿರ್ಮಿಸುವ ಮೂಲಕ ಈ ದೇಶ ಒಂದು "ಭದ್ರತಾ ರಾಷ್ಟ್ರ" ವಾಗಿದೆಯೆಂದೂ ಇದು ಮಿಲಿಟರಿ ಸರ್ವಾಧಿಕಾರಗಳು ಹಿಡಿಯುವ ದಾರಿಯನ್ನು ಹೋಲುವುದೆಂದೂ ಜನತಾ ಪಕ್ಷದ ರಾಷ್ಟ್ರೀಯ ಮಂಡಳಿಯು ಅಂಗೀಕರಿಸಿದ ರಾಜಕೀಯ ಗೊತ್ತುವಳಿಯು ಖಂಡಿಸಿದೆ.

ಪಕ್ಷವು ತನ್ನ ಆರ್ಥಿಕ ನೀತಿಯ ಗೊತ್ತುವಳಿಯಲ್ಲಿ ಕೇಂದ್ರ ಸರಕಾರವು ಈಗ ಹಿಡಿದಿರುವ ಆತ್ಯಾಧುನಿಕ ವಿದೇಶಿ ತಂತ್ರಜ್ಞಾನವನ್ನು ವಿವೇಚನೆಯಿಲ್ಲದೆ ಆಮದು ಮಾಡಿಕೊಳ್ಳುವ ಧೋರಣೆಯನ್ನು ಖಂಡಿಸಿ ಈ ಧೋರಣೆಯಿಂದ ಜನ ನಿಬಿಡ ದೇಶವಾದ ಭಾರತದ ನಿರುದ್ಯೋಗ ಸಮಸ್ಯೆ ಇನ್ನಷ್ಟು ಬಿಗಡಾಯಿಸುವುದೆಂದು ಎಚ್ಚರಿಸಿದೆ.

ದೇಶದ ಹಿತದ ಬಗ್ಗೆ ಚಿಂತನೆ ಮಾಡುವವರೆಲ್ಲ ಆಲೋಚಿಸಬೇಕಾದ ಗಂಭೀರ ಪ್ರಶ್ನೆಗಳನ್ನು ಜನತಾ ಪಕ್ಷದ ರಾಷ್ಟ್ರೀಯ ಮಂಡಳಿ ಇದೀಗ ಜನರ ಮುಂದೆ ಇರಿಸಿದೆ. ನಾಡಿನ ಆಳ್ವಿಕೆಯಲ್ಲಿ, ಆಗುಹೋಗುಗಳಲ್ಲಿ ಜನಾಭಿಪ್ರಾಯಕ್ಕೆ ಮನ್ನಣೆ ದೊರೆಯಬೇಕಾದ ಪರಿಸ್ಥಿತಿಯನ್ನು ಉಂಟು ಮಾಡಬೇಕಾದ್ದು ಸಮಾಜದ ಪ್ರಗತಿಯ ದೃಷ್ಟಿಯಿಂದ ಅಗತ್ಯ. ಪ್ರಗತಿ ಹೇಗೋ ಆದರೆ, ಯಾವಾಗಲೋ ಆದರೆ ಸಾಲದು. ಪ್ರಗತಿಯಲ್ಲಿ ವಿಕೃತಿ ಉಂಟಾಗಬಾರದು. ಜನಾಭಿಪ್ರಾಯದ ಚೌಕಟ್ಟಿನೊಳಗೆ ನಡೆಯುವ ಅಭಿವೃದ್ಧಿಯ ಫಲಗಳು ಸಾಮಾನ್ಯ ಜನರಿಗೆ ದೊರೆಯದೆ ಸೀಮಿತ ಜನಗಳ ಜೇಬಿಗಿಳಿಯುವ ವಿಲಕ್ಷಣ ವಿದ್ಯಮಾನ ನಡೆಯುತ್ತದೆ. ಇಂದು ಭಾರತದಲ್ಲಿ ಆಗಿರುವುದೂ ಅದೇ.

ಇಂದು ಕೇಂದ್ರ ಸರಕಾರದ ನಾಯಕರು ದೇಶವನ್ನು ಇಪ್ಪತ್ತೊಂದನೇ ಶತಮಾನಕ್ಕೆ ನೆಗೆಯಿಸುವ ಉತ್ಸವದ ಭರದಲ್ಲಿ ವಿದೇಶಿ ತಂತ್ರಜ್ಞಾನಕ್ಕೆ ಬಾಗಿಲನ್ನು ದೊಡ್ಡದಾಗಿ ತೆರೆದು ಇರಿಸಿರುವ ಪ್ರಸಂಗ ಕೂಡ ಉಂಟಾದದ್ದು ನಮ್ಮ ವ್ಯವಸ್ಥೆಯಲ್ಲಿ ಜನಾಭಿಪ್ರಾಯಕ್ಕೆ ದೊರೆಯುವ ಮನ್ನಣೆ ಅತ್ಯಂತ ಕನಿಷ್ಠವಾಗಿರುವುದನ್ನು ತೋರಿಸಿಕೊಡುತ್ತದೆ. ಈ ದೇಶಕ್ಕೆ ಯಾವ ತಂತ್ರಜ್ಞಾನ ಬೇಕು, ಅದನ್ನೆಲ್ಲ ಅಳವಡಿಸಿಕೊಳ್ಳುವ ಬಗೆ ಹೇಗೆ, ಬಂಡವಾಳ ಹೂಡಿಕೆಯ ವ್ಯವಸ್ಥೆ ಹೇಗಿರಬೇಕು, ಉದ್ಯಮ– ವಾಣಿಜ್ಯಗಳಿಂದಲೂ ಕೃಷಿಯಿಂದಲೂ ಬರುವ ಲಾಭದ ವಿತರಣೆ ಹೇಗಿರಬೇಕು- ಇದನ್ನೆಲ್ಲ ತೀರ್ಮಾನಿಸುವ ರಾಜಕೀಯ ವ್ಯವಸ್ಥೆ ಹೇಗಿರಬೇಕು ಎಂಬ ವಿಚಾರಗಳಲ್ಲಿ ಜನರ ಅಭಿಪ್ರಾಯವೇ ಒಂದಾದರೆ ಸರಕಾರದ ಅಭಿಪ್ರಾಯವೇ ಇನ್ನೊಂದಾಗಿ ಬಿಟ್ಟಿದೆ.

ಆದ್ದರಿಂದಲೇ ಇಂದಿನ ವಿಕೃತಿಗಳು ಕಾಣಿಸಿಕೊಂಡಿವೆ. ವಿದೇಶಿ ತಂತ್ರಜ್ಞಾನದ ಕುದುರೆಯ ಬೆನ್ನೇರಿ ಇಪ್ಪತ್ತೊಂದನೇ ಶತಮಾನಕ್ಕೆ ನೆಗೆಯಬಹುದೆಂದು ರಾಜೀವ ಗಾಂಧಿಯವರು ಹೇಳಿದರೆ ನಮ್ಮ ಸರಕಾರಿ ವ್ಯವಸ್ಥೆಯ ಜನರಿಗೆ ಅದುವೇ ವೇದವಾಕ್ಯವಾಗುತ್ತಿದೆ. ದೊಡ್ಡ ಉದ್ಯಮಗಳವರಿಗೆ ಹೆಚ್ಚು ಹೆಚ್ಚು ಪರಿಹಾರ ಕೊಡುವುದರಿಂದ ಉತ್ಪಾದನೆಯು ಹೆಚ್ಚಿಸಿ ದೇಶದಲ್ಲಿ ಸಮೃದ್ಧಿ ಉಂಟಾಗಿ ಬಡತನ ಓಡಿ ಹೋಗುವುದೆಂದು ಸರಕಾರಿ ವರಿಷ್ಠರು ತೀರ್ಮಾನಿಸಿದರೆ ಜನ ಅದನ್ನು ಮೌನವಾಗಿ ಒಪ್ಪಿಕೊಳ್ಳುತ್ತಾರೆ. ದೆಹಲಿಯು ಬಲವಾದರೆ ಮಾತ್ರ ದೇಶ ಬಲವಾಗುತ್ತದೆ ಎಂದು ಪ್ರಧಾನ ಮಂತ್ರಿ ಅಪ್ಪಣೆ ಕೊಡಿಸಿದರೆ ಅದರ ವಿರುದ್ಧ ಚಕಾರ ಎತ್ತುವವರು ಯಾರೂ ಇರುವುದಿಲ್ಲ.

ಇಂದು ಪ್ರಧಾನ ಮಂತ್ರಿ ಮಾಡುತ್ತಿರುವುದೂ ಅದೇ ಆಗಿದೆ. ಅವರು ದೆಹಲಿಯನ್ನು ಬಲಪಡಿಸುತ್ತಿದ್ದಾರೆ. ರಾಷ್ಟ್ರೀಯ ಆಂತರಿಕ ಭದ್ರತೆ ಮಂತ್ರಿ ಖಾತೆಯನ್ನು ಅವರು ನಿರ್ಮಿಸಿದ್ದು ಅದಕ್ಕೆ. ಈಗಾಗಲೇ ಮುನಿಸಿಪಾಲಿಟಿಗಳ ಮಟ್ಟಕ್ಕೆ ಇಳಿದಿರುವ ರಾಜ್ಯಗಳ ಸ್ಥಿತಿ ಆ ಮಟ್ಟದಲ್ಲೇ ಖಾಯಂ ಆಗುತ್ತದೆ. ಶಾಂತಿ ಪಾಲನೆಯ ಕೆಲಸ ರಾಜ್ಯಗಳದ್ದಾಗಿರುವುದರಿಂದ ಕೇಂದ್ರದಲ್ಲೊಂದು ಆಂತರಿಕ ಭದ್ರತೆ ಸಚಿವ ಖಾತೆಯಾದರೂ ಏತಕ್ಕೆ?

ರಾಷ್ಟ್ರೀಯ ಏಕತೆ, ಸಮಗ್ರತೆ ಹಾಗೂ ಸಾರ್ವಭೌಮತೆಗಳ ಭೂತವನ್ನು ಛೂಬಿಟ್ಟು ದೆಹಲಿಯನ್ನು ಬಲಪಡಿಸಿಕೊಂಡು ಮೆರೆಯುವ ಆಳವನ್ನು ಇಂದಿನ ನಮ್ಮ ವ್ಯವಸ್ಥೆಯಲ್ಲಿ ಅಧಿಕಾರಸ್ಥರು ಮಾಡುತ್ತಿದ್ದಾರೆ. ಆರ್ಥಿಕ, ರಾಜಕೀಯ ಧೋರಣೆಗಳ ನಿರೂಪಣೆಯಲ್ಲಿ ರಾಜಕೀಯ ಚಿಂತಕರಿಗಾಗಲಿ, ಜನರಿಗಾಗಲಿ, ಆಳುವ ಪಕ್ಷದೊಳಗಿನ ಜನರಿಗಾಗಲಿ ಮಾತೇ ಇಲ್ಲವಾಗಿದೆ. ಆರ್ಥಿಕ ಧೋರಣೆಗಳನ್ನು ಕೈಗಾರಿಕಾ ನೀತಿ ಏನಿರಬೇಕೆಂಬುದನ್ನು ಜನರೊಡನೆ ಕೇಳಿ ಯಾರೂ ತೀರ್ಮಾನಿಸುತ್ತಿಲ್ಲ. ಜನತಂತ್ರವು ಇಲ್ಲಿ ಜೀವವಿಲ್ಲದ ಹಂದರವಾಗಿದೆ. ಟೊಳ್ಳು ಗೆರಟೆ ಯಾಗಿದೆ. ಜನತಂತ್ರದಲ್ಲಿ ತಿರುಳಿದ್ದರೆ ಇಂತಹ ವಿಕೃತಿಗಳು ಉಂಟಾಗುವುದಿಲ್ಲ.

ಇಂದು ಜನತಾ ಪಕ್ಷದವರು ರಾಷ್ಟ್ರೀಯ ಮಹತ್ವದ ವಿಚಾರಗಳ ಬಗ್ಗೆ ಜನರ ಗಮನ ಸೆಳೆದಿದ್ದಾರೆ. ಇದರ ಬಗ್ಗೆ ಚಿಂತನೆ ನಡೆಯಬೇಕು. ನಮ್ಮ ಜನತಂತ್ರದಲ್ಲಿನ ವಿಕಾರಗಳ ನಿವಾರಣೆಗೆ ಅದರಿಂದ ದಾರಿ ದೊರೆಯಬೇಕು.

ರ ದೇಶಪಾಂಡೆ

ನಕ್ಕೆ ಸಣ್ಣ

ಅಗತ್ಯ'

...ಜಿಲ್ಲೆಯು ಅರಣ್ಯ ಶೇ. 50 ರಷ್ಟು ...ವಾಗಿದೆ ಎಂದು ಅವರು ತಿಳಿಸಿದರು. ...ಕಾರವಾರದ ಕೊಳಚೆ ಹೊತ್ತ ಕೋಣೆ ...ಾದ ಒಳಚರಂಡಿ ಯೋಜನೆಗೆ 8 ಲಕ್ಷ ...ಗಳ ಒಂದು ರೂಪರೇಷೆ ತಯಾರಿಸ ...ಗಿದ್ದು, ಒಳಚರಂಡಿ ಯೋಜನಾ ಮಂಡ ... ಇದರ ಜವಾಬ್ದಾರಿ ವಹಿಸಲಾಗುವುದು ...ದು ಅವರು ಹೇಳಿದರು.

...ಕಾರವಾರ ಸಮುದ್ರ ತೀರವನ್ನು ಅಭಿ... ಪಡಿಸಿ ಜಲಕ್ರೀಡೆ ಸಂಕೀರ್ಣವನ್ನು ...ಪಿಸಲಾಗುವುದು. ಬನವಾಸಿಯಲ್ಲಿ ... ಕಚೇರಿಯನ್ನು ತೆರೆಯಲಿದ್ದು, ... ಶಿಲ್ಪಕೇಂದ್ರವನ್ನಾಗಿ ಮಾಡುವ ... ವರ್ಷದ ಯೋಜನೆಯೊಂದನ್ನು ಸಿದ್ಧ ...ಲಾಗಿದೆ. ರಾಮನಗರದಲ್ಲಿ ಪಿಮ್ಮ್ನ್ನಂ... ವತಿಯಿಂದ 2.5 ಎಕರೆ ಪ್ರದೇಶದಲ್ಲಿ ...ಟೇಲ್ ಸ್ಥಾಪಿಸಲಾಗುವುದೆಂದು ಸಚಿ... ವಿವರಿಸಿದರು.

ಪ್ರಾರಂಭದಲ್ಲಿ ಬೆಳಗಾವಿ ವಿಭಾಗದ ...ವಾರ್ತಾ ಮತ್ತು ಪ್ರಚಾರ ಇಲಾಖೆಯ ... ನಿರ್ದೇಶಕ ಪಿ. ನಾಗಾಚಾರ್ ಸ್ವಾಗತಿ...ದರು. ಕೊನೆಯಲ್ಲಿ ಜಿಲ್ಲಾ ವಾರ್ತಾಧಿ... ಬಸವರಾಜ ವಂದಿಸಿದರು.



ಶಿರಸಿ ತಾಲೂಕಿನ 53 ಹಳ್ಳಿಗಳಲ್ಲಿ ಬರಗಾಲ

ಕಾರವಾರ, ಅ. 13– ಹಳಿಯಾಳ ತಾಲೂಕನ್ನು ಬರಪಿಡೀತ ಪ್ರದೇಶವೆಂದು ಸಾರಿದ್ದು ಯಲ್ಲಾಪುರ ತಾಲೂಕಿನ ಹುಣಶೆಟ್ಟಿಕೊಪ್ಪ ಮತ್ತು ಕಿರವತ್ತಿ ಪ್ರದೇಶದ ಪರಿಸ್ಥಿತಿಯನ್ನು ಅಭ್ಯಸಿಸಿ ನಿರ್ಧರಿಸಬೇಕಾಗಿದೆಯೆಂದು ರಾಜ್ಯ ಸಣ್ಣ ಕೈಗಾರಿಕಾ ಮಂತ್ರಿ ಆರ್. ವಿ. ದೇಶಪಾಂಡೆ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮುಂಡಗೋಡು ತಾಲೂಕನ್ನು ಸಂಪೂರ್ಣ ಬರಪೀಡಿತ ಪ್ರದೇಶವೆಂದು ಘೋಷಿಸಿ ಈ ಪ್ರದೇಶದಲ್ಲಿದ್ದ ಬೆಳೆಯ ನಷ್ಟ 4.11 ಕೋಟಿ ರೂ. ಎಂದು ಗುರುತಿಸಲಾಗಿದೆ.

ಶಿರಸಿ ತಾಲೂಕಿನ 53 ಹಳ್ಳಿಗಳನ್ನು ಬರಗಾಲ ಪ್ರದೇಶವೆಂದು ನಿರ್ಧರಿಸಿ 228 ಕುಟುಂಬಗಳನ್ನು ನಿರ್ಗತಿಕರೆಂದು ಗುರುತಿಸಿ 1,11,84,000 ರೂ. ನಷ್ಟವೆಂದು ಅಂದಾಜಿಸಲಾಗಿದೆ. ತಾಲೂಕಿನ ಒಟ್ಟು ಬರಗಾಲ ನಷ್ಟಕ್ಕೆ 20 ಲಕ್ಷ ರೂ.ನ್ನು ಉದ್ಯೋಗ ಭರವಸೆ ಕಾಮಗಾರಿಗೆ ಮಂಜೂರು ಮಾಡಲಾಗಿದೆ ಎಂದು ಅವರು ಹೇಳಿದರು.

ಅಡಿಕೆ ಕಟ್ಟೆ ರೋಗದ ಕುರಿತು ಜಿಲ್ಲೆಯಾದ್ಯಂತ 1984–85ರಲ್ಲಿ ಅಡಿಕೆ ತೋಟಕ್ಕೆ ತಗಲಿದ ಕಟ್ಟೆ ರೋಗದಿಂದ ನಷ್ಟವಾದ ಹಾಗೂ 1985-86ರಲ್ಲಿ ಅಂದರೆ ಈಗಾಗಲೆ ತಗಲಿರುವ ಕಟ್ಟೆ ರೋಗದಿಂದ ನಷ್ಟವಾಗ ಬಹುದಾದ ಒಟ್ಟು ಹಾನಿಯು ಶಿರಸಿಯಲ್ಲಿ 26.67 ಕೋಟಿ ರೂ. ಆಗಬಹುದೆಂದು ಕೃಷಿ ವಿಶ್ವವಿದ್ಯಾನಿಲಯ ಧಾರವಾಡ ಮತ್ತು ತೋಟಗಾರಿಕೆ ಇಲಾಖೆ ಸಂಯುಕ್ತವಾಗಿ ನಡೆಸಿದ ಸಮೀಕ್ಷೆಯಿಂದ ತಿಳಿದು ಬಂದಿದೆಯೆಂದು ಈ ಸಮೀಕ್ಷೆಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಗೊತ್ತಾಗಿದೆ.

ಕಟ್ಟೆ ರೋಗ 6,239 ಎಕರೆ ಪ್ರದೇಶಕ್ಕೆ ತಗಲಿದ್ದು ರೋಗ ನಿಯಂತ್ರಣೆಗೆ ಸಿಂಪಡಿಸಿದ ಔಷಧದ ಖರ್ಚು 2.20 ಕೋಟಿ ರೂ. ಎಂದು ತಿಳಿದು ಬಂದಿದೆ.

ರೋಗ ನಿಯಂತ್ರಿಸುವ ಸಲುವಾಗಿ ತೋಟಗಾರಿಕಾ ಇಲಾಖೆ ಈಗಾಗಲೆ ಈ ಈ ರೋಗ ಪೀಡಿತ ಪ್ರದೇಶಕ್ಕೆ ಭೇಟಿನೀಡಿ ರೈತರಿಗೆ ಮಾಹಿತಿ ನೀಡುತ್ತಿದೆ.

ರಕ್ತದಾನ

ಚಿಕ್ಕಮಗಳೂರು, ಅ. 13– ವಿಶ್ವ ಲಯನ್ಸ್ ಸೇವಾ ದಿನಾಚರಣೆ ಅಂಗವಾಗಿ ಇಲ್ಲಿನ ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಯಲ್ಲಿ ಲಯನ್ಸ್‌ನ ಮೂರುಜನ ಪದಾಧಿಕಾರಿಗಳು ಬುಧವಾರ ರಕ್ತದಾನ ಮಾಡಿದರು.

ರೆಡ್‌ಕ್ರಾಸ್ ಹಾಗೂ ಲಯನ್ಸ್ ಸಂಸ್ಥೆಗಳ ಆಶ್ರಯದಲ್ಲಿ ವ್ಯವಸ್ಥೆಗೊಳಿಸಿದ್ದ ಈ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಇಲ್ಲಿನ ಬಿಷಪ್ ಮಥಾಯಸ್ ಉದ್ಘಾಟಿಸಿದರು. ಜಿಲ್ಲಾ ಸರ್ಜನ್ ಡಾ|| ಜಯಲಕ್ಷ್ಮಣ ರೆಡ್ಡಿ ಅವರು ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣಗೊಂಡ ನಂತರ ರಕ್ತದಾನಕ್ಕೆ ಪೂರ್ಣ ಪ್ರಮಾಣದ ಘಟಕ ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ಬ್ಲಡ್ ಬ್ಯಾಂಕಿಗಾಗಿ ನಾಗರಾಜ್ ಅವರು ಒಂದೂವರೆ ಲಕ್ಷ ರೂ.ಗಳನ್ನು ದಾನ ಮಾಡುವುದಾಗಿ ವಾಗ್ದಾನ ಮಾಡಿದರು.

ರೈತರ ಧರಣೆಗೆ ಹೊನ್ನಾಳಿ ರೈತರು

ಹೊನ್ನಾಳಿ, ಅ. 13–ನವೆಂಬರ್ ಒಂದರಂದು ಬೆಂಗಳೂರಿನಲ್ಲಿ ನಡೆಯಲಿರುವ ರೈತರ ಧರಣಿಯಲ್ಲಿ ಭಾಗವಹಿಸಲು ತಾಲೂಕು ರೈತ ಸಂಘ ನಿರ್ಧರಿಸಿದೆ.

ತಾಲೂಕು ರೈತ ಸಂಘದ ಅಧ್ಯಕ್ಷ ಎ. ಬಿ. ಲಿಂಗರಾಜು ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ಬಗ್ಗೆ ನಿರ್ಧರಿಸಲಾಯಿತು.

ತಾಲೂಕಿನಾದ್ಯಂತ ಬರಗಾಲ ಸ್ಥಿತಿ ಇದ್ದರೂ ಸರ್ಕಾರ ಯಾವುದೇ ಪರಿಹಾರ ಕಾರ್ಯ ಕೈಗೊಂಡಿಲ್ಲವೆಂದು ವಿಷಾದಿಸಿದ ಸಭೆ ಸರ್ಕಾರ ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿತು.

ಟ್ರಾಕ್ಟರ್ ಡಿಕ್ಕಿ: ಬಾಲಕಿ ಆಸ್ಪತ್ರೆಗೆ

ಚಿಕ್ಕಮಗಳೂರು, ಅ. 13– ಆಲ್ದೂರು ಸಮೀಪದ ಸಂಡುಗೋಡು ಎಂಬಲ್ಲಿ ಟ್ರಾಕ್ಟರೊಂದು ಹೇಮಾವತಿ (4) ಎಂಬ ಬಾಲಕಿಗೆ ಈಚೆಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ಬಾಲಕಿ ತೀವ್ರ ಗಾಯಗೊಂಡು ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಬಾಲಕಿಯ ಬಲಗೈ ಪೂರ್ಣ ಜಜ್ಜಿ ಹೋಗಿದ್ದು ಹೊಟ್ಟೆಯ ಭಾಗವು ಕೂಡ ಜಜ್ಜಿ ಹೋಗಿದೆ. ಮಗುವಿನ ಮೂತ್ರದಲ್ಲಿ ರಕ್ತ ಬರುತ್ತಿದೆ. ಎಂದು ತಿಳಿದು ಬಂದಿದೆ.

ಪುಟ್ಟಣ್ಣ ಕಣಗಾಲ್ ಚಿತ್ರೋತ್ಸವ

ಮಡಿಕೇರಿ, ಅ. 13-ಕೊಡಗು ಜೇಸಿಸ್ ಸಂಸ್ಥೆಯ ಆಶ್ರಯದಲ್ಲಿ ಗೋಣಿಕೊಪ್ಪಲು ನವೀನ ಚಿತ್ರ ಮಂದಿರದಲ್ಲಿ ದಿ|| ಪುಟ್ಟಣ್ಣ ಕಣಗಾಲ್ ಚಿತ್ರೋತ್ಸವವನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಎಂ.ಬಿ. ನಾಣಯ್ಯ, ...

ಮುಂಗಾರು

ಮಂಗಳವಾರ, ಅಕ್ಟೋಬರ್ 22, 1985

ಹಣದ ನಿಯಂತ್ರಣ ರಾಜ್ಯಕ್ಕಿರಲಿ

ರಾಜ್ಯದ ಜನ ವಾಣಿಜ್ಯ ಬ್ಯಾಂಕುಗಳಲ್ಲಿ ಠೇವಣಿ ಇರಿಸಿದ ಹಣ ರಾಜ್ಯ ಸರಕಾರಗಳ ಅಭಿವೃದ್ಧಿ ಕಾರ್ಯಗಳಿಗೆ ಸಿಗಲು ಅನುಕೂಲವಾಗುವಂತೆ ಬ್ಯಾಂಕಿಂಗ್ ವ್ಯವಸ್ಥೆಯ ಮರು ವಿಮರ್ಶೆ ಆಗಬೇಕೆಂದು ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಅಭಿಪ್ರಾಯ ಪಟ್ಟಿದ್ದಾರೆ.

ರಾಜ್ಯದ ಅಭಿವೃದ್ಧಿ ಯೋಜನೆಗಳಿಂದ ಪ್ರಯೋಜನ ಪಡೆದ ಜನರು ತಮ್ಮ ಉಳಿತಾಯವನ್ನು ಬ್ಯಾಂಕಿನಲ್ಲಿಟ್ಟರೆ ಅದು ಕೇಂದ್ರ ಸರಕಾರಕ್ಕೆ ಸೇರಿ ಹೋಗುತ್ತದೆ. ರಾಜ್ಯ ಸರಕಾರಕ್ಕೆ ಅದರ ಮೇಲೆ ಯಾವ ಹಿಡಿತವೂ ಇಲ್ಲದೆ ಹೋಗುತ್ತದೆ. ಬದಲಾಗಿ ರಾಜ್ಯ ಸರಕಾರವು ತನ್ನ ಕಾರ್ಯಕ್ರಮಗಳಿಗಾಗಿ ಹಣಕ್ಕೆ ಕೇಂದ್ರ ಸರಕಾರಕ್ಕೆ ಅರ್ಜಿ ಹಾಕಿ ಕಾಯಬೇಕಾಗುತ್ತದೆ ಎಂದು ಹೆಗಡೆಯವರು ದೂರಿದ್ದಾರೆ.

ಹೆಗಡೆಯವರ ದೂರಿನಲ್ಲಿ ತಥ್ಯವಿದೆ. ನಮ್ಮ ದೇಶದ ರಾಜಕೀಯ ಮತ್ತು ಆರ್ಥಿಕ ಆಡಳಿತ ವ್ಯವಸ್ಥೆಯಲ್ಲಿ ತುಂಬಾ ವಿಕೃತಿಗಳು ತಲೆ ಹಾಕಿವೆ. ಸುಮಾರು ನಾಲ್ಕು ದಶಕಗಳಲ್ಲಿ ವಿಕಾಸಗೊಂಡಿರುವ ನಮ್ಮ ಈ ವ್ಯವಸ್ಥೆ ಹೀಗಿರಬಹುದೆಂದು ನಮ್ಮ ಸಂವಿಧಾನ ಕರ್ತರು ಖಂಡಿತಾ ಕನಸು ಕಂಡಿರಲಾರರು. ಅವರು ಉದ್ದೇಶಿಸಿದ ವ್ಯವಸ್ಥೆ ಬೇರೆಯೇ ಆಗಿತ್ತು.

ಭಾರತದ ಗಣರಾಜ್ಯ ಒಂದು ಒಕ್ಕೂಟದ ಮಾದರಿಯಲ್ಲಿ ಕೆಲಸ ಮಾಡಬೇಕು ಎಂಬ ಉದ್ದೇಶ ರಾಜ್ಯಾಂಗ ಕರ್ತರ ಮನಸ್ಸಿನಲ್ಲಿತ್ತು. ಅಧಿಕಾರಗಳೆಲ್ಲಾ ಕೇಂದ್ರ ಸರಕಾರದ ಕೈಯಲ್ಲಿ ಕೇಂದ್ರೀಕೃತವಾಗಿರಬೇಕೆಂಬ ಉದ್ದೇಶವೇನೂ ಅವರಿಗಿರಲಿಲ್ಲ. ಆಡಳಿತೆಯ ವಿವಿಧ ವಿಚಾರಗಳನ್ನು ರಾಜ್ಯಾಂಗದ ಮುಖೇನ ಕೇಂದ್ರ ಸರಕಾರಕ್ಕೂ ರಾಜ್ಯ ಸರಕಾರಗಳಿಗೂ ಹಂಚಿಕೊಡಲಾಗಿದೆ. ಹಣಕಾಸು, ಶಿಕ್ಷಣವೇ ಮೊದಲಾದ ಕೆಲವೇ ವಿಷಯಗಳನ್ನು ಮಾತ್ರವೇ ಕೇಂದ್ರ ಹಾಗೂ ರಾಜ್ಯಗಳ ಎರಡೂ ಸರಕಾರಗಳ ಜಂಟಿ ಪಟ್ಟಿಗೆ ಸೇರಿಸಲಾಗಿದೆ. ಉಳಿದ ಹಲವು ವಿಷಯಗಳನ್ನು ರಾಜ್ಯಗಳ ಅಧೀನಕ್ಕೆ ಬಿಡಲಾಗಿದೆ.

ಇದರರ್ಥ ರಾಜ್ಯಗಳಿಗೆ ಬಿಟ್ಟಂತಹ ವಿಷಯಗಳಲ್ಲೆಲ್ಲ ಆಡಳಿತಾತ್ಮಕ ತೀರ್ಮಾನಗಳನ್ನು ರಾಜ್ಯಗಳೇ ತೆಗೆದುಕೊಳ್ಳಬೇಕು ಎಂಬುದಾಗಿದೆ. ರಾಜ್ಯದ ಅಧೀನಕ್ಕೊಳಪಟ್ಟ ವಿಷಯಗಳಲ್ಲಿ ಕಾನೂನು ರಚಿಸುವ ಅಧಿಕಾರ ರಾಜ್ಯ ಶಾಸನ ಸಭೆಯದ್ದೇ ಆಗಿದೆ. ಇಂತಹ ಶಾಸನಗಳು ಕೇಂದ್ರ ಸರಕಾರದ ಅನುಮತಿ ಪಡೆದು ರಾಷ್ಟ್ರಪತಿಗಳ ಅಂಕಿತವನ್ನು ಪಡೆಯಬೇಕೆಂಬ ನಿಯಮ ರಾಜ್ಯಾಂಗದಲ್ಲಿದೆ. ಕಳೆದ ಹಲವಾರು ವರ್ಷಗಳಿಂದ ಈ ನಿಯಮವನ್ನು ಕೇಂದ್ರ ಸರಕಾರವು ರಾಜಕೀಯ ಕಾರಣಗಳಿಗಾಗಿ ರಾಜ್ಯಗಳನ್ನು ಮಣಿಸಲು ಉಪಯೋಗಿಸಿಕೊಂಡ ನಿದರ್ಶನಗಳಿವೆ. ದೇಶದ ಆಗುಹೋಗುಗಳ ಪರಿಚಯ ಕೇಂದ್ರಕ್ಕಿರಬೇಕು. ಐಕ್ಯಕ್ಕೆ ಭಂಗ ಬರುವ ಪ್ರಮೇಯ ಉಂಟಾಗಬಾರದು. ರಾಜ್ಯಗಳು ನಿರ್ಮಿಸುವ ಕಾನೂನುಗಳು ರಾಜ್ಯಾಂಗದ ಚೌಕಟ್ಟನ್ನು ಮೀರಿ ಹೋಗಬಾರದು ಎಂಬ ಸದಾಶಯದಿಂದ ಅಳವಡಿಸಿದ ನಿಯಮ ಇದಾಗಿದೆ. ಅಂತಹ ಸಂದರ್ಭಗಳಲ್ಲಿ ಮಾತ್ರವೇ ರಾಜ್ಯದ ಕಾನೂನುಗಳನ್ನು ಕೇಂದ್ರವು ತಡೆ ಹಿಡಿಯಬಹುದಾಗಿದೆ. ಆದರೆ ಜನಹಿತಕ್ಕಾಗಿ ರಾಜ್ಯಗಳು ತಂದ, ಜನತಂತ್ರಕ್ಕೆ ತಿರುಳು ತುಂಬುವ ಉದ್ದೇಶವುಳ್ಳ ಕಾನೂನುಗಳನ್ನೂ ರಾಜಕೀಯ ಕಾರಣಗಳಿಗಾಗಿ ಕೇಂದ್ರವು ತಿಂಗಳು ಗಟ್ಟಲೆ ವರ್ಷ ಗಟ್ಟಲೆ ಕಡತಗಳಲ್ಲಿ ಕೊಳೆಯಿಸಿದ ವಿದ್ಯಮಾನ ನಡೆದಿದೆ.

ಆರ್ಥಿಕ ವಿಚಾರಗಳಲ್ಲಿಯೂ ಅಷ್ಟೇ. ಪ್ರತಿ ಚಿಕ್ಕಾಸನ್ನೂ ರಾಜ್ಯವು ಕೇಂದ್ರದಿಂದ ಕಾಡಿ ಬೇಡಿ ತರಬೇಕಾದಂತಹ ವ್ಯವಸ್ಥೆ ನಿಧಾನವಾಗಿ ನಮ್ಮ ಆಡಳಿತೆಯಲ್ಲಿ ನಿರ್ಮಾಣವಾಗಿದೆ. ಬಲು ಸೂಕ್ಷ್ಮವಾದ ತಂತ್ರಗಾರಿಕೆಯಿಂದ ತಾನು ಹೇರುವ ಹಲವು ತೆರಿಗೆಗಳ ವ್ಯಾಪ್ತಿಯನ್ನು ಕೇಂದ್ರ ಸರಕಾರ ವಿಸ್ತರಿಸಿಕೊಂಡಿದೆ. ತೆರಿಗೆ ಸಂಗ್ರಹದಲ್ಲಿ ರಾಜ್ಯಗಳಿಗೆ ಕೊಡಬೇಕಾದ ಪಾಲನ್ನು ಬಹಳಷ್ಟು ಕಡಿತ ಮಾಡಿಕೊಂಡಿದೆ. ಮೂಲ ತೆರಿಗೆಯನ್ನು ಹೆಚ್ಚಿಸದೆ ಬರೇ ಸರ್ಚಾರ್ಜನ್ನು ಮಾತ್ರ ಹೆಚ್ಚಿಸುತ್ತಲೇ ಸಾಗುವ ಜಾಣತನದಿಂದ ಈ ಕೆಲಸವನ್ನು ಮಾಡಲಾಗುತ್ತಿದೆ.

ಮುಖ್ಯಮಂತ್ರಿ ಹೆಗಡೆಯವರಂದಂತೆ ವಾಣಿಜ್ಯ ಬ್ಯಾಂಕು, ಜೀವವಿಮೆ ಮುಂತಾದ ಹಣಕಾಸು ಸಂಸ್ಥೆಗಳ ಸಂಪೂರ್ಣ ನಿಯಂತ್ರಣ ಕೇಂದ್ರ ಸರಕಾರದ ಕೈಯಲ್ಲಿದೆ. ರಾಜ್ಯಗಳ ಆಡಳಿತೆಯ ವಿಷಯವಾದ ಕೃಷಿ ಹಾಗೂ ವ್ಯವಸಾಯದ ಹಣಕಾಸಿನ ಅಗತ್ಯಗಳನ್ನು ಪೂರೈಸಬೇಕಾದ ಗ್ರಾಮೀಣ ಬ್ಯಾಂಕುಗಳ ಆಡಳಿತೆಯ ನಿಯಂತ್ರಣವೂ ಕೇಂದ್ರ ಸರಕಾರದ್ದಾಗಿದೆ.

ಇದೆಲ್ಲವೂ ದೇಶದ ಒಟ್ಟು ಆಳ್ವಿಕೆಯಲ್ಲಿ ವಿಕೃತಿಗೆ ಕಾರಣವಾಗಿದೆ. ಜನತಂತ್ರದ ಒಳಗು ಬರಿದಾಗಿ, ಟೊಳ್ಳಾಗಿ ಹಂದರವು ಮಾತ್ರವೇ ಉಳಿದುಕೊಂಡಿದೆ. ಅದಕ್ಕೆ ತಿರುಳು ತುಂಬುವ ಕಾರ್ಯ ಆಗಬೇಕಿದ್ದರೆ ಅಧಿಕಾರದ ವಿಕೇಂದ್ರೀಕರಣ ಆಗಬೇಕು. ಸಂಪನ್ಮೂಲದ ನಿಯಂತ್ರಣ ರಾಜ್ಯ ಸರಕಾರದ ಕೈಯೊಳಗಿದ್ದರೆ ಮಾತ್ರವೇ ಅಭಿವೃದ್ಧಿ ಕಾರ್ಯಗಳಿಗೆ ಸುಲಲಿತವಾಗಿ ಹಣ ಹರಿದೀತು. ಸೂಕ್ತ ಯೋಜನೆಗಳನ್ನು ರೂಪಿಸುವ ಸಾಮರ್ಥ್ಯ ಅದಕ್ಕೆ ಬಂದೀತು.

ರಾಜ್ಯ ಸರಕಾರಗಳು ನಿಜಕ್ಕೂ ಜನತೆಗೆ ಜವಾಬ್ದಾರವಾಗಬೇಕಿದ್ದರೆ ಹಣಕಾಸು, ಒಳಾಡಳಿತ ಮೊದಲಾದ ಎಲ್ಲಾ ವಿಷಯಗಳ ನಿರ್ಧಾರದ ಅಧಿಕಾರ ಅದಕ್ಕಿರಬೇಕು. ಅಭಿವೃದ್ಧಿ ಯೋಜನೆ ಸಂಪೂರ್ಣ ಅದರ ನಿಯಂತ್ರಣದಲ್ಲಿರಬೇಕು. ಕೇಂದ್ರದ ಕೈಯಲ್ಲಿ ರಕ್ಷಣೆ, ವಿದೇಶ ವ್ಯವಹಾರ, ನಾಣ್ಯ ಮುದ್ರಣ ಮತ್ತು ಸಂಪರ್ಕ ಇವು ಮಾತ್ರವೇ ಇರಬೇಕು.

...ನಿಮಾ ನೌಕರರಿಗೆ ಹೆಚ್ಚಿನ ಭತ್ಯೆ ನೀಡಲು ...ಮಾಲಿಕರ ಒಪ್ಪಿಗೆ

ಭದ್ರಾವತಿ, ಅ. 21– ಕರ್ನಾಟಕ ...ನಿಮಾ ಕಾಯಿದೆ ಪ್ರಕಾರ ಸಿನಿಮಾ ನೌಕ...ರಿಗೆ ಹೆಚ್ಚುವರಿ ತುಟ್ಟಿಭತ್ಯೆಯನ್ನು ...ನೀಡಲು ಸಿನಿಮಾ ಮಾಲೀಕರು ಜಿಲ್ಲಾ ...ಕಾರ್ಮಿಕ ಅಧಿಕಾರಿ ನೇಮಿರಾಜ ಮತ್ತು ...ತಾಲೂಕು ಕಾರ್ಮಿಕ ಅಧಿಕಾರಿ ಆನಂದ ...ರಾವ್ ಅವರ ಸಮ್ಮುಖದಲ್ಲಿ ಒಪ್ಪಿ...ಕೊಂಡಿರುವುದಾಗಿ ತಿಳಿದು ಬಂದಿದೆ.

ಈ ತುಟ್ಟಿಭತ್ಯೆಯು ಏಪ್ರಿಲ್ 85ರಿಂದ ...ಜಾರಿಗೆ ಬಂದಿದ್ದು ಹಿಂದಿನ ತುಟ್ಟಿಭತ್ಯೆ ...4–25ರೂ. ಮತ್ತು ಹೆಚ್ಚುವರಿ ತುಟ್ಟಿ...ಭತ್ಯೆ 36–80ರೂ ಸೇರಿಸಿಕೊಡಲು ...ಸಿನಿಮಾ ಮಾಲಿಕರು ಒಪ್ಪಿರುವರೆಂದು ...ಸಿನಿಮಾ ನೌಕರರ ಪರವಾಗಿ ನಾಗೇಂದ್ರ...ರಾವ್ ಅವರು ತಿಳಿಸಿದ್ದಾರೆ.

ಹೆಚ್ಚುವರಿ ತುಟ್ಟಿಭತ್ಯೆಯು ನವೆಂಬರ್ ...ತಿಂಗಳಿನಿಂದ ಜಾರಿಗೆ ಬರಲಿದ್ದು ಬಾಕಿ ...ಹಣವನ್ನು ನವೆಂಬರ್ 30ರ ಒಳಗಾಗಿ ... ಮಾಲೀಕರು ಕೊಡಲು ಒಪ್ಪಿರುವುದಾಗಿ ...ತಿಳಿಸಿದ್ದಾರೆ.



ನಿಮ್ಮ
ಸ್ನೇಹಪರ
ನೆರೆಹೊರೆಯ
ಹಿತಚಿಂತಕ

ಜೀವ ವಿಮಾ
ನಿಗಮದ
ಪ್ರತಿನಿಧಿ.

ನಿಮ್ಮ ಸ್ನೇಹಪರ ಜೀವ ವಿಮಾ ನಿಗಮದ ಪ್ರತಿನಿಧಿ. ಆತ ಸ್ನೇಹಿತನಿಗಿಂತಲೂ ಹೆಚ್ಚಿನವನು.

ಆತ ಒಬ್ಬ ಮಾರ್ಗದರ್ಶಕನಿದ್ದಾನೆ. ಆರ್ಥಿಕ ಸಲಹೆಗಾರ, ತೆರಿಗೆ ಸಲಹೆಗಾರ, ಕುಟುಂಬದ ಸ್ನೇಹಿತ—ಎಲ್ಲಾ ಸುತ್ತಿ ಕೂಡಿದ ಒಂದು ವ್ಯಕ್ತಿ.

ಆತ ನಿಮ್ಮನ್ನು ಜೀವ ವಿಮಾ ಪ್ರಸ್ತಾಪ ಪತ್ರವನ್ನು ತುಂಬಿಸಲು, ಹಣ ತುಂಬಿಸಲು, ವಾರಸುದಾರರನ್ನು ನಿಯಮಿಸಲು, ಪರಭಾರೆ ಮಾಡಲು, ಹಕ್ಕು ಬಾಧ್ಯತೆ ಸ್ಥಾಪಿಸಲು ಮತ್ತಿತರ ಅನೇಕ ತೊಡಕಾಗಿ ತೋರುವ ಕಾರ್ಯವಿಧಾನಗಳನ್ನು ನಿಯಮಾನುಸಾರ ಪೂರ್ತಿಗೊಳಿಸಲು ಮಾರ್ಗದರ್ಶನ ನೀಡುತ್ತಾನೆ.

ಆತ ನಿಮ್ಮ ಹಣಕಾಸಿನ ವ್ಯವಸ್ಥೆಯನ್ನು ಹೇಗೆ ಅತ್ಯುತ್ತಮ ರೀತಿಯಲ್ಲಿ ನಡೆಸಬಹುದು, ಅತ್ಯುತ್ತಮ ಜೀವ ವಿಮಾ ಯೋಜನೆಯನ್ನು ಖರೀದಿಸಬಹುದು, ಮಕ್ಕಳ ಉಚ್ಚ ಶಿಕ್ಷಣ, ಮದುವೆ, ಮನೆ ಕಟ್ಟುವುದು ಅಥವಾ

ಮುಂಗಾರು
ಶುಕ್ರವಾರ, ಅಕ್ಟೋಬರ್ 18, 1985

ಈ ಕಾಳಜಿ ನಿಜದ್ದಲ್ಲ

ಪಾಕಿಸ್ತಾನವು ಅಣ್ವಸ್ತ್ರ ನಿರ್ಮಿಸುತ್ತಿರುವ ಬಗ್ಗೆ ಅಮೆರಿಕವು ಕಳವಳ ಹೊಂದಿದೆಯೆಂದು ಆ ದೇಶದ ರಾಜ್ಯಾಂಗ ಉಪಕಾರ್ಯದರ್ಶಿ ಜಾನ್ ಸಿ. ವೈಟ್ ಹೆಡ್ ನೇಪಾಳದಲ್ಲಿ ಹೇಳಿದ್ದಾರೆ.

ಅಮೆರಿಕದ ಈ ಕಳವಳವನ್ನು ಅವರು ಭಾರತದ ಉಪಖಂಡದ ನೆಲದಲ್ಲಿ ನಿಂತು ಆಡಿದ್ದಾರೆ. ಈ ಭಾಗಕ್ಕೆ ಬಂದದ್ದರಿಂದ ಇಲ್ಲಿನ ವಾಸ್ತವಿಕತೆಗಳ ಅರಿವಾಗಿ ಅವರು ಈ ಮಾತನ್ನು ಆಡಿರಬಹುದು. ಅಷ್ಟೇ ಹೊರತು ಈ ಉಪಖಂಡದಲ್ಲಿ ಕ್ಷೋಭೆ ಹುಟ್ಟುವ ಬಗ್ಗೆಯಾಗಲಿ, ಇಲ್ಲಿನ ಸರಕಾರಗಳು ಅಣ್ವಸ್ತ್ರಗಳನ್ನು ನಿರ್ಮಿಸುತ್ತ ಮಾನವ ಜನಾಂಗವನ್ನೇ ಅಪಾಯಕ್ಕೆ ತಳ್ಳುವ ಭಸ್ಮಾಸುರರಾಗುವ ಬಗ್ಗೆಯಾಗಲಿ, ಅಭಿವೃದ್ಧಿ ಯೋಜನೆಗಳಿಗೆ ಹಣವಿಲ್ಲದೆ ಸೊರಗಿ ಹೋಗಲು ಕಾರಣವಾಗುತ್ತಿರುವ ಶಸ್ತ್ರಾಸ್ತ್ರ ಸಂಗ್ರಹ ಸ್ಪರ್ಧೆಯ ಕುರಿತಾಗಲಿ ಈ ತನಕ ಅಮೆರಿಕ ತಲೆಕೆಡಿಸಿಕೊಂಡ ಬಗ್ಗೆ ಸೂಚನೆಗಳೇನೂ ಇಲ್ಲ.

ಮನುಷ್ಯನಿಗೆ ಅತ್ಯಂತ ಹೆಚ್ಚು ಬದುಕಿನ ಸ್ವಾತಂತ್ರ್ಯವುಳ್ಳ ವ್ಯವಸ್ಥೆ ತನ್ನದೆಂದು ಹೇಳಿಕೊಳ್ಳುತ್ತಿರುವ ಅಮೆರಿಕ ಕಳೆದ ಸುಮಾರು ನಾಲ್ಕು ದಶಕಗಳಿಂದಲೂ ತನ್ನ ಬೆಂಬಲವನ್ನು ಕೊಡುತ್ತ ಬಂದಿರುವುದು ಸರ್ವಾಕಾಲವೂ ಮಿಲಿಟರಿ ಅಧಿಪತ್ಯ ವ್ಯವಸ್ಥೆಯಿದ್ದ ಪಾಕಿಸ್ತಾನಕ್ಕೆ ಹೊರತು ಭಾರತಕ್ಕೆ ಖಂಡಿತ ಇಲ್ಲ. ಮೂರು ಯುದ್ಧಗಳು ಇವೆರಡು ದೇಶಗಳ ನಡುವೆ ನಡೆದಾಗ ಅಮೆರಿಕ ಮೂರು ಬಾರಿಯೂ ಪಾಕಿಸ್ತಾನದ ಪಕ್ಷ ವಹಿಸಿತೇ ಹೊರತು ಪ್ರಜಾಸತ್ತಾತ್ಮಕ ವ್ಯವಸ್ಥೆಯಿರುವ ಭಾರತಕ್ಕಲ್ಲ. ಕಾಶ್ಮೀರದ ಪ್ರಶ್ನೆ ಬಂದಾಗ ವಿಶ್ವಸಂಸ್ಥೆಯಲ್ಲಿ ಹಲವು ಬಾರಿ ಅಮೆರಿಕವು ಭಾರತಕ್ಕೆ ಪ್ರತಿಕೂಲವಾಗಿಯೇ ವ್ಯವಹರಿಸಿದೆ. 1975ರಲ್ಲಿ ಭಾರತದಲ್ಲಿ ತುರ್ತುಸ್ಥಿತಿ ಹೇರಿದಾಗ ಮಾತ್ರ ಈ ದೇಶದ ಜನತಂತ್ರದ ಬಗ್ಗೆ ಆ ದೇಶಕ್ಕೆ ಅತೀವ ಕಾಳಜಿ ಉಂಟಾದದ್ದಿದೆ. ಇಲ್ಲಿನ ಜನರ ಭವಿಷ್ಯದ ಬಗ್ಗೆ ಅಮೆರಿಕ ಅಂದು ಕಣ್ಣೀರು ಹರಿಸಿದ್ದಿದೆ. ಇಲ್ಲಿ ತುರ್ತುಸ್ಥಿತಿ ವಿರುದ್ಧ ಹೋರಾಡಿ ಮಾನವೀಯ ಹಕ್ಕುಗಳ ರಕ್ಷಣೆಗಾಗಿ ಕೆಲಸ ಮಾಡಿದ ರಾಮ್ ಜೇಠ್ಮಲಾನಿಯವರಂತಹವರಿಗೆ ಅಮೆರಿಕದ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದ್ದಿದೆ.

ಮಾನವೀಯ ಹಕ್ಕುಗಳಿಗೆ ಅತೀವ ಗೌರವವಿದೆಯೆಂದು ಹೇಳಿಕೊಳ್ಳುವ ಅಮೆರಿಕದ ಸರಕಾರ ಬೇರಾವ ಸಂದರ್ಭದಲ್ಲಿಯೂ ಭಾರತದ ಜನಜೀವನದ ಉತ್ಕರ್ಷದ ಬಗ್ಗೆ ಕಾಳಜಿವಹಿಸಿದ್ದನ್ನು ನಾವು ಕಾಣೆವು. ಹಾಗೆ ನೋಡಿದರೆ ಜಗತ್ತಿನ ಬೇರಾವ ಮೂಲೆಯಲ್ಲಿಯೂ ಈ ದೇಶ ಯಾವುದೇ ಚಟುವಟಿಕೆ ನಡೆಸಿದ್ದರೆ ಅದು ಮಾನವ ಜನಾಂಗದ ಹಿತದ ಹೆಚ್ಚಳಕ್ಕಾಗಿ ಎನ್ನುವುದಕ್ಕಿಂತಲೂ ಸ್ವಂತ ವರ್ಚಸ್ಸನ್ನು ವೃದ್ಧಿಸಿಕೊಳ್ಳುವುದಕ್ಕಾಗಿ ಪ್ರಭಾವ ವಲಯವನ್ನು ವಿಸ್ತರಿಸಿಕೊಳ್ಳುವುದಕ್ಕಾಗಿ ಎಂದು ತಿಳಿಯದೆ ವಿಧಿಯಿಲ್ಲ. ಆಫ್ರಿಕವಿರಲಿ, ಮಧ್ಯಪೂರ್ವವಿರಲಿ, ಲ್ಯಾಟಿನ್ ಅಮೆರಿಕವಿರಲಿ, ಯುರೋಪೇ ಇರಲಿ – ಎಲ್ಲ ಕಾಲ ದೇಶಗಳ ಎಲ್ಲ ವಿದ್ಯಮಾನಗಳು ಇದಕ್ಕೆ ಸಾಕ್ಷಿಯಾಗಿವೆ.

ಅಮೆರಿಕ ಈ ಉಪಖಂಡದಲ್ಲಿ ಆಸಕ್ತಿ ವಹಿಸಿದ್ದಿದೆ. ಅದು ಬಾಂಗ್ಲಾದೇಶ ಸಮರ ನಡೆಯುತ್ತಿದ್ದ 1971ರ ಡಿಸೆಂಬರ್‌ನಲ್ಲಿ. ಅಂದು ಪಾಕಿಸ್ತಾನದಿಂದ ಬಾಂಗ್ಲಾದೇಶ ಸಿಡಿದುಹೋಗುವ ಅಂಚಿನಲ್ಲಿದ್ದಾಗ ಅಮೆರಿಕ ಈ ಉಪಖಂಡದ ವಿದ್ಯಮಾನದಲ್ಲಿ ಕಾಳಜಿ ವಹಿಸಿ ತನ್ನ ಏಳನೆ ನೌಕಾ ಪಡೆಯನ್ನು ಕಳಿಸಿತ್ತು.

ಆಗಿಂದಾಗ್ಗೆ ಪಾಕಿಸ್ತಾನಕ್ಕೆ ಮಾರಕ ಆಯುಧಗಳನ್ನು ಯುದ್ಧೋಪಕರಣಗಳನ್ನು ಮಾರಿ, ಆ ದೇಶದ ಪುಕ್ಕಕ್ಕೆ ಗಾಳಿಯೂದಿ ಸೆಟೆದು ನಿಲ್ಲಿಸಿ ಕುಮ್ಮಕ್ಕು ನೀಡುತ್ತ ಬಂದ ಅಮೆರಿಕ ಇಂದು ಈ ಉಪಖಂಡದ ವಿದ್ಯಮಾನಗಳ ಬಗ್ಗೆ ಕಾಳಜಿವಹಿಸಲು ಕಾರಣ ಒಂದೇ, ಪಾಕಿಸ್ತಾನದ ಉಪ ಕ್ರಮಕ್ಕೆ ಪ್ರತಿಯಾಗಿ ಭಾರತವು ಅಣುಬಾಂಬು ನಿರ್ಮಿಸೀತು–ಪರಿಣಾಮವಾಗಿ ಇಲ್ಲಿಯೂ ಅಣ್ವಸ್ತ್ರ ಪೈಪೋಟಿ ಉಂಟಾದೀತು ಎಂಬುದು ಈ ಉಪಖಂಡದ ಬಗೆಗಿನ ತನ್ನ ನೀತಿ ಬಯಸಿದ ಫಲವನ್ನು ಕೊಡುತ್ತಿಲ್ಲ ಎಂಬುದು.

ಈ ಹಿನ್ನೆಲೆಯಲ್ಲಿ ಅಮೆರಿಕ ಈ ಉಪ ಖಂಡದ ಬಗೆಗಿನ ತನ್ನ ಧೋರಣೆಯನ್ನು ಬದಲಾಯಿಸಬೇಕಾದ ಅಗತ್ಯವಿದೆ. ಜನತಂತ್ರ ಹಾಗೂ ಮಾನವೀಯ ಹಕ್ಕುಗಳ ಬಗ್ಗೆ ಆ ದೇಶಕ್ಕೆ ಇರುವ ಕಾಳಜಿ ನಿಜದ್ದಾದರೆ ಅಂತಹ ಮೌಲ್ಯಗಳನ್ನು ಉಪಖಂಡದ ಎಲ್ಲಾ ಕಡೆ ನೆಲೆಯೂರಿಸುವುದಕ್ಕೆ ಬೇಕಾದ ನೆರವನ್ನು ಅದು ಕೊಡಬೇಕು. ಆದರೆ ಈಗ ಅದು ಮಾಡುತ್ತಿರುವುದು ಅದಕ್ಕೆ ತದ್ವಿರುದ್ಧವಾದದ್ದು.

ಆಹ್ವಾನವಿಲ್ಲದ ಇಬ್ಬರು ಶಾಸಕರು ವೇದಿಕೆ ಏರಲಿಲ್ಲ

ಮೈಸೂರು, ಅ. 17– ಇಲ್ಲಿನ ಪ್ರಸಿದ್ಧ ದಸರಾ ಉತ್ಸವದ ಅಂಗವಾಗಿ ಏರ್ಪಡಿಸಿರುವ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಶಾಸಕರಿಬ್ಬರು ಸ್ವಾಭಿಮಾನದಿಂದ ಜನರ ನಡುವೆಯೇ ಕುಳಿತ ಪ್ರಸಂಗವೊಂದು ವರದಿಯಾಗಿದೆ.

ದಸರ ಚಲನ ಚಿತ್ರೋತ್ಸವವು ಇತ್ತೀಚಿಗೆ ಇಲ್ಲಿನ ಸರಸ್ವತಿ ಚಿತ್ರಮಂದಿರದಲ್ಲಿ ಪ್ರಾರಂಭವಾಯಿತು. ಸಮಾರಂಭಕ್ಕೆ ಚಲನ ಚಿತ್ರ ನಟ ಕೆ. ಎಸ್. ಅಶ್ವಥ್, ನಟಿಯರಾದ ಲಕ್ಷ್ಮಿ, ಬಿ.ಸರೋಜಾದೇವಿ, ರಾಜ್ಯ ಚಲನ ಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಪ್ರಭಾಕರ ರೆಡ್ಡಿ, ಕಾರ್ಯದರ್ಶಿ ಲಕ್ಷ್ಮಣ್ ಆಗಮಿಸಿದ್ದರು.

ಚಲನ ಚಿತ್ರೋತ್ಸವವನ್ನು ರಾಜ್ಯ ಕಾರ್ಮಿಕ ಸಚಿವ ಡಿ. ಮಂಜುನಾಥ್ ಉದ್ಘಾಟಿಸಿದರು. ಆದರೆ ಸ್ಥಳೀಯ ಶಾಸಕರಾದ ಕೆ. ಕೆಂಪೀರೇಗೌಡ ಮತ್ತು ವೇದಾಂತ ಹೆಮ್ಮಿಗೆ ಅವರನ್ನು ಸಮಾರಂಭದ ವೇದಿಕೆಗೆ ಈ ಮೊದಲೇ ಆಹ್ವಾನಿಸದಿದ್ದ ಕಾರಣ ಅವರಿಬ್ಬರೂ ವೇದಿಕೆ ಏರಲಿಲ್ಲ.

ಒಂದು ಹಂತದಲ್ಲಿ ಸಚಿವ ಮಂಜುನಾಥ್ ಅವರು ವೇದಾಂತ ಹೆಮ್ಮಿಗೆಯವರಿಗೆ "ನಾನು ಕರೆಯುತ್ತಿದ್ದೇನೆ, ವೇದಿಕೆ ಮೇಲೆ ಬನ್ನಿ" ಅಂದರು. ಅಲ್ಲದೆ ದಸರಾ ಮಹೋತ್ಸವದ ವಿಶೇಷಾಧಿಕಾರಿ ಎಚ್. ಶಿವರಾಂ ಅವರೂ ಶಾಸಕರನ್ನು ವೇದಿಕೆಗೆ ಆಹ್ವಾನಿಸಿದರು. ಆದರೆ "ಸ್ವಾಭಿಮಾನಿ"ಗಳಾದ ಶಾಸಕರು ಜನರ ನಡುವೆಯೇ ಕುಳಿತರೇ ಹೊರತು ವೇದಿಕೆ ಏರಲಿಲ್ಲ.

ಈ ಬಾರಿಯ ದಸರಾ ಚಲನ ಚಿತ್ರೋತ್ಸವಕ್ಕೆ ಅಷ್ಟೊಂದು ಉತ್ತಮ ಚಿತ್ರಗಳನ್ನು ತರಿಸದಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಪ್ರಭಾಕರ ರೆಡ್ಡಿ ಅವರು "ನಮಗೆ ಹೇಳಿದ್ದರೆ ನಾವು ಒಳ್ಳೆಯ ಚಿತ್ರ ತರಿಸಿ ಕೊಡುತ್ತಿದ್ದೆವು" ಎಂದು ದಸರಾ ಮಹೋತ್ಸವ ಸಮಿತಿ ಅಧ್ಯಕ್ಷರನ್ನು ತರಾಟೆಗೆ ತೆಗೆದುಕೊಂಡರು. ಇದೆಲ್ಲದರ ಪರಿಣಾಮವಾಗಿ ಈ ಬಾರಿಯ ಚಲನ ಚಿತ್ರೋತ್ಸವ ಕಹಿ ಮನಸ್ಸಿನಿಂದಲೇ ಪ್ರಾರಂಭವಾಯಿತು.

...ಕಸಬರಿಗೆ' ಕವನ ...ಂಕಲನ ಬಿಡುಗಡೆ

(ಮುಂಗಾರು ವರದಿ)

...ಅಂಕೋಲಾ ಅ. 17– ಗ್ರಾಮಾಂತರ ...ಗಗಳಲ್ಲಿರುವ ಜನರ ಬದುಕಿನಲ್ಲಿ ಮಿಳಿತ...ಾಗಿ ಅವರಲ್ಲೂ ಸಾಹಿತ್ಯ ಹಾಗೂ ...ಂಸ್ಕೃತಿಯ ಪ್ರಜ್ಞೆ ಬೆಳೆಸುವಂತೆ ಮಾಡುವ ...ನ್ನ ನೂತನ ಯೋಜನೆಯಂತೆ ಅಂಕೋ...ಲೆಯ ಕರ್ನಾಟಕ ಸಂಘವು ಇಲ್ಲಿಂದ ...ುಮಾರು 16 ಕಿ. ಮಿ. ದೂರದಲ್ಲಿರುವ ಅಗಸೂರು ಗ್ರಾಮಕ್ಕೆ ತನ್ನ ಸದಸ್ಯ ಹಾಗೂ ...ಕಲಾವಿದರ ತಂಡದೊಂದಿಗೆ ಹೋಗಿ ...ಶಾಂತರಾಮ ಬಾಳೆಗುಳಿಯವರ 'ಕಸಬರಿಗೆ' ...ಂಬ ಚೌಪದಿಗಳ ಸಂಕಲನದ ಬಿಡುಗಡೆ ...ಾರಂಭವನ್ನು ಏರ್ಪಡಿಸಿ, ಕೊನೆಯಲ್ಲಿ ...ಎರಡು ಬೀದಿ ನಾಟಕಗಳನ್ನೂ ಪ್ರದರ್ಶಿಸಿ ...ನೂರಾರು ಜನರನ್ನು ರಂಜಿಸಿತು.

...ರಾಜ್ಯ ಪಠ್ಯ ಪುಸ್ತಕ ವಿಭಾಗದ ನಿವೃತ್ತ ...ರ್ದೇಶಕ ಎಂ. ಎಚ್. ನಾಯಕ ಅವರು ...ಯ ಸ್ವಾತಂತ್ರ್ಯಯೋಧ ಜೋಗಿ ...ರಣ್ಣ ನಾಯಕರ ಅಧ್ಯಕ್ಷತೆಯಲ್ಲಿ ಕೃತಿ...ನ್ನು ಬಿಡುಗಡೆ ಮಾಡಿದರು. ವಿ.ಜೇ. ...ಯಕ, ಶ್ಯಾಮ ಹುದ್ದಾರ ಹಾಗೂ ...ಸ್.ಕೆ. ನಾಯಕ ಅವರು ಕವಿ ಶಾಂತಾ...ಮ ಬಾಳೆಗುಳಿಯವರ ಸಾಹಿತ್ಯ ಸತ್ವ ...ಗೂ ಸ್ವಭಾವಗಳ ಕುರಿತು ಮಾತನಾಡಿ ...ುಕ್ತ ಕಂಠದಿಂದ ಅಭಿನಂದಿಸಿದರು.

...ಪ್ರಾರಂಭದಲ್ಲಿ ಗ್ರಾಮದ ಜನರ ಪರ...ಗಿ ಪಂಚಾಯತ್ ಅಧ್ಯಕ್ಷ ರಾಮಚಂದ್ರ ...ಯಕ, ಕರ್ನಾಟಕ ಸಂಘದ ಪರವಾಗಿ ...ಂಬಳ ಆನಂದ ಮಾತನಾಡಿದರು. ...ಶಾಸಕ ವಿಷ್ಣು ನಾಯ್ಕ ಮಾತನಾಡಿ, ...ಂತಾರಾಮ ಬಾಳೆಗುಳಿಯವರ ಕೃತಿ...ನ್ನು ತಾವು ಪ್ರಕಟಿಸಿ ಅಗಸೂರಿನಲ್ಲೇ ...ಗಡೆ ಮಾಡುತ್ತಿರುವುದರ ಹಿನ್ನೆಲೆ...ನ್ನು ವಿವರಿಸಿದರು.

...ಕಾರ್ಯಕ್ರಮವನ್ನು ನಿರ್ದೇಶಿಸಿದ ...ಮೋಹನ ಹಬ್ಬು ಕರ್ನಾಟಕ ...ದ ಪರವಾಗಿಯೂ ಶಾಂತಾರಾಮ ...ಗುಳಿ ವಂದಿಸಿದರು. ಕಾರ್ಯಕ್ರಮದ ...ನೆಗ 'ರೇಷನ್ ಕಾರ್ಡ್' ಹಾಗೂ ...ಜ್ಯೋತಿ' ಎಂಬ ಎರಡು ಬೀದಿ ನಾಟ...ಗಳನ್ನು ಅಂಕೋಲೆಯ 'ಬಸಂತ' ಕಲಾ...ರು ಪ್ರದರ್ಶಿಸಿ, ನೆರೆದ ಜನಸ್ತೋಮ...ರಂಜಿಸಿದರು.

ಚೂರಿ ಇರಿತದಿಂದ ಗಾಯಗೊಂಡ ವ್ಯಕ್ತಿಯ ಸಾವು

ಮಡಿಕೇರಿ, ಅ. 17– ಚೂರಿ ಇರಿತದಿಂದ ತೀವ್ರ ಗಾಯಗೊಂಡಿದ್ದ ವಾಮನ ಎಂಬವರು ಸ್ಥಳೀಯ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ಇಲ್ಲಿಗೆ ಸಮೀಪದ ಕಗ್ಗೋಡು ಗ್ರಾಮದ ರವೀಂದ್ರ ಎಂಬವರು ತಮ್ಮ ಕುಟುಂಬದವರೇ ಆದ ವಾಮನ ಎಂಬವರನ್ನು ಚೂರಿಯಿಂದ ಇರಿದು ಗಾಯಗೊಳಿಸಿದ್ದರು. ಗಾಯಾಳುವನ್ನು ಸ್ಥಳೀಯ ಸರಕಾರಿ ಆಸ್ಪತ್ರೆಗೆ ಸೇರಿಸಿದರೂ ಪ್ರಯೋಜನವಾಗದೆ ಅಲ್ಲಿ ದುರ್ಮರಣಗೊಂಡರು. ಮಡಿಕೇರಿ ಗ್ರಾಮಾಂತರ ಪೊಲೀಸರು ಮೊಕದ್ದಮೆ ...

ಶಿರಸಿ ಕೆ.ಡಿ.ಸಿ.ಸಿ. ಬ್ಯಾಂಕಿಗೆ ಪ್ರಥಮ ಬಹುಮಾನ

ಶಿರಸಿ, ಅ. 17– 1983- 84ನೈ ಸಾಲಿನಲ್ಲಿ ಕೆ. ಡಿ. ಸಿ. ಸಿ. ಬ್ಯಾಂಕ್ ಲಿ ಶಿರಸಿ ಇದು ರಾಜ್ಯದಲ್ಲಿಯೇ ಅತ್ಯುತ್ತಮ ಜಿಲ್ಲಾ ಮಧ್ಯವರ್ತಿ ಬ್ಯಾಂಕೆಂದು ಆಯ್ಕೆಯಾಗಿದ್ದು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಲಿ. ಬೆಂಗಳೂರು ಅದರ ಪ್ರಥಮ ಬಹುಮಾನ ಮತ್ತು 5,0001 ರೂ. ನಗದು ಬಹುಮಾನ ಗಳಿಸಿದೆ.

1981–82 ಮತ್ತು 83ರಲ್ಲಿ ಸಹ ಕೆ. ಡಿ. ಸಿ. ಸಿ. ಬ್ಯಾಂಕು ರಾಜ್ಯದಲ್ಲಿ ಅತ್ಯುತ್ತಮ ಜಿಲ್ಲಾ ಮಧ್ಯವರ್ತಿ ಬ್ಯಾಂಕೆಂದು ಪ್ರಥಮ ಬಹುಮಾನ ಗಳಿಸಿ ಜಿಲ್ಲೆಯ ಹೆಮ್ಮೆಗೆ ಪಾತ್ರವಾಗಿತ್ತು.

ಯುರೇನಿಯಂ ಅಗೆತ ಕುರಿತು ಸಭೆ

ಯಲ್ಲಾಪುರ, ಅ. 17- ಇಲ್ಲಿಗೆ ಸಮೀಪದ ಅರಬೈಲಿನ ಜನಜಾಗೃತ ಸಮಿತಿಯ ಆಶ್ರಯದಲ್ಲಿ ಇತ್ತೀಚಿಗೆ ಜಿಲ್ಲೆಯ ಉಸ್ತುವಾರಿ ಮಂತ್ರಿ ದೇಶಪಾಂಡೆ ಅವರ ಅಧ್ಯಕ್ಷತೆಯಲ್ಲಿ ಯುರೇನಿಯಂ ಅಗೆತದ ಕುರಿತು ಸಾರ್ವಜನಿಕ ಸಭೆ ನಡೆಯಿತು.

ಈ ಸಭೆಯಲ್ಲಿ ಶಾಸಕ ಅಜ್ಜಿಬಾಳ ಹೆಗಡೆ ಮತ್ತು ಪ್ರಭಾಕರರಾವ್ ಅವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸಮಿತಿಯ ಅಧ್ಯಕ್ಷ ಶಿವರಾಮ ಹೆಬ್ಬಾರ್ ಅವರು ಸ್ವಾಗತಿಸಿ ... ಭಟ್ಟ ಅವರ ...

...ಪಲ್ಲಿ ...ನೂನು ...ಶಿಬಿರ

...ಗಳನ್ನು ಗ್ರಾಮಾಂತರ ಪ್ರದೇಶ ... ನಡೆಸಬೇಕು ಎಂದು ...

ಕಾರ್ಯಕ್ಕೊಗ್ಗದ ಕನಸುಗಳು

ರಾಷ್ಟ್ರೀಯ ಕನಿಷ್ಠ ವೇತನ ಮತ್ತು ರಾಷ್ಟ್ರೀಯ ವೇತನ ಧೋರಣೆಯನ್ನು ರೂಪಿಸುವ ಬಗ್ಗೆ ಸರಕಾರ ತೀವ್ರವಾಗಿ ಆಲೋಚಿಸುತ್ತಿದೆಯೆಂದು ಕೇಂದ್ರ ಕಾರ್ಮಿಕ ಮಂತ್ರಿ ಟಿ. ಅಂಜಯ್ಯ ಹೇಳಿರುವುದಾಗಿ ವರದಿಯಾಗಿದೆ. ಇತ್ತೀಚೆ ನಡೆದ ಕಾರ್ಮಿಕ ಸಚಿವರುಗಳ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದ್ದು ಈಗ ಅಂತಿಮ ತೀರ್ಮಾನ ಆಗುವುದು ಮಾತ್ರ ಉಳಿದಿದೆಯೆಂದೂ ಅವರು ಹೇಳಿದ್ದಾರೆ.

ಕಾಯಕಷ್ಟದಿಂದ ಬದುಕು ಸಾಗಿಸಬೇಕಾದವರಿಗೆ ಅದಕ್ಕೆ ಅನುಕೂಲ ಮಾಡಿಕೊಡುವ, ಅವರ ಶೋಷಣೆಯನ್ನು ಬಲವುಳ್ಳದವರು ಮಾಡದಂತೆ ವ್ಯವಸ್ಥೆ ಮಾಡುವ ಹಾಗೂ ಸಾಮಾಜಿಕ ನ್ಯಾಯದ ಸ್ಥಾಪನೆಗೆ ನೆರವಾಗುವಂತಹ ಕನಿಷ್ಠ ಕೂಲಿ ಕಾನೂನು ಬರಬೇಕಾದ್ದು ಅಗತ್ಯ. ಹಾಗೆ ಬರುವುದನ್ನು ಈ ದೇಶದ ದುಡಿಯುವ ಜನಸಮೂಹ ಸ್ವಾಗತಿಸುತ್ತದೆ. ಆದರೆ ಕಾನೂನುಗಳಿಂದ ಪವಾಡವಾಗುವುದಿಲ್ಲವೆಂಬುದನ್ನು ಈ ದೇಶದ ಕೂಲಿಕಾರರು ಸ್ವಾತಂತ್ರ್ಯ ದೊರೆತ 1947ರಿಂದ ಇಂದಿನ ತನಕವೂ ನೋಡುತ್ತ, ಅನುಭವಿಸುತ್ತ ಬಂದಿದ್ದಾರೆ. ಈ ಸತ್ಯ ದೇಶವನ್ನು ಆಳುವವರಿಗೂ ತಿಳಿಯಬೇಕಾಗಿದೆ. ಬರೇ ಕಾನೂನುಗಳು ಸಾಲವು. ಅವುಗಳ ಅನುಷ್ಠಾನ ಆಗಬೇಕು. ಅನುಷ್ಠಾನಕ್ಕೆ ಸೂಕ್ತವಾದ ಸಾಂಸ್ಥಿಕ ವ್ಯವಸ್ಥೆಯಿದ್ದರೆ ಮಾತ್ರವೇ ಅದು ಸಾಧ್ಯವಾಗುತ್ತದೆ. ಜನಸಾಮಾನ್ಯರ ಹಿತ ಸಾಧಿಸುವ ಕಾನೂನುಗಳ ಪಾಲನೆಗೆ ನಮ್ಮಲ್ಲಿ ಹೆಸರಿಗಾದರೂ ವ್ಯವಸ್ಥೆಯಿಲ್ಲದಂತಹ ಕ್ಷೇತ್ರಗಳು ಹಲವಿವೆ. ಅಂತಹ ವ್ಯವಸ್ಥೆಯಿರುವ ಕಡೆ ಕೂಡಾ ಕಾನೂನುಗಳು ಜನಸಾಮಾನ್ಯ ಹಿತ ಮಾಡುವ ಬದಲು ಕೆಂಪು ಪಟ್ಟಿಯ ಪರಿಣಾಮವಾಗಿ ಅವರ ಕುತ್ತಿಗೆಗೆ ಬಿಗಿವ ಒರಳಾಗಿ ಪರಿಣಮಿಸಿದ ಪ್ರಸಂಗಗಳೇ ಹೆಚ್ಚು. ಕೆಂಪು ಪಟ್ಟಿಯನ್ನು ಸ್ವಹಿತ ಸಾಧನೆಗೂ ವರ್ಗ ಹಿತ ರಕ್ಷಣೆಗೂ ಅಧಿಕಾರಿಗಳು ಬಳಸಿಕೊಳ್ಳುತ್ತಿರುವ ವಿದ್ಯಮಾನವೇ ನಮ್ಮ ಆಡಳಿತದ ದಿನದಿನದ ಉಸಿರಾಗಿದೆ.

ನಮ್ಮ ಆಡಳಿತೆಯ ಭವನಗಳಲ್ಲಿ ಶ್ರೀಸಾಮಾನ್ಯನಿಗೆ ಪ್ರವೇಶವೇ ದುಸ್ತರವಾಗಿರುವ, ಅವನ ಸ್ನೇಹಿತರೇ ಈ ಸೌಧಗಳಲ್ಲಿ ಇಲ್ಲದಿರುವ ಪರಿಸ್ಥಿತಿಯೇ ಕಾನೂನುಗಳು ಅನುಷ್ಠಾನಕ್ಕೆ ಬಾರದಿರಲು ಮೊದಲ ಕಾರಣ. ಆಡಳಿತದ ಸೂತ್ರ ಹಿಡಿದವರು ಹಾಗೂ ದಿನದಿನದ ಆಡಳಿತೆಯನ್ನು ನೋಡಿಕೊಳ್ಳಬೇಕಾದ ಅಧಿಕಾರಿಗಳು, ಒಟ್ಟಿನಲ್ಲಿ ನಮ್ಮ ರಾಜಕೀಯ ವ್ಯವಸ್ಥೆಯೇ ಬುದ್ಧಿಬಲವೂ ಧನಬಲವೂ ಉಳ್ಳವರ ಪ್ರತಿನಿಧಿಯಾಗಿರುವುದೇ ಶ್ರೀಸಾಮಾನ್ಯನಿಗೆ ಸಂಕಟ ಉಂಟಾಗಲು ಕಾರಣ.

ಶಾಸನಗಳ ಅನುಷ್ಠಾನದಲ್ಲಿ ಆಗುವ ಮೋಸ ಜನಸಾಮಾನ್ಯರ ಸಂಕಟದ ಒಂದು ಮುಖವಾದರೆ ಕಾನೂನುಗಳೇ ಅವರ ಹಿತಕ್ಕೆ ಮಾರಕವಾಗಿರುವುದು ಇನ್ನೊಂದು ಮುಖ. ಕಾರ್ಮಿಕರ ಹಿತ ರಕ್ಷಣೆ ಮಾಡಬೇಕಾದ ಕಾನೂನುಗಳು ಉದ್ಯಮಪತಿಗಳ ಸೊತ್ತು-ಸವಲತ್ತುಗಳ ರಕ್ಷಣೆಯ ಸಾಧನಗಳಾಗಿರುವುದು ಈ ದೇಶದ ಪ್ರತಿಷ್ಠಿತ ವರ್ಗದವರ ಹುನ್ನಾರುಗಳ ಪರಿಚಯವುಳ್ಳವರಿಗೇನೂ ಅಚ್ಚರಿಯ ವಿಚಾರವಲ್ಲ.

ಕನಿಷ್ಠ ಕೂಲಿ ಶಾಸನದ ವಿಚಾರವೂ ಅಷ್ಟೆ. ಸರಕಾರ ನಿಗದಿಪಡಿಸುವ ಕನಿಷ್ಠ ಕೂಲಿ ಎಂದೂ ವ್ಯಾವಹಾರಿಕವಾಗಿರುವುದಿಲ್ಲವೆಂಬುದು ಕೂಲಿಕಾರ ಸಮುದಾಯ ಅನುಭವದಿಂದ ಕಂಡುಕೊಂಡಿರುವ ಸತ್ಯ. ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಕೇಂದ್ರ ಸರಕಾರ ದಿನಕ್ಕೆ ಎರಡು ರೂಪಾಯಿಗಳೆಂದು ಕೆಲವು ವರ್ಷಗಳ ಹಿಂದೆ ನಿಗದಿ ಮಾಡಿತ್ತು. ಈ ವೇತನ ಯಾವುದೋ ಹಳ್ಳಿಗಾಡಿನಲ್ಲಿ ದಿನಕ್ಕೆ ಅರ್ಧ ರೂಪಾಯಿ ವೇತನಕ್ಕೆ ದುಡಿಯುತ್ತಿದ್ದ ಕಾರ್ಮಿಕನಲ್ಲಿ ಆಸೆಯ ಕಿಡಿಯನ್ನು ಹೊತ್ತಿಸಿರಬಹುದಷ್ಟೇ ಅಲ್ಲದೆ ಸಾರ್ವತ್ರಿಕವಾಗಿ ಕೂಲಿಕಾರರಲ್ಲಿ ಸಿನಿಕತನವನ್ನಷ್ಟೇ ಹುಟ್ಟಿಸಿರಬಹುದು. ಸರಕಾರ ಕೃಷಿ ಕೂಲಿಕಾರರ ಕನಿಷ್ಠ ವೇತನ ಹೆಚ್ಚಿಸಿದರೂ ಅದನ್ನು ಜಾರಿಗೆ ಕೊಡಬೇಕಾದ ಸಾಂಸ್ಥಿಕ ವ್ಯವಸ್ಥೆಯಾಗಲಿ ಕೂಲಿಕಾರರ ಸಂಘಟನೆಯಾಗಲಿ ಇಲ್ಲದಿರುವ ಇಂದಿನ ಪರಿಸ್ಥಿತಿಯಲ್ಲಿ ಕನಿಷ್ಠ ಕೂಲಿಯೆಂಬುದು ಎಂದೆಂದೂ ಸಾಧನೆಗೆ ಬಾಕಿಯಿರುವ ಒಂದು ಆದರ್ಶವಾಗಿಯೇ ಉಳಿಯುತ್ತದೆ.

ರಾಷ್ಟ್ರೀಯ ವೇತನ ಧೋರಣೆಯ ಬಗ್ಗೆ ಹೇಳದಿರುವುದೇ ಕ್ಷೇಮ. ತಾರತಮ್ಯವೇ, ವರ್ಗಪ್ರತಿಷ್ಠೆಯೇ ತಾಯಿಬೇರಾಗಿರುವ ಭಾರತೀಯ ಸಮಾಜದಲ್ಲಿ ವೇತನದ ಮೇಲೆ ಗರಿಷ್ಠ ಹಾಗೂ ಕನಿಷ್ಠ ಮಿತಿ ಹಾಕುವುದೂ ವೇತನಗಳ ಅಂತರವನ್ನು ಕಡಿಮೆ ಮಾಡುವುದೂ ಸುಲಭದಲ್ಲಿ ಸಾಧಿಸಬಹುದಾದ ಕೆಲಸವಲ್ಲ. ಇಡಿಯ ಸಮಾಜವನ್ನೇ ಪುನರ್ಘಟಿಸಬಲ್ಲ ರಾಜಕೀಯ ವ್ಯವಸ್ಥೆ ಅಸ್ತಿತ್ವಕ್ಕೆ ಬಂದರೆ ಅದನ್ನು ಸಾಧಿಸುವ ಪ್ರಯತ್ನವಾದರೂ ನಡೆದೀತು. ಉಳ್ಳವರ ತಳ್ಳಿಗೆ ಹೋಗದ, ಬಲ್ಲಿದರ ಕಾಸು–ಕಿಮ್ಮತ್ತಿಗಾಗಿ ಜೊಲ್ಲು ಸುರಿಸುವ ನಮ್ಮ ಈ ರಾಜಕೀಯ ವ್ಯವಸ್ಥೆಯಲ್ಲಿ ವರಮಾನದಲ್ಲಿನ ಅಂತರ ನಿವಾರಣೆ ಕನಸಿನ ಮಾತಾಗಿಯೇ ಉಳಿಯಲಿದೆ. ಘನತೆ ಗೌರವಗಳನ್ನೂ ಪರಿಣತಿಯನ್ನೂ ಸಂಪಾದನೆಯಿಂದ ತೀರ್ಮಾನಿಸುವ ವ್ಯವಸ್ಥೆ ಪರಂಪರೆಯಿಂದ ಬಂದಿರುವ ಈ ಸಮಾಜದೊಳಕ್ಕೆ ವ್ಯಕ್ತಿತ್ವಕ್ಕೆ ಗೌರವ ಕೊಡುವ ಮೌಲ್ಯ ವ್ಯವಸ್ಥೆಯನ್ನು ಆಳವಡಿಸುವುದು ಸುಲಭದ ಮಾತಲ್ಲ. ಅಂತಹ ರಾಜಕೀಯ ಇಚ್ಛಾ ಶಕ್ತಿಯಾಗಲಿ ಚೈತನ್ಯ ಶೀಲವಾದ ರಾಜಕೀಯ ವ್ಯವಸ್ಥೆಯಾಗಲಿ ಬರುವ ತನಕ ಅಂಜಯ್ಯನವರ ಹೇಳಿಕೆಯಂತಹ ಮಾತುಗಳನ್ನು ಬೂಟಾಟಿಕೆಯೆಂದೇ ಪರಿಗಣಿಸಬೇಕಾಗುತ್ತದೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆಗೆ ಒತ್ತಾಯ

ಕಾಸರಗೋಡು, ಜೂ. 3– ಕೇರಳ ಸರಕಾರದ ಆರೋಗ್ಯ ಇಲಾಖೆಯಲ್ಲಿ ವಿವಿಧೋದ್ದೇಶದ ಮಹಿಳಾ ಕಾರ್ಯಕರ್ತರ ಆಯ್ಕೆಗಾಗಿ ಕನ್ನಡಿಗ ಅಭ್ಯರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸುವಂತಾಗಲು ಅವಧಿಯನ್ನು ಇನ್ನಷ್ಟು ವಿಸ್ತರಿಸಬೇಕೆಂದು ಕಾಸರಗೋಡಿನ ಕರ್ನಾಟಕ ಸಮಿತಿ ಕೇರಳ ಸರಕಾರವನ್ನು ಒತ್ತಾಯಿಸಿದೆ.

ಕರ್ನಾಟಕ ಸಮಿತಿ ಅಧ್ಯಕ್ಷ ಯು. ಪಿ. ಕುಣಿಕುಲ್ಲಾಯ ಅವರು ದಿನಾಂಕ 9–5–85ರಂದು ಕಳುಹಿಸಿದ ತಂತಿ ಸಂದೇಶ ಮತ್ತು ಅಭಿಪ್ರಾಯಗಳಿಗೆ ಅನುಸಾರವಾಗಿ ಆರೋಗ್ಯ ಇಲಾಖೆ 15–5–85ರಂದು ನಡೆಯಬೇಕಿದ್ದ ಸಂದರ್ಶನವನ್ನು ತಡೆ ಹಿಡಿದು, ಆಯ್ಕೆ ನಿಯಮಗಳಿಗೆ ತಿದ್ದುಪಡಿ ಮಾಡಿದೆ. ಆ ತಿದ್ದುಪಡಿ ಪ್ರಕಾರ ಎಸ್. ಎಸ್. ಎಲ್. ಸಿ. ಯಲ್ಲಿ ಕನ್ನಡ ಭಾಷೆಯಲ್ಲಿ ಶೇಕಡಾ 45 ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗುತ್ತಾರೆ. ಸಂದರ್ಶನವನ್ನು 31–5–85ಕ್ಕೆ ಮುಂದೂಡಲಾಗಿತ್ತು.

ಆದರೆ ಆ ಬಗ್ಗೆ ಕಾಸರಗೋಡು ತಾಲೂಕಿನಲ್ಲಿರುವ ಯಾವುದೇ ಕನ್ನಡ ವಾರ್ತಾಪತ್ರಿಕೆಗಳಲ್ಲಿ ಇಲಾಖೆಯು ಪ್ರಕಟಣೆ ನೀಡದಿರುವುದರಿಂದ ಮತ್ತು ಕರ್ನಾಟಕ ಸಮಿತಿ ಅಧ್ಯಕ್ಷರಿಗೆ ಉತ್ತರ ಬರೆಯದಿದ್ದುದರಿಂದ ಆಯ್ಕೆ ನಿಯಮದ ತಿದ್ದುಪಡಿ ಪ್ರಚಾರ ಲಭಿಸದೆ ವ್ಯರ್ಥವಾಗಿ ಹೋಗುವಂತಾಗಿದೆ ಎಂದು ಸಮಿತಿಯ ಪ್ರಕಟಣೆಯೊಂದು ಹೇಳಿದೆ.

ಸರಕಾರ ನಿಜವಾಗಿಯೂ ನ್ಯಾಯ ಒದಗಿಸಬೇಕೆಂಬ ಅಭಿಲಾಷೆ ಹೊಂದಿದ್ದರೆ ಸಂದರ್ಶನ ಅವಧಿಯನ್ನು ಇನ್ನಷ್ಟು ಮುಂದೂಡಿ, ಕನ್ನಡಿಗ ಅಭ್ಯರ್ಥಿಗಳಿಂದ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿ ಕನ್ನಡ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಬೇಕೆಂದು ಸಮಿತಿ ಅಧ್ಯಕ್ಷ ಕುಣಿಕುಲ್ಲಾಯ ಒತ್ತಾಯಿಸಿದ್ದಾರೆ.

ಉಚಿತ ಬಿದಿರು ವಿತರಣೆ

ಸುಳ್ಯ, ಜೂ. 3– ಇಲ್ಲಿನ ಹರಿಜನ–ಗಿರಿಜನ– ವಂಗಡದ ಜನರ ಗೃಹೋಪಯೋಗಕ್ಕಾಗಿ ಅರಣ್ಯ ಇಲಾಖೆ ಆಶ್ರಯದಲ್ಲಿ ಇತ್ತೀಚೆಗೆ ಹಸಿ ಬಿದಿರುಗಳನ್ನು ಉಚಿತವಾಗಿ ವಿತರಿಸಲಾಯಿತು. ಸ್ಥಳೀಯ ಅರಣ್ಯ ಇಲಾಖೆ ಕಚೇರಿಯಲ್ಲಿ ಅರಣ್ಯ ಅಧಿಕಾರಿಗಳು ಮತ್ತು ಊರ ಪ್ರಮುಖರ ಉಪಸ್ಥಿತಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ವಿತರಣಾ ಕಾರ್ಯಕ್ರಮ ನಡೆಯಿತು.

ಬಸ್ಸು ಉರುಳಿ ಹಲವರಿಗೆ ಗಾಯ

ಸುಳ್ಯ, ಜೂ 3– ಇಲ್ಲಿನ ಕೋಲ್ಚಾರಿನ ಸಮೀಪ ಕಳೆದ ಗುರುವಾರ ರಾಜ್ಯ ರಸ್ತೆ ಸಾರಿಗೆ ಬಸ್ಸೊಂದು ಹತೋಟಿ ತಪ್ಪಿ ಉರುಳಿ ಬಿದ್ದ ಪರಿಣಾಮವಾಗಿ ಅನೇಕ ಪ್ರಯಾಣಿಕರು ಗಾಯಗೊಂಡರು. ಮಹಿಳೆಯೋರ್ವರ ಕೈ ಮೂಳೆ ಮುರಿದಿದೆ. ಬಸ್ಸು ಕಂಡಕ್ಟರ್‌ಗೆ ತೀವ್ರ ಗಾಯವಾಗಿದೆ. ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ವರ್ಣಶ್ರೀ ಕಲಾರಂಗ

ಮಂಗಳೂರಿನ ವರ್ಣಶ್ರೀ ಕಲಾರಂಗ ಶರವು ಇದರ 4ನೇ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಯೆಲ್ಲೂರು ಉಮೇಶ ರಾವ್ ಅವರ ಅಧ್ಯಕ್ಷತೆಯಲ್ಲಿ ಯು. ಬಿ. ಯಂ. ಸಿ. ಹೈಯರ್ ಪ್ರೈಮರಿ ಶಾಲೆಯಲ್ಲಿ ಜರಗಿತು.

ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಶಾರದಾ ಶಾಸ್ತ್ರಿ (ಅಧ್ಯಕ್ಷೆ), ಸ್ಮಿತಾ ಜಿ. ತೋನ್ಸೆ (ಉಪಾಧ್ಯಕ್ಷೆ), ದಯಾನಂದ ಶರವು (ಉಪಾಧ್ಯಕ್ಷ), ಯಂ. ಜನಾರ್ದನ ಗಟ್ಟಿ (ಕಾರ್ಯದರ್ಶಿ) ಶಶಿಧರ ಬಿಜೈ [illegible] ಯಂ. ನಾಗೇಶ್

A reputed chain of Restaurants
at Bangalore requires suitable space in a commercial locality for opening a new branch at Mangalore. Interested parties may contact:

HOTEL R. R. Brigades
55/1, Church Street,
Bangalore-560 001.
Phone: 563060





ಮುಂಗಾರು
ಶನಿವಾರ, ಅಕ್ಟೋಬರ್ 26, 1985

ಈ ಕಸರತ್ತು ನಿಲ್ಲಲಿ

ಆಕ್ರಮಣಕಾರೀ ನೀತಿಯನ್ನು ಪಾಕಿಸ್ತಾನ ಇನ್ನೂ ಬಿಟ್ಟಂತಿಲ್ಲ. ಗಡಿಯಲ್ಲಿ ಆಗಾಗ್ಗೆ ಅತಿಕ್ರಮಣ, ಪಂಜಾಬಿನ ಭಯೋತ್ಪಾದಕರಿಗೆ ಆಶ್ರಯ. ಜತೆಗೆ ಪರಮಾಣು ಬಾಂಬ್ ತಯಾರಿಕೆಗೆ ತೀವ್ರ ಸನ್ನಾಹ. ಭಾರತ ಅವರ ಪಾಲಿಗೆ ಸಿಂಹಸ್ವಪ್ನ. ಸದಾ ಭಾರತದ ಮೇಲೆ ಕಾಕ ದೃಷ್ಟಿ. ಅಸ್ತಿತ್ವದಂದಿನಿಂದ ಅದು ನಡೆದು ಬಂದ ದಾರಿಯೇ ಅದು. ಮೂರು ಸಮರಗಳಿಂದ ಮುಗ್ಗಾಗಿದ್ದರೂ ಭಾರತವನ್ನು ಮೆಟ್ಟುವ ಭ್ರಮೆ ಹರಿದಿಲ್ಲ.

ಪಾಕ್ ಗಡಿಯಿಂದ ಭಾರತಕ್ಕೆ ಭಯೋತ್ಪಾದಕರು ದಿನನಿತ್ಯ ನುಸುಳುತ್ತಿದ್ದಾರೆ. ಜಿಯಾ ಜತೆ ನಡೆದ ಚರ್ಚೆ ಕಾಲದಲ್ಲಿ ರಾಜೀವಗಾಂಧಿ ಅವರಿಂದ ಸಹಜವಾಗಿಯೇ ಈ ವಿಷಯದ ಪ್ರಸ್ತಾಪ. ಜಿಯಾ ಅವರಿಂದ ನಿರಾಕರಣೆ. ಅಷ್ಟೇ ಅಲ್ಲ, ಭಾರತದ ತಲೆಯ ಮೇಲೇ ಗೂಬೆ ಕೂರಿಸಲು ಯತ್ನ. ಭಾರತದ ಗಡಿಯಿಂದಲೇ ಆಕ್ರಮಣಕಾರರು ಪಾಕ್‌ಗೆ ನುಸುಳುತ್ತಿದ್ದಾರಂತೆ.

ಪಾಕಿಸ್ತಾನಕ್ಕೆ ಅಮೆರಿಕದ ಕುಮ್ಮಕ್ಕು ಇದ್ದದ್ದೇ. ಭಾರತ, ರಷ್ಯಗಳ ವಿರುದ್ಧ ಪಾಕಿಸ್ತಾನವನ್ನು ಎತ್ತಿ ಕಟ್ಟುವುದೇ ಅವರ ಎಂದಿನ ನೀತಿ. ವಿನಾಶಕಾರೀ ಅಸ್ತ್ರಗಳ ಧಾರಾಳದಾನ, ಪಾಕ್ ಬಲ ವರ್ಧಿಸಿದರೆ ಅಣುಬಾಂಬ್ ತಯಾರಿಕೆ ಬಯಕೆಯನ್ನು ಅದು ತ್ಯಜಿಸಬಹುದೆಂಬ ನೆಪ. ಹಾಗೆ ನೋಡಿದರೆ ಪಾಕ್ ಅತಿಕ್ರಮಣ ನೀತಿಗೆ ನೀರೆರೆದದ್ದೇ ಅಮೆರಿಕ. ತಾನು ಪೂರೈಕೆ ಮಾಡಿದ ಶಸ್ತ್ರಾಸ್ತ್ರಗಳನ್ನು ಭಾರತದ ವಿರುದ್ಧ ಪಾಕ್ ಬಳಸಬಹುದೆಂಬುದು ಅವರ ಹಳೆಯ ಡಂಗುರ. ಇದು ಪೊಳ್ಳು ಆಶ್ವಾಸನೆ ಎನ್ನುವುದು ಎಲ್ಲರಿಗೂ ಸ್ಪಷ್ಟ. ಪಾಕ್ ಅಣುಬಾಂಬ್ ತಯಾರಿಕೆ ಇಚ್ಛಿಸುತ್ತಿಲ್ಲವೆಂದು ಮತ್ತೆ ಅದು ಶಂಖ ಊದುತ್ತಿದೆ. ಪರಸ್ಪರ ಸಹಕಾರದಿಂದಲೇ ಈ ವಿಷಯಗಳನ್ನು ಬಗೆಹರಿಸಿಕೊಳ್ಳಬೇಕಂತೆ. ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ.

ಹತ್ತು ವರ್ಷಗಳಿಂದ ಭಾರತದ ಸಂಯಮ. ಪೋಖರಾನ್‌ನಲ್ಲಿ ಅಣುಶಕ್ತಿಯ ಪರೀಕ್ಷಾ ಪ್ರಯೋಗ. ಆದರೂ ಅಣುಬಾಂಬ್ ತಯಾರಿಕೆಗೆ ತಲೆ ಹಾಕಲೇ ಇಲ್ಲ. ಅಣುಬಾಂಬ್ ತಯಾರಿಕೆ ಬೇಡ ಎಂಬ ಸ್ಪಷ್ಟ ನಿಲುವು. ಅದನ್ನು ಸಾರಿದ್ದು ಸಾವಿರ ಸಾರಿ. ಅಮೆರಿಕ ಅದನ್ನು ತಿಳಿದೂ ತಿಳಿಯದಂತಿದೆ. ಅವರ ದೃಷ್ಟಿಯಲ್ಲಿ ಇಬ್ಬರೂ ಸಮ. ಅಣುಬಾಂಬ್ ತಯಾರಿಕೆಗೆ ಎರಡೂ ರಾಷ್ಟ್ರಗಳು ಸನ್ನಾಹ ನಡೆಸುತ್ತಿವೆ ಎನ್ನುವ ಶಂಕೆ. ಸತ್ಯ ಬೇರೆಯೇ ಇದೆ ಎನ್ನುವುದು ಅದಕ್ಕೆ ತಿಳಿದೇ ಇದೆ. ಭಾರತದ ಪಟ್ಟಿಗೆ ಕುರುಡು ಕಣ್ಣು.

ಪಾಕ್‌ಗೆ ಅಗತ್ಯಕ್ಕಿಂತ ಹೆಚ್ಚು ಶಸ್ತ್ರಾಸ್ತ್ರ ನೆರವು. ಅದನ್ನು ನಿಲ್ಲಿಸುವ ಪ್ರಸ್ತಾಪವೇ ಇಲ್ಲ. ಭಾರತ ಪ್ರಸ್ತಾಪಿಸಿದರೂ ಆ ಪ್ರಶ್ನೆಯನ್ನು ತೇಲಿಸಿ ಬಿಟ್ಟದ್ದೇ. ಅಣ್ವಸ್ತ್ರ ಚಟುವಟಿಕೆ ನಿಲ್ಲಿಸಲು ಪಾಕ್ ಜತೆ ವ್ಯವಸ್ಥೆ ಮಾಡಿಕೊಳ್ಳಬೇಕಂತೆ. ರಾಜೀವ್ ಗಾಂಧಿಗೆ ಬೆಣ್ಣೆ ಮಾತು. ಈ ಪ್ರದೇಶದ ಶಾಂತಿ ಸಾಧಕರಾಗಬೇಕಂತೆ. ಎಲ್ಲ ಪೊಳ್ಳು ಹಾರೈಕೆ ಎನ್ನುವುದು ಸ್ಪಷ್ಟ.

ಪಾಕಿಸ್ತಾನದ ಅಣುಬಾಂಬ್ ವಿಪತ್ತಿನ ಎದುರು ಭಾರತ ಕಣ್ಣುಚ್ಚಿ ಕುಳಿತುಕೊಳ್ಳುವಂತಿಲ್ಲ. ತಾಳ್ಮೆಗೂ ಮಿತಿ ಇದ್ದೇ ಇದೆ. ಇದೂ ಈ ಮಾರಕಾಸ್ತ್ರ ತಯಾರಿಕೆಗೆ ಮುಂದಾಗಬಹುದು. ರಾಷ್ಟ್ರದ ರಕ್ಷಣೆಗೆ ಅದು ಅನಿವಾರ್ಯ, ಮತ್ತೆ ಕೊನೆಯೇ ಇಲ್ಲ. ಸಮಗ್ರ ಆಗ್ನೇಯ, ಪಶ್ಚಿಮ ಏಷ್ಯಕ್ಕೇ ಕೇಡು ಕಟ್ಟಿಟ್ಟದ್ದು. ನಾಗಸಾಕಿ, ಹಿರೋಷಿಮಾಗಳ ನೆನಪು ಜನಮನದಿಂದ ಇನ್ನೂ ಮಾಸಿಲ್ಲ. ಆದರೆ ಸೈನಿಕ ಬಲವನ್ನೇ ನೆಚ್ಚಿಕೊಂಡಿರುವ ರಾಷ್ಟ್ರಗಳಿಗೆ ಇದು ಹೊಳೆಯುವಂತಿಲ್ಲ.

ಭಾರತ, ಪಾಕ್ ಎರಡೂ ಬಡ ರಾಷ್ಟ್ರಗಳೇ. ಒಪ್ಪೊತ್ತಿನ ಕೂಳಿಗೂ ಗತಿಯಿಲ್ಲದ ಕೋಟ್ಯಂತರ ಮಂದಿ. ಹಿಟ್ಟಿಲ್ಲದ ಹೊಟ್ಟೆ. ಜುಟ್ಟಿಗೇಕೆ ಮಲ್ಲಿಗೆ? ಪ್ರಜಾಸತ್ತೆಗೆ ಬದ್ಧವಾಗಿರುವ ಭಾರತಕ್ಕೇನೋ ಇದು ಅರ್ಥವಾಗುತ್ತಿದೆ. ಆದರೆ ಬಂದೂಕಿನ ಬಲದಿಂದ ಜನತೆಯನ್ನು ಮೆಟ್ಟಿ ನಿಲ್ಲುವ ಸರ್ವಾಧಿಕಾರೀ ಶಕ್ತಿಗೆ ಇದು ಅರ್ಥವಾಗಬೇಕು ಹೇಗೆ? ಜನಹಿತಕ್ಕಿಂತ ಅಂತಹ ನಾಯಕರಿಗೆ ಸ್ವಪ್ರತಿಷ್ಠೆಯೇ ಮೇಲು. ಎಂತಲೇ ಜನಹಿತ ಅವರಿಗೆ ಗೌಣ. ಅಮೆರಿಕದ ಶಸ್ತ್ರಾಸ್ತ್ರ ನೆರವಿನಿಂದ ಮದ ಇನ್ನಷ್ಟು ಉಕ್ಕಿದ್ದೇ. ಸಾವಿರ ವರ್ಷಗಳ ಸಮರವನ್ನು ಘೋಷಿಸಿದ ಭುಟ್ಟೊ ಈಗಿಲ್ಲವಾದರೂ ಅವರ ನೀತಿಯನ್ನು ಪಾಕ್ ಬಿಟ್ಟಿಲ್ಲ. ಎಂತಲೇ ಗಡಿಯಲ್ಲಿ ಕಿರುಕುಳ, ಭಯೋತ್ಪಾದಕರ ಜತೆ ಶಾಮೀಲು, ಪರಮಾಣು ಬಾಂಬ್ ತಯಾರಿಕೆಗೆ ಉತ್ಸುಕತೆ.

ಅಮೆರಿಕದ ತಪ್ಪು ನೀತಿಯೇ ಇದಕ್ಕೆ ಹೊಣೆ. ಈ ತಪ್ಪು ನೀತಿ ಅಲಿಪ್ತ ರಾಷ್ಟ್ರಗಳಿಗೆಲ್ಲ ವಿಶದ. ಅಮೆರಿಕದಿಂದ ಅವು ದೂರ ಸರಿಯುತ್ತಿರುವುದೇ ಇದಕ್ಕಾಗಿ. ನೂರಾರು ಬಗೆಯಿಂದ ತಪ್ಪು ನೀತಿಯ ಸಮರ್ಥನೆ. ತಪ್ಪನ್ನು ಒಪ್ಪಿಕೊಂಡು ತನ್ನ ಹಾದಿಯನ್ನು ಸರಿಪಡಿಸಿಕೊಳ್ಳುವ ಇಚ್ಛೆ ಅಮೆರಿಕಕ್ಕೆ ಇದ್ದಂತಿಲ್ಲ. ಪಾಕಿಸ್ತಾನದ ಶಸ್ತ್ರಾಗಾರವನ್ನು ತುಂಬಿಸುವುದೇ ಅವರ ಆಶಯ. ಪರಿಣಾಮದ ಕಡೆಗೆ ಅವರ ಲಕ್ಷ್ಯವಿಲ್ಲ. ಈ ದೃಷ್ಟಿ ಸರಿಯಾಗದಿದ್ದರೆ ಅನಿಷ್ಟ ಫಲ ತಪ್ಪಿದ್ದಲ್ಲ. ಅಮೆರಿಕದ ಹೆಜ್ಜೆಗೆ ತಕ್ಕ ಪಾಕ್ ತಾಳ. ಈ ಕಸರತ್ತು ಇನ್ನು ಸಾಕು. ವಿನಾಶದ ಹಾದಿಯನ್ನು ತುಳಿಯದೆ ಶ್ರೇಯಸ್ಸಿನ ದಾರಿಯಲ್ಲಿ ಪಾಕಿಸ್ತಾನ ಸಾಗಲಿ. ವಿವೇಕ ಜಾಗೃತಗೊಳ್ಳಲಿ.

ಸಮವಸ್ತ್ರ ನೀಡದಿದ್ದರೆ ಮುಷ್ಕರ: ಕೆ.ಇ.ಬಿ ನೌಕರರ ನಿರ್ಧಾರ

ಮಡಿಕೇರಿ, ಅ.25–ಸ್ಥಳೀಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ ಮಾಸಿಕ ಸಭೆಯು ಸಂಘದ ಅಧ್ಯಕ್ಷ ರಂಗಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರುಗಿತು.

ಈ ಸಭೆಗೆ ಕುಶಾಲನಗರದ ಪ್ರಾಥಮಿಕ ಸಮಿತಿ ಪದಾಧಿಕಾರಿಗಳನ್ನು ಹಾಗೂ ಗೋಣಿಕೊಪ್ಪ ಪ್ರಾಥಮಿಕ ಸಮಿತಿ ಪದಾಧಿಕಾರಿಗಳನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು.

1985ರ ಸಮವಸ್ತ್ರವನ್ನು ಇದುವರೆಗೂ ವಿತರಣೆ ಮಾಡದಿರುವುದರ ಬಗ್ಗೆ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಬರೆದು, ಅವರು ಬೆಂಗಳೂರಿಗೆ ಪತ್ರ ಬರೆದರು. ಈ ಬಗ್ಗೆ ಇದುವರೆವಿಗೆ ಯಾವುದೊಂದು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಸಭೆ ಆರೋಪಿಸಿತು.

ನವೆಂಬರ್ 2ರ ಒಳಗಾಗಿ ಸಮವಸ್ತ್ರದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ನವೆಂಬರ್ 6ರಂದು ಸ್ಥಳೀಯ ಸಮಿತಿ ಪದಾಧಿಕಾರಿಗಳು ಮತ್ತು ಪ್ರಾಥಮಿಕ ಸಮಿತಿ ಪದಾಧಿಕಾರಿಗಳು ಇಲ್ಲಿನ ಕಾರ್ಯಪಾಲಕ ಅಭಿಯಂತರರವರ ಕಛೇರಿ ಆವರಣದಲ್ಲಿ ಸಾಮೂಹಿಕ ಧರಣಿ ನಡೆಸುವುದಾಗಿ ಎಚ್ಚರಿಸಿದೆ.

ಬಸ್ ಕಂಡಕ್ಟರನ ಪ್ರಾಮಾಣಿಕತೆ

ಚಿಕ್ಕಪೇಟೆ, ಅ. 25– ಬಸ್ಸಿನಲ್ಲಿಯೇ ಮರೆತು ಇಳಿದ ವೃದ್ಧ ಪ್ರಯಾಣಿಕರೊಬ್ಬರ 600ರೂ. ನಗದು ಹಣ ಹಾಗೂ ಬೆಲೆ ಬಾಳುವ ಸೀರೆಯನ್ನು ಜೋಪಾನವಾಗಿಟ್ಟು ಮತ್ತೆ ವಾರಸುದಾರರಿಗೆ ಮರಳಿಸಿದ ಕಂಡಕ್ಟರ್ ಅವರ ಪ್ರಾಮಾಣಿಕತನ ಇತ್ತೀಚೆಗೆ ವರದಿಯಾಗಿದೆ.

ಸಾಗರದಿಂದ ಉಡುಪಿಗೆ ಗಜಾನನ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ವೃದ್ಧರೊಬ್ಬರು ತಮ್ಮ ಊರಾದ ಮುಂಡಳ್ಳಿಯಲ್ಲಿ ಇಳಿಯುವಾಗ ನಗದು ಹಣ ಮತ್ತು ಸೀರೆಯನ್ನು ಮರೆತು ಇಳಿದಿದ್ದರು. ನಂತರ ಗಮನಿಸಿದ ಕಂಡಕ್ಟರ ಎಸ್.ವಾಸುದೇವ್ ಈ ವಸ್ತುಗಳನ್ನು ಜೋಪಾನವಾಗಿರಿಸಿಕೊಂಡು ಉಡುಪಿಯಿಂದ ಸಾಗರಕ್ಕೆ ಮರಳುವಾಗ ಮುಂಡಳ್ಳಿಯಲ್ಲಿ ವಾರಸುದಾರರಿಗೆ ವಸ್ತುವನ್ನು ಮರಳಿಸಿದರಾಗಿ ತಿಳಿದು ಬಂದಿದೆ.

ದಿವಗಿ: ಗರ್ಭಿಣಿಯ ನಿಗೂಢ ಸಾವು

ಕುಮಟಾ, ಅ. 25 – ಇಲ್ಲಿಗೆ ಸಮೀಪದ ದಿವಗಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಳೆಂದು ಹೇಳಲಾದ ಪೆಟ್ರೋಸಿನಾ ಮರಿಯಾನಾ ಫೆರ್ನಾಂಡಿಸ್ (22) ಇವರ ಸಾವು ಆತ್ಮಹತ್ಯೆಯಲ್ಲ, ಕೊಲೆಯಿರಬಹುದು ಎಂದು ಊರವರ ಗುಸುಗುಸು ಸುದ್ದಿಗಳು ಬಣ್ಣ ಕಟ್ಟಿ ಕುಣಿಯಲಾರಂಭಿಸಿವೆ.

ತನ್ನ ಮಗಳ ಕುತ್ತಿಗೆಯ ಸುತ್ತಲೂ ಬೆರಳಿನ ಗುರುತುಗಳೊಂದಿಗೆ ಕೆನ್ನೆಯ ಮೇಲೆ ಹೊಡೆದ ಗುರುತಿದೆ. ಇದು ತನ್ನ ಮಗಳು ಆತ್ಮಹತ್ಯೆ ಮಾಡಿಕೊಂಡದ್ದಲ್ಲ. ಇದು ಕೊಲೆಯೇ ಇರಬೇಕೆಂದು ಮೃತರ ತಂದೆ ಚಿತ್ರಗಿಯ ಸಲ್ಡಾನಾ ಫೆರ್ನಾಂಡಿಸ್ ಅವರು ವಾದಿಸುತ್ತಾರೆ.

ಕಳೆದ ಒಂದು ವರ್ಷದ ಹಿಂದೆ ನನ್ನ ಮಗಳ ಮದುವೆ ಮರಿಯಾನಾ ಆವಾಸಾ ವೇರಾರೊಡನೆ ನಡೆದಂದಿನಿಂದ ಗಂಡನೊಡನೆ ಅತ್ತಿಗೆ ಜುಲಿಯಾನಾರಿಂದ ಸಹ ತನ್ನ ಮಗಳ ಮೇಲೆ ಸತತ ಹಿಂಸೆ ನಡೆಯುತ್ತಿತ್ತು ಎಂದು ಸಲ್ಡಾನಾ ಹೇಳಿದ್ದಾರೆ.

ಕಳೆದ ಸೆಪ್ಟೆಂಬರ್‌ನಲ್ಲಿ 15 ದಿನದ ಮಟ್ಟಿಗೆ ತನ್ನ ಮಗಳು ತವರು ಮನೆಗೆ ಹಿಂತಿರುಗಿದ್ದಳು. ಆದರೆ 15 ದಿನಕ್ಕೆ ಮರಳಬೇಕಾದವಳು ಒಂದು ದಿನ ಹೆಚ್ಚಿಗೆ ಉಳಿದು ಹೋಗಿದ್ದಳು ಇದನ್ನೇ ಒಂದು ದೊಡ್ಡ ಸಂಗತಿಯನ್ನಾಗಿ ಮಾಡಿ ಆಕೆಯ ಗಂಡನ ಮನೆಯವರು ತನ್ನ ಸಮಾಜದವರನ್ನು ಕೂಡಿಸಿ ನಡೆಸಿದ ಪಂಚಾಯಿತಿಯಲ್ಲಿ ಅವಳು ಕ್ಷಮೆ ಕೋರುವಂತೆ ಮಾಡಿದ್ದಾರೆಂದು ಆಕೆಯ ತಂದೆ ದೂರಿದ್ದಾರೆ.

ತನ್ನ ಮಗಳು 5 ತಿಂಗಳ ಗರ್ಭಿಣಿ ಆಗಿದ್ದಳು. ಕೆಲ ದಿನಗಳ ಹಿಂದೆ ಕುಮಟಾಕ್ಕೆ ಬಂದಾಗ ತಾಯಿಯನ್ನು ಭೇಟಿಯಾಗಿ ಮರಳಿದ್ದಳು; ದಿವಗಿ ಊರಿನ ಕೆಲವರು, ನನ್ನ ಮಗಳ ಗಂಡನ ಮನೆಯವರು ಅವಳನ್ನು ಕೊಂದು ಬಾವಿಗೆ ಎಸೆದಿರಬೇಕೆಂದು ಹೇಳುತ್ತಾರೆಂದು ಮೃತಳ ತಂದೆಯೇ ಹೇಳುತ್ತಾರೆ.

ಪೊಲೀಸ್ ವರದಿಯಲ್ಲಿ ಇದು ಆತ್ಮಹತ್ಯೆಯೆಂದು ದಾಖಲಾಗಿದ್ದರೂ, ಈ ಊರ ಜನರ ಬಾಯಲ್ಲಿ ಕೊಲೆ ಎಂದು ಕೇಳಿ ಬರುತ್ತಿದೆ. ಈ ಕುರಿತು ಕುಮಟಾದ ಪೊಲೀಸ್ ಇಲಾಖೆ ತನಿಖೆ ನಡೆಸುತ್ತಿದೆ.

ಹೊನ್ನಾವರ: ಸಾರಿಗೆ ವ್ಯವಸ್ಥೆ ಸರಿಪಡಿಸಲು ನಾಗರಿಕರ ಮನವಿ

ಹೊನ್ನಾವರ, ಅ. 25– ಇಲ್ಲಿನ ಸಾರಿಗೆ ವ್ಯವಸ್ಥೆಯನ್ನು ತಕ್ಷಣ ಸರಿ ಪಡಿಸದಿದ್ದಗೆ ಸಾರ್ವಜನಿಕರು ಪ್ರತಿಭಟನೆ ಕೈಗೊಳ್ಳುವ ಪರಿಸ್ಥಿತಿ ಬರಬಹುದು ಎಂದು ನಗರದ ನಾಗರಿಕರು, ವ್ಯಾಪಾರಸ್ಥರ ಸಂಘ ಹಾಗೂ ಸ್ಥಳೀಯ ಸೇವಾ ಸಂಸ್ಥೆಗಳು ಒಟ್ಟಾಗಿ ರಸ್ತೆ ಸಾರಿಗೆ ನಿಗಮಕ್ಕೆ ಮನವಿ ಸಲ್ಲಿಸಿರುವುದಾಗಿ ತಿಳಿದು ಬಂದಿದೆ.

ಅವರು ಮನವಿ ಪತ್ರದಲ್ಲಿ ನಮೂದಿಸಿರುವಂತೆ: ಈ ಸ್ಥಳದಿಂದ ಗ್ರಾಮಾಂತರ ಪ್ರದೇಶಗಳಿಗೆ ಸುಗಮ ಸಾರಿಗೆ ಸೌಲಭ್ಯಕ್ಕಾಗಿ ಹೊನ್ನಾವರದಲ್ಲಿಯೇ ಒಂದು ಡಿಪ್ಪೋ ತೆರೆಯಬೇಕು. ಈ ಕೊಳಕು ತುಂಬಿದ ಬಸ್ ನಿಲ್ದಾಣ ಆವರಣಕ್ಕೆ ಡಾಂಬರು ಹಾಕಿಸಬೇಕು. ಬೆಂಗಳೂರು, ಮಂಗಳೂರು ಹುಬ್ಬಳ್ಳಿ ಮತ್ತು ಶಿವಮೊಗ್ಗ ಮೊದಲಾದ ಪ್ರಮುಖ ನಗರಗಳಿಗೆ ಹೊನ್ನಾವರದಿಂದಲೇ ಪ್ರಾರಂಭವಾಗುವ ನೇರ ಬಸ್ಸು ಬಿಡಬೇಕು. ಕರ್ಕಿ ಮತ್ತು ಕಾಸರಗೋಡಿನಿಂದ ಹೊನ್ನಾವರ ಕಾಲೇಜಿನ ತನಕ ಸಿಟಿ ಬಸ್ ಮಾದರಿಯ ಬಸ್ಸುಗಳನ್ನು ಓಡಿಸಬೇಕು ಹಾಗೂ ಇನ್ನಿತರ ಬೇಡಿಕೆಗಳು ಈ ಮನವಿಯಲ್ಲಿ ಸೇರಿವೆ.

ಬಸ್ ದರ ಏರಿಕೆ: ಎ. ಬಿ. ವಿ. ಪಿ. ಪ್ರತಿಭಟನೆ

ಚಿಕ್ಕಮಗಳೂರು, ಅ. 25– ಬಸ್‌ದರ ಏರಿಕೆ ಹಾಗೂ ವಿದ್ಯುತ್ ದರ ಏರಿಕೆಯ ವಿರುದ್ಧ ಎ. ಬಿ. ವಿ. ಪಿ. ಕಾರ್ಯಕರ್ತರು ಇತ್ತೀಚೆಗೆ ಇಲ್ಲಿನ ಬಸ್ ನಿಲ್ದಾಣದಲ್ಲಿ ಬಸ್ಸುಗಳನ್ನು ತಡೆಯುವುದರ ಮೂಲಕ ಪ್ರತಿಭಟನೆ ವ್ಯಕ್ತಪಡಿಸಿದರು.

ಅರ್ಧ ಗಂಟೆ ಕಾಲ ಬಸ್ಸುಗಳನ್ನು ತಡೆಹಿಡಿದ ಕಾರ್ಯಕರ್ತರು ಹೊಸ ವೈದ್ಯಕೀಯ ಕಾಲೇಜಿಗೆ ಅನುಮತಿ ಕೊಟ್ಟಿರುವುದನ್ನು ವಿರೋಧಿಸಿ ಘೋಷಣೆ ಕೂಗುತ್ತಿದ್ದರು. ರಸ್ತೆ ಸಾರಿಗೆಯಲ್ಲಿ ಹಣ ಸೋರಿ ಹೋಗುವುದನ್ನು ತಡೆಯುವ ಬದಲು ಬಸ್ ದರ ಏರಿಸಿ ಪ್ರಯಾಣಿಕರ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ರಾಜ್ಯದ ಮುಖ್ಯ ಮಂತ್ರಿಯವರಿಗೆ ಅರ್ಪಿಸಿದ ಮನವಿ ಪತ್ರದಲ್ಲಿ ತಿಳಿಸಿದೆ.

ಹೊಸದಾಗಿ ಪ್ರಾರಂಭಿಸಿರುವ ಎರಡು ವೈದ್ಯಕೀಯ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ವಸೂಲಿಗೆ ಮನ್ನಣೆ ಇತ್ತಿರುವುದನ್ನು ಎ. ಬಿ. ವಿ. ಪಿ. ಖಂಡಿಸಿದೆ.

‘ವಿಜ್ಞಾನದ ಇಂದ್ರಜಾಲ ಮನಸ್ಸನ್ನು ತೇಲಿಸುತ್ತದೆ’

ಮಡಿಕೇರಿ, ಅ. 25–ಗಣಿತ, ಭೌತ ...

ಇತ್ತೀಚೆಗೆ ಕೊಡಗಿನ ಗೋಣಿಕೊಪ್ಪಲ್ ...

ಮುಂಗಾರು
ಭಾನುವಾರ, ಅಕ್ಟೋಬರ್ 20, 1985

ಮನುಕುಲದ ಮೋರೆಯ ಕಳಂಕ

ದಕ್ಷಿಣ ಆಫ್ರಿಕಾದ ಕರಿಯರ ಮತ್ತು ಇತರ ವರ್ಣೀಯರ ಸಂಕಟ ಪರಂಪರೆಗಳಿಗೆ ಇನ್ನೂ ಮುಕ್ತಾಯದ ಸೂಚನೆಗಳು ಕಾಣಸುತ್ತಿಲ್ಲ. ಅಲ್ಲಿನ ಕರಿಯ ಹೋರಾಟಗಾರ ನಾಯಕ. ತರುಣ ಕವಿ ಬೆಂಜಮಿನ್ ಮೊಲಾಯಿಸ್‌ರನ್ನು ಕೊಲೆ ಆಪಾದನೆಯೊಂದರ ಸಂಬಂಧ ಗಲ್ಲಿಗೇರಿಸಲಾಗಿದೆ. ಈ ಕೃತ್ಯದ ಮೂಲಕ ಅಲ್ಲಿನ ವರ್ಣೀಯ ಸರಕಾರ ಇಡಿಯ ಜಗತ್ತಿನ ಮಾನವ ಜನಾಂಗದ ಮನಸ್ಸಾಕ್ಷಿಯ ಮೇಲೆ ಬರ್ಬರ ದಾಳಿ ನಡೆಸಿದಂತಾಗಿದೆ,

ದಕ್ಷಿಣ ಆಫ್ರಿಕದ ಬಿಳಿಯರ ಪೂರ್ವಜರು ಯುರೋಪಿನಿಂದ ಎಷ್ಟೋ ಶತಮಾನಗಳ ಹಿಂದೆ ಬಂದವರು. ಮುಖ್ಯವಾಗಿ ಬ್ರಿಟಿಷ್ ಮೂಲದವರಾಗಿರುವ ಈ ಬಿಳಿಯ ಜನಸಮುದಾಯದಲ್ಲಿ ಯುರೋಪಿನ ಇತರ ಕಡೆಗಳಿಂದ ಬಂದವರೂ ಇದ್ದಾರೆ. ಈ ವಸಾಹತು ಕೈಯಿಂದ ಕೈಗೆ ಬದಲಾಯಿಸಿ ಅಂತಿಮವಾಗಿ ಬ್ರಿಟಿಷರ ಕೈಗೆ ಬಂತು. ಬ್ರಿಟಿಷರು ಈ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣ ಆಫ್ರಿಕದಲ್ಲಿ 'ಗಣರಾಜ್ಯ'ವೊಂದನ್ನು ನೆಲೆಗೊಳಿಸಿ ಅಧಿಕಾರ ಹಸ್ತಾಂತರಿಸಿದರು. ಆದರೆ ಅಲ್ಲಿ ಜನತಂತ್ರದ ಸ್ಥಾಪನೆ ಆಗಲಿಲ್ಲ, ದಕ್ಷಿಣ ಆಫ್ರಿಕದ ಮೂಲನಿವಾಸಿಗಳಾದ ನೀಗ್ರೋಗಳಿಗೂ ಬಿಳಿಯರಂತೆಯೇ ಶತಮಾನದ ಹಿಂದೆ ಬಂದ ಏಷ್ಯದವರಿಗೂ ಅಧಿಕಾರ ವ್ಯವಸ್ಥೆಯಲ್ಲಿ ಅಧಿಕಾರವಾಣಿ ಸಿಗಲಿಲ್ಲ.

ದಕ್ಷಿಣ ಆಫ್ರಿಕ ರಾಜ್ಯಾಂಗದನ್ವಯ ಅಲ್ಲಿನ ಬಿಳಿಯರಿಗೆ ಮಾತ್ರವೇ ಮತದಾನದ ಹಕ್ಕು. ಸುಮಾರು ಶೇಕಡಾ 15ರಷ್ಟು ಮಾತ್ರವೇ ಇರುವ ಈ ಮಂದಿ ಇಡಿಯ ಜನಸಮುದಾಯವನ್ನು ಆಳುತ್ತಿದ್ದಾರೆ. ದೊಡ್ಡ ನಗರಗಳ ಎಲ್ಲಾ ಸೊತ್ತುಗಳಿಗೂ ಬಿಳಿಯರೇ ಮಾಲೀಕರು. ಆ ದೇಶದ ಸಮೃದ್ಧವಾದ ಚಿನ್ನದ ಗಣಿಗಳಿಗೂ ಅವರೇ ಮಾಲೀಕರು. ಎಲ್ಲಾ ಕಾರ್ಖಾನೆಗಳ ಪತಿಗಳೂ ಅವರೇ ಆಗಿದ್ದಾರೆ.

ದಕ್ಷಿಣ ಆಫ್ರಿಕದಲ್ಲಿ ಶೇಕಡಾ 75ರಷ್ಟು ಅಂದರೆ ಈಗ ಸುಮಾರು ಎರಡೂವರೆ ಕೋಟಿ ನೀಗ್ರೋಗಳಿದ್ದಾರೆ, ಇವರೆಲ್ಲ ಅಲ್ಲಿ ಎರಡನೆ ದರ್ಜೆ ಪ್ರಜೆಗಳು. ನಗರಗಳಲ್ಲಿ ಅವರಿಗೆ ಸೀಮಿತ ಪ್ರದೇಶಗಳಿಗೆ ಮಾತ್ರವೇ ಪ್ರವೇಶ. ಎಲ್ಲೆಂದರಲ್ಲಿ ವಾಸದ ಹಕ್ಕು ಅವರಿಗಿಲ್ಲ, ಸರಕಾರ ನಿಗದಿ ಪಡಿಸಿದ ವಸತಿ ಪ್ರದೇಶಗಳಲ್ಲಿ ವಾಸಿಸಬೇಕು. ದುಡಿಮೆಗೆ ಮಾತ್ರವೇ ಹೊರ ಹೋಗಬೇಕು. ಮನ ಬಂದಂತೆ ತಿರುಗುವಂತಿಲ್ಲ. ಅವರಿಗಾಗಿಯೇ ಪ್ರತ್ಯೇಕ ಹೊಟೇಲುಗಳೂ ಮಳಿಗೆಗಳೂ ಚಿತ್ರಮಂದಿರಗಳೂ ಇವೆ. ಅವರ ಮಕ್ಕಳಿಗಾಗಿಯೇ ಪ್ರತ್ಯೇಕ ಶಾಲೆಗಳಿವೆ. ಬಿಳಿಯರ ಶಾಲೆಗಳಿಗೆ ಕರಿಯ ಮಕ್ಕಳಿಗೆ ಪ್ರವೇಶವಿಲ್ಲ.

ಹೀಗೆ ತಾವು ಹುಟ್ಟಿ ಬೆಳೆದ ನೆಲದಲ್ಲೇ ಕರಿಯರೂ ಇತರ ವರ್ಣೀಯರೂ ಪರದೇಶಿಗಳಾಗಿದ್ದಾರೆ. ಶತಮಾನಗಳ ಹಿಂದೆ ಬಂದು ನೆಲೆಯೂರಿದ ಬಿಳಿಯ ಕುಟುಂಬಗಳ ಸಹಿತ ಎಲ್ಲರೂ ಅಲ್ಲಿನ ಮಣ್ಣಿನ ಮಕ್ಕಳು ಎಂಬುದನ್ನು ಎಲ್ಲ ಜನವಿಭಾಗಗಳೂ ಸ್ವೀಕರಿಸಲು ಸಿದ್ಧರಿರಬೇಕು. ದಕ್ಷಿಣ ಆಫ್ರಿಕದಲ್ಲಿ ಇಂದು ಹಾಗಾಗಿಲ್ಲ. ಮತವನ್ನೂ ಹಣವನ್ನೂ ಕೋವಿಯನ್ನೂ ತಮ್ಮ ಸೊತ್ತಾಗಿ ಮಾಡಿಕೊಂಡ ಬಿಳಿಯರು ಅವು ಮೂರನ್ನೂ ರಕ್ಷಿಸಿಕೊಳ್ಳಲು ಅಮಾನವೀಯ ನಡವಳಿಕೆಯನ್ನು ಪ್ರದರ್ಶಿಸುತ್ತಿದ್ದಾರೆ. ಕರಿಯರು ಕಳೆದ ಕಾಲು ಶತಮಾನದಿಂದ ನಡೆಸುತ್ತಿರುವ ಅಹಿಂಸಾತ್ಮಕ ಹೋರಾಟವನ್ನು ಹಿಂಸೆಯಿಂದ ದಮನಿಸುತ್ತಿದ್ದಾರೆ. ಮತ ಹಕ್ಕು ಕೇಳುವ ಕರಿಯರಿಗೆ ಗುಂಡಿನ ಉತ್ತರ ಸಿಗುತ್ತಿದೆ.

ಜಗತ್ತಿನ ಒತ್ತಡಕ್ಕೆ ಮಣಿದು, ಒತ್ತಿನ ಅಂಗೋಲ, ಮೊಜಾಂಬಿಕ್, ರೊಡೇಶ್ಯಾ ಎಲ್ಲವೂ ಬಿಳಿಯರ ನೊಗವನ್ನು ಕಿತ್ತೊಗೆದು ಜನ ಪ್ರಾತಿನಿಧ್ಯದ ಜನತಂತ್ರದ ವ್ಯವಸ್ಥೆಯನ್ನಳವಡಿಸಿಕೊಂಡು ಸ್ವತಂತ್ರವಾದಾಗ ಬೆಚ್ಚಿದ ಬಿಳಿಯ ಸರಕಾರ ಸಂಸತ್ತಿನಲ್ಲಿ ಮೂರು ಸದನಗಳನ್ನೇರ್ಪಡಿಸಿ ಕರಿಯರಿಗೊಂದು, ವರ್ಣೀಯರಿಗೊಂದು ಹಾಗೂ ಬಿಳಿಯರಿಗೊಂದು ವ್ಯವಸ್ಥೆ ಮಾಡಿತು. ಈ ವ್ಯವಸ್ಥೆಯಲ್ಲಿ ಕರಿಯರ ಹಾಗೂ ವರ್ಣೀಯರ ಸದನಗಳಿಗೆ ವಿವಿಧ ವಿಷಯಗಳಲ್ಲಿ ಶಿಫಾರಸು ಸಲ್ಲಿಸುವ ಅಧಿಕಾರ ಮಾತ್ರವೇ ಇರುತ್ತದೆ. ಶಾಸನ ನಿರ್ಮಾಣದ ಎಲ್ಲಾ ಅಧಿಕಾರಗಳೂ ಬಿಳಿಯರ ಸದನಕ್ಕೆ ಸೇರಿದ್ದು.

ಅಹಿಂಸಾತ್ಮಕ ಹೋರಾಟದಿಂದ ಕೆಲಸ ಆಗದು ಎಂಬ ತೀರ್ಮಾನಕ್ಕೆ ಅಲ್ಲಿನ ಕರಿಯರು ಇಂದು ಬರುತ್ತಿದ್ದಾರೆ, ಬಿಳಿಯ ಅಲ್ಪಸಂಖ್ಯಾತರು ಅಧಿಕಾರವನ್ನು ಬಹುಮತೀಯರಿಗೆ ತಟ್ಟೆಯಲ್ಲಿಟ್ಟು ಕೊಡುವುದಿಲ್ಲವೆಂಧು ಅವರಿಗೆ ಗೊತ್ತಿದೆ. ಅವರು ಜಗತ್ತಿನ ಬೆಂಬಲವನ್ನು ಕೋರುತ್ತಿದ್ದಾರೆ.

ದಕ್ಷಿಣ ಆಫ್ರಿಕದ ಹೋರಾಟಗಾರರಿಗೆ ಸರಕು-ಸರಂಜಾಮುಗಳ, ಹಣ ಸಂಪನ್ಮೂಲದ ನೆರವು ಬೇಕು. ಜತೆಗೆ ಆ ದೇಶದ ಬಿಳಿಯ ಸರಕಾರವನ್ನು ಎತ್ತಿ ಹಿಡಿಯುತ್ತಿರುವ ಅಮೆರಿಕದ ಮೇಲೆ ರಾಜಕೀಯ ಒತ್ತಡ ಹೇರುವುದರಿಂದ ಬಹಳಷ್ಟನ್ನು ಸಾಧಿಸುವುದು ಸಾಧ್ಯ. ಅದನ್ನು ಕೂಡ ಜಗತ್ತಿನ ಜನಸಮುದಾಯ ಮಾಡಬೇಕು.

ದಕ್ಷಿಣ ಆಫ್ರಿಕದಲ್ಲಿ ನಿಜವಾದ ಜನತಂತ್ರ ಬಂದಾಗಲಷ್ಟೆ ಮನುಕುಲದ ಮೋರೆಯಲ್ಲಿರುವ ಕರಾಳ ಕಲೆಯೊಂದು ಒರೆಸಿಹೋದೀತು.

...ು ಜಾಹಿರಾತಿನಲ್ಲಿ ವಿದ್ಯಾರ್ಥಿಗಳು

...ಕ ಓದುವ ಬದಲು ...ಬುಕ್ ಓದಿದರು

...ಕಳೆಯುವಂತೆ ಖುಷಿಯಾಗಿ ಕಾಲಕಳೆ ...ುವ ಆಲಸೀತನವನ್ನು ಸರಕಾರ ...ಡಿದೆ.

ಕುಮಟಾ ತಾಲೂಕಿನ ಒಂದು ಶಾಲೆ ...ಲ್ಲಿನ 3ನೆಯ ತರಗತಿಯಲ್ಲಿರುವ 70 ...ರ್ಥಿಗಳಲ್ಲಿ 66 ಸಮಾಜ ಪರಿಚಯ, ವಿಜ್ಞಾನ, 60 ಗಣಿತ ಮತ್ತು 47 ...ಡ ಪಠ್ಯ ಪುಸ್ತಕಗಳು ವಿದ್ಯಾರ್ಥಿಗಳ ... ಇನ್ನೂ ಸಿಕ್ಕಿಲ್ಲ.

4ನೆಯ ತರಗತಿಯಲ್ಲಿನ 39 ವಿದ್ಯಾರ್ಥಿ...ನ ಕನ್ನಡ 7, ಗಣಿತ 27, ವಿಜ್ಞಾನ ಮತ್ತು ಸಮಾಜ ಪರಿಚಯ 21 ...ಕಗಳು ದೊರಕಬೇಕಾಗಿದೆ.

5 ನೆಯ ತರಗತಿಯ 57 ವಿದ್ಯಾರ್ಥಿ...ಲ್ಲಿ 25 ವಿದ್ಯಾರ್ಥಿಗಳಿಗೆ ಇನ್ನೂ ...ಲಿಷ್ ಪುಸ್ತಕ ದೊರೆಯಬೇಕಾಗಿದೆ.

6 ನೆಯ ತರಗತಿಯ 52 ವಿದ್ಯಾರ್ಥಿ...ಲ್ಲಿ 40 ಮಂದಿಗೆ ಕನ್ನಡ, 42 ಮಂದಿಗೆ ...ಮಾಜ ಪರಿಚಯ ಪಠ್ಯಪುಸ್ತಕ ದೊರೆಯ...ಕಾಗಿದೆ.

7ನೆಯ ತರಗತಿಯ 43 ವಿದ್ಯಾರ್ಥಿ...ಲ್ಲಿ 9 ವಿಜ್ಞಾನ, 24 ಸಮಾಜ ಪರಿ...ಯ ಪಠ್ಯಪುಸ್ತಕದ ಕೊರತೆ ಇದೆ.

ಈ ಮೇಲಿನ ತರಗತಿಗಳಲ್ಲಿ ಹೆಚ್ಚಾಗಿ ...ಸ್ತಕದ ಕೊರತೆ ಕಂಡು ಬಂದಿರುವುದು ...ಯ ತರಗತಿಯಲ್ಲಿ. ಈ ಜಿಲ್ಲೆಯಲ್ಲಿ ...ಥಮಿಕ ಶಾಲಾ ಶಿಕ್ಷಣದ ಮೂರನೇ ...ತಿಯ ಕನ್ನಡ ರೀಡರ್ ಪುಸ್ತಕ 15,000 ಬೇಕಾದರೆ ವಿಜ್ಞಾನ 5,000, ಸಮಾಜ ಪರಿಚಯದ ಒಂದನೇ ಭಾಗ 600 ಮತ್ತು ಎರಡನೇ ಭಾಗ 8,000 ಕ್ಕೂ ಹೆಚ್ಚು ಪುಸ್ತಕಗಳು ಈ ವಿದ್ಯಾರ್ಥಿಗಳ ಕೈಗೆ ದೊರಕಬೇಕಾಗಿದೆ.

ಈ ಮೇಲಿನವು ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲಾ ಮಕ್ಕಳ ಪುಸ್ತಕದ ಪಟ್ಟಿಯಾದರೆ ಇನ್ನು ಇತರ ಮಾಧ್ಯಮಗಳಾದ ಉರ್ದು, ಇಂಗ್ಲಿಷ್, ಮರಾಠಿ ಮತ್ತು ಹಿಂದಿ ಮಾಧ್ಯಮದ ಎಲ್ಲಾ ವಿಷಯಗಳು ಮುಕ್ಕಾಲು ಪಾಲು ಈ ಪಠ್ಯ ಪುಸ್ತಕ ಇಲಾಖೆ ಪೂರೈಸಬೇಕಾಗಿದೆ.

ಸರಕಾರಿ ಪುಸ್ತಕ ಮಳಿಗೆಯಲ್ಲಿ ಪುಸ್ತಕಗಳು ಬಂದ ಹಾಗೇ ಈ ಜಿಲ್ಲಾ ಶಾಲಾ ಶಿಕ್ಷಕರು ಬಾಚಿಕೊಂಡು ಹೋಗುತ್ತಿರುವ ದೃಶ್ಯ ಈಗ ಸಾಮಾನ್ಯ.

ಪಾಲಕರು ಶಾಲಾ ಶಿಕ್ಷಕರಲ್ಲಿ ತಮ್ಮ ಮಕ್ಕಳಿಗೆ ಪುಸ್ತಕಗಳು ದೊರೆಯದ ಬಗ್ಗೆ ಹೇಳಿದರೆ ಶಾಲಾ ಶಿಕ್ಷಕರು ತಾಲೂಕು ಸಹಶಿಕ್ಷಣಾಧಿಕಾರಿಗಳಲ್ಲಿ ಕೇಳಿ ಅನ್ನುತ್ತಾರೆ. ಸಹ ಶಿಕ್ಷಣಾಧಿಕಾರಿಗಳಲ್ಲಿ ಬಂದು ಪಿಚಾರಿಸಿದರೆ "ನೋಡಿ ಜನತಾ ಸರಕಾರ ಇಷ್ಟು ಮಾಡಿರುವುದೇ ದೊಡ್ಡದು, ಇದಕ್ಕಿಂತ ಹೆಚ್ಚು ನಿರೀಕ್ಷಿಸುವುದು ತಪ್ಪು" ಎಂದು ಜನತಾ ಸರಕಾರದ ಏಜೆಂಟರಂತೆ ವರ್ತಿಸುತ್ತಾರೆ.

ಚಿತ್ರ, ಬರಹ: ಗಂಗಾಧರ ಹಿರೇಗುತ್ತಿ

ಅರಣ್ಯ ವಲಯ ಅಧಿಕಾರಿ ವರ್ತನೆ: ಪ್ರತಿಭಟನೆ

ಸಾಗರ, ಅ. 19–ಇಲ್ಲಿಗೆ ಸಮೀಪದ ಕಾರ್ಗಲ್ ಅರಣ್ಯ ವಲಯಾಧಿಕಾರಿ ಕೃಷ್ಣಮೂರ್ತಿ ಅವರು ಸಾರ್ವಜನಿಕರೊಂದಿಗೆ ಅಸಭ್ಯ ರೀತಿಯಲ್ಲಿ ವರ್ತಿಸುತ್ತಾರೆಂದು ಆರೋಪಿಸಿದ ಗ್ರಾಮಸ್ಥರು ಈ ಬಗ್ಗೆ ಇತ್ತೀಚೆಗೆ ಪ್ರತಿಭಟನೆ ವ್ಯಕ್ತ ಪಡಿಸಿದರು.

ಪಿ. ಕೆ. ಉಮ್ಮರ್, ಬಿ. ಆರ್. ಜಯಲಲಿತ ಮುಂತಾದವರ ನೇತೃತ್ವದಲ್ಲಿ ನಡೆದ ಈ ಮೆರವಣಿಗೆಯಲ್ಲಿ ಸ್ಥಳೀಯರಲ್ಲದೆ ಸುತ್ತಮುತ್ತಲ ಅನೇಕ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಮೆರವಣಿಗೆಯ ನಂತರ ನಡೆದ ಸಭೆಯಲ್ಲಿ ಅರಣ್ಯ ವಲಯಾಧಿಕಾರಿ ಮತ್ತು ಅವರ ಸಿಬ್ಬಂದಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಲಾಯಿತು.

ಇಲ್ಲಿನ ಪ್ರಾಥಮಿಕ ಸಹಕಾರಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ 3 ಸ್ಥಾನಗಳಿಗಾಗಿ ನಡೆದ ಚುನಾವಣೆಯಲ್ಲಿ ಈಗಿನ ಅಧ್ಯಕ್ಷ ಇ. ವಿ. ಬಂಗಾರಪ್ಪ, ನಿರ್ದೇಶಕ ಬಿಳಿಕಲ್ ಚನ್ನಪ್ಪ ಗೌಡ ಮತ್ತು ಕೆ. ಬಿ. ಕೊಲ್ಲಪ್ಪ ಅವರು ಆಯ್ಕೆಯಾದರು.

ಜನರ ವಾಸ್ತವಕ್ಕೆ ಸಾಹಿತಿ ಸ್ಪಂದಿಸಲಿ

ಪುತ್ತೂರು, ಅ. 19–ಕಲಾವಿದರು, ಸಾಹಿತಿಗಳು ಜನರ ಬದುಕಿನ ವಾಸ್ತವ್ಯತೆಗೆ ಸ್ಪಂದಿಸಬೇಕೆಂದು ಪುತ್ತೂರು ತಾಲೂಕಿನ ರೈತ ಕಾರ್ಮಿಕ ಮುಖಂಡ ಹಾಗೂ ಪುತ್ತೂರು ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರೂ ಆದ ಬಿ. ರಾಮಕೃಷ್ಣ ಅವರು ಹೇಳಿದ್ದಾರೆ.

ಇಲ್ಲಿನ "ಸಮುದಾಯ"ದ ವಾರ್ಷಿಕ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಕಲಾವಿದರು ಹಾಗೂ ಸಾಹಿತಿಗಳು ಇಂದು ಸಾಮಾಜಿಕ ಕಳಕಳಿ ಹೊಂದಿದ್ದು ತಮ್ಮ ಕಾರ್ಯಕ್ರಮಗಳನ್ನು ಜನ ಸಾಮಾನ್ಯರ ನಿತ್ಯ ಬದುಕಿನ ವಾಸ್ತವ್ಯತೆಗೆ ಸ್ಪಂದಿಸ ಹೊರಟಿರುವುದು ಶ್ಲಾಘನೀಯ ಎಂದೂ ಅವರು ನುಡಿದರು.

ಸಭೆಯನ್ನು ಉದ್ದೇಶಿಸಿ ಪುರುಷೋತ್ತಮ, ಶ್ರೀಮತಿ ಸೀತಾ, ಅಬ್ಬಾಸ್ ಎಸ್. ಹಾಗೂ ರಾಮಕೃಷ್ಣ ಅವರು ಮಾತನಾಡಿದರು.

ಎನ್. ಪುರುಷೋತ್ತಮ ಅವರು ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

ಶ್ರಮದಾನದಿಂದ ಹೊಸ ರಸ್ತೆ

ಮಂಗಳೂರು, ಅ. 19– ಇಲ್ಲಿಯ ಕೆನರಾ ಕಾಲೇಜಿನ ವಿದ್ಯಾರ್ಥಿಗಳ 10 ದಿನಗಳ ರಾಷ್ಟ್ರೀಯ ಸೇವಾಯೋಜನಾ ಶಿಬಿರವು ಇತ್ತೀಚೆಗೆ ಕೊಲ್ಯದಲ್ಲಿ ಜರಗಿತು. ವಿದ್ಯಾರ್ಥಿಗಳು ಕೊಲ್ಯ–ಕನೀರು ತೋಟ ರಸ್ತೆ ನಿರ್ಮಾಣ ಸಮಿತಿಯವರ ಸಹಕಾರ ...

ಮುಂಗಾರು

ಗುರುವಾರ, ಅಕ್ಟೋಬರ್ 17, 1985

ವಿಶ್ವಸಂಸ್ಥೆಯ ದುರಂತ

ಈ ತಿಂಗಳ 22ನೇ ದಿನಾಂಕ ನಡೆಯಲಿರುವ ವಿಶ್ವ ಸಂಸ್ಥೆಯ 40ನೇ ಹುಟ್ಟು ಹಬ್ಬಕ್ಕೆ ಪ್ಯಾಲೆಸ್ತೀನ್ ವಿಮೋಚನಾ ರಂಗದ ಅಧ್ಯಕ್ಷ ಯಾಸರ್ ಅರಾಫತ್ ಅವರಿಗೆ ಆಮಂತ್ರಣ ಕಳಿಸುವ ವಿಚಾರವಾಗಿ ಮೂರನೆಯ ಜಗತ್ತಿನ ರಾಷ್ಟ್ರಗಳಿಗೂ ಅಮೆರಿಕಕ್ಕೂ ತಿಕ್ಕಾಟ ಸಂಭವಿಸಿ ಅಂತಿಮವಾಗಿ ಆಮಂತ್ರಣ ಕಳುಹಿಸದೇ ಇರುವ ನಿರ್ಧಾರಕ್ಕೆ ಬರಲಾಗಿದೆ.

ಅರಾಫತ್ ಅವರಿಗೂ ಸ್ವಾಪೋ ಅಧ್ಯಕ್ಷ ಸ್ಯಾಮ್ ನುಜೋಮಾ ಅವರಿಗೂ ವಿಶೇಷ ಆಮಂತ್ರಣ ಕಳಿಸಬೇಕು ಎಂಬುದು ಭಾರತದ ಸಹಿತ ಐದು ಅಲಿಪ್ತ ದೇಶಗಳ ಪ್ರಸ್ತಾಪವಾಗಿತ್ತು. ಇಬ್ಬರು ನಾಯಕರಿಗೂ ಆಮಂತ್ರಣ ಕಳಿಸುವಂತೆ ವಿಶ್ವಸಂಸ್ಥೆ ಮಹಾಸಭೆಯನ್ನು ಕೇಳಿಕೊಳ್ಳುವ ಗೊತ್ತುವಳಿಯನ್ನು ಈ ದೇಶಗಳು ಮಂಡಿಸಿದ್ದವು. ಇದಕ್ಕೆ ಅಮೆರಿಕದ ವಿರೋಧ ಬಂತು. ಅರಾಫತ್‌ಗೆ ಆಮಂತ್ರಣ ಹೋದರೆ ಹುಟ್ಟು ಹಬ್ಬದಲ್ಲಿ ಭಾಗವಹಿಸುವ ತನ್ನ ಕಾರ್ಯಕ್ರಮವನ್ನೇ ರದ್ದುಗೊಳಿಸುವ ಸೂಚನೆಯನ್ನು ಅಮೆರಿಕದ ಅಧ್ಯಕ್ಷ ರೊನಾಲ್ಡ್ ರೇಗನ್ ನೀಡಿದರು.

ಈ ಬೆದರಿಕೆಗೆ ಇಂದು ಯಶಸ್ಸು ದೊರೆತಿದೆ. ತಮ್ಮ ಗೊತ್ತುವಳಿಯ ಅಂಗೀಕಾರಕ್ಕೆ ಒತ್ತಾಯ ತಾರದಿರಲು ಭಾರತದ ಸಹಿತ ಐದು ದೇಶಗಳು ಒಪ್ಪಿಕೊಂಡಿವೆ. ವಿಶ್ವಸಂಸ್ಥೆಯ ಹುಟ್ಟುಹಬ್ಬದ ಸಂಭ್ರಮಕ್ಕೆ ಊನ ತರುವುದು ಬೇಡವೆಂಬ ಸೌಜನ್ಯವೇ ಇದಕ್ಕೆ ಕಾರಣವಿರಬಹುದು.

ಈ ಪ್ರಕರಣದಲ್ಲಿ ನೈತಿಕ ಹಾಗೂ ರಾಜಕೀಯ ಪ್ರಶ್ನೆಗಳು ಒಳಗೊಂಡಿವೆ. ಪ್ಯಾಲೆಸ್ತೀನ್ ವಿಮೋಚನಾರಂಗಕ್ಕೆ 1974ರ ನವೆಂಬರ್ ತಿಂಗಳಲ್ಲಿ ವಿಶ್ವಸಂಸ್ಥೆ ಮಹಾಸಭೆಯು ವೀಕ್ಷಕರ ಸ್ಥಾನಮಾನ ನೀಡಲಾಯಿತು. ಸರಕಾರೇತರ ಸಂಸ್ಥೆಯೊಂದನು ಅಂದು ಮೊದಲ ಬಾರಿಗೆ ವಿಶ್ವಸಂಸ್ಥೆಯು ಮಾನ್ಯ ಮಾಡಿ ಒಳಗೆ ಕರೆದುಕೊಂಡಿತ್ತು. ಅಂದಿನಿಂದ ಇಂದಿನ ತನಕವೂ ಈ ಸಂಸ್ಥೆ ವೀಕ್ಷಕನೆಂಬ ನೆಲೆಯಲ್ಲಿ ಮಹಾಸಭೆಯಲ್ಲಿ ಭಾಗವಹಿಸುತ್ತ ಮಧ್ಯಪೂರ್ವದ ವಿದ್ಯಮಾನಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಮಂಡಿಸುತ್ತ ಬಂದಿದೆ.

ಮಹಾಸಭೆಯ ಇತರೆಲ್ಲಾ ಸದಸ್ಯ ರಾಷ್ಟ್ರಗಳ ಪ್ರಮುಖರಿಗೆ ಹುಟ್ಟು ಹಬ್ಬಕ್ಕೆ ಆಮಂತ್ರಣ ಹೋಗಿದೆ. ವೀಕ್ಷಕರಾದ ಪಿ. ಎಲ್. ಓ. ದ ಅಧ್ಯಕ್ಷ ಅರಾಫತ್‌ಗೆ ಮಾತ್ರ ಕೊಡದು ಎಂಬುದು ಅಮೆರಿಕದ ನಿಲುವು.

ಈ ನಿಲುಮೆಯ ಹಿಂದೆ ಆ ದೇಶದ ಸಾಮ್ರಾಜ್ಯಶಾಹಿ ಮನೋವೃತ್ತಿ ಕಾಣಿಸುತ್ತದೆ. ಇಸ್ರೇಲಿನ ಕ್ರಮವನ್ನು ಸಮರ್ಥಿಸಿ ಪೋಷಿಸುವ ಉದ್ಧಟತನ ಗೋಚರಿಸುತ್ತದೆ. ನಿರ್ವೀರ್ಯವಾದ ವಿಶ್ವ ಸಂಸ್ಥೆಯನ್ನು ಹೇಗೆ ಬೇಕಿದ್ದರೂ ಮಣಿಸಬಹುದು ಎಂಬ ಅಹಂಕಾರ ಈ ಧೋರಣೆಯಲ್ಲಿದೆ.

ಪ್ಯಾಲೆಸ್ತೀನ್ ಸಮುದಾಯ ಈ ಶತಮಾನದ ಅತ್ಯಂತ ಘೋರ ಅನ್ಯಾಯವೊಂದರ ಜೀವಂತ ರೂಪ. ಬಲಶಾಲಿಗಳೆಲ್ಲ ಸೇರಿ ಅಶಕ್ತನೋರ್ವನನ್ನು ಅಮಾಯಕನನ್ನು ಹೊಡೆದು ಬಡಿದು ಮನೆಯಿಂದ ಹೊರಗೆಳೆದು ಹಾಕಿದಂತಹ ಅತ್ಯಾಚಾರ ಪ್ಯಾಲೆಸ್ತೀನ್ ಜನಾಂಗದವರ ಮೇಲೆ ನಡೆದಿದೆ. ಇಂತಹ ದಮನಿತ ಜನಾಂಗವೊಂದಕ್ಕೆ ಧ್ವನಿ ಕೊಡುವ ಕೆಲಸವನ್ನು ವಿಶ್ವದ ದೇಶಗಳ ಸಮುದಾಯ ಮಾಡಬೇಕಿತ್ತು. ಅರಾಫತ್‌ಗೆ ಆಮಂತ್ರಣ ಕೊಡುವುದು ಈ ಕೆಲಸಕ್ಕೊಂದು ಸಂಕೇತವಾಗುತ್ತಿದ್ದು. ಆದರೆ ಪ್ಯಾಲೆಸ್ತೀನಿಯದ ದನಿಯನ್ನು ಅಣಗಿಸುವುದರಲ್ಲಿ, ಅಂಡಲೆಯುತ್ತಿರುವ ಆ ಜನಾಂಗಕ್ಕೆ ಅವಮಾನ ಮಾಡುವುದರಲ್ಲಿ ಅಮೇರಿಕ ಇಂದು ಸಫಲವಾಗಿದೆ.

ಅಮೆರಿಕದ ಈ ಕುತಂತ್ರ ಸಫಲವಾಗಿರುವುದು ವಿಶ್ವಸಂಸ್ಥೆಯ ಒಂದು ದುರಂತ. ಅದನ್ನು ಒಪ್ಪಿಕೊಂಡಿರುವುದು ನ್ಯಾಯಪಕ್ಷಪಾತಿಗಳಾದ ಜಗತ್ತಿನ ರಾಷ್ಟ್ರಗಳ ಮೋರೆಗೆ ಮೆತ್ತಿರುವ ಒಂದು ಕಳಂಕ. ಅಲಿಪ್ತ ಕೂಟದ ಸದಸ್ಯರೆಲ್ಲ ಒಂದಾಗಿ ಇತರ ವಿವೇಕಶಾಲಿ ದೇಶಗಳ ಬೆಂಬಲ ಪಡೆದು ಬಹಿಷ್ಕಾರದ ಬೆದರಿಕೆ ಹಾಕಿಯಾದರೂ ಅಮೆರಿಕವನ್ನು ಮಣಿಸಿ ಹಾದಿಗೆ ತರಬೇಕಾಗಿತ್ತು. ಅದು ಸಾಧ್ಯವಾಗದೆ ಇರುವುದು ತೋಳ್ಬಲವೇ ಬಲ ಎಂಬುದನ್ನು ತಾತ್ಕಾಲಿಕವಾಗಿಯಾದರೂ ನಿಜವಾಗಿಸಿದೆ.

ಖಂಡನೀಯ

ಕಾಸರಗೋಡಿನಲ್ಲಿ ವಿದ್ಯಾರ್ಥಿ ಸಮುದಾಯದ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ. ಬಹುಶಃ ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದ ಕೆಲವೇ ಕೆಲವು ಕೆಟ್ಟ ಪೊಲೀಸ್ ಮರ್ದನಗಳಲ್ಲಿ ಈ

ತೋಳು ಮುರಿಸಿಕೊಂಡು ಗಂಭೀರ ಗಾಯಗಳೊಡನೆ ಆಸ್ಪತ್ರೆ ಸೇರಿದರು.

ಪೊಲೀಸರು ನಡೆಸಿದ ಕಾರ್ಯಾಚರಣೆಗೆ ಪ್ರಚೋದನೆ ಇರಬಹುದು. ಆದರೆ ಅವರು ಮಾಡಿ

ಕಸುವ ಸವೆಸಿ ಬಸವಳಿದ ವ್ಯಕ್ತಿ

ಾರಂಪಳ್ಳಿ ಶ್ರೀಧರ ಹಂದೆ

ೃತೇಶ್ವರಿ ಮೇಳದ ಯಜಮಾನಿಕೆ
ಹಂದೆಯವರು ಕಂಡ ನೋವು-
ಏಳು ಬೀಳುಗಳು ಹಲವಾರು.
ಆರ್ಥಿಕ ದುಸ್ಥಿತಿಯಲ್ಲೂ ಹಂದೆ
ರು ಧೃತಿಗೆಟ್ಟ ದಿನವಿಲ್ಲ. ಬಡಗಿನ
ಯಾವುದರಲ್ಲಿಯೂ ತೆಂಕು
ಕಡಿಮೆಯಿಲ್ಲ ಎಂದು ಕಾರ್ಯತ:
ಸಲು ಹಂದೆಯವರು ಹೆಣಗಿದ್ದು
ವಲ್ಲ ಯಶಸ್ವಿಯೂ ಆದರು.
: ಹಂದೆಯವರು 1969ರಲ್ಲಿ ಸಾಲಿ
ಮೇಳವನ್ನು ಆರಂಭಿಸಿ ಡೇರೆಯಾಟ

ರ್ಸದಿದ್ದರೆ ಇಂದು ಬಡಗುತಿಟ್ಟಿನಲ್ಲಿ
ಮೇಳಗಳು ವಿಜೃಂಭಿಸುತ್ತಿದ್ದಿಲ್ಲ
ವೇ? ತಾನು ಮುನ್ನಡೆಸಲು ಹಣ
ದ್ದ ಅಮೃತೇಶ್ವರಿ ಮೇಳದ ಏಲಂ
ಹಿತಕರವೆಂಬಂತೆ ಬಂದ ಪೈಪೋಟಿ
ಮೇಳವನ್ನೇ ತ್ಯಜಿಸಿದ ಹಂದೆಯ
ಬಹಳ ಅಲ್ಪ ಕಾಲದಲ್ಲೇ ಮಹಾಲಿಂ
ಮೇಳವೆಂಬ ಹೊಸ ಮೇಳವನ್ನು
ಂಭಿಸಿ ಅದರಲ್ಲೂ ಯಶಸ್ಸು ಪಡೆದು
ಎನಿಸಿಕೊಂಡರೂ ಹಂದೆಯವರ

ವ್ಯಕ್ತಿತ್ವ ಕೇವಲ ಮೇಳದ ಯಜಮಾನಿಕೆಗೆ ಮಾತ್ರ ಮೀಸಲಾಗದಂತೆ ಉತ್ತಮ ಕಲಾವಿದನಾಗಿಯೂ ರೂಪುಗೊಂಡಿತ್ತು. ಅಗತ್ಯವೆನಿಸಿದಾಗ ಮೇಳದಲ್ಲಿ ವೇಷಧಾರಿಯಾಗಿಯೂ ಪಾತ್ರನಿರ್ವಹಿಸಿದ್ದು ಒಂದು ಅಪೂರ್ವ ದೃಷ್ಟಾಂತ; ಉತ್ತಮವಾಗ್ಮಿಯೂ ಆಗಿರುವ ಶ್ರೀ ಹಂದೆ ಮಳೆಗಾಲದ ತಾಳ ಮದ್ದಲೆಯಲ್ಲಿ ಪ್ರಮುಖ ಅರ್ಥಧಾರಿಯೂ ಹೌದು. ಇವರ ಒಬ್ಬನೇ ಮಗ ಪಿ. ವೆಂಕಟೇಶ ಸಾಲಿಗ್ರಾಮದ ಮಕ್ಕಳ ಮೇಳದಲ್ಲಿ ಪ್ರಮುಖ ಬಾಲ ಕಲಾವಿದ. ರಾಜ್ಯದಾದ್ಯಂತ ಜಯಭೇರಿ ಬಾರಿಸಿ ಹೊರ ದೇಶವಾದ ಅಮೆರಿಕ ಇಂಗ್ಲೆಂಡ್‌ಗಳಲ್ಲೂ ಪ್ರದರ್ಶನವಿತ್ತು, ತಂದೆಯಲ್ಲಿರುವ ಕಲೆಯು ರಕ್ತಗತವಾಗಿ ತನ್ನಲ್ಲೂ ತುಂಬಿದೆ ಎಂದು ಜಗತ್ತಿಗೆ ಸಾರಿದ ಅರಳುವ ಎಳೆಮೊಗ್ಗು.

ರಾಜ್ಯ ಅಕಾಡೆಮಿ ಪ್ರಶಸ್ತಿ ವಿಜೇತ ದಿ. ನಾರ್ಣಪ್ಪ ಉಪ್ಪೂರರನ್ನು ಮಾವನನ್ನಾಗಿ ಪಡೆದ ಹಂದೆಯವರು ತನ್ನ ಕಲೆಯ ವ್ಯವಸಾಯದುದ್ದಕ್ಕೂ ಉಪ್ಪೂರರು ನೀಡಿದ ಮಾರ್ಗದರ್ಶನದ ಸಹಕಾರವನ್ನು ನೆನಪಿಸಿಕೊಳ್ಳುತ್ತಾ ಮಾವನ ಹಠಾತ್ ನಿಧನ ತನಗಾದ ವೈಯುಕ್ತಿಕ ನಷ್ಟವೆಂದು ಕೊರಗುತ್ತಾರೆ. ಸುಮಾರು 2 ದಶಕಗಳ ಕಾಲ ಮೇಳದ ಸಂಚಾಲಕತ್ವದ ಅನುಭವದಲ್ಲಿ ಉದಯೋನ್ನತ ಕಲಾವಿದರಿಗೆ, ಸಂಘ ಸಂಸ್ಥೆ ಧಾರ್ಮಿಕ ಕಾರ್ಯಗಳಿಗೆ ಹಂದೆಯವರ ಪ್ರೋತ್ಸಾಹ ಅಪರಿಮಿತವಾದುದು.

ಆದರೆ ಕಲೆಯ ಸೆಳೆತಕ್ಕೆ ಸಿಕ್ಕಿ ತನ್ನ ಸರ್ವಸ್ವವನ್ನು ಕಲೆಗಾಗಿ ತ್ಯಾಗ ಮಾಡಿದ ಹಂದೆಯವರು ತನ್ನ ಹಠಾತ್ ಅನಾರೋಗ್ಯದಿಂದಾಗಿ ಧೃತಿಗೆಟ್ಟಿದ್ದಾರೆ. 56ರ ಪ್ರಾಯಕ್ಕೆ ಕೂಡಿ ಬಂದ ವೃದ್ಧಾಪ್ಯ ಸಾಲಿದಕ್ಕೆ ಆರ್ಥಿಕ ಹಿನ್ನಡೆಯ ಬಗ್ಗೆ ಚಿಂತಿಸುತ್ತಾ ತನ್ನ ಕುಟುಂಬದ ವ್ಯವಹಾರವಾಗಿದ್ದ ಸೊಲ್ಲಾಪುರದ ಹೋಟೇಲ್ ಉದ್ಯಮವನ್ನು ತಾನು ಕೈ ಬಿಡದಿದ್ದರೆ ಇಂದು ಪರಿಸ್ಥಿತಿ ಹೀಗಾಗುತ್ತಿರಲಿಲ್ಲ ಎಂದು ನೋವಿನಿಂದ ನುಡಿಯುತ್ತಾರೆ. ಒಂದು ವರುಷದಿಂದ ತೀವ್ರ ಸ್ವರೂಪದ ಕಾಯಿಲೆಯೊಂದು ಇವರನ್ನು ಬಾಧಿಸಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳಪಡುವಂತೆ ಮಾಡಿ ಹಂದೆಯವರನ್ನು ಮತ್ತಷ್ಟು ಹಣ್ಣು ಮಾಡಿದೆ.

ಪರಿಶ್ರಮದ ಕೆಲಸ ಸಲ್ಲದು ಎಂಬ ವೈದ್ಯರ ಎಚ್ಚರಿಕೆಯಿಂದ ಅನಿವಾರ್ಯವಾಗಿ ಹಂದೆಯವರನೂತನ ಮೇಳ ಹಸ್ತಾಂತರವಾಗಿದೆ. ಕಲೆಯ ಸಂಘಟನೆಯ ನೆಲೆ ಕಾಣುವ ತವಕದಲ್ಲಿ ತನ್ನ ಸ್ವಂತ ಮನೆಯನ್ನೇ ಹಣಕಾಸಿನ ಕೊರತೆ ಸರಿದೂಗಿಸಲು ಕೈ ಬಿಟ್ಟು ಬಾಡಿಗೆಯ ಮನೆಯ ಬದುಕು ಕಾಣುತ್ತಿದ್ದಾರೆ. ಆರ್ಥಿಕವಾಗಿ ಗೊಂದಲಮಯವಾದ ಬದುಕಿಗೆ ಕಾಕತಾಳೀಯವಾಗಿ ಕೈಕೊಟ್ಟ ಆರೋಗ್ಯದಿಂದಾಗಿ ಹಂದೆಯಂತಹ ದಿಟ್ಟ ಗಂಡೆದೆಯ ಗುಂಡಿಗೆಯೂ ಢವಢವಿಸುವಂತಾಗಿದೆ. ಕಲೆಗಾಗಿ ಕಸುವನ್ನೇ ತೇದಿದ ಈ ವ್ಯಕ್ತಿಯ ಮುಂದೆ ಮುಂದೇನು ಎಂಬ ಪ್ರಶ್ನೆ ಕಾದಿದೆ. ತನ್ನ ಬದುಕಿನುದ್ದಕ್ಕೂ ಸಹಾಯಾರ್ಥ ಪ್ರದರ್ಶನಗಳಿಂದ ಹಲವಾರು ಉತ್ತಮ ಕಾರ್ಯಗಳಿಗೆ ನೆರವಾದ ಈ ವ್ಯಕ್ತಿಯ ವೃದ್ಧಾಪ್ಯದ ಸಮಯದ ಬದುಕಿಗೆ ಮುಸುಕು ಮುತ್ತುವ ಮುನ್ನ ಸರಕಾರ ಗೌರವ ಮಾಸಿಕ ವೇತನ ಹಂದೆಯವರಿಗೆ ಮಂಜೂರು ಮಾಡಿ ಬಳಲುವ ಈ ದೇಹಕ್ಕೆ ಬಲ ನೀಡಬೇಕು.

ನಮ್ಮ ಸರಕಾರ ಹಾಗೂ ಶಾಸಕರು ಈ ನಿಟ್ಟಿನಲ್ಲಿ ಗಂಭೀರ ಗಮನ ಹರಿಸಬೇಕು.

—ಕೆ. ಶ್ರೀನಿವಾಸ ಪೂಜಾರಿ

ಸವಕಲು ಕಥೆಯ ‘ಸಾಭಿನಾಸ’

ವಾಗಿದೆ. ಒಟ್ಟಾರೆ ರವಿಚಂದ್ರನ್,
ಭಿನಯ ಅಷ್ಟಮ

ಮುಂಗಾರು

ಪಕ್ಷವಲ್ಲ, ಒಳ್ಳೆಯ ವ್ಯಕ್ತಿ ಬೇಕು

ಕರ್ನಾಟಕ ಸಹಿತ ಒಟ್ಟು ಹತ್ತು ರಾಜ್ಯಗಳಿಗೆ ವಿಧಾನಸಭಾ ಚುನಾವಣೆಗೆ ದಿನಾಂಕ ಪ್ರಕಟಿಸಲಾಗಿದೆ.

ಈ ಚುನಾವಣೆಯಲ್ಲಿ ಯಾವ ರಾಜ್ಯದಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೆ ಅನ್ನುವುದು ಮುಖ್ಯವಲ್ಲ. ಯಾವ ಪಕ್ಷವನ್ನು ಮತದಾರರು ಅಧಿಕಾರಕ್ಕೆ ತರಬೇಕು ಎಂದು ಕಡ್ಡಿ ಮುರಿದಂತೆ ತೀರ್ಮಾನ ಕೊಟ್ಟು ಬಿಡುವುದು ಕೂಡಾ ಸ್ವಾತಂತ್ರ್ಯ ನಂತರದ ಸುಮಾರು ನಾಲ್ಕು ದಶಕಗಳ ನಮ್ಮ ರಾಜಕೀಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಹೇಳುವುದು ಕಷ್ಟವಾಗುತ್ತದೆ. ನಮ್ಮಲ್ಲಿ ಒಳ್ಳೆಯತನದ ಮಾತಿನ ಮಲ್ಲರಿದ್ದಾರೆ ವಿನಹ ಒಳ್ಳೆಯವರು ಕಡಿಮೆ ಅನ್ನುವುದು ಜನರ ಅನುಭವವಾಗಿದೆ.

ಹಾಗೆಯೇ ದೇಶದ ಒಳಿತಿನ, ಅಭಿವೃದ್ಧಿಯ ದಿಕ್ಕಿನ ಬಗೆಗೆ ಸ್ಪಷ್ಟ ಕಲ್ಪನೆ ಇರುವಂತಹವರು, ನಮ್ಮ ಆರ್ಥಿಕ ವ್ಯವಸ್ಥೆ ಹೇಗಿರಬೇಕು, ಅದಕ್ಕೆ ಯಾವ ಚೌಕಟ್ಟನ್ನು ಒದಗಿಸಬೇಕು ಎಂದು ಸ್ಪಷ್ಟ ಕಲ್ಪನೆ ಹೊಂದಿರುವವರು ಈ ದಿನ ನಮ್ಮ ರಾಜಕಾರಣದಲ್ಲಿ ಬಹಳ ಕಮ್ಮಿಯಾಗಿರುವುದರಿಂದಲೆ ರಾಜಕಾರಣದ ಹಾಗೂ ಅದರ ಪರಿಣಾಮವಾಗಿ ಆಡಳಿತದ ಗುಣಮಟ್ಟ ಕುಸಿಯಲು ಕಾರಣವಾಗಿದೆ.

ಒಂದೆಡೆಯಲ್ಲಿ ರಾಜಕಾರಣದಲ್ಲಿ ನುರಿತು ನಾಯಕತ್ವದಲ್ಲಿ ಗುತ್ತಿಗೆ ಪಡೆದಿರುವ ಒಂದು ಗುಂಪು ಸಮಾಜದ ಮೇಲು ವರ್ಗದಿಂದ ಬಂದುದಾಗಿದ್ದು ಆಡಳಿತೆಯು ಹಿಂದುಳಿದ ವರ್ಗದ ಹಿತಕ್ಕೂ ಉದ್ಧಾರಕ್ಕೂ ಯೋಜಿಸಿದ ಕ್ರಮಗಳನ್ನೆಲ್ಲಾ ವ್ಯರ್ಥಗೊಳಿಸುತ್ತಾ ಇಂದಿನ ಯಜಮಾನ ಸಂಸ್ಕೃತಿಯ ರಕ್ಷಣೆಗೆ ಟೊಂಕ ಕಟ್ಟಿದವರಂತೆ ಷಡ್ಯಂತ್ರ ನಡೆಸುತ್ತಿದ್ದರೆ ಹಿಂದುಳಿದ ವರ್ಗದಿಂದ ಬಂದ ನಾಯಕರುಗಳೂ ಕೂಡ ಅಧಿಕಾರ, ವರ್ಚಸ್ಸು, ಹೆಸರು, ಸ್ಥಾನಮಾನ ಮತ್ತು ಸಂಪತ್ತು ಇವುಗಳು ತರುವ ಬೆಚ್ಚನೆಯ ಸುಖದಲ್ಲಿ ಓಲಾಡುತ್ತ ಮೈಮರೆಯುವಂತಹ ವಿದ್ಯಮಾನ ನಡೆಯುತ್ತಿದೆ. ಸ್ವಂತ ಸುಖಕ್ಕಾಗಿ ಮೇಲು ವರ್ಗದ ಜನಗಳೊಂದಿಗೆ ಶಾಮೀಲಾಗಿ ತಮ್ಮ ವರ್ಗದ ಹಿತವನ್ನು ಬಲಿಕೊಡುವ ಜಾಯಮಾನವೂ ಹಿಂದುಳಿದ ವರ್ಗದ ನಾಯಕರಲ್ಲಿ ಕಾಣಿಸಿದ್ದಿದೆ.

ಈ ಆಮಿಷಗಳನ್ನೆಲ್ಲ ಮೆಟ್ಟಿ ನಿಂತ ನಾಯಕರು ತುಳಿತಕ್ಕೊಳಗಾದ ಸಾಮಾಜಿಕ ವರ್ಗದಿಂದ ಬಂದವರಲ್ಲಿ ಇಲ್ಲವೆಂದಲ್ಲ, ಅಂತಹವರನ್ನು ಹುಡುಕಿ ಹಿಡಿಯಬೇಕಾದ ಕರ್ತವ್ಯ ಇಂದು ಮತದಾರರಿಗಿರುವುದು ಒಂದೆಡೆಯಾದರೆ ಅಂತಹ ನಾಯಕರನ್ನು ಕಟ್ಟಿ ಬೆಳೆಸಬೇಕಾದ ಕರ್ತವ್ಯವೂ ಇದೆ. ಶತಮಾನಗಳಿಂದ ದಾಸ್ಯದಲ್ಲಿದ್ದು ತುಳಿತಕ್ಕೆ ಪಕ್ಕಾಗಿ, ಕೈತುಂಬ ವರಮಾನ ತರುವ ಕೆಲಸವಿಲ್ಲದೆ, ಧನಿಗಳು ಕೃಪೆಮಾಡಿ ಕೊಟ್ಟದ್ದನ್ನು "ದೀನ ನಾನು ಸಮಸ್ತ ಲೋಕಕೆ" ಎಂಬಂತೆ ಕೈನೀಡಿ ಪಡೆದು ಬದುಕುತ್ತ ಬಂದ ಸಾಮಾಜಿಕ ವರ್ಗದಿಂದ ಅಂತಹ ನಾಯಕತ್ವ ಉದಿಸಿ ಬರುವುದು ಕೂಡ ಸುಲಭವಲ್ಲ. ಸಾಮಾಜಿಕ ವಿಚಾರಧಾರೆಗಳ ತಿಳುವಳಿಕೆಯನ್ನು ಅವರಲ್ಲಿ ಮೂಡಿಸುವಂತಹ ಶಿಕ್ಷಕ ಅವರಿಗೆ ಕೈಗೆಟುಕದ ಹಣ್ಣಾಗಿರುವುದು ಒಂದೆಡೆಯಾದರೆ ದೊರೆಯುವ ಶಿಕ್ಷಣವೂ ಕೂಡ ಪಟ್ಟಭದ್ರ ಹಿತಾಸಕ್ತಿಗಳನ್ನು ಜತನದಿಂದ ಕಾಪಾಡುವ ಸಮಾಜ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕೆ ಪೂರಕವಾಗಿರುವುದು ಈ ವರ್ಗದವರು ಅಜ್ಞಾನದ ಪರೆಯನ್ನು ಕಿತ್ತೊಗೆಯುವುದಕ್ಕೆ ಅಡ್ಡಿಯಾಗಿದೆ.

ಆದ್ದರಿಂದ ಈ ಚುನಾವಣೆಯ ಹಿನ್ನೆಲೆಯಲ್ಲಿ ನೂರಕ್ಕೆ ತೊಂಬತ್ತು ಬಡವರೇ ಆಗಿರುವ ಮತದಾರರು ಯೋಚಿಸಬೇಕಾದ ಕರ್ತವ್ಯ ಹಲವಿವೆ. ಶೋಷಣೆಗಳಿಲ್ಲದ ನೂತನ ಸಮಾಜ ಸೃಷ್ಟಿಯ ಪರಿಕಲ್ಪನೆಗಳಿರುವ ಮುಖಂಡರುಗಳಿಗೆ ಅವರು ಯಾವ ಪಕ್ಷದಲ್ಲೇ ಇರಲಿ ಉತ್ಕರ್ಷಕ್ಕೆ ಅವಕಾಶ ನೀಡುವುದು, ಹಾಗೂ ಅಂತಹ ನಾಯಕರು ನಮ್ಮ ತರುಣ ಜನಾಂಗದ ಮಧ್ಯದಿಂದ ಉದಿಸಿ ಬರುವುದಕ್ಕೆ ಚಾಲನೆ ಕೊಡುವುದು ಮತದಾರರ ಮಹತ್ವದ ಕರ್ತವ್ಯವಾಗಿದೆ.

ಉದಿಸಿ ಬರುವ ನಾಯಕರ ಸಮೂಹ ನಮ್ಮ ಸಮಾಜವನ್ನು ಹಿಂದಕ್ಕೆ ಎಳೆಯುತ್ತಿರುವ ಧಾರ್ಮಿಕ, ಸಾಮಾಜಿಕ, ಆರ್ಥಿಕ ಶೋಷಣೆಗಳಿಂದ ಕಂದಾಚಾರಗಳಿಂದ, ಮೂಢ ನಂಬಿಕೆಗಳಿಂದ ಬಹು ಸಂಖ್ಯಾತರಾದ ಬಡವರನ್ನು ಪಾರು ಮಾಡುವುದು ಹೇಗೆ ಎಂಬ ಬಗ್ಗೆ ವಿಚಾರಮಾಡುವ ಸಾಮರ್ಥ್ಯ ಹೊಂದಿರಬೇಕಾಗುತ್ತದೆ.

ಆದ್ದರಿಂದ ಜನರು ಆರಿಸಬೇಕಾದ್ದು ಪಕ್ಷವನ್ನಲ್ಲ, ವ್ಯಕ್ತಿಯನ್ನು. ಆಸೆ-ಆಮಿಷಗಳಿಗೆ ಒಳಗಾಗದ ಚಾರಿತ್ರ್ಯವಂತನನ್ನು, ಸಮಾಜದ ಬಗ್ಗೆ ಚಿಂತೆಮಾಡುವ ಮನಸ್ಸು ಮತ್ತು ಬುದ್ಧಿವಂತಿಕೆ ಎರಡೂ ಇರುವ ಸಮರ್ಥನನ್ನು.

ಚಲನ

ೋತ್ಸವ

. ಎಸ್. ಮೇಲುಕೋಟೆ ಅವರು ಶ್ರೀ
ಾನಕಾನಹಳ್ಳಿ ಗೋಪಿ ಅವರ "ಐವತ್ತು
ರ್ಷಗಳಿಂದ ನಡೆದು ಬಂದ ಕನ್ನಡ ಚಲನ
ಚಿತ್ರರಂಗದ" ಛಾಯಾ ಚಿತ್ರಗಳ ಪ್ರದರ್ಶ
ನವನ್ನು ಉದ್ಘಾಟಿಸಿದರು.

ಈ ಮೊದಲು ವಾರ್ತಾ ಹಾಗೂ
ಪ್ರಚಾರ ಇಲಾಖೆಯ ನಿರ್ದೇಶಕರಾದ ಶ್ರೀ
ನಿವಾಸ್ ಮೂರ್ತಿ ಅವರು ಮಾತನಾ
ದೆಹಲಿಯಲ್ಲಿ ರಾಜ್ಯಕ್ಕೆ ಸಂಬಂಧಿಸಿದಂತೆ
ಚ್ಚು ಹೆಚ್ಚು ಕಾರ್ಯಕ್ರಮಗಳನ್ನು
ರ್ಪಡಿಸುವುದಾಗಿ ಹೇಳಿದರು.

'ಆ ಒಂದು ರಾತ್ರಿ'

ನವರತ್ನ ಫಿಲಂಸ್ ಅವರ' ಆ ಒಂದು
ರಾತ್ರಿ' ಕನ್ನಡ ವರ್ಣ ಚಿತ್ರದ ಮೊದಲ
ಂತದ ಚಿತ್ರೀಕರಣ ಸದ್ದುಗದ್ದಲವಿಲ್ಲದೆ
ಮುಕ್ತಾಯ ಗೊಂಡಿದೆ.

ಜೋಸೈಮನ್ ನಿರ್ದೇಶಿಸಿ, ನಟಿಸುವ
ಈ ಚಿತ್ರದ ತಾರಾಗಣದಲ್ಲಿ ರಾಜೀವ್,
ವ್ಯ, ಮಾನು, ಉಮಾಶ್ರೀ, ಸಾಯಿಕು
ಮಾರ್, ಮೊದಲಾದವರಿದ್ದಾರೆ.

ಸತ್ಯಂ ಅವರ ಸಂಗೀತ, ಛಾಯಾಗ್ರಹಣ
ನಾರಾಯಣಸಿಂಗ್. ಕಥೆ, ಚಿತ್ರಕಥೆ ಜೋ
ಸೈಮನ್.

ಜ್ಯಾಕ್ಸನ್;
ಶಿಸ

ಸ್ಟಾರ್



'ಪರಮೇಶಿ ಪ್ರೇಮ ಪ್ರಸಂಗ' ಚಿತ್ರದಲ್ಲಿ ಅನಂತನಾಗ್ ಮತ್ತು ಸಹಕಲಾವಿದರು.

ದೊರೆ-ಭಗವಾನ್‌ರ "ಸೇಡಿನ ಹಕ್ಕಿ"

ಯಶಸ್ವೀ "ಅವಳ ಹೆಜ್ಜೆ" "ಇಬ್ಬನಿ ಕರಗಿತು" ಹಾಗೂ ಇತ್ತೀಚಿನ "ಒಲವು ಮೂಡಿದಾಗ" ಚಿತ್ರಗಳನ್ನು ನಿರ್ಮಿಸಿದ "ವರಲಕ್ಷ್ಮಿ ಮೂವೀಸ್"ನ ಮೋಹನ್ ಶರ್ಮ ಅವರು ಈ ಬಾರಿ ಕುತೂಹಲಮಯವಾದ "ಸೇಡಿನಹಕ್ಕಿ" ಎಂಬ ಚಿತ್ರವನ್ನು ನಿರ್ಮಿಸಲಿದ್ದಾರೆ. ಈ ಚಿತ್ರದ ಚಿತ್ರೀಕರಣವನ್ನು ಇದೇ ತಿಂಗಳು 24ರಂದು ಪ್ರಾರಂಭಿಸಲಿದ್ದು, ಚಿತ್ರವನ್ನು ಆಗಸ್ಟ್ 9ನೇ ತಾರೀಖಿನಂದು ಬಿಡುಗಡೆ ಮಾಡುವ ಯೋಜನೆಯನ್ನೂ ಕೂಡ ಹಾಕಿಕೊಂಡಿದ್ದಾರೆ. ಖ್ಯಾತ ಕಾದಂಬರಿಕಾರರಾದ ಟಿ. ಕೆ. ರಾಮರಾವ್ ಅವರ ಕಾದಂಬರಿಯನ್ನು ಆಧರಿಸಿ ನಿರ್ಮಿಸಲಿರುವ ಈ ಚಿತ್ರವನ್ನು ಕಾದಂಬರಿ ಆಧಾರಿತ ಚಿತ್ರಗಳ ಜೋಡಿ ದೊರೆ-ಭಗವಾನ್ ನಿರ್ದೇಶಿಸಲಿದ್ದಾರೆ. ಛಾಯಾಗ್ರಾಹಕರು: ಆರ್. ಚಿಟ್ಟಿಬಾಬು, ಬಿ. ಎಲ್. ವೇಣು ಸಂಭಾಷಣೆ ರಚಿಸಿದ್ದು ಭಕ್ತವತ್ಸಲ ಅವರು ಸಂಕಲನದ ಹೊಣೆ ಹೊತ್ತಿದ್ದಾರೆ.

ಮತ್ತೊಮ್ಮೆ ಯಶಸ್ವೀ ಜೋಡಿ ಅನಂತನಾಗ್ ಹಾಗೂ ಲಕ್ಷ್ಮಿ ನಟಿಸುತ್ತಿರುವ ಈ ಚಿತ್ರದಲ್ಲಿ ಪ್ರಭಾಕರ್ ವಿಶಿಷ್ಟ ಪಾತ್ರವಲ್ಲಿ ಅಭಿನಯಿಸಲಿದ್ದಾರೆ. ರಾಜೀವ್, ಜಯಮಾಲಿನಿ ಮುಂತಾದವರು ಚಿತ್ರದ ಉಳಿದ ತಾರಾಬಳಗದಲ್ಲಿದ್ದಾರೆ.

ಭಾರತದಲ್ಲಿ-'3ಡಿ'

ಘಮ ಘಮ

ಕನ್ನಡ ಚಿತ್ರ ತಾರೆ(ತಮಿಳು ಮೂಲ) ಮಹಾಲಕ್ಷ್ಮೀ ಇದೀಗ ಹೊಸತೊಂದು ಅಟೆಂಬಾಂಬು ಸಿಡಿಸಿದ್ದಾಳೆ. ಬೇಡಿಕೆ ಕುಸಿದಿರುವುದನ್ನು ತಡೆಗಟ್ಟಲು ಈಕೆ ಈ ತಂತ್ರ ಹೂಡಿದ್ದಾಳೆ. ಈ ತಂತ್ರಕ್ಕೆ ಬಲಿಯಾದವರು ರಾಜೀವ್, ವಿಷಯ ಇಷ್ಟೇ: 'ನನಗೂ ರಾಜೀವ್‌ಗೂ ಪ್ರೇಮವಿದೆ. ನಾವಿಬ್ಬರೂ ಮದುವೆ ಆಗುತ್ತೇವೆ' ಇದರಿಂದ ತಲೆಬಿಸಿ ಮಾಡಿಕೊಂಡವಳು ರಾಜೀವ್‌ನ ಮಡದಿ.

ಈ ಮದುವೆಯಾಗದ ಹೆಣ್ಣುಗಳೆಲ್ಲಾ ಸಂಸಾರಸ್ಥರನ್ನೆ ಏಕೆ ತಮ್ಮ ಪ್ರೇಮ ಪ್ರಕರಣಕ್ಕೆ ಅರಿಸಿಕೊಳ್ಳುತ್ತಾರೆ. ನಮ್ಮಂತಹವರಿಲ್ಲವೇ ಎಂದು ಬ್ರಹ್ಮಚಾರಿ ನಟರೊಬ್ಬರ ಪ್ರಶ್ನೆ.

x x x x

ನಟ ಅನಂತನಾಗ್ ಜನತಾ ಪಕ್ಷಕ್ಕೆ ಸಪೋರ್ಟ್ ಮಾಡುವ ರಿಪೋರ್ಟ್ ಕೇಳಿ ಕೆಲ ಜನತಾದವರಿಗೆ ಹಾರ್ಟ್ ಶಾರ್ಟ್ ಆಗಲು ಆರಂಭಿಸಿದೆಯಂತೆ. ಕಾಂಗ್ರೆಯವರಿಗೆ ನಡುಕವಾಗುವುದು ಬಿಟ್ಟು ಜನತಾದವರಿಗೇ ಕಾಯಿಲೆ ಶುರುವಾಯಿತಲ್ಲಾ ಅಂತ ಅನಂತ್, ಬಿಸಿಲಾದರೇನು? ಮಳೆಯಾದರೇನು? ಎಂಬ ಹಾಡು ಹಾಡುತ್ತಾ ರಾಮಕೃಷ್ಣ ಹೆಗಡೆಯವರಿಗೆ ಸಮಾಧಾನ ಮಾಡುತ್ತಿದ್ದಾರಂತೆ.

ಅನಂತ್ ಚುನಾವಣೆಗೆ ನಿಂತು ಗೆದ್ದು,

ಮುಂಗಾರು

ಶಸ್ತ್ರದಿಂದ ಸ್ನೇಹ ಬೆಳೆಯದು

ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರು ಅಮೆರಿಕ ಯಾತ್ರೆಯನ್ನು ಪೂರ್ತಿ ಗೊಳಿಸಿದ್ದಾರೆ. ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಯೋಗ ಸಾಧಿಸುವ ಎರಡು ಉಪಕ್ರಮಗಳನ್ನು ಪ್ರಾರಂಭಿಸಬೇಕೆಂಬ ನಿರ್ಧಾರ ಈ ಶೃಂಗ ಸಭೆಯಲ್ಲಿ ಆಗಿರುವುದು ಈ ಯಾತ್ರೆಯಿಂದ ಸಾಕಾರಗೊಂಡ ಸಾಧನೆಗಳು. ಇದಕ್ಕೂ ಹಿಂದೆ ಈಗ್ಗೆ ಸುಮಾರು ಒಂದು ತಿಂಗಳ ಕೆಳಗೆ ಸಂಪರ್ಕ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎರಡೂ ರಾಷ್ಟ್ರಗಳು ಒಡಂಬಡಿಕೆಯೊಂದನ್ನು ಮಾಡಿಕೊಂಡಿರುವುದು ಭಾರತದಲ್ಲಿ ಬಂದ ಹೊಸ ನಾಯಕತ್ವದ ಬಗ್ಗೆ ಅಮೆರಿಕದವರಿಗೆ ಒಲವಿದೆ ಎಂಬುದರ ಸೂಚನೆಯಾಗಿತ್ತಲ್ಲದೆ ರಾಜೀವ ಗಾಂಧಿಯವರ ಅಮೆರಿಕ ಭೇಟಿಗೆ ಉತ್ತಮ ರಂಗ ತಾಲೀಮನ್ನೂ ನಡೆಸಿತ್ತು.

ರಾಜೀವ ಗಾಂಧಿ ಭೇಟಿಯ ಕೊನೆಯಲ್ಲಿ ಹೊರಡಿಸಲಾದ ಜಂಟಿ ಪ್ರಣಾಳಿಕೆ ದ್ವಿಪಕ್ಷೀಯ ವ್ಯಾಪಾರ ವಹಿವಾಟು, ತಾಂತ್ರಿಕ ಸಹಯೋಗ ವಿಸ್ತರಣೆಯ ಕುರಿತೂ ಪ್ರಸ್ತಾಪಿಸಿದೆ. ಉನ್ನತ ಮಟ್ಟದ ವ್ಯಾಪಾರ ಮತ್ತು ಬಂಡವಾಳ ಹೂಡಿಕೆ ನಿಯೋಗಗಳು ಪರಸ್ಪರ ಭೇಟಿ ನೀಡುವ ಸಾಧ್ಯತೆಯನ್ನು ಪ್ರಣಾಳಿಕೆಯು ಸೂಚಿಸಿದೆ.

ಭಾರತಕ್ಕೆ ಅಮೆರಿಕವು ಶಸ್ತ್ರಾಸ್ತ್ರ ಮಾರಾಟ ಮಾಡುವ ವಿಚಾರವೂ ಅಧಿಕಾರಿಗಳ ಮಟ್ಟದಲ್ಲಿಯೂ ಬಹುಶಃ ಶೃಂಗ ಮಟ್ಟದಲ್ಲಿಯೂ ಚರ್ಚೆಗೆ ಬಂದಿದೆ ಎಂಬುದು ಸ್ಪಷ್ಟ. ಅಮೆರಿಕದಿಂದ ಶಸ್ತ್ರವನ್ನು ಕೊಳ್ಳುವ ವಿಚಾರದಲ್ಲಿ ಭಾರತದ ನಾಯಕರ ಹಾಗೂ ಜನಸಮುದಾಯದ ಭಾವನೆಗಳು ಹಾಗೂ ಅಭಿಪ್ರಾಯಗಳೇನು ಎಂದು ಅರಿಯುವ ಉದ್ದೇಶದಿಂದಲೇ ಬಹುಶಃ ಇಂತಹ ವಹಿವಾಟಿಗೆ ಅಮೆರಿಕದ ನಾಯಕರು ಸಿದ್ಧರಿದ್ದಾರೆ ಎಂಬ ಸುದ್ದಿಯನ್ನು ಪ್ರಚಾರ ಮಾಧ್ಯಮಗಳಲ್ಲಿ ಅಮೆರಿಕದ ಕಡೆಯಿಂದ ತೇಲಿ ಬಿಡಲಾಯಿತು, ಆಯುಧಗಳ ಮಾರಾಟಕ್ಕೆ ಕೆಲವು ಶರತ್ತುಗಳನ್ನು ಜೋಡಿಸಲಾಗಿತ್ತು. ಮುಂದೆ ನಿರ್ಧರಿಸಲಾಗುವ ಯಾವುದೇ ಶಾಸನವು ಹಿಂದಿನ ಶಸ್ತ್ರ ಪೂರೈಕೆ ಒಡಂಬಡಿಕೆಗೂ ಪೂರ್ವಾನ್ವಯವಾಗಿ ಅನ್ವಯವಾಗಬೇಕು ಎಂಬುದು ಇವುಗಳಲ್ಲಿ ಮಹತ್ವದಾದ್ದು. ಇದರರ್ಥ ಏನೆಂದರೆ ಮುಂದೆ ಯಾವುದೇ ಒಂದು ದಿನ ಅದನ್ನು ಮುಂದೆ ಶಸ್ತ್ರ ಪೂರೈಕೆ ಕರಾರನ್ನು ಕೈಗೊಳ್ಳಬಾರದೆಂದು ನಿರ್ಧರಿಸುವ ಹಕ್ಕು ಮಾತ್ರವೇ ಅಲ್ಲದೆ ಹಿಂದೆ ಸಹಿ ಹಾಕಲಾದ ಕರಾರುಗಳನ್ನೂ ಅರ್ಧಕ್ಕೆ ನಿಲ್ಲಿಸಿಬಿಟ್ಟು ಇಡಿಯ ಶಸ್ತ್ರ ಪೂರೈಕೆಯನ್ನೇ ಬಂದ್ ಮಾಡಿ ಶಸ್ತ್ರಗ್ರಾಹಕ ದೇಶವನ್ನು ಇಕ್ಕಟ್ಟಿಗೆ ಸಿಲುಕಿಸುವುದಾಗಿದೆ.

ಸ್ವರಕ್ಷಣೆಯ ಬಗ್ಗೆ ಕಾಳಜಿಯಿರುವ ಯಾವ ದೇಶವೂ ಇಂತಹ ಶರತ್ತುಗಳಿಗೆ ಒಪ್ಪುವ ಸಾಧ್ಯತೆಯಿಲ್ಲ. ಸಹಜವಾಗಿಯೇ ಭಾರತದ ನಾಯಕರೂ ಅಂತಹ ಕೊಡುಗೆಯನ್ನು ತಿರಸ್ಕರಿಸಿದ್ದಾರೆ.

ಮೂಲತಃ ಬಾಂಧವ್ಯ ಬೆಳೆಸಲು ಶಸ್ತ್ರ ಕೊಡಬೇಕು ಎಂಬ ಭಾವನೆ ಹಾಗೂ ಭಾರತಕ್ಕೆ ಶಸ್ತ್ರ ಪೂರೈಕೆ ನಿಲ್ಲಿಸಿದ್ದರಿಂದ ಸಂಬಂಧ ಕೆಟ್ಟು ಹೋಗಿದೆ ಎಂಬ ತೀರ್ಮಾನ- ಇಲ್ಲೇ ಅಮೆರಿಕದ ನಾಯಕರು ದಾರಿ ತಪ್ಪಿದ್ದಾರೆ ಎಂದು ಹೇಳಬೇಕಾಗಿದೆ ಅಥವಾ ಬಾಂಧವ್ಯ ಸುಧಾರಣೆಯ ಉದ್ದೇಶ ಅಮೆರಿಕದವರಿಗೆ ಇದೆ ಎಂಬುದಕ್ಕಿಂತಲೂ ಭಾರತ ಮತ್ತು ಪಾಕಿಸ್ತಾನಗಳನ್ನು ಪರಸ್ಪರರ ಮೇಲೆ ಎತ್ತಿಕಟ್ಟಿ, ಅವನಿಗೊಂದು ಕತ್ತಿ- ಇವನಿಗೊಂದು ದೊಣ್ಣೆ ಕೊಟ್ಟು ಬಡಿದಾಟವನ್ನು ಏರ್ಪಡಿಸಿ ಈ ಗೊಂದಲದಲ್ಲಿ ಬೇಳೆ ಬೇಯಿಸಿಕೊಳ್ಳುವುದು, ತನ್ನ ಕತ್ತಿ ಹಾಗೂ ದೊಣ್ಣೆ ಎರಡಕ್ಕೂ ಗ್ರಾಹಕನನ್ನು ಕಂಡುಕೊಳ್ಳುವುದು ಶಸ್ತ್ರ ಮಾರುಕಟ್ಟೆಯ ದೊಡ್ಡ ವರ್ತಕನಾಗಿರುವ ಅಮೆರಿಕದ ಉದ್ದೇಶವಾಗಿದೆ ಎಂದು ತಿಳಿಯಬೇಕಾಗಿದೆ.

ಶಸ್ತ್ರ ಮಾರಾಟದ ಮೇಲೆ ಆಧಾರಿತವಾದ ಬಾಂಧವ್ಯ ಬಹುಕಾಲ ಬಾಳದೆಂಬುದನ್ನು ನಾವೂ ಅಮೆರಿಕವೂ ಎಷ್ಟು ಬೇಗ ಅರಿತರೆ ಅಷ್ಟು ಒಳ್ಳೆಯದು. ಇಂದು ಆಗಬೇಕಾದದ್ದು ಯುದ್ಧಗಳನ್ನು ಬೆಳೆಸುವ ವ್ಯವಹಾರವಲ್ಲ, ಜನಸಮುದಾಯಗಳ ಉತ್ಕರ್ಷಕ್ಕೆ ಅನುವು ಮಾಡಿಕೊಡುವ ಕಾರ್ಯಕ್ರಮಗಳಿಗೆ ಸಹಾಯ ಮತ್ತು ಸಹಕಾರ. ನಾಡಿನ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನೆರವು. ಇದು ದಾನವಾಗಿ ಬರಬೇಕಿಲ್ಲ. ದೊಡ್ಡ ಯೋಜನೆಗಳಿಗೆ ಸೌಮ್ಯ ಶರತ್ತಿನ ಸಾಲವಾಗಿ ಬರಬಹುದು. ಜನೋಪಯೋಗಿ ಕೆಲಸಗಳಿಗೂ ಕೈಗಾರಿಕೆಗಳಿಗೂ ತಂತ್ರಜ್ಞಾನದ ರೂಪದಲ್ಲಿ ಬರಬಹುದು. ಈ ಕ್ಷೇತ್ರಗಳಲ್ಲಿ ಸಹಭಾಗಿತ್ವಕ್ಕೆ ಒತ್ತು ಕೊಡಬೇಕೇ ವಿನಹ ಆಯುಧ ಕೊಟ್ಟು ಸ್ನೇಹ ಸಂಪಾದನೆ ಮಾಡುವ, ಆ ಮೂಲಕ ಭಾರತ-ಪಾಕಿಸ್ತಾನಗಳನ್ನು ಪರಸ್ಪರ ಎತ್ತಿ ಕಟ್ಟಿ ಬಡಿದಾಡಿಸುವ ಸ್ನೇಹ ನಮಗೆ ಬೇಡ ಎಂದು ಸ್ಪಷ್ಟವಾಗಿ ಹೇಳಬೇಕು.

ಈ ನಿಟ್ಟಿನಲ್ಲಿ ರಾಜೀವ ಗಾಂಧಿ ಅವರ ಭೇಟಿ ತಂದಿರುವ ಫಲಿತಾಂಶ ರಚನಾತ್ಮಕವಾದದ್ದು.

ಬಂಡವಾಳಶಾಹಿ ನೀತಿಗೆ ಮಜೂರರ ಖಂಡನೆ

ಮಂಗಳೂರು, ಜೂ. 17- ಇತ್ತೀಚೆಗೆ ಇಲ್ಲಿ ಎ.ಐ.ಟಿ.ಯು.ಸಿ. ಆಶ್ರಯದಲ್ಲಿ ಜರಗಿದ ದ.ಕ. ಜಿಲ್ಲಾ ಮಜೂರರ ಸಮಾವೇಶವು ಕರ್ನಾಟಕ ರಾಜ್ಯ ಸರಕಾರದ ಬಂಡವಾಳಶಾಹಿ ಪರ ಮತ್ತು ಮಜೂರ ವಿರೋಧಿ ನೀತಿಯನ್ನು ಖಂಡಿಸುವ ನಿರ್ಣಯಗಳನ್ನು ಅಂಗೀಕರಿಸಿದೆ.

ಎ.ಐ.ಟಿ.ಯು.ಸಿ. ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಎಂ. ಸಿ. ನರಸಿಂಹನ್ ಅವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಎ.ಐ.ಟಿ.ಯು.ಸಿ. ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ವಿ ಕಕ್ಕಿಲ್ಲಾಯರು ನಿರ್ಣಯಗಳನ್ನು ಮಂಡಿಸಿದರು.

1885-86ರ ಮುಂಗಡ ಪತ್ರವು ಸಾಮಾನ್ಯ ಜನರನ್ನು ಶೋಷಣೆ ಮಾಡಿ ಭಾರೀ ಶ್ರೀಮಂತರನ್ನು ಪೋಷಣೆಗೆ ಅವಕಾಶ ಕಲ್ಪಿಸುವಂತಹುದೆಂದು ಸಮಾವೇಶದಲ್ಲಿ ಟೀಕಿಸಲಾಗಿದೆ. ಈ ಮುಂಗಡ ಪತ್ರದಿಂದಾಗಿ ಜನತೆಯ ಮೇಲಾಗುವ ಕೆಡುಕನ್ನು ಮನವರಿಕೆ ಮಾಡಿಕೊಟ್ಟು ಸರಕಾರದ ಮೇಲೆ ಬಲವಾದ ಒತ್ತಾಯ ಹೇರಲೂ ನಿರ್ಧರಿಸಲಾಯಿತು. ಅದಕ್ಕಾಗಿ ಪ್ರತಿಭಟನಾ ದಿನ ಆಚರಣೆ, ತಾಲೂಕು ಕಚೇರಿಗಳ ಮುಂದೆ ಸಾಮೂಹಿಕ ಧರಣಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಸಾಮೂಹಿಕ ಪಿಕೆಟಿಂಗ್ ನಡೆಸುವ ಮೂರು ಹಂತದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಮಾವೇಶದಲ್ಲಿ ನಿರ್ಧರಿಸಲಾಗಿದೆ.

ನವಮಂಗಳೂರು ಬಂದರು ಟ್ರಸ್ಟ್ ಆಡಳಿತದ ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸಿ ಕಾರ್ಮಿಕರು ನಡೆಸುತ್ತಿರುವ ಹೋರಾಟಕ್ಕೆ ಸಮಾವೇಶ ತನ್ನ ಬೆಂಬಲ ವ್ಯಕ್ತಪಡಿಸಿದೆ. ರೇಶನ್ ಕಾರ್ಡ್ ಮೂಲಕ ವಿತರಣೆ ಮಾಡುವ ಅಕ್ಕಿಯ ಪ್ರಮಾಣದಲ್ಲಿ ಕಡಿತಗೊಳಿಸಿರುವುದನ್ನು ವಿರೋಧಿಸಿದೆ. ತಕ್ಷಣ ಪೂರ್ಣ ಪ್ರಮಾಣದಲ್ಲಿ ಅಕ್ಕಿಯನ್ನು ಒದಗಿಸಲು ಒತ್ತಾಯಿಸಿದೆ.

ಕನಿಷ್ಠ ಕೂಲಿ ಕಾನೂನಿಗೆ ಒಳಪಡುವ ಎಲ್ಲ ಕೈಗಾರಿಕೆಗಳ ಮಜೂರರಿಗೆ ಪ್ರಸಕ್ತ ಜೀವನ ವೆಚ್ಚಕ್ಕೆ ಸರಿಹೊಂದುವ ತುಟ್ಟಿ ಭತ್ತೆ ಮತ್ತು ಕನಿಷ್ಠ ಕೂಲಿಯನ್ನು ತಕ್ಷಣ ನಿರ್ಣಯಿಸಬೇಕೆಂದು ಆಗ್ರಹ ಪಡಿಸಿದೆ. ನಗರದ ಹೋಟೇಲುಗಳಲ್ಲಿ ಊಟ ತಿಂಡಿ ಬೆಲೆಯನ್ನು ವಿಪರೀತವಾಗಿ ಏರಿಸಿರುವುದನ್ನು ತಡೆಗಟ್ಟಬೇಕೆಂದು ಒತ್ತಾಯಿಸುವ ನಿರ್ಣಯವನ್ನೂ ಅಂಗೀಕರಿಸಲಾಗಿದೆ.

ಕರ್ನಾಟಕ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಪಿ. ಆರ್. ಕಾರಂತ ಮತ್ತು ಸಿಂಡಿಕೇಟ್ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಎಂ. ಆರ್. ಆಚಾರ್ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಎ.ಐ.ಟಿ.ಯು.ಸಿ. ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ. ಶೀನ ಸ್ವಾಗತಿಸಿದರು. ಉಮಾನಾಥ ನಾಯ್ಕ್ ವಂದಿಸಿದರು.

ಅನ್ನ ಸತ್ಯಾಗ್ರಹಕ್ಕೆ ಬೆಂಬಲ

ಮಂಗಳೂರು, ಜೂ. 17- ಕರ್ನಾಟಕ ...ರ್ಟ್ ಆಂಡ್ ಜನರಲ್ ವರ್ಕರ್ಸ್ ಎಂಪ್ಲಾಯೀಸ್ ಯೂನಿಯನ್ ಅಧ್ಯಕ್ಷ ಎಂ. ...ಕರ್ರು ಶೆಟ್ಟಿಯವರ ನೇತೃತ್ವದಲ್ಲಿ ನವಮಂಗಳೂರು ಬಂದರು ದಕ್ಕೆ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ನಡೆಸುತ್ತಿರುವ ಅನ್ನ ಸತ್ಯಾಗ್ರಹಕ್ಕೆ ಮೀನ... ವರ್ಕರ್ಸ್ ಯೂನಿಯನ್ನಿನ ... ಮತ್ತು ಕುದುರೆಮುಖ [illegible]

ರಸ್ತೆಯಲ್ಲಿ ನಡೆಯಲೂ ಲೈಸೆನ್ಸ್ !

ಕಾಸರಗೋಡು, ಜೂ. 17 :– ಉಪ್ಪಳ ರೈಲ್ವೆ ಸ್ಟೇಶನ್ ರಸ್ತೆ ಬದಿಯ ನಿವಾಸಿಗಳು ಆ ರಸ್ತೆಯನ್ನು ನಡೆದಾಡಲು ಬಳಸಬೇಕಾದರೆ ಲೈಸನ್ಸ್ ಪಡೆಯಬೇಕೆಂದು ರೈಲ್ವೇ ಅಧಿಕಾರಿಗಳು ವಿಧಿಸಿರುವ ಆದೇಶವನ್ನು ಕಾಸರಗೋಡು ಲೋಕಸಭಾ ಸದಸ್ಯ ಐ. ರಾಮ ರೈ ಹಾಗೂ ಕಾಸರಗೋಡು ಜಿಲ್ಲಾ ಇಂಟಕ್ ಪ್ರಧಾನ ಕಾರ್ಯದರ್ಶಿ ಜೋಸ್ ಕೆ. ಎಂ. ಅವರು ಖಂಡಿಸಿದ್ದಾರೆ.

ಈ ಆದೇಶವನ್ನು ತಕ್ಷಣ ರದ್ದುಗೊಳಿಸುವಂತೆ ರೈಲ್ವೇ ಅಧಿಕಾರಿಗಳಿಗೆ ತಂತಿ ಮೂಲಕ ಒತ್ತಾಯಿಸಿದ್ದಾರೆ.

ಮಹಿಳೆ ಮೇಲೆ ಪೊಲೀಸ್ ಹಲ್ಲೆ?

ಕಾಸರಗೋಡು, ಜೂ. 17- ಆದೂರಿನ ಸಮೀಪದ ಪಡಿಯತ್ತಡ್ಕದ ಗೇರುಬೀಜ ಪ್ಲಾಂಟೇಶನ್ ಕಾರ್ಮಿಕಳಾದ ಕಲ್ಯಾಣಿ (32) ಎಂಬವರ ಮೇಲೆ ಆದೂರು ಪೊಲೀಸ್ ಠಾಣೆಗೆ ಸೇರಿದ ಗಂಗಾಧರನ್ ನಾಯರ್ ಹಲ್ಲೆ ನಡೆಸಿದರೆನ್ನಲಾಗಿದ್ದು, ಆಕೆ ತೀವ್ರ ಗಾಯಗಳೊಂದಿಗೆ ಕಾಸರಗೋಡಿನ ಸರಕಾರೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನೆರೆಮನೆಯ ಕೃಷ್ಣ ಹಾಗೂ ಕಾರ್ತ್ಯಾಯಿನಿ ಎಂಬವರೊಡನೆ ತನಗೆ ಆಸ್ತಿ ಸಂಬಂಧವಾಗಿ ವಿವಾದವಿತ್ತೆಂದೂ, ಈ ಬಗ್ಗೆ ಅವರಿತ್ತ ದೂರಿನನ್ವಯ ಪೊಲೀಸರು ತಮ್ಮ ಮನೆಗೆ ಬಂದು, ತಮ್ಮನ್ನೆಳೆದು ಹಾಕಿ ಥಳಿಸಿದರೆಂದೂ ಕಲ್ಯಾಣಿ ಆಪಾದಿಸಿದ್ದಾರೆ. ಅನಂತರ ಪೊಲೀಸರ ಕುಮ್ಮಕ್ಕಿನೊಂದಿಗೆ ನೆರೆಮನೆಯವರು ತಮ್ಮ ಮನೆಯನ್ನು ಹಾಳು ಗೆಡವಿದರೆಂದೂ ಆಕೆ ಕಣ್ಣೀರಿಡುತ್ತ ಪತ್ರಕರ್ತರಿಗೆ ತಿಳಿಸಿದರು.

ಶುಭ ವಿದಾಯ

ಮಂಗಳೂರು, ಜೂ. 17– ಕಳೆದ 3 ವರ್ಷಗಳಲ್ಲಿ ಇಲ್ಲಿಗೆ ಸಮೀಪದ ತೆಂಕ ಎಡಪದವು ಗ್ರಾಮದ ಕೆನರಾ ಬ್ಯಾಂಕ್ ಶಾಖೆಯಲ್ಲಿ ಮೆನೇಜರ್ ಆಗಿ ಸೇವೆ ಸಲ್ಲಿಸಿದ ಎಸ್. ಕುಡ್ವಾ ಅವರನ್ನು ಇತ್ತೀಚೆಗೆ ಊರ ನಾಗರಿಕರು ಸನ್ಮಾನಿಸಿದರು.

ಕುಡ್ವಾ ಅವರು ಭಡ್ತಿ ಹೊಂದಿ ಕಲ್ಯತ್ತಾಕ್ಕೆ ತೆರಳಲಿರುವರು.

ಅರಣ್ಯ ಅಕ್ರಮ ವಿರುದ್ಧ 52 ತಕ್ಷೀರು ದಾಖಲೆ

ಮಂಗಳೂರು, ಜೂ. 17– ಮಂಗಳೂರು ವಿಭಾಗದ ಸುಬ್ರಹ್ಮಣ್ಯ ವಲಯ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು 1984–85ನೇ ಸಾಲಿನಲ್ಲಿ 50 ಸಾವಿರ ರೂ. ಮೌಲ್ಯದ ಅಕ್ರಮ ಅರಣ್ಯೋತ್ಪನ್ನಗಳನ್ನು ವಶಪಡಿಸಿ 52 ಅರಣ್ಯ ತಕ್ಷೀರುಗಳನ್ನು ದಾಖಲು ಪಡಿಸಿಕೊಂಡಿದ್ದಾರೆ. ಭಾರದ್ವ ಸೆಕ್ಷನ್ ಬಾಳುಗೋಡು, ನಾಲ್ಕೂರು, ನಡುಗಲ್ಲು, ಸುಬ್ರಹ್ಮಣ್ಯ ಸೆಕ್ಷನ್ ಮಾನ್ನಾಡ ಮೊದಲಾದ ಸರಕಾರಿ ಕಾಡಿನಲ್ಲಿ ಮರವನ್ನು ಕಡಿದು ಸಿಗಿದ ಮರದ ದಿಮ್ಮಿಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಲಾಗಿದೆ ಎಂದು ತಿಳಿದುಬಂದಿದೆ.

ಇದೇ ವಲಯವು 1983–84ನೇ ಸಾಲಿನಲ್ಲಿ ಸುಮಾರು 34,000ರೂಗಳಿಗೂ ಮಿಕ್ಕ ಬೆಲೆಬಾಳುವ 34 ಅರಣ್ಯ ಅಕ್ರಮಗಳನ್ನು ಪತ್ತೆ ಹಚ್ಚಿದ್ದು ಸರಕಾರಕ್ಕೆ ಸುಮಾರು 24 ಸಾವಿರ ರೂಗಳಷ್ಟು ದಂಡನಾ ಶುಲ್ಕವನ್ನು ದೊರಕಿಸಿಕೊಟ್ಟಿರುವುದಾಗಿಯೂ ತಿಳಿದು ಬಂದಿದೆ.

ಪಟ್ಟಣ ಅರಣ್ಯ ಇಲಾಖೆ ನರ್ಸರಿಯಲ್ಲಿ 52 ಜಾತಿಯ 6ಲಕ್ಷ ಸಸಿಗಳನ್ನು ಬೆಳಸಲಾಗಿದೆ. ಅವುಗಳನ್ನು ಗ್ರಾಮಸ್ಥರಿಗೆ ಹಾಗೂ ಶಾಲೆ ಮಕ್ಕಳಿಗೆ ಉಚಿತವಾಗಿ ಹಂಚಲಾಗಿದೆ.

80 ಬಡಜನರಿಗೆ ಮನೆಕಟ್ಟಲು ಅವರ ಆವರಣದಲ್ಲಿರುವ ಮರ ಕಡಿಯಲು ದಡೆ ಪರ್ಮಿಟ್ ನೀಡಲಾಗಿದೆ. ಮಂಗಳೂರು ವಿಭಾಗದ ಅರಣ್ಯ ಸಂಚಾರಿ ದಳ ಸಿಬ್ಬಂದಿಗಳು ನಾನಾ ಕಡೆಗಳಲ್ಲಿ ನಿರಂತರ ದಾಳಿಗಳನ್ನು ನಡೆಸಿದ್ದು ಸುಮಾರು 58 ತಕ್ಷೀರುಗಳು ದಾಖಲಾಗಿವೆ. ಸುಮಾರು 50 ಸಾವಿರ ರೂಗಳ ಮರವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಲಾಗಿದೆ. ಉಪ್ಪಿನಂಗಡಿ ವಲಯದ ಶಿರಾಡಿ ಎಂಬಲ್ಲಿ ಸರಕಾರಿ ಕಾಡಿನಿಂದ ಬೀಟೆ ಹಾಗೂ ಹೆಬ್ಬಲಸು ಮರವನ್ನು ಕಡಿದು ಸಾಗಿಸಿದ್ದು, ಇನ್ನೂ ಪತ್ತೆಯಾಗಿಲ್ಲ. ಮುಂದಿನ ತನಿಖೆಯನ್ನು ಅರಣ್ಯ ಸಂಚಾರಿ ದಳದ ಸಹಾಯಕ ವನ ಸಂರಕ್ಷಣಾಧಿಕಾರಿ ಶ್ರೀ ಕೆ. ವಿಠಲ ಚೌಟ ನವರು ನಡೆಸುತ್ತಿದ್ದಾರೆ.

ಮುಂಗಾರು

ಸೋಮವಾರ, ನವೆಂಬರ್ 18, 1985

ಆಶಯ ಹುಸಿಯಾಯಿತು

ಸಂಸತ್ತಿನ ಸಂಕ್ಷಿಪ್ತ ಚಳಿಗಾಲದ ಅಧಿವೇಶನ ಸೋಮವಾರ ಪ್ರಾರಂಭವಾಗಲಿದೆ. ದೇಶದ ಜನ ಸಮುದಾಯದ ಸ್ಪಂದನಕ್ಕೆ ಪ್ರತಿಸ್ಪಂದಿಸಬೇಕಾದ ಈ ಜನಪ್ರತಿನಿಧಿ ಸಭೆಯಲ್ಲಿ ನಾಡಿನ ಮಹತ್ವದ ಆಗುಹೋಗುಗಳು ಚರ್ಚೆಗೆ ಬರಲಿದ್ದು ವಿರೋಧ ಪಕ್ಷಗಳು ಈಗಾಗಲೇ ಅಂಥ ವಿಷಯಗಳ ಹೊಳಹು ಹಾಕಿವೆ.

ಬೆಲೆಯೇರಿಕೆ ಮಹತ್ವದ್ದಾಗಿ ಚರ್ಚೆಗೆ ಬರಲಿದೆ. ರಾಜಕೀಯ ನೈತಿಕತೆ ಹಾಗೂ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಜಗಮೋಹನ್ ಪ್ರಕರಣದ ಚರ್ಚೆಯೂ ಆಗಲಿದೆ. ಏಳನೆ ಯೋಜನೆಯನ್ನು ಪರಿಶೀಲಿಸಲು ಜನಪ್ರತಿನಿಧಿಗಳ ಸಂಸ್ಥೆಯಾದ ಸಂಸತ್ತಿಗೆ ಅವಕಾಶವನ್ನೇ ಕೊಡದೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಅಂಗೀಕರಿಸಿದ್ದು ಕೂಡ ಸಂಸತ್ತಿನಲ್ಲಿ ಮಾರ್ದನಿಗೊಳ್ಳಲಿದೆ.

ಈ ಎಲ್ಲಾ ವಿಚಾರಗಳು ತುಂಬ ಮಹತ್ವವಾದವುಗಳೇ ಆಗಿವೆ. ಸಂಸತ್ತು ಇವುಗಳ ಬಗ್ಗೆ ನಿರ್ವಿಕಾರ ಮನಸ್ಸಿನಿಂದ ಚರ್ಚೆ ಮಾಡಬೇಕಾದ ಅಗತ್ಯವುಂಟು. ಬೆಲೆ ಏರಿಕೆ ಪ್ರಶ್ನೆ ಜನಜೀವನವನ್ನು ಬಾಧಿಸುತ್ತಿರುವ ದೊಡ್ಡ ಸಂಕಟವಾಗಿದೆ. ಈ ವರ್ಷ ಮಾರ್ಚ್ ತಿಂಗಳಲ್ಲಿ ಹೊಸ ಪ್ರಧಾನಿ ರಾಜೀವಗಾಂಧಿಯವರ ಸರಕಾರ ತನ್ನ ಮೊತ್ತ ಮೊದಲ ಆಯವ್ಯಯ ಮುಂಗಡ ಪತ್ರದಲ್ಲಿ ಖಾಸಗಿ ರಂಗಕ್ಕೆ ಅಪಾರವಾದ ವಿನಾಯಿತಿಗಳನ್ನೂ ರಿಯಾಯಿತಿಗಳನ್ನೂ ನೀಡಿತು. ಆ ಮೇಲೆಯೂ ಆಗಿಂದಾಗ್ಗೆ ಬಹಳಷ್ಟು ಪ್ರೋತ್ಸಾಹವನ್ನು ಖಾಸಗಿ ಉದ್ಯಮಿಗಳಿಗೆ ನೀಡಲಾಗಿದೆ. ಖಾಸಗಿಯವರು ಈ ಪ್ರೋತ್ಸಾಹಗಳನ್ನು ಬಳಸಿಕೊಂಡು ಉತ್ಪಾದನೆ ಹೆಚ್ಚಳಕ್ಕೆ ಚಾಲನೆ ನೀಡುವ ಮೂಲಕ ವಾಣಿಜ್ಯ ಚಟುವಟಿಕೆ ಉತ್ತೇಜಿತವಾಗಿ, ಸಾರ್ವಜನಿಕರ ಬಳಕೆಗೆ ಸಾಕಷ್ಟು ಸಾಮಗ್ರಿ ದೊರೆಯುವುದೆಂಬ ಆಶ್ವಾಸನೆಯನ್ನು ಸರಕಾರ ಅಂದು ನೀಡಿತ್ತು. ಈ ಮೂಲಕ ಹಣದುಬ್ಬರ ನಿಯಂತ್ರಣಕ್ಕೆ ಬರುವುದು ಎಂಬ ನಿರೀಕ್ಷೆ ಸರಕಾರದ್ದಾಗಿತ್ತು.

ಆದರೆ ಈ ಲೆಕ್ಕಾಚಾರವೆಲ್ಲಾ ತಲೆ ಕೆಳಗಾಗಿದೆ. ಖಾಸಗಿ ಉದ್ಯಮಿಗಳು ಸರಕಾರ ಕೊಟ್ಟ ವಿನಾಯಿತಿಗಳನ್ನೆಲ್ಲಾ ಜೇಬಿಗೆ ಇಳಿಸಿ ಕೂತಿದ್ದಾರೆ. ಸರಕಾರ ಈ ಹಣಕಾಸು ವರ್ಷದಲ್ಲಿ ಈ ತನಕ ನೋಟು ಮುದ್ರಿಸಿ ಚಲಾವಣೆಗೆ ಹಾಕಿದ ಏಳು ಸಾವಿರ ಕೋಟಿ ರೂಪಾಯಿಗಳು ಹಣದುಬ್ಬರದ ಬೆಂಕಿಗೆ ಪೆಟ್ರೋಲು ಸುರಿದಿವೆ. ಅದು ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ರೂಪದಲ್ಲಿ ಗೋಚರವಾಗುತ್ತಿದೆ. ಸಕ್ಕರೆ, ವನಸ್ಪತಿ ಮುಂತಾದವುಗಳ ಬೆಲೆ ಏರಿದೆ. ಖಾಸಗಿಯವರಿಗೆ ನೀಡಿದ ಪ್ರೋತ್ಸಾಹದಿಂದ ವಿಪುಲಕೆ ಸಾಮಗ್ರಿ, ಬೆಲೆ ಇಳಿಕೆ ಎರಡೂ ಹುಸಿಯಾಗಿದೆ. ಸಾಮಗ್ರಿಗಳ ಬೆಲೆ ಏರುತ್ತಲೇ ಸಾಗಿದೆ. ಇದು ಹೀಗೆಯೇ ಆಗುವುದೆಂದು ಎಂಟು ತಿಂಗಳ ಹಿಂದೆ (18–3–1985) ನಾವು ಇದೇ ಅಂಕಣದಲ್ಲಿ ಬರೆದಿದ್ದೆವು.

ಬೆಲೆ ಏರಿಕೆಗೆ ಚಾಲನೆ ಸರಕಾರದ್ದೇ ಆಗಿದೆ. ಖಾಸಗಿಯವರ ಮೇಲಿನ ಭರವಸೆ ಹುಸಿಯಾಗುವುದೆಂಬ ಬಗ್ಗೆ ಸರಕಾರ ಯಾರ ಬಳಿಯೂ ಕಣಿ ಕೇಳಬೇಕಾಗಿರಲಿಲ್ಲ. ಇಂದು ಬೆಲೆ ಏರಿಕೆಯಲ್ಲಿ ಖಾಸಗಿಯವರೂ ಸರಕಾರವೂ ಪೈಪೋಟಿಗಿಳಿದಂತಿದೆ. ಬಸ್ಸು ಸಾರಿಗೆ, ವಿದ್ಯುತ್ ಮುಂತಾದವುಗಳ ಬೆಲೆ ಏರಿಸುವಂತೆ ಯೋಜನಾ ಆಯೋಗವೇ ಸೂಚಿಸುತ್ತಿದೆ.

ವರ್ಷವರ್ಷವೂ ಸರಕಾರ ಯೋಜನೆಗಳ ಹೆಸರಿನಲ್ಲಿ ಮಾಡುತ್ತಿರುವ ವೆಚ್ಚ ಉತ್ಪಾದನೆ ಹೆಚ್ಚಳಕ್ಕೆ ಚಾಲನೆ ಕೊಡುತ್ತಿಲ್ಲ. ಸಾಮಗ್ರಿಗಳ ಉತ್ಪಾದನೆ ಹೆಚ್ಚುತ್ತಿಲ್ಲ. ದೇಶದಲ್ಲಿ ಸಂಪತ್ತು ನಿರ್ಮಾಣ ಆಗುತ್ತಿಲ್ಲ. ಬದಲಾಗಿ ಹಣ ಸೋರಿ ಹೋಗಿ ಕೆಲವೇ ಲಕ್ಷ ಮಂದಿಯ ಜೇಬು ಭರ್ತಿಯಾಗಿ ಶ್ರೀಮಂತಿಕೆಯ ಹೊಸ ಪೊಟರೆಗಳ ನಿರ್ಮಾಣ ಆಗುತ್ತಿದೆ. ಅಭಿವೃದ್ಧಿಯ ಪ್ರಕ್ರಿಯೆಯನ್ನು ಸರಿದಾರಿಯಲ್ಲಿ ನಡೆಸುವ ರಾಜಕೀಯ ಮುತ್ಸದ್ದಿತನ ಸರಕಾರಕ್ಕೆ ಇಲ್ಲವಾಗಿರುವುದೇ ಈ ರೋಗದ ಮೂಲವಾಗಿದೆ.

ಯೋಜನೆಯ ದಿಕ್ಕು ತಪ್ಪಿ ಹೋಗಿದೆ ಎಂದು ಈ ದೇಶದಲ್ಲಿ ವಿಚಾರ ಮಾಡುತ್ತಿರುವ ಎಲ್ಲರೂ ಇಂದು ಹೇಳುತ್ತಿದ್ದಾರೆ. ಆದರೆ ಆ ಬಗ್ಗೆ ಸರಕಾರ ಚಿಂತನೆ ಮಾಡುತ್ತಿರುವುದು ಮಾತ್ರ ಕಾಣಿಸುತ್ತಿಲ್ಲ. ದೇಶದ ಅಭಿವೃದ್ಧಿಯ ನೀಲನಕ್ಷೆಯಾದ ಪಂಚವಾರ್ಷಿಕ ಯೋಜನೆಯ ಸ್ವರೂಪದ ಬಗ್ಗೆ ಸಮಾಲೋಚಿಸಲು ಜನರ ಪ್ರತಿನಿಧಿಗಳ ಸಂಸತ್ತಿಗೂ ಈ ಸರಕಾರ ಅವಕಾಶ ಕೊಟ್ಟಿಲ್ಲ. ಹಿಂದೆಂದೂ ಹೀಗೆ ಆಗಿರಲಿಲ್ಲ. ಇದು ಜನರ ಆವಶ್ಯಕತೆಗಳ ಬಗ್ಗೆ, ಅವರ ಆಶೋತ್ತರಗಳ ಬಗ್ಗೆ ಈ ಸರಕಾರಕ್ಕಿರುವ ನಿಸ್ಸೀಮ ನಿರ್ಲಕ್ಷ್ಯವನ್ನಲ್ಲದೆ ಬೇರೇನನ್ನೂ ಸೂಚಿಸುವುದಿಲ್ಲ.

ಜನಹಿತದ ಬಗ್ಗೆ, ದೇಶದ ಆರ್ಥಿಕ ಬದುಕನ್ನು ಸರಿದಾರಿಯಲ್ಲಿ ನಡೆಸುವ ಬಗ್ಗೆ ಸರಕಾರಕ್ಕೆ ಕಾಳಜಿಯಿಲ್ಲದಿರುವುದು ಕೃಷಿ ಉತ್ಪನ್ನಗಳ ಬೆಲೆ ಕುಸಿಯುತ್ತಿರುವ ವಿದ್ಯಮಾನದಲ್ಲಿ ಪ್ರತಿಫಲನಗೊಂಡಿದೆ. ಹತ್ತಿ ಕಬ್ಬು ಹಾಗೂ ಸೆಣಬಿನ ಬೆಲೆ ಒಂದೇ ಸಮನೆ ಇಳಿಯುತ್ತಿದೆ. ಕಬ್ಬಿನ ಬೆಲೆ ಇಳಿದರೂ ಸಕ್ಕರೆ ಬೆಲೆ ಏರುತ್ತಿದೆ. ಇದು ವಿಚಿತ್ರ ವಿದ್ಯಮಾನವಾಗಿದೆ. ಕೃಷಿ ನಡೆಸಿ ಬದುಕು ಸಾಗಿಸುವ ಮಂದಿ ಈ ದೇಶದಲ್ಲಿ ಎರಡನೆ ದರ್ಜೆಯ ಪ್ರಜೆಗಳಾಗಿರುವುದರ ದ್ಯೋತಕ ಇದಾಗಿದೆ.

ನ್ಯಾಯಾಲಯವೊಂದು ಛೀಮಾರಿ ಹಾಕಿರುವ ದೆಹಲಿಯ ಹಿಂದಿನ ಲೆಫ್ಟಿನೆಂಟ್ ಗವರ್ನರ್ ಜಗಮೋಹನ್ ಅವರು ಇನ್ನೂ ರಾಜ್ಯಪಾಲರ ಅಧಿಕಾರ ಸ್ಥಾನದಲ್ಲಿ ಹಾಯಾಗಿರುವುದು ಹಾಗೂ ಮೊನ್ನೆ ತಾನೇ ನಾಲ್ಕಾರು ರಾಜ್ಯಪಾಲರ ವರ್ಗಾವರ್ಗಿಯನ್ನು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ರಾಜ್ಯ ಸರಕಾರಗಳನ್ನು ಕೇಳದೇ ಮಾಡಿರುವುದು ಶುಚಿಯಾದ ಹಾಗೂ ಮುಕ್ತವಾದ ರಾಜಕೀಯ ನಡೆಸುತ್ತೇನೆಂಬ ರಾಜೀವ ಗಾಂಧಿಯವರ ಹೇಳಿಕೆಯನ್ನು ಪುಷ್ಟೀಕರಿಸುವುದಿಲ್ಲ.

...ಯೋಜನೆಯನ್ನು ಶಿವಮೊಗ್ಗದಲ್ಲಿ ರಾಜ್ಯದ ಕೈಗಾರಿಕಾ ಸಚಿವ ಜೆ. ಎಚ್. ಪಟೇಲ್
...ಚಿತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸುಬ್ಬರಾವ್ ಅವರೂ

...ಊರು ಜಿಲ್ಲೆ ...ಗೆ 90 ಲಕ್ಷ

ಕುಡಿಯುವ ನೀರಿನ ಪ್ರಗತಿಯನ್ನು ಪರಿಶೀಲಿಸಿದ ಸಚಿವರು ಕೊಳವೆ ಬಾವಿಗಳ ದುರಸ್ತಿ ಕಾರ್ಯಗಳ ಬಗ್ಗೆ ಯಾವುದೇ ರೀತಿಯ ದೂರುಗಳು ಬಾರದಂತೆ ಎಚ್ಚರ ವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಆಧುನೀಕರಣ ಮೆಚ್ಚುಗೆ

ಆಡಳಿತದಲ್ಲಿ ಆಧುನೀಕರಣವನ್ನು ಜಾರಿಗೆ ತಂದಿರುವ ಈ ಜಿಲ್ಲೆಯ ಮಾದರಿಯನ್ನು ರಾಜ್ಯದ ಇತರ ಜಿಲ್ಲೆಗಳಲ್ಲೂ ಜಾರಿಗೆ ತರುವುದು ಅಗತ್ಯವಾಗಿದೆ ಎಂದು ಸಚಿವರು ಅಭಿಪ್ರಾಯ ಪಟ್ಟರು.

ಇತ್ತೀಚೆಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ನವೀಕರಣದ ಜೊತೆಗೆ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವಂಥ ವ್ಯವಸ್ಥೆ ಮಾಡಿರುವುದು ಮೆಚ್ಚುವಂಥದ್ದು. ಇದರ ಜೊತೆಗೆ ಜಿಲ್ಲೆಯಲ್ಲಿ ಅನುಷ್ಠಾನಗೊಂಡಿರುವ ಅಭಿವೃದ್ಧಿ ಕಾರ್ಯಗಳು ಬೇರೆ ಜಿಲ್ಲೆಗಳಿಗಿಂತ ಉತ್ತಮ ರೀತಿಯಲ್ಲಿ ನಡೆದಿವೆ ಎಂದು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಗುಂಡು ಹಾರಿಸಿದ ಅರಣ್ಯ ರಕ್ಷಕರ ವಿರುದ್ಧ ಮೊಕದ್ದಮೆ

ಮಡಿಕೇರಿ, ನ. 17– ಅಕ್ರಮ ಮರ ಸಾಗಾಟಗಾರನೊಬ್ಬನ ಮೇಲೆ ಗುಂಡು ಹಾರಿಸಿ ತೀವ್ರಗಾಯಗೊಳಿಸಿದರೆಂದು ವೀರಾಜಪೇಟೆ ಗ್ರಾಮಾಂತರ ಪೊಲೀಸರು ಅರಣ್ಯ ರಕ್ಷಕರೊಬ್ಬರ ವಿರುದ್ಧ ಮೊಕದ್ದಮೆ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಾಕುಪ್ಪ ಪೈಸಲು ಅರಣ್ಯದಲ್ಲಿ ಮರಗಳನ್ನು ಕಳ್ಳಸಾಗಣಿಕೆ ಮಾಡಲು ಯತ್ನಿಸಿದ ತಂಡವೊಂದನ್ನು ಅರಣ್ಯ ರಕ್ಷಕ ರಾಮಪ್ಪ ಅವರು ಪತ್ತೆ ಹಚ್ಚಿ ಬಂಧಿಸುವಷ್ಟರಲ್ಲಿ ಅವರುಗಳು ಪರಾರಿಯಾಗಲು ಯತ್ನಿಸಿದಾಗ ರಾಮಪ್ಪ ಗುಂಡು ಹಾರಿಸಿದರೆನ್ನಲಾಗಿದೆ.

ಕಳ್ಳ ಸಾಗಣಿಕೆದಾರರ ತಂಡದ ಮ್ಯಾಥ್ಯು ಎಂಬವರು ಗುಂಡೇಟಿನಿಂದ ತೀವ್ರ ಗಾಯಗೊಂಡಿದ್ದು, ಅವರನ್ನು ಕಲ್ಲಿಕೋಟೆಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಗಿದೆ.

ದೂರು ದೊರೆತ ವೀರಾಜಪೇಟೆ ಗ್ರಾಮಾಂತರ ಪೊಲೀಸರು ಮೊಕದ್ದಮೆಯೊಂದನ್ನು ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಥಳಿಸಿದರು ಹಣ ಕಿತ್ತರು!

ಚಿಕ್ಕಮಗಳೂರು, ನ. 17– ಕಡೂರು ತಾಲೂಕಿನ ದೊಡ್ಡಪಟ್ಟಣಗೆರೆಯ ಗೋವಿಂದನಾಯ್ಕ ಎಂಬವರಿಗೆ ರಾಮಯ್ಯ, ನಾಗರಾಜು, ಕೃಷ್ಣಮೂರ್ತಿ, ರಂಗಸ್ವಾಮಿ ಎಂಬವರು ಥಳಿಸಿ 200ರೂ. ಗಳನ್ನು ಅಪಹರಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ ಕಡೂರು ಪೊಲೀಸರು ಮೊಕದ್ದಮೆ ದಾಖಲು ಮಾಡಿಕೊಂಡಿದ್ದಾರೆ.

ದುಡ್ಡಿನ ಸುರಿಮಳೆ!

ಭದ್ರಾವತಿ, ನ. 17:– ಇಲ್ಲಿನ ಬಯಲು ರಂಗಮಂದಿರ ಸಮೀಪವಲ್ಲಿರುವ ಪ್ರಾರ್ಥನಾ ಗೃಹವೊಂದರಲ್ಲಿ ದೈವಾರಾಧನೆ ಮಾಡಿದರೆ "ದುಡ್ಡಿನ ಸುರಿಮಳೆ" ಯಾಗುವುದೆಂದು ಕೆಲವು ಮಂದಿ ಮುಗ್ಧ ಜನರಲ್ಲಿ ಮೂಢ ನಂಬಿಕೆಗಳನ್ನು ಬಿತ್ತುತ್ತಿದ್ದಾರೆ.

ಈ ಪ್ರಾರ್ಥನಾ ಗೃಹದ ಧ್ವನಿವರ್ಧಕದಿಂದ ಸಮೀಪದ ಅಂಗಡಿ ಮತ್ತು ಮನೆಗಳಿಗೆ ಕಿರಿಕಿರಿಯುಂಟಾಗುತ್ತಿದೆ.

ಇಂಥವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಇಲ್ಲಿನ ನಾಗರಿಕರು ಸಂಬಂಧಪಟ್ಟವರಲ್ಲಿ ಒತ್ತಾಯಿಸಿದ್ದಾರೆ.

'ತುಂಗಾವಾರ್ತೆ' ಸಂಪಾದಕರಿಗೆ ಪೊಲೀಸ್ ಹಿಂಸೆ?

ತೀರ್ಥಹಳ್ಳಿ, ನ. 17– ಇಲ್ಲಿನ "ತುಂಗಾವಾರ್ತೆ" ವಾರಪತ್ರಿಕೆ ಸಂಪಾದಕ ಡಿ.ಎಸ್.ವಿಶ್ವನಾಥಶೆಟ್ಟಿ ಅವರಿಗೆ ಪೊಲೀಸರು ಮಾನಸಿಕ ಹಿಂಸೆ ನೀಡುತ್ತಿದ್ದಾರೆಂದು ದೂರಿದ್ದಾರೆ.

"ಕೊಪ್ಪದಲ್ಲಿ ಸಂಶಯಾಸ್ಪದ ಸಾವನ್ನಪ್ಪಿದ್ದ ಅಂತೋಣಿ ಫರ್ನಾಂಡಿಸ್ ಎನ್ನುವ ಪೊಲೀಸ್ ಪೇದೆ ಬಗ್ಗೆ ತಮ್ಮ ಪತ್ರಿಕೆಯಲ್ಲಿ ನಿಷ್ಪಕ್ಷಪಾತ ವರದಿ ಪ್ರಕಟಿಸಿದ್ದೇ ಇದಕ್ಕೆ ಕಾರಣ" ಎಂದು ಅವರು ಆಪಾದಿಸಿದ್ದಾರೆ.

ಇದರಿಂದಾಗಿ ಕೊಪ್ಪದ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ತಮ್ಮ ಮೇಲೆ ಸುಳ್ಳು ಮೊಕದ್ದಮೆ ಸೃಷ್ಟಿಸಿ ಬಂಧಿಸಲು ಯತ್ನಿಸುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಇತ್ತೀಚೆಗೆ ರಾತ್ರಿ ತಮ್ಮ ಪತ್ರಿಕಾಲಯಕ್ಕೆ ಬಂದು ಅಲ್ಲಿದ್ದ ಕೆಲಸದ ಹುಡುಗನನ್ನು ಠಾಣೆಗೆ ಕರೆದೊಯ್ದು "ಪೊಲೀಸ್ ಆತಿಥ್ಯ" ನೀಡಿದ್ದಾರೆ. ಅಂತೋಣಿ ಸಾವಿಗೆ ಸಂಬಂಧಿಸಿದ ಸಾಕ್ಷಿ ಸಂಗ್ರಹದ ದಾಖಲೆಗಳನ್ನು ಪತ್ರಿಕಾಲಯದಿಂದ ಕೊಂಡೊಯ್ದಿದ್ದಾರೆ ಎಂದೂ ಅವರು ಆರೋಪಿಸಿದ್ದಾರೆ.

ದರ್ಜಿ ಅಂಗಡಿಯಲ್ಲಿ ಬಟ್ಟೆ ಕಳವು

ಭದ್ರಾವತಿ, ನ. 17– ಇಲ್ಲಿನ ಕಾಗದ ನಗರದ ಸೋಮೇಗೌಡ ಎಂಬವರ ದರ್ಜಿ ಅಂಗಡಿಯಲ್ಲಿ ಇತ್ತೀಚೆಗೆ ರಾತ್ರಿ ಸುಮಾರು 5,000 ರೂ. ಬೆಲೆಯ ಬಟ್ಟೆಗಳನ್ನು ...

ಹಣ ಸಿಗದ ದಲಿತ ಮಹಿಳೆ ಆಕ್ರೋಶ

...ನ. 17–"ನಾನು ಹಲವಾರು ... ಅರ್ಜಿ ನೀಡಿದ್ದರೂ ಪ್ರತಿ ಸಲವೂ ... ಬೇಡಿಕೆ ತಿರಸ್ಕರಿಸಲಾಗಿದೆ. ದಲಿತರಿಗೆ ...ಬೇಕಾದ ಹಣ ನನಗೆ ಕೊಡಲಿಲ್ಲ.

... ದಲಿತ ಮಹಿಳೆಯೊಬ್ಬರು ...

...ಭೆಕೆ "ಅರ್ಬನ್ ಬ್ಯಾಂಕ್ ಅಧ್ಯಕ್ಷ" ಎಸ್. ಎ. ಕಾಸರಕೋಡ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ದಲಿತ ಸದಸ್ಯರು ನೆಲದ ಮೇಲೆ

ಮುಂಗಾರು
ಬುಧವಾರ, ಅಕ್ಟೋಬರ್ 16, 1985

ಮಹತ್ವಪೂರ್ಣ ವಿದೇಶ ಪ್ರವಾಸ

ಪ್ರಧಾನಮಂತ್ರಿ ರಾಜೀವ್‌ಗಾಂಧಿ ಐದು ರಾಷ್ಟ್ರಗಳಿಗೆ ಎರಡು ವಾರಗಳ ವಿದೇಶ ಪ್ರವಾಸ ಕೈಗೊಂಡಿದ್ದಾರೆ,

ವಿಶ್ವವು ಎದುರಿಸುತ್ತಿರುವ ಅಣ್ವಸ್ತ್ರ ಪೈಪೋಟಿ, ತೃತೀಯ ಜಗತ್ತಿನ ಆರ್ಥಿಕ ಸಮಸ್ಯೆಗಳು, ದ. ಆಫ್ರಿಕಾದ ವರ್ಣಭೇದ ನೀತಿ, ಬ್ರಿಟನ್-ಭಾರತಗಳ ದ್ವಿಪಕ್ಷೀಯ ಸಂಬಂಧ ಮುಂತಾದ ವಿಷಯಗಳ ಬಗ್ಗೆ ಅವರು ಚರ್ಚಿಸ ಬಯಸಿರುವ ಹಿನ್ನೆಲೆಯಲ್ಲಿ ಈ ಪ್ರವಾಸ ಮಹತ್ವಪೂರ್ಣವಾದುದು.

ಖಾಲಿಸ್ತಾನದ ವಿಷಯದಲ್ಲಿ ಭಾರತ ಮತ್ತು ಬ್ರಿಟನ್ ನಡುವಣ ಸಂಬಂಧ ಇತ್ತೀಚೆಗೆ ತುಂಬಾ ಹದಗೆಟ್ಟಿತ್ತು. ಉಗ್ರಗಾಮಿಗಳಿಗೆ ನೆರವು ನೀಡುವ ಆರೋಪದ ಬಗ್ಗೆ ಮೂಗುಮುಚ್ಚಾಗಿದ್ದ ಬ್ರಿಟನ್ ಸರಕಾರ, ಇತ್ತೀಚೆಗಷ್ಟೆ ಸ್ಪಷ್ಟನೆಯೊಂದನ್ನು ನೀಡಿದ್ದು ಮಾತ್ರವಲ್ಲ, 'ರಾಜೀವ್ ಹತ್ಯೆ' ಸಂಚೊಂದನ್ನು ಬಯಲಿಗೆಳೆದಿದೆ.

'ಪಂಜಾಬ್ ಅಶಾಂತಿ'ಯ ಆಂತರಿಕ ಸಮಸ್ಯೆಗೆ ಚುನಾವಣೆ ಮೂಲಕ ವಿರಾಮ ನೀಡಿರುವ ರಾಜೀವ್, ವಿದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಬ್ರಿಟನ್‌ನಲ್ಲಿರುವ 'ಉಗ್ರಗಾಮಿ ಬೇರು'ಗಳ ಬಗ್ಗೆ ಖಚಿತ ಧೋರಣೆ ತಳೆಯುವಲ್ಲಿ ಬ್ರಿಟನ್ ಸರಕಾರದ ಮೇಲೆ ಪ್ರಭಾವ ಬೀರಬೇಕಾಗಿದೆ. ಬ್ರಿಟನ್‌ನಲ್ಲಿ ಭಾರತದ ಬಗ್ಗೆ ಹರಡಲಾಗಿರುವ ತಪ್ಪು ಕಲ್ಪನೆಗಳನ್ನು ನಿವಾರಿಸಬೇಕಾಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ದಿ॥ ಇಂದಿರಾರಂತೆ 'ವರ್ಚಸ್ವಿ ರಾಜಕಾರಣಿ'ಯಾಗುವ ಸೂಚನೆ ನೀಡಿರುವ ರಾಜೀವ್ ಈ ನಿಟ್ಟಿನಲ್ಲಿ ಇನ್ನೂ ಶ್ರಮ ವಹಿಸಬೇಕಾಗಿದೆ.

ಬಹಾಮಾಸ್‌ನಲ್ಲಿ ಒಂದು ವಾರಕಾಲ ನಡೆಯಲಿರುವ 49 ಕಾಮನ್‌ವೆಲ್ತ್ ರಾಷ್ಟ್ರಗಳ ಶೃಂಗಸಭೆಯಲ್ಲೂ ರಾಜೀವ್ ಭಾಗವಹಿಸಲಿದ್ದಾರೆ. ಕಾಮನ್‌ವೆಲ್ತ್ ರಾಷ್ಟ್ರಗಳ ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ ಮಾತ್ರವಲ್ಲ ಹೆಚ್ಚುತ್ತಿರುವ ಅಣ್ವಸ್ತ್ರ ಯುದ್ಧ ಭೀತಿಯ ವಿರುದ್ಧ ಸಿಬಿರ ಆಲೋಚನೆಗಳ, ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸಬೇಕಾದ ಹೊಣೆಗಾರಿಕೆ ಈ ಸಭೆಯ ಮೇಲಿದೆ. 'ತೃತೀಯ ಜಗತ್ತಿನ ಒಟ್ಟು ಉತ್ಪಾದನೆಯ ಶೇಕಡಾ ನಾಲ್ಕರಷ್ಟು ಹಣವು ಸಾಲ ಮರುಪಾವತಿಯಲ್ಲಿನ ಬಡ್ಡಿಗೆ ವೆಚ್ಚವಾಗುತ್ತಿದೆ. ಹಾಗೂ ಕಳೆದ ದಶಕದಲ್ಲಿ (1975ರಿಂದ 1985ರವರೆಗೆ) ಅಭಿವೃದ್ಧಿ ಕುಂಠಿತಗೊಂಡಿದೆ' ಎಂದು ವರದಿಯಾಗಿರುವ ಹಿನ್ನೆಲೆಯಲ್ಲಿ ಸೂಕ್ತ ಯೋಜನೆಯೊಂದನ್ನು ಈ ಸಭೆ ರೂಪಿಸಬೇಕು. ಈ ನಿಟ್ಟಿನಲ್ಲಿ ರಾಜೀವ್ ವಹಿಸಬಹುದಾದ ಪಾತ್ರದ ಬಗ್ಗೆ ಅಲಿಪ್ತ ರಾಷ್ಟ್ರಗಳು ತಳೆದಿರುವ ವಿಶೇಷ ನಿರೀಕ್ಷೆಗೆ ತಕ್ಕಂತೆ ರಾಜೀವ್‌ಗಾಂಧಿ ಪರಿಣಾಮಕಾರಿ ಪಾತ್ರ ವಹಿಸಬೇಕಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ನ್ಯೂಯಾರ್ಕ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ 40ನೇ ವಾರ್ಷಿಕೋತ್ಸವದಲ್ಲಿ 'ತೃತೀಯ ಜಗತ್ತ'ನ್ನು ಪ್ರತಿನಿಧಿಸುತ್ತಿರುವ ಅಲಿಪ್ತ ಕೂಟದ ಅಧ್ಯಕ್ಷ ರಾಜೀವ್ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ.

ಇಸ್ರೇಲ್‌ನ ಆಕ್ರಮಣಶೀಲತೆಗೆ ಅಮೆರಿಕಾ ನೀಡುತ್ತಿರುವ ಬಹಿರಂಗ ಕುಮ್ಮಕ್ಕು, ನಮೀಬಿಯಾ ಸ್ವಾತಂತ್ರ್ಯದ ವಿಷಯದಲ್ಲಿ ದಕ್ಷಿಣ ಆಫ್ರಿಕಾದ ಜನವಿರೋಧಿ ಜಗುಟು ನೀತಿ, ಮುಂತಾಗ ಅಂತರರಾಷ್ಟ್ರೀಯ ವಿಷಯಗಳಿಗೆ ಸೂಕ್ತವಾಗಿ ಪ್ರತಿಸ್ಪಂದಿಸಿ ಘನವಾದ ಜಾಗತಿಕ ಅಭಿಪ್ರಾಯವೊಂದನ್ನು ರೂಪಿಸಬೇಕಾದ ಹಿನ್ನೆಲೆಯಿಂದಾಗಿ ಈ ಪ್ರವಾಸ ಮಹತ್ವಪೂರ್ಣ.

ವಿದೇಶಗಳಲ್ಲಿ, ಮುಖ್ಯವಾಗಿ ಬ್ರಿಟನ್‌ನಲ್ಲಿ ಹಾಗೂ ದ. ಆಫ್ರಿಕಾದ ದಲಿತ ಜನಾಂಗದಲ್ಲಿ, ಶ್ರೀಲಂಕಾದಲ್ಲಿ, ಭಾರತದ ಬಗ್ಗೆ ಹರಡಿರುವ ತಪ್ಪು ಕಲ್ಪನೆ ನಿವಾರಿಸುವುದು ಮೊದಲ ಕೆಲಸ.

ನಮೀಬಿಯ, ಲೆಬನಾನ್ ಮತ್ತು ಅಫಘಾನಿಸ್ತಾನ ಮುಂತಾದೆಡೆಗಳಲ್ಲಿ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಪ್ರದರ್ಶಿಸುತ್ತಿರುವ ಆಕ್ರಮಣ ಶೀಲ ಮನೋಧರ್ಮದ ವಿರುದ್ಧ ಜಾಗತಿಕ ಅಭಿಪ್ರಾಯವೊಂದನ್ನು ರೂಪಿಸುವುದು ಎರಡನೆ ಕೆಲಸ. ತಮ್ಮ ಉದ್ದೇಶಗಳಲ್ಲಿ ರಾಜೀವ್ ಸಫಲರಾಗುವರೆಂದು ಹಾರೈಸೋಣ.

ತರೀಕೆರೆಯಲ್ಲಿ ಕುದುರೆಮೋತಿ ನೆನಪು

ವಿವಸ್ತ್ರಳಾಗಿಸಿ ಥಳಿಸಿದರು!

ತರೀಕೆರೆ, ಅ. 15- ಮುಸ್ಲಿಂ ಮಹಿಳೆ [illegible]ಯನ್ನು ವಿವಸ್ತ್ರಳನ್ನಾಗಿಸಿ ಥಳಿಸಿ [illegible]ರೆಮೋತಿ ಪ್ರಕರಣವನ್ನು ನೆನಪಿಗೆ [illegible]ಂಥ ಘಟನೆಯೊಂದು ಇಲ್ಲಿ ನಡೆದಿದೆ.

ಇಲ್ಲಿನ ರಾಜಿ ಮೊಹಲ್ಲಾ ಕೇವಲ ಬಡ [illegible]ಮರೇ ವಾಸಿಸುವ ಪ್ರದೇಶ. ಹಾಗೇ [illegible] ಹಿಂದುಳಿದ ಬಡಾವಣೆ. ಇಲ್ಲಿ ಬಟ್ಟೆ [illegible]ದ್ (50) ಎಂಬ ತಿಂಡಿ ವ್ಯಾಪಾರಿ [illegible] ಅವರ ಮನೆಯಲ್ಲೇ ಬಾಡಿಗೆಗೆ [illegible]ವ ಹಾಗೂ ಕೆಲ ದಿನಗಳ ಹಿಂದೆ [illegible]ರ ಮನೆಯಲ್ಲೇ ಕೆಲಸಕ್ಕಿದ್ದ ಶಾನ್‌ಬಿ [illegible]) ಎಂಬ ಗಂಡನಿಂದ ತ್ಯಜಿಸಲ್ಪಟ್ಟ [illegible]ರು ಮಕ್ಕಳ ತಾಯಿಯೊಬ್ಬರು ತನ್ನ [illegible]ಜೊತೆಗೆ ಕೂಲಿ ಮಾಡಿಕೊಂಡು [illegible]ಸುತ್ತಿದ್ದಾರೆ.

ಕೆಲವು ದಿನಗಳ ಈಚೆಗೆ ರಶೀದ್ ಕುಟುಂ[illegible] ಶಾನ್‌ಬಿಗೂ ಮನಸ್ತಾಪವುಂಟಾ[illegible] ಹೇಗಾದರೂ ಮಾಡಿ ಶಾನ್‌ಬಿ[illegible]ನ್ನು ಈ ಮೊಹಲ್ಲಾದಿಂದ ಓಡಿಸಬೇಕೆ[illegible]ವ ಕೆಟ್ಟ ಹಠ ಈ ರಶೀದ್‌ಗೆ. ತನ್ನಲ್ಲೇ ಕೆಲಸಕ್ಕಿದ್ದ ಒಬ್ಬನನ್ನು ರಾತ್ರಿ ಹೊತ್ತು ಶಾನ್‌ಬಿ ಮನೆ ಬಾಗಿಲು ಬಡಿಯುವಂತೆ ಹೇಳಿ ಗಲಾಟೆ ಎಬ್ಬಿಸಿ ಶಾನ್‌ಬಿ ಹಲವಾರು ಗಂಡುಗಳೊಂದಿಗೆ ಅನೈತಿಕ ಸಂಬಂಧ ಹೊಂದಿದ್ದಾರೆಂದು ಆರೋಪಿಸಿದರೆನ್ನಲಾಗಿದೆ. ಮಾರನೇ ದಿನ ಬೆಳಿಗ್ಗೆಯೇ ಜಗಳ ಪ್ರಾರಂಭಿಸಿ ಆಕೆಯನ್ನು ಸಿಕ್ಕಾಪಟ್ಟೆ ಬೈದುದಲ್ಲದೆ ರಶೀದ್‌ನ ಮಕ್ಕಳು ಮತ್ತು ಕೆಲಸದವರು ಸೇರಿ ವಿವಸ್ತ್ರಳನ್ನಾಗಿಸಿ ಥಳಿಸಿದರೆನ್ನಲಾಗಿದೆ. ಆ ಸಂದರ್ಭದಲ್ಲಿ ಅಲ್ಲಿದ್ದ ಮಹಿಳೆಯರೇ ಶಾನ್‌ಬಿಯನ್ನು ರಕ್ಷಿಸಿದರು.

ರಶೀದ್‌ನ ಅವಮಾನವೀಯ ವರ್ತನೆ ಬಗ್ಗೆ ಪೊಲೀಸರಲ್ಲಿ ದೂರಿಕೊಂಡ ಶಾನ್‌ಬಿಯನ್ನು ಮತ್ತೆ ಮಧ್ಯಾಹ್ನದ ಹೊತ್ತಿನಲ್ಲೂ ರಶೀದ್ ಕುಟುಂಬದವರು ಥಳಿಸಿದರೆನ್ನಲಾಗಿದೆ.

ಅನಂತರ ಕೆಲವು ಪ್ರಭಾವಿ ವ್ಯಕ್ತಿಗಳ ಮೂಲಕ ತನ್ನ ಜನಾಂಗದ "ಮರ್ಯಾದೆ"ಯ ದೃಷ್ಟಿಯಿಂದ ಈ ಮೊಕದ್ದಮೆಯನ್ನು ಮಸೀದಿ ಜಮಾಯತ್‌ನಲ್ಲಿಯೇ ತೀರ್ಮಾನಿಸುವುದಾಗಿ ಹೇಳಿ ಪೊಲೀಸ್ ದೂರು ವಾಪಾಸು ಪಡೆಯುವಲ್ಲಿ ಸಫಲರಾದರೆಂದು ಹೇಳಲಾಗಿದೆ.

ಶಾನ್‌ಬಿ ಪೊಲೀಸರಿಗೆ ಕೊಟ್ಟ ದೂರಿನಲ್ಲಿ ತನ್ನನ್ನು ವಿವಸ್ತ್ರಳಾಗಿಸಿದ ಬಗ್ಗೆ ಪ್ರಸ್ತಾಪಿಸಿರಲಿಲ್ಲವೆನ್ನುವುದು ಪೊಲೀಸರ ಹೇಳಿಕೆ. ಆದರೆ ಈ ದೃಶ್ಯವನ್ನು ನೋಡಿದ ನೂರಾರು ಮಂದಿ ಇದ್ದಾರೆ.

ಜಗಳ ಆದ ರಾತ್ರಿ ತಮ್ಮ ಜನಾಂಗದ ಪಂಚಾಯತಿಯಲ್ಲಿ ಧಾರ್ಮಿಕ ಮುಖಂಡರುಗಳು ರಶೀದ್ ವರ್ತನೆಗೆ ಛೀಮಾರಿ ಹಾಕಿದರಲ್ಲದೆ ಮಾಡಿದ ತಪ್ಪಿಗಾಗಿ ಜಮಾಯತ್ ವತಿಯಿಂದ 125ರೂ. ದಂಡ ವಿಧಿಸಿದರು. ಆತನ ಪತ್ನಿ ಮತ್ತು ಮೂವರು ಮಕ್ಕಳಿಗೆ 5ರೂ. 25 ಪೈ ದಂಡ ವಿಧಿಸಿದರು. ಈ ಕೃತ್ಯಕ್ಕೆ ಸಹಾಯಕನಾಗಿದ್ದ ಕೆಲಸದವನನ್ನು ಆತನ ಊರಿಗೇ ಕಳಿಸಬೇಕೆಂದೂ ಧರ್ಮಗುರುಗಳು ರಶೀದ್‌ಗೆ ಆದೇಶಿಸಿದರೆನ್ನಲಾಗಿದೆ.

ಗದ್ದೆನೀರು ಕುಡಿಯುವ ಕಿರುಗುಂದ ದಲಿತರು

ಕಿರುಗುಂದ, ಅ. 15– ಮೂಡಿಗೆರೆ [illegible]ನ ಕಿರುಗುಂದ ಗ್ರಾಮದ ದಲಿತರು [illegible] ನೀರನ್ನು ಕುಡಿಯಬೇಕಾದ [illegible]ಸ್ಥಿತಿ ತಲೆದೋರಿದೆ.

[illegible] ಎಪ್ಪತ್ತು ದಲಿತರ ಮನೆಗಳಿದ್ದು [illegible] ಜನ ಸಂಖ್ಯೆಯಿದೆ. ತೆರೆದ ಬಾವಿ [illegible]ರೂ ಬೇಸಿಗೆಯಲ್ಲಿ ನೀರೇ ಇರುವು[illegible] ಇರುವ ಒಂದು ಕೊಳವೆ ಬಾವಿ[illegible] ಕೊಳಕು ನೀರು ಬರುವುದರಿಂದ [illegible]ವಾಸಿಗಳು ಆ ನೀರನ್ನು ಕುಡಿ[illegible]ವ ಹಾಗಿಲ್ಲ.

[illegible] ಇಲ್ಲಿನ ಜನ ಗದ್ದೆಯಲ್ಲಿ [illegible] ಗುಂಡಿ ತೋಡಿ ಅದರ ನೀರನ್ನು [illegible]ಸುತ್ತಿದ್ದಾರೆ.

ಈ [illegible] ಚಿಕ್ಕಮಗಳೂರು ಜಿಲ್ಲಾ [illegible] ಶ್ರೀನಿವಾಸ ಸದಸ್ಯ ಡಿ. ಕೆ. [illegible] ಗಮನ ಹರಿಸಿ ತೆರೆದ ಬಾವಿ ನಿರ್ಮಾಣ ಮಾಡಬೇಕೆಂದು ಸ್ಥಳೀಯ ಪಂಚಾಯ್ತಿಯ ಮಾಜಿ ಅಧ್ಯಕ್ಷ ಎಂ. ಎ. ರಜಾಕ್ ಒತ್ತಾಯಿಸಿದ್ದಾರೆ.

ಎಸ್. ಎಸ್. ಎಲ್. ಸಿ 8 ವಿದ್ಯಾರ್ಥಿ ಡಿಬಾರ್

(ಮುಂಗಾರು ವರದಿ)

ಅಂಕೋಲಾ, ಅ. 15:– ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ನಕಲು ಮಾಡುತ್ತಿದ್ದ 8 ವಿದ್ಯಾರ್ಥಿಗಳು ಜಿಲ್ಲಾ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಆಗಮಿಸಿದ ಎ. ವಿಶ್ವನಾಥ ಹಾಗೂ ಜೆ. ಎ. ನಾಯಕರ ಕೈಗೆ ಸಿಕ್ಕಿ ಬಿದ್ದು ಡಿಬಾರ್ ಆದ ಬಗ್ಗೆ ವರದಿಯಾಗಿದೆ.

ಸ್ಥಳೀಯ ಪಿ. ಎಮ್. ಹೈಸ್ಕೂಲಿನಲ್ಲಿ

"ಅರಣ್ಯ ಅತ್ಯಗತ್ಯ"

ಸಾಗರ, ಅ. 15– ಪ್ರಾಕೃತಿಕ ಸಮತೋಲನ ಕಾಪಾಡಲು ಅರಣ್ಯದ ಅವಶ್ಯಕತೆ ಇದೆ ಎಂದು ವಲಯ ಅರಣ್ಯಾಧಿಕಾರಿ ಮಂಜುನಾಥ ಹೋಬಳಿದಾರ್ ಹೇಳಿದ್ದಾರೆ.

ಅವರು ಇತ್ತೀಚೆಗೆ ಬೇಳೂರಿನಲ್ಲಿ "ವನ, ವನ್ಯಪ್ರಾಣಿ ಮತ್ತು ವನ್ಯ ಸಂಪತ್ತಿನ ರಕ್ಷಣೆ" ಕುರಿತು ಮಾತನಾಡುತ್ತಿದ್ದರು.

ಸಭೆಯ ಅಧ್ಯಕ್ಷತೆಯನ್ನು ಶೇಷಗಿರಿ ನಾಯಕ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಂಗಳ ಮೂರ್ತಿ ಮಾತನಾಡಿದರು.

ಪ್ರಾರಂಭದಲ್ಲಿ ಗಣಪತಿ ಅವರು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ಫೈಲ್ ನಾಪತ್ತೆ

ರಾಮನಗರಂ, ಅ. 15:– ಇಲ್ಲಿನ ಮುನ್ಸಿಫ್ ನ್ಯಾಯಾಲಯದಲ್ಲಿ ಐದು ಫೈಲುಗಳು ನಾಪತ್ತೆಯಾಗಿವೆ ಎಂದು ತಿಳಿದು ಬಂದಿದೆ.

ಅವುಗಳಲ್ಲಿ ನಾಲ್ಕು ಎಚ್. ಕೆ. ಸಿ. ಇ. ವಿಭಾಗಕ್ಕೆ ಸಂಬಂಧ ಪಟ್ಟಿದ್ದು ಉಳಿದ

ಮುಂಗಾರು

ಬುಧವಾರ, ಅಕ್ಟೋಬರ್ 30, 1985

ಈ ಚಾರ್ಜು ಬೇಡ

ದೇಶದಲ್ಲಿನ ರಾಷ್ಟ್ರೀಕೃತ ಬ್ಯಾಂಕುಗಳು ನವೆಂಬರ್ ತಿಂಗಳ 15ನೇ ತಾರೀಕಿನಿಂದ ಒಂದೇ ರೀತಿಯ "ಸರ್ವಿಸ್ ಚಾರ್ಜು" ವಸೂಲು ಮಾಡುವವೆಂದು ರಾಷ್ಟ್ರೀಕೃತ ಬ್ಯಾಂಕುಗಳ ಉನ್ನತ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನವಾಗಿದೆಯೆಂದು ಬ್ಯಾಂಕ್ ಆಫ್ ಇಂಡಿಯಾದ ಅಧ್ಯಕ್ಷ ಜೆ. ಎಸ್. ಭಾಟ್ನಗರ್ ತಿಳಿಸಿದ್ದಾರೆ.

ವಾಣಿಜ್ಯ ಬ್ಯಾಂಕುಗಳು ನಾಡಿನ ಆರ್ಥಿಕ ಹಾಗೂ ವಾಣಿಜ್ಯ ಚಟುವಟಿಕೆಗಳು ಸಲೀಸಾಗಿಯೂ ನ್ಯಾಯಸಮ್ಮತವಾಗಿಯೂ ನಡೆಯುವುದಕ್ಕೆ ಚಾಲನೆ ಕೊಡಬೇಕಾದ ಸಂಸ್ಥೆಗಳು ಕ್ಲಪ್ತವಾಗಿ ಹಣಕಾಸು ಒದಗಿಸುವ ಮೂಲಕ ಕೈಗಾರಿಕಾ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನೂ ಅವುಗಳು ಕೊಡಬೇಕಾಗಿದೆ. ಇತ್ತೀಚೆಗೆ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಶಾಖೆಗಳ ಜಾಲವನ್ನು ಹೆಣೆದು ಕೃಷಿ ಹಾಗೂ ಗುಡಿ ಕೈಗಾರಿಕೆಗಳಿಗೂ ಉತ್ತೇಜನ ಕೊಡುವ ಕಾರ್ಯದಲ್ಲಿ ಇತರ ಹಣಕಾಸು ಸಂಸ್ಥೆಗಳಿಗೆ ಪೂರಕವಾದ ಪಾತ್ರ ವಹಿಸುತ್ತಿವೆ.

ಬ್ಯಾಂಕುಗಳು ಅಧಿಕೃತ ಸಂಸ್ಥೆಗಳು. ಇವುಗಳ ಪೈಕಿ ದೊಡ್ಡವುಗಳೆಲ್ಲಾ ರಾಷ್ಟ್ರೀಕರಣಗೊಂಡು ಸರಕಾರದ ಅಂಗಸಂಸ್ಥೆಗಳೇ ಆಗಿವೆ. ಹೊರಗಿರುವವುಗಳು ಕೇವಲ ಸಣ್ಣ ಪುಟ್ಟ ಸಂಸ್ಥೆಗಳು ಮಾತ್ರ. ಹೀಗಾಗಿ ದೇಶದ ಆರ್ಥಿಕ ಚಟುವಟಿಕೆಯ ನೂರಕ್ಕೆ ತೊಂಭತ್ತರಷ್ಟು ಭಾಗವನ್ನು ರಾಷ್ಟ್ರೀಕೃತ ಬ್ಯಾಂಕುಗಳೇ ನಿಯಂತ್ರಿಸುತ್ತಿವೆ.

ಈ ಸಂಸ್ಥೆಗಳು ಸರಕಾರದ ಅಧೀನದಲ್ಲಿದ್ದುಕೊಂಡ ಖಾಸಗಿ ಬಡ್ಡಿ ಸಾಹುಕಾರರಿಗೆ ಸರಿ ಮಿಗಿಲೆಂಬಂತೆ ಗ್ರಾಹಕರೊಡನೆ ವ್ಯವಹರಿಸುತ್ತಿರುವ ವಿದ್ಯಮಾನ ಬಹುಕಾಲದಿಂದ ನಡೆದು ಬಂದಿದೆ. ಕೊಟ್ಟ ಸಾಲಕ್ಕೆ ಬಡ್ಡಿ ಸಂಗ್ರಹ ಮಾಡುವುದೇ ಅಲ್ಲದೆ ಸರ್ವಿಸ್ ಚಾರ್ಜ್ ಎಂಬ ಹೆಸರಿನಲ್ಲಿ ಗಮನಾರ್ಹ ಮೊತ್ತವನ್ನು ಇವುಗಳು ವಿಧಿಸುತ್ತವೆ. ಈ ಶುಲ್ಕವೂ ಒಂದೊಂದು ಸಂಸ್ಥೆಯಲ್ಲಿ ಒಂದೊಂದು ವಿಧ. ಒಂದೇ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ವಿವಿಧ ನಮೂನೆ. ಆಯಾ ಬ್ಯಾಂಕಿನ ಮ್ಯಾನೇಜರರಿಗೆ ಖುಷಿ ಬಂದಂತೆ ಗ್ರಾಹಕನಿಗೆ ದಂಡನೆ.

ಬ್ಯಾಂಕುಗಳ ಸಾಲದ ಬಡ್ಡಿ ದರವೇ ಬಹಳ ಹೆಚ್ಚು. ಇದು ಈಗ ಗರಿಷ್ಠ ಶೇಕಡಾ 18. ವ್ಯಾಪಾರಿಗಳು, ವ್ಯವಹಾರದವರು ಉದ್ದಿಮೆದಾರರು ವಾಣಿಜ್ಯ ಬ್ಯಾಂಕುಗಳಿಂದ ಬಡ್ಡಿ ಕೊಟ್ಟು ಸಾಲ ಪಡೆದು ನಡೆಸುವ ವ್ಯವಹಾರ ಇಂದು ಮಾರುಕಟ್ಟೆಯಲ್ಲಿ ಸಾಮಗ್ರಿಗಳ ಬೆಲೆಗಳ ಕಿಚ್ಚಿಗೆ ಎಣ್ಣೆ ಹೊಯ್ಯುತ್ತದೆ. ಬ್ಯಾಂಕು ಬಡ್ಡಿಯೇ ಖಾಸಗಿ ಲೇವಾದೇವಿಗಾರರ ಬಡ್ಡಿಗಿಂತ ಬಹಳವೇನೂ ಕಮ್ಮಿಯಿಲ್ಲ.

ಬ್ಯಾಂಕು ಒದಗಿಸುವ ಇತರ ರೀತಿಯ ಸೇವೆಗಳಿಗೂ ಶುಲ್ಕ ತೆರಬೇಕು. ಚೆಕ್ಕು ವಟಾಯಿಸಲು ಕಮಿಷನ್ ಕೊಡಬೇಕು. ಡಿಮಾಂಡ್ ಡ್ರಾಫ್ಟ್‌ಗೆ ಶುಲ್ಕ ತೆರಬೇಕು. ಅಂಚೆ ಮೂಲಕ ಹಣ ರವಾನಿಸಲೂ ಚಾರ್ಜು ಕೊಡಬೇಕು.

ಅದೇನಿದ್ದರೂ ಗ್ರಾಹಕರು ಪಡೆಯುವ ವಿಶೇಷ ತರದ ಸೇವೆ. ಅದಕ್ಕೆಲ್ಲ ಶುಲ್ಕ ಇರಲಿ. ಆದರೆ ಎಲ್ಲವೂ ಮಿತಿಯಲ್ಲಿರಲಿ. ಈ ಸೇವೆಗೆ ತಗಲುವ ಖರ್ಚನ್ನು ನಿಭಾಯಿಸುವ ಮಟ್ಟದಲ್ಲಿದ್ದರೆ ಸಾಕು. ಈ ಸೇವೆಗಳ ಶುಲ್ಕಗಳಲ್ಲಿಯೂ ಬ್ಯಾಂಕಿನಿಂದ ಬ್ಯಾಂಕಿಗೆ ಭಿನ್ನತೆಯಿದೆ. ಇತ್ತೀಚೆಗೆ ಬ್ಯಾಂಕ್ ಡಿ. ಡಿ. ಶುಲ್ಕ ಒಂದು ಬ್ಯಾಂಕಿನಿಂದ ಇನ್ನೊಂದಕ್ಕೆ ಹತ್ತು ಪಟ್ಟು ಅಂತರವಿದ್ದುದು ಮುಂಗಾರು ಅಂಕಣದಲ್ಲೇ ಪ್ರಕಟಗೊಂಡಿತ್ತು.

ಇವೆಲ್ಲ ಬ್ಯಾಂಕಿನ ಆಡಳಿತದ ಮೇಲೆ ಸರಕಾರಕ್ಕೂ ರಿಸರ್ವ್ ಬ್ಯಾಂಕಿಗೂ ಸೂಕ್ತ ನಿಯಂತ್ರಣ ಇಲ್ಲದಿರುವುದರ ಪರಿಣಾಮವಾಗಿದೆ. ಬ್ಯಾಂಕುಗಳು ತಮ್ಮ ಖರ್ಚು ವೆಚ್ಚ ನಿಭಾಯಿಸಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ತಾವು ವ್ಯವಹಾರದಲ್ಲಿ ಸಂಗ್ರಹಿಸಬೇಕು. ಬದಲಾಗಿ ಬ್ಯಾಂಕುಗಳು ಇಂದು ಬಡ್ಡಿ ಹಾಗೂ ಸರ್ವಿಸ್ ಚಾರ್ಜುಗಳ ಮೂಲಕ ಹಣ ಸಂಗ್ರಹ ಮಾಡಿ ಲಾಭ ಗಳಿಸುವ ಪೈಪೋಟಿಗೆ ಇಳಿದಿವೆ.

ಬ್ಯಾಂಕುಗಳು ತಮ್ಮ ಖರ್ಚಿಗೆ ಬೇಕಾದ್ದನ್ನು ಬಡ್ಡಿ ಮೂಲಕವೇ ಸಂಗ್ರಹಿಸಬೇಕು. ಅದು ಅವುಗಳಿಗೆ ಸಾಕು ಕೂಡ. ಬ್ಯಾಂಕುಗಳು ಠೇವಣಿಗೆ ಕೊಡುವ ಬಡ್ಡಿಯೂ ಸಾಲಕ್ಕೆ ವಸೂಲು ಮಾಡುವ ಬಡ್ಡಿಗೂ ಬಹಳಷ್ಟು ಅಂತರವಿದೆ. ಸರ್ವಿಸ್ ಚಾರ್ಜು ಎಂಬ ವ್ಯವಸ್ಥೆಯ ಮೂಲಕ ಹಣ ಸಂಗ್ರಹದ ದಾರಿಯೇ ತಪ್ಪು. ಅದಕ್ಕೆ ಅವಕಾಶ ಕೊಟ್ಟದ್ದೇ ತಪ್ಪು. ಸರಕಾರಿ ಅಂಗ ಸಂಸ್ಥೆಗಳಾದ ರಾಷ್ಟ್ರೀಕೃತ ಬ್ಯಾಂಕುಗಳ ವ್ಯವಹಾರಕ್ಕೆ ನ್ಯಾಯದ ನೆಲೆ ಇರಬೇಕು.

'ಬೆಳಗಾವಿ ಎಂದಿಗೂ ಮಹಾರಾಷ್ಟ್ರ ಸ್ವತ್ತಲ್ಲ'

ಮೈಸೂರು, ಅ. 29– ಬೆಳಗಾವಿ ಯಾವುದೇ ದೃಷ್ಟಿಯಿಂದಲೂ ಮಹರಾಷ್ಟ್ರಕ್ಕೆ ಸೇರಲು ಸಾಧ್ಯವಿಲ್ಲವೆಂದು ಕನ್ನಡ ಚಳವಳಿ ನಾಯಕ ಹಾಗೂ ಶಾಸಕ ಜಿ. ನಾರಾಯಣ ಕುಮಾರ್ ಅವರು ಸ್ಪಷ್ಟಪಡಿಸಿದ್ದಾರೆ.

ಅವರು ಇತ್ತೀಚೆಗೆ ಇಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತ ಮಹಾಜನ್ ವರದಿಯ ಅನುಷ್ಠಾನಕ್ಕೆ ಮುಖ್ಯ ಮಂತ್ರಿಗಳದಿಟ್ಟ ನಿಲುವಿಗೆ ತಮ್ಮ ಬೆಂಬಲ ವ್ಯಕ್ತಪಡಿಸುತ್ತಾ, ಗಡಿ ಸಮಸ್ಯೆಯನ್ನೆ ಆಧಾರವಾಗಿಟ್ಟುಕೊಂಡು ಆಗಾಗ ಕೆಣಕುತ್ತಿರುವ ಮಹಾರಾಷ್ಟ್ರ ಮುಖ್ಯ ಮಂತ್ರಿಗಳ ನಿಲುವನ್ನು ಖಂಡಿಸುತ್ತಾ, ಕೇಂದ್ರ ಸರ್ಕಾರ ಮಹಾಜನ್ ವರದಿಯನ್ನು ಜಾರಿಗೆ ತರುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.

ಕನ್ನಡ ರಾಜ್ಯೋತ್ಸವದಂದು ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಕರಾಳದಿನ ಆಚರಣೆಯ ಸಲುವಾಗಿ ಕರೆ ಕೊಟ್ಟಿರುವುದಕ್ಕೆ ತೀವ್ರವಾಗಿ ಪ್ರತಿಭಟಿಸುತ್ತೇನೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಬೆಳಗಾವಿ ನಗರ ಸಭೆಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಕನ್ನಡದ ವಿರುದ್ಧ ಚಟುವಟಿಕೆಗಳನ್ನು ನಡೆಸುತ್ತಿರುವುದಕ್ಕೆ ನಾನು ತೀವ್ರವಾಗಿ ಖಂಡಿಸುತ್ತೇನೆ ಎಂದ ಅವರು ಇಂತಹ ಕನ್ನಡ ವಿರೋಧಿ ಚಟುವಟಿಕೆಗಳನ್ನು ಹತ್ತಿಕ್ಕುವುದಾದರೆ ನಗರ ಸಭೆಯ ವಿರುದ್ಧ ದೊಡ್ಡ ಆಂದೋಲನ ನಡೆಸಬೇಕಾದೀತು ಎಂದು ಎಚ್ಚರಿಸಿದರು.

ಕೇರಳದ ಮುಖ್ಯಮಂತ್ರಿಗಳೂ ಸಹ ಕಾಸರಗೋಡಿನ ವಿಚಾರದಲ್ಲಿ ಹೆಗಡೆಯವರೊಂದಿಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದು, ಕನ್ನಡಿಗರೇನೂ ಕರುಣಾಕರನ್ ಅವರ ಸ್ವಂತ ಆಸ್ತಿಯನ್ನು ಕೇಳುತ್ತಿಲ್ಲ. ಕಾಸರಗೋಡು ಚಾರಿತ್ರಿಕವಾಗಿ, ಭೌಗೋಳಿಕವಾಗಿ, ಕನ್ನಡ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ವಿನಃ ಕೇರಳ ಸಂಸ್ಕೃತಿಯನ್ನಲ್ಲ! ಎಂದ ಅವರು ಕರ್ನಾಟಕದಲ್ಲಿಯೂ ಕೇರಳದವರು ವಾಸ ಮಾಡುತ್ತಿದ್ದಾರೆ ಎಂಬುದನ್ನು ಕರುಣಾಕರನ್ ಮರೆಯಬಾರದು ಎಂದು ಎಚ್ಚರಿಸಿದರು.

ಕನ್ನಡ ರಾಜ್ಯೋತ್ಸವ

ನವೆಂಬರ್ 1ರಿಂದ 10ದಿನಗಳ ಕಾಲ ರಾಜಧಾನಿ ಬೆಂಗಳೂರಿನಲ್ಲಿ ವಿಶಿಷ್ಟ ರೀತಿಯಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಈ ಸಂದರ್ಭದಲ್ಲಿ ಕನ್ನಡನಾಡು ನುಡಿಯ ಏಳಿಗೆಗಾಗಿ ದುಡಿದಂತಹ ಮಹನೀಯರುಗಳನ್ನು ವಿಧಾನ ಸೌಧದ ಮುಂಭಾಗದಲ್ಲಿ ಸನ್ಮಾನಿಸಲಾಗುವುದು ಎಂದು ಅವರು ಹೇಳಿದರು.

ಕನ್ನಡದ ಸಂಘಟನಾ ಹೋರಾಟಕ್ಕೆ ರಾಜ್ಯ ರೈತ ಸಂಘ ಬೆಂಬಲ

ದೊಡ್ಡಬಳ್ಳಾಪುರ, ಅ. 29– ಕನ್ನಡದ ಸಂಘಟನಾತ್ಮಕ ಹೋರಾಟಕ್ಕೆ ಕರ್ನಾಟಕ ರೈತ ಸಂಘ ಬೆಂಬಲಿಸುತ್ತದೆಯೆಂದು ರಾಜ್ಯ ರೈತ ಸಂಘದ ಮುಖಂಡ ಪ್ರೊ|| ಎಂ. ಡಿ. ನಂಜುಂಡಸ್ವಾಮಿ ಅವರು ಘೋಷಿಸಿದರು.

ಅವರು ಇತ್ತೀಚೆಗೆ ಕನ್ನಡ ಸಂಘರ್ಷ ಸಮಿತಿಯ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಇದು ನಮ್ಮ ರೈತ ವರ್ಗಕ್ಕೆ ಸ್ವಾಭಿಮಾನ ಮೂಡಿಸಿದ ಘೋಷಣೆ. ಆದ್ದರಿಂದ ಈ ನೆಲದ ಎಲ್ಲಾ ಜನರೂ, ಎಲ್ಲಾ ಜನಪರ ಸಂಘಟನೆಗಳು ಇದನ್ನು ಸ್ವಾಗತಿಸಬೇಕೆಂದು ಕನ್ನಡ ಜಾಗೃತ ಪರಿಷತ್ತು ಕರೆ ಕೊಟ್ಟಿದೆ.

ಈಗಿನ ರೈತರ ಹೋರಾಟದ ಬೇಡಿಕೆಯಾದ ಸಹಕಾರಿ ಕಾಯಿದೆಯ 101 (ಬಿ) ಶಾಸನದ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವುದು ತೀರಾ ಅನಿವಾರ್ಯವೆಂದು ಮತ್ತು ತಿದ್ದುಪಡಿ ಈ ನೆಲದ ಮೂಲ ಜನಗಳನ್ನು ಮತ್ತು ಬಡ ರೈತರನ್ನು ಗತಿಗೆಟ್ಟ ಅಲೆಮಾರಿಗಳನ್ನಾಗಿಸುವ ಕರಾಳ ತಿದ್ದುಪಡಿಯೆಂದು ಕನ್ನಡ ಜಾಗೃತ ಪರಿಷತ್ತು ಬಣ್ಣಿಸಿದೆ.

ಅರಣ್ಯ ಸಚಿವರ ಪ್ರವಾಸ ಕಾರ್ಯಕ್ರಮ

ಬೆಂಗಳೂರು, ಅ. 29–ಕರ್ನಾಟಕ ರಾಜ್ಯ ಅರಣ್ಯ ಸಚಿವರಾದ ಬಿ.ಎ. ಜೀವಿಜಯ ಅವರು ನವೆಂಬರ್ 1ರಿಂದ 4ರ ತನಕ ಕೊಡಗು,ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ತಿಳಿದು ಬಂದಿದೆ.

ನವೆಂಬರ್ 1ರಂದು ಮಡಿಕೇರಿಯ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸುವರು. 2ರಂದು ಮಡಿಕೇರಿ ಜಿಲ್ಲಾ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಪಾಲ್ಗೊಳ್ಳುವರು.

ನವೆಂಬರ್ 3ರಂದು ಮಂಗಳೂರು ಒಕ್ಕಲಿಗರ ಸೇವಾ ಸಂಘದ ನೂತನ ಕಟ್ಟಡದ ಉದ್ಘಾಟನೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅದೇದಿನ ಮಂಗಳೂರು ವಿಭಾಗದ ನೆಡುತೋಪುಗಳ ವೀಕ್ಷಣೆ ಹಾಗೂ ಅಧಿಕಾರಿಗಳೊಡನೆ ಚರ್ಚೆ ನಡೆಸುವರು.

ನವೆಂಬರ್ 4ರಂದು ಅರಣ್ಯ ನೆಡುತೋಪುಗಳಿಗೆ ಭೇಟಿ ಹಾಗೂ ಮಂಗಳೂರು ವಿಭಾಗ ಅರಣ್ಯಾಧಿಕಾರಿ ಕಚೇರಿಗೆ ಭೇಟಿ ನೀಡಿ ಬೆಂಗಳೂರಿಗೆ ಹಿಂದಿರುಗುವರು.

ಗಾಳಿಬೀಡು ನೀರು ಶೇಖರಣಾ ಅಡ್ಡಕಟ್ಟೆ

ಐದು ಅಡಿ ಏರಿಕೆ: ನೊಂದ ಹಳ್ಳಿಗರು

(... ಗಾರು ವರದಿ)

ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಇದಕ್ಕೆ ... ಮಾತ್ರ ಪರಿಹಾರ ...

ಭಾಷಣಸ್ಪರ್ಧೆಯಲ್ಲಿ ಪ್ರಥಮ ಬಹುಮಾನ

... ಅ. 29– ಸ್ಥಳೀಯ

ಮುಂಗಾರು
ಶುಕ್ರವಾರ, ಡಿಸೆಂಬರ್ 6, 1985

ಅಲಕ್ಷ್ಯದಿಂದ ಅನಾಹುತ

ಭೋಪಾಲ ವಿಷಾನಿಲ ದುರಂತದ ವಾರ್ಷಿಕ ದಿನವನ್ನು ವಿಷಾದದ ಛಾಯೆಯೊಡನೆ ದೇಶವು ಆಚರಿಸುತ್ತಿರುವಾಗಲೇ ದೆಹಲಿಯಲ್ಲಿ ಆಮ್ಲ ಸೋರಿ ಚರಂಡಿ ನೀರಿನೊಡನೆ ಬೆರೆತು ಆರೋಗ್ಯಕ್ಕೆ ಹಾನಿಕರವಾದ ಓಲಿಯಂ ಅನಿಲ ಉಂಟಾಗಿ ರಾಜಧಾನಿಯ ಲಕ್ಷಾಂತರ ನಾಗರಿಕರಿಗೆ ಸಂಕಟ ತಂದಿದೆ.

ಈ ದುರ್ಘಟನೆಗೆ ಕಾರಣವಾದ ಶ್ರೀರಾಮ್ ಫುಡ್ ಅಂಡ್ ಫರ್ಟಿಲೈಸರ್ ಇಂಡಸ್ಟ್ರಿಯ ಸುತ್ತಮುತ್ತ ನಿಬಿಡವಾದ ಜನವಸತಿಯಿದೆ. ಪಂಜಾಬಿ ಬಾಗ್, ಪಶ್ಚಿಮ ಪಟೇಲ್ ನಗರ, ಕರಮ್‌ಪುರ, ಅಶೋಕ ವಿಹಾರ, ತ್ರಿನಗರ, ಶಾಸ್ತ್ರಿ ನಗರ ಮುಂತಾದ ಪ್ರದೇಶಗಳು ಈ ಕಾರ್ಖಾನೆಯ ಮೂರು ಕಿಲೋ ಮೀಟರು ಫಾಸಲೆಯಲ್ಲಿವೆ. ಈ ಪ್ರದೇಶಗಳಲ್ಲಿ ಒಟ್ಟು ಸುಮಾರು ಮೂರು ಲಕ್ಷ ಜನವಸತಿಯಿದೆ.

ಸೋರಿ ಹೋದರೆ ಜೀವಿಗಳಿಗೆ ಅಪಾಯಕಾರಿಯಾದ ಆಮ್ಲ ಮತ್ತು ಅನಿಲಗಳನ್ನು ರಾಸಾಯನಿಕ ಗೊಬ್ಬರವನ್ನೂ ಇತರ ರಾಸಾಯನಿಕ ಸಾಮಗ್ರಿಗಳನ್ನೂ ಉತ್ಪಾದಿಸುವ ಈ ಸಂಸ್ಥೆಯಲ್ಲಿ ಸಂಗ್ರಹಿಸಿಡಬೇಕಾಗುತ್ತದೆ. ಗಂಧಕಾಮ್ಲ ಅಂತಹವುಗಳಲ್ಲೊಂದು. ಅಲ್ಲದೆ ಕ್ಲೋರಿನ್ ಅನಿಲವನ್ನೂ ಕಾರ್ಖಾನೆಯಲ್ಲಿ ಸಂಗ್ರಹಿಸಿಡಲಾಗಿದೆ. ಅದೂ ಸಣ್ಣ ಪ್ರಮಾಣದಲ್ಲಲ್ಲ. ಒಂದು ನೂರು ಮೆಟ್ರಿಕ್ ಟನ್ ಅನಿಲಗಳನ್ನು ಹೊಂದಿದ ಹಲವಾರು ಟ್ಯಾಂಕುಗಳು ಅಲ್ಲಿವೆ.

ಈ ಸಂಸ್ಥೆಯಲ್ಲಿ ರಾಸಾಯನಿಕಗಳ ಸಂಗ್ರಹದ ಸುರಕ್ಷಾ ವ್ಯವಸ್ಥೆ ಸುಸೂತ್ರವಾಗಿಲ್ಲವೆಂದು ದೆಹಲಿ ಆಡಳಿತದ ತಜ್ಞರ ಸಮಿತಿಯೊಂದು ಈ ವರ್ಷ ವರದಿ ಮಾಡಿತ್ತು. ಈ ವರ್ಷದ ಜನವರಿ 30ರಂದು ಮತ್ತು ಸೆಪ್ಟೆಂಬರ್ 9ರಂದು ರಾಸಾಯನಿಕ ಸೋರಿತ್ತು. ಜನವರಿಯಲ್ಲಿ ಕ್ಲೋರಿನ್ ಅನಿಲ ಸೋರಿದ್ದರೆ ಸೆಪ್ಟೆಂಬರದಲ್ಲಿ ಸಲ್ಫರ್ ಡೈ ಆಕ್ಸೈಡ್ ತಪ್ಪಿಸಿಕೊಂಡು ಹೊರ ಬಂದಿತ್ತು. ಸುರಕ್ಷಾ ವ್ಯವಸ್ಥೆ ಸರಿಯಿಲ್ಲವೆಂದೂ ರಾಸಾಯನಿಕಗಳು ಸೋರಿ ಕಾರ್ಮಿಕರು ಗಾಯಗೊಂಡ ಘಟನೆಗಳು ನಡೆದಿವೆಯೆಂದೂ ಆ ಸಂಸ್ಥೆಯ ಕಾರ್ಮಿಕ ಸಂಘಟನೆ ದೂರಿಕೊಂಡಿದೆ.

ಮೊನ್ನೆ ಬುಧವಾರ ಗಂಧಕಾಮ್ಲ ಸೋರಿದ್ದಕ್ಕೂ ಸುರಕ್ಷೆ ಹಾಗೂ ಪರಿಶೀಲನೆ ವ್ಯವಸ್ಥೆಯ ಅವಗಣನೆಯೇ ಕಾರಣವಾಗಿತ್ತು. ಆಮ್ಲ ಸಂಗ್ರಹಿಸಿಡುವ ಭಾರೀ ಟ್ಯಾಂಕುಗಳು ತುಂಬಾ ಹಳೆಯವೆಂದು ತಜ್ಞರ ಸಮಿತಿ ಹೇಳಿದೆ. ಅವುಗಳಲ್ಲೊಂದರಲ್ಲಿ ತುಂಬಾ ಸಾಂದ್ರವಾದ ಆಮ್ಲವನ್ನು ತುಂಬಿಸಿಡಲಾಗಿತ್ತು. ಆಮ್ಲವೇ ಲೋಹದ ಟ್ಯಾಂಕನ್ನು ಕೊರೆದು ತೂತು ಮಾಡಿ ಆಧರಿಸಿದ ಉಕ್ಕಿನ ಸ್ತಂಭಗಳನ್ನು ಕರಗಿಸಿದ ಪರಿಣಾಮವಾಗಿ ಟ್ಯಾಂಕು ಕುಸಿದು ಬಿತ್ತೆಂದು ವರದಿಯಿದೆ.

ಇದೆಲ್ಲವೂ ಅವಗಣನೆಯಿಂದ ಆಗುವಂತಹದು. ಟ್ಯಾಂಕು ಹಳೆಯದಾದರೆ ಅದನ್ನು ಬದಲಾಯಿಸಬೇಕು. ಅಥವ ಸೂಕ್ತವಾಗಿ ಕಾಲಕಾಲಕ್ಕೆ ತಪಾಸಣೆ ನಡೆಸಬೇಕು. ಲೋಹದ ಟ್ಯಾಂಕಿಯಲ್ಲಿ ಎಷ್ಟು ಶಕ್ತಿಯ ಆಮ್ಲ ಅಥವಾ ಅನಿಲ ಸಂಗ್ರಹ ಸಾಧ್ಯವೋ ಅಂತಹದನ್ನು ಮಾತ್ರವೇ ಸಂಗ್ರಹಿಸಿಡಬೇಕು. ಹೆಚ್ಚು ಸಾಂದ್ರವಾದ ರಾಸಾಯನಿಕವಾದರೆ ಅದಕ್ಕೆ ತಕ್ಕುದಾದ ಬೇರೆ ವ್ಯವಸ್ಥೆ ಮಾಡಿಕೊಳ್ಳಬೇಕು.

ರಾಸಾಯನಿಕ ಉದ್ಯಮ ಇಂದು ಮಾನವನ ಬದುಕಿಗೆ ಅತ್ಯಗತ್ಯವಾದ ವಿಚಾರ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ರಾಸಾಯನಿಕಗಳು ಸೋರಿ ಹೋದರೆ ಜೀವಿಗಳಿಗೆ ಅಷ್ಟೇ ಹಾನಿ ಮಾಡುವುದರಿಂದ ಅವುಗಳನ್ನು ನಿರ್ವಹಿಸುವುದರಲ್ಲಿ ಬಲು ಎಚ್ಚರ ಬೇಕು. ಸಂಬಂಧಪಟ್ಟ ಸಂಸ್ಥೆಗಳು ಅದಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಶಾಸನಾನುಷ್ಠಾನ ಸಂಸ್ಥೆಗಳು ಏರ್ಪಡಿಸಬೇಕು. ಈ ವಿಷಯದಲ್ಲಿ ಕರ್ತವ್ಯ ಚ್ಯುತಿ ಮಾಡುವ ಅಧಿಕಾರಿ ವರ್ಗಕ್ಕೆ ಯಾವ ಕ್ಷಮೆಯೂ ಇರಬಾರದು.

ಇಂದು ರಾಸಾಯನಿಕ ಉದ್ಯಮಗಳು ಎಲ್ಲೆಂದರಲ್ಲಿ ಏಳುತ್ತಿವೆ. ಅವುಗಳು ರಾಸಾಯನಿಕಗಳನ್ನು ಸಂಗ್ರಹಿಸಿಡಲೇ ಬೇಕಾಗುತ್ತದೆ. ಆದರೆ ಅದಕ್ಕೆ ಸೂಕ್ತ ವ್ಯವಸ್ಥೆ ಎಲ್ಲಾ ಕಡೆ ಇದೆಯೇ ಎಂದರೆ ಸಮರ್ಪಕ ಉತ್ತರ ದೊರೆಯುವುದು ಕಷ್ಟ. ಆದ್ದರಿಂದಲೇ ಅನಿಲ ಸೋರಿಕೆಯ ಸುದ್ದಿ ದಿನಬೆಳಗಾದರೆ ಬರುತ್ತಿವೆ. ನಮ್ಮ ಕೈಗಾರಿಕಾರಂಗ ಮಾನವೀಯ ಮೌಲ್ಯಗಳೆಲ್ಲವನ್ನೂ ಕಳೆದುಕೊಂಡು ಹಣ ಮಾಡುವ ದಂಧೆಯಾದದ್ದು ಹಾಗೂ ನೌಕರಶಾಹಿಯೆಂಬುದು ಜಡ್ಡುಗಟ್ಟಿ ಹೋಗಿ ಭ್ರಷ್ಟಾಚಾರದ ಕೊಂಪೆಯಾಗಿರುವುದು ಇದಕ್ಕೆಲ್ಲ ಕಾರಣ. ಅವಗಣನೆ ತೋರುವ ಕಾರ್ಖಾನೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಮತ್ತು ಅದಕ್ಕೆಲ್ಲ ಅವಕಾಶ ಕೊಟ್ಟ ಸರಕಾರದ ಅಧಿಕಾರಿಗಳಿಗೆ ಉಗ್ರವಾದ ಶಿಕ್ಷೆ ಕೊಟ್ಟು ಇತರರಲ್ಲಿ ಭಯವನ್ನು ಬಿತ್ತುವ ಮೂಲಕವೂ ಕಾನೂನಿನ ಅನುಷ್ಠಾನದ ನಿಯಮಗಳನ್ನು ಬಿಗಿಪಡಿಸುವುದರಿಂದಲೂ ಭೋಪಾಲ ಹಾಗೂ ದೆಹಲಿಯಲ್ಲಿ ನಡೆದಂತಹ ದುರಂತಗಳು ಮರುಕಳಿಕೆಯಾಗದಂತೆ ನೋಡುವುದು ಸಾಧ್ಯ.

ಭೂಹೀನರು ಮತ್ತು ಸಚಿವರು

ಸಚಿವರನ್ನು ಭೇಟಿ ಮಾಡಿ ತಮ್ಮ ಅಳಲನ್ನು ತೋಡಿಕೊಳ್ಳಬೇಕೆಂದು ಬಯಸಿದ ಭೂಹೀನ ಬಡವರಿಗೆ ನಿರಾಶೆ ಕಾದಿತ್ತು. ಸತ್ಯಾಗ್ರಹಿಗಳ ಬಗ್ಗೆ ಮೊದಲೇ ಮಾಹಿತಿ ಪಡೆದ ಸಚಿವರು ಅಜ್ಜ ಹಳ್ಳಿಗೆ ಹೊರಟು ಹೋದರು."

"ಪಾಂಡೋ ಮಟ್ಟಿ, ನಲ್ಲೂರು, ಹಾಲೇಶಪುರ, ಕರೆ ಕಟ್ಟೆ, ನಾಗೇನ ಹಳ್ಳಿ, ಚೀರನ ಹಳ್ಳಿ, ಸಿದ್ಧನ ಮಠ, ಹಾರೋನ ಹಳ್ಳಿ, ಸೇವಾ ನಗರ, ಕಂಚುಗಾರನಹಳ್ಳಿ ಮುಂತಾದ ಹಳ್ಳಿಗಳಿಂದ ಬಂದ ಸಾವಿರಾರು ಭೂಹೀನರು ದಿಕ್ಕುತೋಚದಂತಾದರು."

"ಜನತಾ ಸರ್ಕಾರದ ವಿಳಂಬ ನೀತಿಗೆ ಧಿಕ್ಕಾರ, ಎಂ. ಪಿ. ಪ್ರಕಾಶ್‌ಗೆ ಧಿಕ್ಕಾರ. ಹೆಂಡ ಬೇಡ. ಕಂಡ ಬೇಡ ನಮಗೆ ಭೂಮಿ ಬೇಕು" ಎಂಬ ಘೋಷಣೆಗಳನ್ನು ಕೂಗಿದರು.

ಪಟೇಲ್ ಸಿಕ್ಕಲಿಲ್ಲ

"ನವೆಂಬರ್ 29 ರಂದು ಭದ್ರಾವತಿಗೆ ಬಂದ ಕೈಗಾರಿಕಾ ಸಚಿವ ಜೆ.ಎಚ್. ಪಟೇಲರನ್ನು ಕಾಣ ಬೇಕೆಂದು ಅಲ್ಲಿನ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ನಿರ್ಧರಿಸಿದ್ದರು. ಈ ಬಗ್ಗೆ ಚರ್ಚೆಮಾಡಿ ಯಾರೆಂಬ ಭೀತಿಯಿಂದ ಸಚಿವರು ತಲೆ ತಪ್ಪಿಸಿಕೊಂಡರು" ಇದು ಸಂಘರ್ಷ ಸಮಿತಿಯ ಇನ್ನೊಂದು ಆರೋಪ.

ದೇವೇಗೌಡರ ಭರವಸೆ

"ನವೆಂಬರ್ 30 ರಂದು ಲೋಕೋಪಯೋಗಿ ಸಚಿವ ಎಚ್.ಡಿ. ದೇವೇಗೌಡರು ಶಿವಮೊಗ್ಗದ ಹೊಸ ತೀರ್ಥಹಳ್ಳಿ, ರಸ್ತೆಯಲ್ಲಿರುವ ಪ್ರಾಥಮಿಕ ಉರ್ದು ಪಾಠಶಾಲೆ ಉದ್ಘಾಟಿಸಲು ಬಂದರು, ದಲಿತ ಸಮಿತಿ ಕಾರ್ಯಕರ್ತರು ಸಚಿವರನ್ನು ಅಡ್ಡಹಾಕಿ ಚೆನ್ನಗಿರಿ ಭೂಹೀನರ ಬಗ್ಗೆ ಚರ್ಚಿಸಿದರು.

"ಚನ್ನಗಿರಿ ತಾಲೂಕಿನ ಪಾಂಡೋಮಟ್ಟಿ ಹರೇನ ಹಳ್ಳಿ, ಸೇವಾನಗರ, ನಲ್ಲೂರು ಮುಂತಾದ ಊರುಗಳ ದಲಿತರು ಹಾಗೂ ಭೂಹೀನರಿಗೆ ಬಗರ್ ಹುಕುಂ ಸಾಗುವಳಿ ಭೂಮಿ ಮಂಜೂರು ಮಾಡಿ, ಸಾಗರದ ಗುಡಿಸಲುವಾಸಿಗಳ ನಿವೇಶನಗಳನ್ನು ಹರಾಜು ಹಾಕುವುದನ್ನು ಕೂಡಲೇ ನಿಲ್ಲಿಸಿ ನಿವೇಶನ ಮಂಜೂರು ಮಾಡಬೇಕು" ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಸಚಿವರ ಮುಂದಿಟ್ಟ ಬೇಡಿಕೆಗಳಿವು.

"ದಲಿತರು ಮತ್ತು ಭೂಹೀನ ಬಡವರಿಗೆ ಬಗರ್ ಹುಕುಂ ಜಮೀನಿನ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದು. ಕರ್ನಾಟಕ ಭೂಮಂಜೂರಾತಿ ಕಾಯಿದೆಯನ್ನು ಭೂಹೀನರು ಹಾಗೂ ದಲಿತರಿಗಾಗಿ ತಿದ್ದುಪಡಿ ಮಾಡುತ್ತೇವೆ" ಎಂದು ಸಚಿವರು ಆಶ್ವಾಸನೆ ನೀಡಿದರು.

ಈ ಸಮಸ್ಯೆಗಳನ್ನು ಕೂಡಲೇ ಬಗೆಹರಿಸದಿದ್ದರೆ ರಾಜ್ಯದಾದ್ಯಂತ ಚಳವಳಿ ಹೂಡುವುದಾಗಿ ಅಲ್ಲಿದ್ದ ಕಾರ್ಯಕರ್ತರು ಸಚಿವರಿಗೆ ಎಚ್ಚರಿಕೆ ನೀಡಿದರು.

ಭತ್ತದ ಬಣವೆಗೆ ಬೆಂಕಿ: 50,000 ರೂ. ನಷ್ಟ

(ಮುಂಗಾರು ವರದಿ)

ಚಿಕ್ಕಮಗಳೂರು, ಡಿ. 5– ಭತ್ತದ ಬಣವೆಗಳಿಗೆ ಬೆಂಕಿ ಬಿದ್ದ ಕಾರಣ 14 ಬಣವೆಗಳು ಸುಟ್ಟು ಬೂದಿಯಾಗಿದ್ದು ಒಟ್ಟು 50ಸಾವಿರ ರೂ. ನಷ್ಟ ಸಂಭವಿಸಿರುವ ಬಗ್ಗೆ ವರದಿಯಾಗಿದೆ.

ಇಲ್ಲಿಗೆ ಸಮೀಪದ ಇಂದಾವರ ಎಂಬಲ್ಲಿ ರೈತರು ಕಣಕ್ಕೆ ತಂದು ಹಾಕಿದ್ದ ಭತ್ತದ ಬಣವೆಗಳಿಗೆ ಭಾನುವಾರ ರಾತ್ರಿ ಬೆಂಕಿ ಬಿದ್ದು ಪೂರ್ಣ ಭಸ್ಮವಾದವು. ಇದರ ನಷ್ಟ 58ಸಾವಿರ ರೂ. ಎಂದು ತಿಳಿದು ಬಂದಿದೆ.

ಇಂದಾವರದ ಬಸವೇಗೌಡ, ಜಯೋಗೌಡ, ಚನ್ನಬಸವೇಗೌಡ, ಈರಪ್ಪ, ಬಸವರಾಜು, ಪರ್ವೇಗೌಡ, ಮಾದೇಗೌಡ, ರುದ್ರೇಗೌಡ, ಈರಯ್ಯ, ರಾಜಣ್ಣ ಮತ್ತು ನಿರ್ವಾಣೇಗೌಡ ಅವರ ಬಣವೆಗಳು ಸುಟ್ಟು ಬೂದಿಯಾದವು. ಬೆಂಕಿ ನಂದಿಸಲು ಗ್ರಾಮಸ್ಥರು ಇಡೀ ರಾತ್ರಿ ಹೆಣಗಬೇಕಾಯಿತು.

ಅಗ್ನಿ ಶಾಮಕದಳದವರಿಗೆ ಕರೆ ಬಂದಿತ್ತಾದರೂ, ನಗರಕ್ಕೆ ಹತ್ತಿರವಿರುವ ಗ್ರಾಮಕ್ಕೆ ಸುಮಾರು 40 ನಿಮಿಷ ತಡವಾಗಿ ಬಂದರೆಂದೂ, ಹಾಗೂ ಸರಿಯಾಗಿ ಸಹಕರಿಸಲಿಲ್ಲವೆಂದು ಗ್ರಾಮಸ್ಥರು ದೂರಿದ್ದಾರೆ. ಈ ಬೆಂಕಿ ದುರಂತದಿಂದ ಗ್ರಾಮಸ್ಥರು ತತ್ತರಿಸಿಹೋಗಿದ್ದಾರೆ. "ವರ್ಷ [illegible] ಮಾಡಿದುದರಿಂದ [illegible] ಸಂಪತ್ತು [illegible] ಕಾರಣ ಹುಲ್ಲು ನಾಶವಾಗಿದ್ದು ಜಾನುವಾರುಗಳನ್ನು ಮಾರಲು ತಾವೆಲ್ಲ ಸಿದ್ಧವಿರುವುದಾಗಿ ಅಲ್ಲಿಯ ಗ್ರಾಮಸ್ಥರು ತಿಳಿಸಿದ್ದಾರೆ.

ಈ ಬೆಂಕಿ ದುರಂತಕ್ಕೆ ದುಷ್ಕರ್ಮಿಗಳ ಕೈವಾಡವಿರಬಹುದೆಂದು ಗ್ರಾಮಸ್ಥರು ಶಂಕಿಸಿದ್ದಾರೆ. 14 ಬಣವೆಗಳು ಏಕಕಾಲದಲ್ಲಿ ಹತ್ತಿಕೊಂಡು ಉರಿಯತೊಡಗಿದ್ದರಿಂದ ಇದರಲ್ಲಿ ಏನೋ ಕೈವಾಡವಿರಬಹುದೆಂದು ಶಂಕಿಸಲಾಗಿದೆ.

ಕಡವಾಡದಲ್ಲಿ ವಾಚನಾಲಯ ಉದ್ಘಾಟನೆ

ಕಾರವಾರ, ಡಿ. 5– ಇಲ್ಲಿಗೆ ಸಮೀಪದ ಕಡವಾಡದಲ್ಲಿ ಸರ್ವೋದಯ ಹವ್ಯಾಸಿ ಮಂಡಳದ ನೂತನ ವಾಚನಾಲಯವನ್ನು ಜಿಲ್ಲಾ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಅಧಿಕಾರಿ ಎಸ್. ಡಿ. ಪುರಾಣಿಕ ಅವರು ಇತ್ತೀಚೆಗೆ ಉದ್ಘಾಟಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷರಾಗಿ ಕಡವಾಡ ಜನತಾ ವಿದ್ಯಾಲಯದ ಶಿಕ್ಷಕ ಡಿ. ಎಲ್. ನಾಯ್ಕ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ತೋಳು ಭೋವಿ ಸ್ವಾಗತಿಸಿದರು. ಕೊನೆಯಲ್ಲಿ ಗಣಪತಿ ಭೋವಿ ವಂದಿಸಿದರು.



Weston®
The electronics people

WESTON COLOUR TV
Comparable to the Best in the World.

MANUFACTURED WITH KEY COMPONENTS IMPORTED FROM HITACHI, JAPAN

THE ALL-TIME WINNER

Every 1.1 minutes, someone, somewhere in the country, buys a Weston tv.
That's a record!

ಮುಂಗಾರು

ಕೊಂಚ ವಿವೇಕ ಇರಲಿ

ಕೇರಳದ ಒಂದಂಗುಲ ನೆಲವನ್ನೂ ಬಿಟ್ಟು ಕೊಡಲಾರೆನೆಂದು ಕೇರಳದ ಮುಖ್ಯಮಂತ್ರಿ ಕೆ. ಕರುಣಾಕರನ್ ಅವರು ಕೇರಳ ವಿಧಾನಸಭೆಯಲ್ಲಿ ಅಟ್ಟಹಾಸವನ್ನು ಮೆರೆದಿದ್ದಾರೆ. ಕಾಸರಗೋಡಿನಲ್ಲಿರುವ ಗಡಿ ವಿವಾದಕ್ಕೆ ಸಂಬಂಧಪಟ್ಟ ಹಾಗೆ ಕರ್ನಾಟಕದ ಸಚಿವ ಎಂ. ರಘುಪತಿ ಅವರ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಈ ಉದ್ಗಾರ ಕರುಣಾಕರನ್‌ರ ಬಾಯಿಂದ ಬಂದಿದೆ.

ಕಾಸರಗೋಡಿನಲ್ಲಿ ಗಡಿಗೆ ಸಂಬಂಧಿಸಿ ಒಂದು ವಿವಾದ ಉಂಟು ಎಂಬ ಸೌಜನ್ಯವನ್ನು ರಾಷ್ಟ್ರೀಯ ಪಕ್ಷವೊಂದರ ನಾಯಕನಾಗಿರುವ ಅವರು ಪ್ರದರ್ಶಿಸಬೇಕಾಗಿತ್ತು. ಅದನ್ನವರು ಮಾಡದೆ ತಾನು ಕೇವಲ ಸಣ್ಣ ಪ್ರದೇಶವೊಂದರ ಮುಖಂಡನೆಂಬ ಸಣ್ಣತನವನ್ನೂ ಸಂಕುಚಿತ ಮನೋವೃತ್ತಿಯನ್ನೂ ಪ್ರದರ್ಶಿಸಿದ್ದಾರೆ.

ಕೇರಳದ ಗಡಿಗಳನ್ನು ಪ್ರಾಂತ ಪುನರ್ವಿಂಗಡನೆ ಆಯೋಗ ನಿರ್ಧರಿಸಿದೆ. ಅದುವೇ ಅಂತಿಮ, ಅದುವೇ ಪವಿತ್ರ, ಅದರ ಮರುಪರಿಶೀಲನೆ ಅನಗತ್ಯ ಎಂಬಂತಹ ಮಾತುಗಳನ್ನೂ ಅವರು ಹೇಳಿದ್ದಾರೆ.

ತನ್ನ ರಾಜ್ಯದ, ತನ್ನ ಜನರ ಹಿತಾಸಕ್ತಿಗಳನ್ನು ರಕ್ಷಿಸುವ ಹೊಣೆಗಾರಿಕೆ ಅವರಿಗಿರಬಹುದು. ರಾಜ್ಯದ ಗಡಿ ವಿಚಾರದಲ್ಲಿ ರಾಜ್ಯಕ್ಕೆ "ಸಲ್ಲದ" ಮಾತಾಡಿದರೆ ಈಗಾಗಲೇ ಅಲುಗಾಡುತ್ತಿರುವ ತನ್ನ ಗದ್ದುಗೆ ಇನ್ನಷ್ಟು ಅಲುಗಾಡಿ ಬಿದ್ದೇ ಹೋದಿತೆಂಬ ಭಯದ ಬೆಳಕಿನಲ್ಲಿ ಅದನ್ನು ಗಟ್ಟಿಮಾಡಿಕೊಳ್ಳುವ ಸ್ವರಕ್ಷಣಾ ಪ್ರವೃತ್ತಿಯೂ ಅವರ ಬಾಯಿಂದ ಈ ಮಾತನ್ನು ಹೇಳಿಸಿರಬಹುದು.

ನಾಡು ನುಡಿಗಳ ಬಗ್ಗೆ ಇರುವ ಪ್ರೀತಿ, ಅಭಿಮಾನಗಳು ಯಾರಿಗೂ ದುರಭಿಮಾನ ಆಗಬಾರದು. ಅಧಿಕಾರವೆಂಬುದು ಜನಹಿತ ಸಾಧಿಸಲಿರುವ ಸಾಧನವಾಗಬೇಕೆ ವಿನಃ ಅಧಿಕಾರಕ್ಕಾಗಿಯೆ ಅಧಿಕಾರವೆಂಬ ವ್ಯಾಮೋಹ ಇರಬಾರದು. ಕೇರಳದ ಮುಖ್ಯಮಂತ್ರಿಯಲ್ಲಿ ನಾಡು, ನುಡಿಗಳ ಬಗ್ಗೆ ದುರಭಿಮಾನವೂ ಅಧಿಕಾರದ ಬಗ್ಗೆ ವ್ಯಾಮೋಹವೂ ಎರಡೂ ಕಾಣಿಸುತ್ತಿದೆ.

ಇಲ್ಲವಾದರೆ ಪ್ರಾಂತ ಪುನರ್ರಚನಾ ಆಯೋಗದ ಶಿಫಾರಸೇ ತನಗೆ ಮಾನ್ಯ, ಅದರ ತೀರ್ಮಾನದ ಬಗ್ಗೆ ಎರಡು ಮಾತಿಲ್ಲವೆಂಬ ಅನುಕೂಲ ಸಿದ್ಧಾಂತವನ್ನು ಅವರು ಆಡುತ್ತಿರಲಿಲ್ಲ. ಪ್ರಾಂತ ಪುನರ್ರಚನಾ ಆಯೋಗದ ಅಧ್ಯಕ್ಷರು ಕೇರಳದವರಾಗಿದ್ದ ಡಾ| ಕೆ. ಎಂ. ಪಣಿಕ್ಕರ್ ಎಂಬುದನ್ನು ಇಲ್ಲಿ ಮತ್ತೆ ನೆನಪಿಸಬೇಕಾಗಿದೆ. ಕಾಸರಗೋಡಿನ ಕುರಿತಾದ ಈ ಆಯೋಗದ ತೀರ್ಮಾನವನ್ನು ಪ್ರಶ್ನಿಸುವುದಕ್ಕೆ ಇದೊಂದೇ ಸತ್ಯ ಸಾಕು. ಕೇರಳದವನಾದ ಈ ಮನುಷ್ಯ ಕೇರಳಕ್ಕೆ ಲಾಭವಾಗುವ ಶಿಫಾರಸನ್ನೇ ಮಾಡುವುದು ನಿರೀಕ್ಷಿತವೂ ಭಾರತೀಯ ಸಂದರ್ಭದಲ್ಲಿ ಸಹಜವೂ ಆಗಿತ್ತು.

ಪ್ರಾಂತ ಪುನರ್ರಚನಾ ಸಮಿತಿಯ ತೀರ್ಪನ್ನು ಗೌರವಿಸುವ ಕರುಣಾಕರನ್‌ಗೆ ಮಹಾಜನ ಆಯೋಗದ ಅಧ್ಯಕ್ಷರು ಸುಪ್ರೀಂಕೋರ್ಟಿನ ಓರ್ವ ನಿವೃತ್ತ ನ್ಯಾಯಾಧೀಶರಾಗಿದ್ದರೆಂಬ ಸತ್ಯ ಗೋಚರಿಸದೆ ಹೋದದ್ದು ಶೋಚನೀಯ. ನಾಡಿನ ಮುಖಂಡರಲ್ಲಿರುವ ಭಾವ ವಿಕಾರಗಳು ಅವರ ವಿವೇಕಕ್ಕೆ ಮಬ್ಬು ಕವಿಸಿದರೆ ಹಾನಿಯಾಗುವುದು ನಾಡಿನ ಜನಕ್ಕೆ, ಭಾವ ವಿಕಾರಕ್ಕೆ ಪಕ್ಕಾದ ಮನುಷ್ಯನಿಗೆ ಆಗುತ್ತಿರುವ ಅನ್ಯಾಯ ಕಾಣಿಸದೆ ಹೋಗಬಹುದು. ಜನರ ನೋವು ನರಳಿಕೆಗೆ ಆತನ ಕಣ್ಣು ಕುರುಡಾಗಬಹುದು. ಯುಕ್ತಾಯುಕ್ತಗಳ, ನ್ಯಾಯಾನ್ಯಾಯಗಳ ವಿವೇಚನಾ ಶಕ್ತಿಯನ್ನು ಆತ ಕಳೆಕೊಳ್ಳಬಹುದು.

ಇಂದು ಕರುಣಾಕರನ್‌ಗೆ ಆಗಿರುವುದು ಅದೇ. ಕಾಸರಗೋಡಿನ ಜನರ ದುಃಖ ದುಮ್ಮಾನಗಳಿಗೆ ಅವರ ಕಿವಿ ಕಿವುಡಾಗಿದೆ. ಕಾಸರಗೋಡಿನ ಅನ್ಯಾಯಕ್ಕೆ ಅವರ ಕಣ್ಣು ಕುರುಡಾಗಿದೆ. ಅವರ ಹಾಗೂ ಅವರಿಗಿಂತ ಹಿಂದಿನ ಕೇರಳ ಸರಕಾರಗಳು ಕಾಸರಗೋಡಿನ ಜನರ ಮೇಲೆ ದೌರ್ಜನ್ಯವನ್ನು ಮಾಡುತ್ತಲೇ ಬಂದಿವೆ. ಶತ ಶತಮಾನಗಳಿಂದ ತುಳು ಹಾಗೂ ಕನ್ನಡ ಭಾಷೆ-ಸಂಸ್ಕೃತಿಗಳ ಗಂಡು ಮೆಟ್ಟಿನ ನೆಲವಾಗಿದ್ದ ಕಾಸರಗೋಡಿನಲ್ಲಿ ಇಂದು ಕೂಡ ಅಲ್ಲಿನ ಮಣ್ಣಿನ ಮಕ್ಕಳ ಸಂಸ್ಕೃತಿ ಕನ್ನಡ. ಅವರ ಎಲ್ಲಾ ವ್ಯಾವಹಾರಿಕ ಸಂಬಂಧ-ಸಂಪರ್ಕಗಳು ದಕ್ಷಿಣ ಕನ್ನಡದ ಜತೆಗೆ. ಬ್ರಿಟಿಷರ ಕಾಲದಲ್ಲಿಯೂ ಇದು ನಡೆದುಕೊಂಡು ಬಂದದ್ದು. ಏನೋ, ಹೇಗೋ ಆಗಿ ಹೋದ ರಾಜಕೀಯ ವಿಕೃತಿಯನ್ನೇ ಅಂತಿಮವೆಂದು ಸಾಧಿಸುವ ಮಂಗಮುಷ್ಟಿಯ ಬುದ್ಧಿ ಕೇರಳದ ಈ ನಾಯಕ ನ್ಯಾಯ ಪಕ್ಷಪಾತಿಯಲ್ಲವೆಂಬುದನ್ನು ಸಾಬೀತು ಪಡಿಸುತ್ತದೆ. ಒಂದು ಪ್ರದೇಶದ ದೊಡ್ಡ ಜನವಿಭಾಗವೊಂದರ ಮೇಲೆ ನಡೆಯುವ ದೌರ್ಜನ್ಯವನ್ನು ಕಡೆಗಣಿಸುವ, ಅದರ ನಿವಾರಣೆಗೆ ದಾರಿಯೇನೆಂದು ಸಮಾಲೋಚನೆಗೂ ನಿರಾಕರಿಸುವ ಮನಸ್ಸು ಮಾನವೀಯತೆಯನ್ನು ಕಳೆದುಕೊಂಡಿದೆಯೆಂದೇ ಹೇಳಬೇಕಾಗುತ್ತದೆ. ಅಂತಹ ಮನಸ್ಸು ತನ್ನ ಜನರಿಗೂ ಮಾಡಬಹುದಾದ ಹಿತ ಅಷ್ಟರಲ್ಲಿಯೇ ಇದೆ.

ಸುಳ್ಯ: ದಾದಿಯರ ಮಿಂಚಿನ ಮುಷ್ಕರ

ಸುಳ್ಯ, ಎ. 4– ಇಲ್ಲಿಯ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ದಾದಿಯೋರ್ವರನ್ನು ಸ್ಥಳೀಯ ಪ್ರಮುಖ ವ್ಯಕ್ತಿಗಳಿಬ್ಬರು ವಿನಾಕಾರಣವಾಗಿ ಅವಾಚ್ಯ ಪದಗಳಿಂದ ಬೈದು ನಿಂದಿಸಿದುದನ್ನು ಪ್ರತಿಭಟಿಸಿ, ಎ. ಒಂದರಂದು ಇಲ್ಲಿಯ ಎಲ್ಲ ಆರೋಗ್ಯ ಕಾರ್ಯ ಕರ್ತೆಯರು ತಮ್ಮ ಕೆಲಸಗಳನ್ನು ಸ್ಥಗಿತ ಗೊಳಿಸಿ ಮಿಂಚಿನ ಮುಷ್ಕರವನ್ನು ಕೈಗೊಂಡರು.

ಸ್ಥಳೀಯ ಸರಕಾರಿ ನೌಕರರ ಕಟ್ಟಡದ ಮುಂಭಾಗದಲ್ಲಿ ಒಟ್ಟು ಸೇರಿದ ಕಾರ್ಯಕರ್ತೆಯರು ನಿಷ್ಠೆಯಿಂದ ಜನ ಸೇವೆ ಮಾಡುವ ದಾದಿಯರನ್ನು ಹೀನಾಯವಾಗಿ ಕಾಣುವುದನ್ನು ತೀವ್ರವಾಗಿ ಪ್ರತಿಭಟಿಸಿದರು. ಅಪಾದಿತರ ಮೇಲೆ ತಕ್ಕ ಕ್ರಮ ಕೈಗೊಳ್ಳುವರೇ ಸಂಬಂಧಪಟ್ಟ ವರಿಷ್ಠರಿಗೆ ಮನವಿಯನ್ನು ಸಲ್ಲಿಸಲಾಗಿದೆ.

ಮಾರುಕಟ್ಟೆ ಶುಲ್ಕ ಇಳಿಸಲು ಒತ್ತಾಯ

ಮಂಗಳೂರು, ಎ. 4– ಮಂಗಳೂರು ಮಾರುಕಟ್ಟೆಯ ಶುಲ್ಕ ಹೆಚ್ಚಳ ಮಾಡಿರುವ ಪಾಲಿಕೆಯ ನಿರ್ಧಾರವನ್ನು ಪ್ರತಿಭಟಿಸಿ ತರಕಾರಿ ಮತ್ತು ಹಣ್ಣುಹಂಪಲು ವ್ಯಾಪಾರಿಗಳು ಮುಷ್ಕರ ಆರಂಭಿಸಿದ್ದಾರೆ.

ಕೇಂದ್ರ ಸರಕಾರ ಹಾಕಿದ ಬಾರಿ ತೆರಿಗೆ ಭಾರದಿಂದ ಜನ ತತ್ತರಿಸುತ್ತಿರುವಾಗಲೇ, ಈಗ ಮಂಗಳೂರು ಮಹಾನಗರ ಪಾಲಿಕೆಯು ಈ ರೀತಿ ಶುಲ್ಕ ಹೆಚ್ಚಳ ಮಾಡಿರುವುದು ಖಂಡನೀಯ. ಇದರಿಂದಾಗಿ ಸಣ್ಣ ವ್ಯಾಪಾರಿಗಳಿಗಾಗಿರುವ ಸಂಕಷ್ಟವನ್ನು ಗಮನಿಸಿ ಹೆಚ್ಚಿಸಿರುವ ಶುಲ್ಕವನ್ನು ಕೂಡಲೇ ಇಳಿಸಬೇಕೆಂದು ಮಹಾನಗರ ಪಾಲಿಕೆಯನ್ನು ಸಿ. ಪಿ. ಐ. (ಎಂ) ದ. ಕ. ಜಿಲ್ಲಾ ಸಮಿತಿಯು ಒತ್ತಾಯಿಸುತ್ತದೆ ಎಂದು ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಲಾಗಿದೆ.

ಪರಿಶಿಷ್ಟ ವರ್ಗೀಯ ಸಂಘದ ಸಭೆ

ಮಂಗಳೂರು, ಎ. 4–ದಕ್ಷಿಣ ಕನ್ನಡ ಜಿಲ್ಲಾ ಪರಿಶಿಷ್ಟ ವರ್ಗೀಯ ಸೇವಾ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಸಂಘದ ಅಧ್ಯಕ್ಷ ಪಡುತೋಟ ರಾಮಪ್ಪ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರುಗಿತು.

ಈ ಸಭೆಯಲ್ಲಿ ಜೇಕ್ಕಾರು ಗ್ರಾಮದ ಪರಿಶಿಷ್ಟ ವರ್ಗದವರ ಕಾಲನಿಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದರಿಂದ, ಅಲ್ಲಿ ಎರಡು ತೆರೆದ ಬಾವಿ ಅಥವಾ ಕೊಳವೆ ಬಾವಿಗಳನ್ನು ಒದಗಿಸಲು ಹಾಗೂ ಅಲ್ಲಿನ ನಿವಾಸಿಗಳು ನಡೆಸಿಕೊಂಡು ಬರುತ್ತಿರುವ ಈಶ್ವರಾನಂದ ಭಜನಾ ಮಂಡಳಿಗೆ ರೂ. 18ರ ಮೊಬಲಗಿನಿಂದ ಸಹಾಯ ನೀಡುವಂತೆ ತಾಲೂಕು ಅಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯವರಲ್ಲಿ ಒತ್ತಾಯಿಸಲು ನಿರ್ಣಯ ಕೈಗೊಳ್ಳಲಾಯಿತು.

‘ಮಸ್ಕತ್ ತುಳುಕೂಟ’

ಮಸ್ಕತ್, ಎ. 4–ಹುಟ್ಟೂರಿನಿಂದ ಸಾವಿರಾರು ಮೈಲಿ ದೂರದ ಮಸ್ಕತ್‌ಗೆ ಭವಿಷ್ಯವನ್ನರಸಿಕೊಂಡು ಬಂದು ನೆಲೆಸಿದ ತುಳುವರು, ತಮ್ಮ ಸಾಂಸ್ಕೃತಿಕ ತೃಷೆಯನ್ನು ನೀಗಿಸುವ ಉದ್ದೇಶದಿಂದ, ‘ಮಸ್ಕತ್-ತುಳುಕೂಟ’ ಸಂಘಟನೆಯೊಂದನ್ನು ಮಾರ್ಚ್ ತಾ. 22ರಂದು ಇಲ್ಲಿ ಆರಂಭಿಸಿದರು.

ಇಲ್ಲಿನ ಭಾರತೀಯ ಕೇಂದ್ರೀಯ ಶಾಲಾ ಸಭಾಂಗಣದಲ್ಲಿ ನೆರೆದ ತುಳು ಅಭಿಮಾನಿಗಳ ಸಭೆಯಲ್ಲಿ, ಜೆಪ್ಪು ರಾಮಪ್ಪ ಅವರು ನಂದಾದೀಪವನ್ನು ಬೆಳಗಿಸಿ ಈ ಕೂಟವನ್ನು ಉದ್ಘಾಟಿಸಿದರು. ಈ ಸಮಾರಂಭದೊಂದಿಗೆ ಯುಗಾದಿ ಆಚರಣೆಯನ್ನು ಕೂಡಾ ಹಮ್ಮಿಕೊಂಡದ್ದು, ಕಾರ್ಯಕ್ರಮಕ್ಕೆ ವಿಶೇಷ ಕಳೆಯನ್ನು ನೀಡಿತ್ತು.

ಜೆಪ್ಪು ರಾಮಪ್ಪ ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ, “ಅತ್ಯಂತ ಕಟ್ಟುನಿಟ್ಟಿನ ಕಾನೂನು–ಕಟ್ಟಳೆಗಳ ಈ ದೇಶದಲ್ಲಿ ಯಾವುದೇ ಕಾರ್ಯಕ್ರಮವನ್ನು ಏರ್ಪಡಿಸುವುದೇ ಒಂದು ಮಹಾ ಸಾಹಸ. ಈ ದೇಶದಲ್ಲಿ ನೆಲೆಸಿರುವ ತುಳುವರಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದೊಂದೇ ಮಸ್ಕತ್ ತುಳುಕೂಟದ ಉದ್ದೇಶವಲ್ಲ. ಅದರೊಂದಿಗೆ ಸಾಮಾಜಿಕ ಭದ್ರತೆಯನ್ನು ನೀಡುವುದು. ತುಳುನಾಡು ಪ್ರಾಕೃತಿಕ ವಿಕೋಪಗಳಿಗೆ ಬಲಿಯಾದಾಗ ಕೈಯಿಂದಾದ ಸಹಾಯವನ್ನು ಸಂಗ್ರಹಿಸಿ ನೆರವಾಗುವುದು. ತುಳುನಾಡಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡಿ ಸಹಾಯ ಮಾಡುವುದು ಕೂಡಾ ನಮ್ಮ ಆಶೋತ್ತರಗಳಾಗಿವೆ” ಎಂದರು.

ಡಾ। ಶೇಖರ ಸಾಲಿಯಾನ್, ಸತೀಶ್ಚಂದ್ರ ಭಂಡಾರಿ, ಜೋನ್ನಿ ಪಿಂಟೋ ಅವರು ಮಾತನಾಡಿ ಮಸ್ಕತ್‌ನಲ್ಲಿ ನೆಲೆಸಿರುವ ಸಾವಿರಾರು ತುಳುವರ ಹಾಗೂ ತುಳು ಅಭಿಮಾನಿಗಳ ಬಹುದಿನಗಳ ಕನಸು, ನನಸಾದ ಬಗ್ಗೆ ಸಂತಸ ವ್ಯಕ್ತಪಡಿಸಿದರಲ್ಲದೆ, ಈ ಕೂಟದ ಮುಖೇನ ಇನ್ನೂ ಅನೇಕ ಶುಭಕಾರ್ಯಗಳಾಗಲಿ ಎಂದು ಹಾರೈಸಿದರು.

ಮನೋರಂಜನಾ ಕಾರ್ಯಕ್ರಮದ ಅಂಗವಾಗಿ ನಡೆದ, ಯು. ಕೆ. ಸಂಧ್ಯಾ ರಾವ್ ಅವರ ಶಿಷ್ಯೆ ಕು॥ ಶಿವಾನಿ ತಲವಾರ್ ಅವರ ಭರತ ನಾಟ್ಯ, ರಮೇಶ್ ಮತ್ತು ಬಳಗದವರ “ಭೂತ ದರ್ಶನ” ಜನ ಮೆಚ್ಚುಗೆಯನ್ನು ಗಳಿಸಿತು.

ಮಸ್ಕತ್‌ನಲ್ಲಿ ಅಪರೂಪವಾದ, ಮುಂಬಯಿಯಿಂದ ವಿಶೇಷವಾಗಿ ತರಿಸಿದ್ದ ಮಂಗಳೂರ ಮಲ್ಲಿಗೆ ಹೂವು, ಇಡೀಯ ಮಸ್ಕತ್ತನ್ನೇ ಜಾಡಿಸಿ ಹುಡುಕಿ ತಂದ ಬಾಳೆ ಗಿಡ, ಕಬ್ಬುಗಳಿಂದ ನಿರ್ಮಿಸಿದ ಸ್ವಾಗತ- ಕಮಾನು, ಮಾವಿನೆಲೆ ಗೊಂಡೆ ಹೂವುಗಳ ಶೃಂಗಾರ, ಇಡೀಯ ಕಾರ್ಯಕ್ರಮಕ್ಕೆ ಹುಟ್ಟು ನೆಲದ ಕಂಪನ್ನು ನೀಡಿತ್ತು.

ಮಿಕ್‌ಮ್ಯಾಕ್ಸ್ ಅವರು ಕಾರ್ಯಕ್ರಮ ನಿರ್ವಾಹಕರಾಗಿದ್ದರು. ಕೊನೆಯಲ್ಲಿ ರಿಚರ್ಡ್ ಬನ್ನಾಡೊ ವಂದನೆ ಅರ್ಪಿಸಿದರು.

ಚಿತ್ರದಲ್ಲಿ ಜಪ್ಪು ರಾಮಪ್ಪ ಅವರು ಉದ್ಘಾಟನಾ ಭಾಷಣ ಮಾಡುತ್ತಿದ್ದಾರೆ. ಚಿತ್ರದಲ್ಲಿರುವ ಇತರರು ಜೋನ್ನಿ ಪಿಂಟೊ, ಡಾ। ಶೇಖರ ಸಾಲಿಯಾನ್, ಸತೀಶ್ಚಂದ್ರ ಭಂಡಾರಿ ಮತ್ತು ಪೀತಾಂಬರ ಆಳ್ವ.

ಎಳೆಯರ ಸಾಹಿತ್ಯ ಮಾಲೆಗೆ ಸಿದ್ಧತೆ

ಮಂಗಳೂರು, ಎ. 4- ಕಲಾದರ್ಶನ ಎಳೆಯರ ಬಳಗವು ಎಳೆಯರಿಗಾಗಿ ಒಂದು ಸಾಹಿತ್ಯ ಮಾಲೆಯನ್ನು ಆರಂಭಿಸುವ ಯೋಜನೆಯನ್ನು ರೂಪಿಸಿಕೊಂಡಿದೆ.

[illegible] ಸಾಹಿತ್ಯ ಮಾಲೆಯ ಸಂಚಾಲಕನಾಗಿ ಆರಿಸಲಾಗಿದೆ. ಮಂಗಳೂರು ಪುರಭವನದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಕಿರಿಯರ ಕವಿಗೋಷ್ಠಿಯಲ್ಲಿ ಓದಿದ ಕವನಗಳನ್ನು ಮಾಲೆಯ ಮೊದಲ ಪ್ರಕಟನೆ

ಜಾನಪದ ಗೀತೆ ಅಭ್ಯಾಸ ಶಿಬಿರ

ವಾರ್ಷಿಕ [illegible] ಪತ್ರಿಕೆ

ಮುಂಗಾರು

ಸಹಾನುಭೂತಿ ಇರಲಿ

ಸ್ತ್ರೀಯರು ಪುರುಷ ದ್ವೇಷದಿಂದ ಸಮಾನತೆ ಕೇಳುವುದು ಸರಿಯಲ್ಲವೆಂದು ಕನ್ನಡದ ಸಾಹಿತಿ ಹಾಗೂ ಕಲಬುರ್ಗಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ। ಹಾ. ಮಾ. ನಾಯಕ್ ಅವರು ಕರ್ನಾಟಕ ಲೇಖಕಿಯರ ಸಂಘ ಏರ್ಪಡಿಸಿದ್ದ ರಾಜ್ಯಮಟ್ಟದ ಲೇಖಕಿಯರ ಮೊದಲ ಸಮ್ಮೇಳನದಲ್ಲಿ ಹೇಳಿದರೆಂದು ವರದಿಯಾಗಿದೆ.

ಹಾ. ಮಾ. ನಾಯಕರು ಲೇಖಕರೂ ಆಗಿರುವುದಲ್ಲದೆ ಒಂದು ವಿಶ್ವವಿದ್ಯಾನಿಲಯದಂತಹ ದೊಡ್ಡ ಸಂಸ್ಥೆಯ ಮುಖ್ಯಸ್ಥರೂ ಆಗಿರುವುದರಿಂದ ಅವರ ಅಭಿಪ್ರಾಯಗಳಿಗೆ ಸಮಾಜದಲ್ಲಿ ತೂಕ ಬರುತ್ತದೆ. ಅವರೆಂದದ್ದು ವೇದವಾಕ್ಯವೆಂದು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಂಟಿಕೊಳ್ಳುವ ಸಾಧ್ಯತೆಯಿದೆ. ವ್ಯಕ್ತಿಯ ಸ್ಥಾನಮಾನಗಳು ಹಾಗೂ ಥಳಕು ಬೆಳಕುಗಳು ಅವರ ಅಭಿಪ್ರಾಯಕ್ಕೆ ಬೆಲೆ ತಂದುಕೊಡುವ ನಮ್ಮ ಸಮಾಜದಲ್ಲಿ ಅಂತಹ ಸ್ಥಾನ ಹಿಡಿದು ಕೂತವರು ಮಾತುಗಳನ್ನು ತೂಗಿ ಆಡಬೇಕು. ಅದರ ಪರಿಣಾಮಗಳ ಬಗ್ಗೆ ಪೂರ್ವ ಚಿಂತನೆ ನಡೆಸಬೇಕು.

ಸ್ತ್ರೀಯರು ಸಮಾನತೆ ಕೇಳುವುದು, ಆಗ್ರಹಿಸುವುದು ಸರಿಯಲ್ಲ, ಅದನ್ನು ಗಳಿಸಿಕೊಳ್ಳಬೇಕು ಎಂಬರ್ಥದಲ್ಲಿ, ಸಾಹಿತ್ಯದ ಸಂದರ್ಭದಲ್ಲಿ ಅವರು ಈ ಮಾತನ್ನು ಆಡಿರಬಹುದು. ಆದರೆ ಅದು ಅಪಾರ್ಥಕ್ಕೆಡೆಮಾಡುತ್ತದೆ.

ಭಾರತೀಯ ಸಂದರ್ಭದಲ್ಲಿ ಮಹಿಳೆ ಇತರೆಲ್ಲ ಹಿಂದುಳಿದವರಂತೆ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ದಮನಕ್ಕೂ ಶೋಷಣೆಗೂ ಒಳಗಾದ ಜನವಿಭಾಗಕ್ಕೆ ಸೇರಿದವಳು. ಇಂದು ನಮ್ಮದು ಪುರುಷ ಪ್ರಧಾನವಾದ ಸಮಾಜವೆನಿಸಿದೆ. ರಾಜಕೀಯ, ವಾಣಿಜ್ಯ, ಉದ್ಯಮ, ಸಾಹಿತ್ಯ ಮತ್ತು ಇತರ ಎಲ್ಲ ಸಾಮಾಜಿಕ ಚಟುವಟಿಕೆಗಳೂ ಪುರುಷರ ಗುತ್ತಿಗೆಯಾಗಿವೆ. ಶತ-ಶತಮಾನಗಳಿಂದಲೂ ಮಹಿಳೆ ಮನೆಯೊಳಗೆ ಬಂಧಿಯಾಗಿ ಉಳಿದುಕೊಂಡು ಬಂದಿದ್ದಾಳೆ. ಕೆಲವು ಸಮುದಾಯಗಳಲ್ಲಂತೂ ಸ್ತ್ರೀಗೆ ಬದುಕೆಂಬುದು ಕತ್ತಲ ಕೂಪವಾಗಿದೆ. ವಸ್ತುಶಃ ಸೆರೆಮನೆಯಾಗಿದೆ. ಕೆಲವೊಂದು ಮೇಲುಜಾತಿಗಳನ್ನು ಬಿಟ್ಟರೆ ಉಳಿದ ಜಾತಿ, ವರ್ಗಗಳ ಸ್ತ್ರೀಯರಿಗೆ ಶಿಕ್ಷಣದ ಅವಕಾಶ ಇಲ್ಲವೇ ಇಲ್ಲವೆನ್ನಬಹುದು. ಪರಂಪರೆಯಿಂದ ಬಂದ ಕೀಳರಿಮೆ ಸ್ತ್ರೀಯ ಬದುಕಿನ ಎಳೆಎಳೆಯಲ್ಲಿಯೂ, ವ್ಯಕ್ತಿತ್ವದ ಬಿಂದು ಬಿಂದುವಿನಲ್ಲಿಯೂ ಹೆಪ್ಪುಗಟ್ಟಿ ನಿಂತಿದೆ. ಹೊರಜಗತ್ತಿನ ಚಟುವಟಿಕೆಗಳಲ್ಲಿ ಭಾಗಿಯಾಗುವಂತಹ ಸಾಧ್ಯತೆಯ ಸೋಂಕು ಕೂಡ ಆಕೆಗೆ ತಗುಲದಂತಹ, ಅಂತಹ ಕನಸು ಕೂಡ ತಪ್ಪಿಯೂ ಆಕೆಯ ಮನಸ್ಸನ್ನು ತಟ್ಟದಂತಹ ರೂಢಮೂಲವಾದ, ಸಂಪ್ರದಾಯದ ಉಕ್ಕಿನ ಹಲಗೆಗಳ ಗೋಡೆ ಆಕೆಯನ್ನು ಆವರಿಸಿದೆ. ಹೊರಜಗತ್ತಿನ ಬದುಕಿಗೆ ತೆರೆದುಕೊಳ್ಳುವ ತುಡಿತವನ್ನು ಹುಟ್ಟಿಸುವ ಉಸಿರು ಕೊಡುವ ಶುಚಿಯಾದ ಗಾಳಿ ಈ ಉಕ್ಕಿನ ಗೋಡೆ ಭೇದಿಸಿ ಒಳನುಗ್ಗುತ್ತಿಲ್ಲ.

ಹೀಗೆ ದಾಸ್ಯವೇ ಬದುಕಾಗಿರುವ ಮೌಢ್ಯವೇ ಮುಸುಕಿರುವ ದೈನ್ಯವೇ ದಿನವೂ ಮರುಕಳಿಸುತ್ತಿರುವ ಅವಸ್ಥೆಯಾಗಿರುವ ನಮ್ಮ ಸಮಾಜದ ಸರಿ ಅರ್ಧಾಂಶವನ್ನು ಸಹಾನುಭೂತಿಯಿಂದಲೂ, ಕಳಕಳಿಯಿಂದಲೂ ತಿಳುವಳಿಕೆಯಿಂದಲೂ ನಡೆಸಿಕೊಳ್ಳಬೇಕಾದ ಕರ್ತವ್ಯ ಪುರುಷನೆಂಬ ಮನುಷ್ಯ ಜೀವಿಯದ್ದಾಗಿದೆ. ಶಾರೀರಿಕವಾಗಿ ಅಬಲೆಯಾದ ಒಂದೇ ಕಾರಣಕ್ಕೆ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಅಬಲೆಯನ್ನಾಗಿ ಮಾಡಿ ಕೂರಿಸಿರುವ ಮಾನವ ಜನಾಂಗದ, ಮುಖ್ಯವಾಗಿ, ನಮ್ಮ ಸಂದರ್ಭದಲ್ಲಿ ಭಾರತೀಯ ಜನಾಂಗದ ನಡವಳಿಕೆ ಅತ್ಯಂತ ಕ್ರೌರ್ಯದ್ದಾಗಿದೆ.

ಹೀಗೆ ಸಾಮಾಜಿಕವಾಗಿ ಕಾಲಿಗೆ ಸಂಕಲೆಯನ್ನೂ ಮಣಭಾರದ ಕೊರಡುಗಳನ್ನೂ ತಗುಲಿಸಿಕೊಂಡ ಒಂದು ಜನವಿಭಾಗಕ್ಕೆ ಅವಕಾಶಗಳನ್ನು ತೆರೆಯಬೇಕಾದದ್ದು ಒಟ್ಟು ಸಮಾಜದ ಆರೋಗ್ಯದ ದೃಷ್ಟಿಯಿಂದ ಅಗತ್ಯವಾದದ್ದು. ಪ್ರತಿಭೆಯ, ಸಾಮರ್ಥ್ಯದ, ಪುರುಷರೊಡನೆ ಸ್ಪರ್ಧಿಸುವ ತಾಕತ್ತಿನ ಪ್ರಶ್ನೆ ಆಮೇಲಷ್ಟೆ ಬರುತ್ತದೆ. ಅವಕಾಶದಲ್ಲಿ ಆದ್ಯತೆ ಸ್ತ್ರೀ ವಿಭಾಗಕ್ಕೆ ಸಲ್ಲಬೇಕಾದ್ದಿದೆ. ಮಾನವನ ಚಟುವಟಿಕೆಯ ಎಲ್ಲ ಮಹತ್ವದ ಕ್ಷೇತ್ರಗಳಲ್ಲಿಯೂ, ಸಾಹಿತ್ಯದಲ್ಲಿಯೂ ಕೂಡ ಇಂಥ ಅವಕಾಶಗಳನ್ನು ಅವರಿಗೆ ತೆರೆಯಬೇಕು. ಅವರ ಅರ್ಹತೆಯ ಕುರಿತಾದ ತೀರ್ಮಾನದಲ್ಲಿ ಸಹಾನುಭೂತಿ ಪರ ನಿಲುವು ಇರಬೇಕು. ಇದನ್ನು ಕೃಪೆಯಾಗಿ ಕೊಡಬೇಕಾದ್ದಿಲ್ಲ. ಶತಮಾನಗಳಿಂದ ತುಳಿದು ಮನೆಯಲ್ಲಿ ಕೂರಿಸಿದ್ದಕ್ಕೆ ಪ್ರಾಯಶ್ಚಿತ್ತವಾಗಿ ಮಾಡಬೇಕು.

'ಅಭಿಮಾನ' ಚಿತ್ರದಲ್ಲಿ ಗಾಯತ್ರಿ, ಲೀಲಾವತಿ ಮತ್ತಿತರರು

ಶಿವಭಕ್ತ ಮಾರ್ಕಂಡೇಯ

ಕನ್ನಡ ಚಿತ್ರರಂಗದಲ್ಲಿ "ಅಮರ ಶಿಲ್ಪಿ ಜಕಣಾಚಾರಿ" ಚಿತ್ರದ ಮುಖಾಂತರ ವರ್ಣ ಯುಗವನ್ನು ಆರಂಭಿಸಿದ ಹಿರಿಯ ನಿರ್ಮಾಪಕ, ನಿರ್ದೇಶಕ ಬಿ.ಎಸ್. ರಂಗಾ ಅವರು "ವರ್ಣ ಪ್ರೊಡಕ್ಷನ್ಸ್" ಲಾಂಛನದಲ್ಲಿ ಅರ್ಪಿಸಿ, ಬಿ.ಆರ್. ವಸಂತ್ ಅವರು ನಿರ್ಮಿಸಲಿರುವ "ಶಿವಭಕ್ತ ಮಾರ್ಕಂಡೇಯ" ಭಕ್ತಿ ಪ್ರಧಾನ ವರ್ಣ ಚಿತ್ರಕ್ಕಾಗಿ ಕಳೆದವಾರ ಮದರಾಸಿನ ಪ್ರಸಾದ್ ರೀರೆಕಾರ್ಡಿಂಗ್ ಥಿಯೇಟರ್‌ನಲ್ಲಿ ಎಂ. ರಂಗರಾವ್ ಸಂಗೀತ ಸಂಯೋಜನೆಯಲ್ಲಿ ಚಿ. ಉದಯಶಂಕರ್ ಬರೆದ ಎಂಟು ಹಾಡುಗಳ ಧ್ವನಿಮುದ್ರಣಕಾರ್ಯ ನಡೆಯಿತು.

ಬಿ.ಎಸ್. ರಂಗಾ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ ಈ ಚಿತ್ರ ಈ ತಿಂಗಳ 22 ರಂದು ಮದರಾಸಿನಲ್ಲಿ 'ಸ್ಪೆಷಲ್ ಎಫೆಕ್ಟ್' ಸನ್ನಿವೇಶದ ಚಿತ್ರಣದೊಂದಿಗೆ ಸೆಟ್ಟೇರಲಿದೆ. ಮೋಹನ್ ಗ್ರಾಫಿಕ್ ಪ್ರೈವೆಟ್ ಲಿಮಿಟೆಡ್‌ನ ಬಿ. ಆರ್. ರಾಮ್‌ಕುಮಾರ್ ಈ ಚಿತ್ರದ ಸ್ಪೆಷಲ್ ಎಫೆಕ್ಟ್ ಛಾಯಾಗ್ರಹಣ ನೀಡಲಿದ್ದು ಈ ಚಿತ್ರದ ಛಾಯಾಗ್ರಹಣವನ್ನು ಬಿ. ಎನ್. ಹರಿದಾಸ್ ನಿರ್ವಹಿಸಲಿದ್ದಾರೆ. ಸಂಭಾಷಣೆಯನು ಚಿ. ಉದಯಶಂಕರ್ [illegible]

1 ರಿಂದ 20 ರ ತನಕ ಬೆಂಗಳೂರು ಕಂಠೀರವ ಸ್ಟುಡಿಯೋದಲ್ಲಿ ಚಿತ್ರಣ ನಡೆಸಿ 'ಮೇ' ನಲ್ಲಿ ಕೊಪ್ಪದಲ್ಲಿ ಚಿತ್ರದ ಬಹುಭಾಗದ ದೃಶ್ಯಕ್ಕೆ ಹೊರಾಂಗಣ ಚಿತ್ರಣ ನಡೆದು ಚಿದಂಬರ, ತಿರುವಣ್ಣಾಮಲೈ, ಕಾಳಹಸ್ತಿ, ರಾಮೇಶ್ವರಗಳಲ್ಲೂ ಚಿತ್ರೀಕರಣ ಮುಂದುವರೆದು ಚಿತ್ರೀಕರಣ ಕಾರ್ಯ ಮುಕ್ತಾಯಗೊಳ್ಳಲಿದೆ. ಜೂನ್‌ನಲ್ಲಿ ಮಾತುಗಳ ಧ್ವನಿಮುದ್ರಣ ಕಾರ್ಯ, ರೀರೆಕಾರ್ಡಿಂಗ್ ಕಾರ್ಯ ಮುಗಿದು ಜುಲೈಗೆ ಚಿತ್ರವನ್ನು ತೆರೆಗೇಯುವ ಯೋಜನೆ ನಿರ್ಮಾಪಕರದು.

ರಾಜೇಶ್, ಮಂಜುಳಾ, ಶಿವರಾಂ, ದಿ। ಮುಸುರಿ ಕೃಷ್ಣಮೂರ್ತಿ ಮುಂತಾದವರ ತಾರಾಗಣವಿರುವ ಈ ಚಿತ್ರದಲ್ಲಿ ಬಾಲ ಮಾರ್ಕಂಡೇಯನ ಪಾತ್ರಕ್ಕೆ ಮಾ॥ ಅರ್ಜುನ್ ಆಯ್ಕೆಯಾಗಿದ್ದಾನೆ. ಹದಿನಾರು ವರ್ಷದ ಮಾರ್ಕಂಡೇಯನ ಪಾತ್ರಕ್ಕೆ ಶೋಧ ನಡೆದಿದೆ.

"ಏನು ಲೀಲೆಯೋ ಅರಿಯೆ" ಎಂಬ ಗೀತೆಯನ್ನು ಡಾ॥ ಎಂ. ಬಾಲಮುರಳಿ ಕೃಷ್ಣ ಅವರೂ, "ಅಮ್ಮ ಏಕಳುವೆ ನನ್ನಮ್ಮಾ ಏಕಳುವೆ" ಎಂಬ ಗೀತೆಯನ್ನು ಬೆಂಗಳೂರು [illegible] "ಶಿವನೊಲಿಯದೆ ನಿನಗೆ

ವಸಂತನ ಅವರೂ, "ನೀ ತಂದ ಈ ಜೀವ ನಿನ್ನದು ಶಿವನೆ" ಎಂಬ ಗೀತೆಯನ್ನು ವಾಣಿಜಯರಾಂ ಅವರೂ, "ಶಿವನು ಬಂದ ಕೈಲಾಸದಿಂದ ಮನೆಗೆ ಬಂದ ಅಮ್ಮಾ ಎಂದ" ಎಂಬ ಗೀತೆಯನ್ನು ಪಿ. ಸುಶೀಲ ಅವರು ಹಾಡಿದ್ದಾರೆ.

ಮನರಂಜನೆ

21-3-1985

ಸುಚಿತ್ರ: ಛೋಟಾ ಚೇತನ್ (ಹಿಂದಿ)

ರೂಪವಾಣಿ: ರಾಜ್ ತಿಲಕ್ (ಹಿಂದಿ)
ರಾಜ್‌ಕುಮಾರ್, ಕಮಲಹಾಸನ್

ನ್ಯೂಚಿತ್ರಾ: ಅಂದರ್ ಬಾಹರ್ (ಹಿಂದಿ)
ಜಾಕಿ ಶ್ರೋಫ್, ಶಿವ್, ಮೂನ್‌ಮೂನ್

ಪ್ಲಾಟಿನಂ:
ಮುಜೇ ಇನ್ಸಾಫ್ ಚಾಹಿಯೆ (ಹಿಂದಿ)
ಮಿಥುನ್, ರತಿ ಅಗ್ನಿಹೋತ್ರಿ

ಅಮೃತ್: ಒರು ಕೈದಿಯನ್ ಡೈರಿ
ಕಮಲಹಾಸನ್, ರಾಧ (ತಮಿಳು)

ಸೆಂಟ್ರಲ್: ಮುಗಿಲ ಮಲ್ಲಿಗೆ (ಕನ್ನಡ)
ಪ್ರಣಯರಾಜ ಶ್ರೀನಾಥ್, ಸರಿತ

ಮುಂಗಾರು

ಮೊದಲು ಜನರಿಗೆ ಸಲ್ಲುವ ಪಕ್ಷವಾಗಬೇಕು

ಕರ್ನಾಟಕದ ಕಾಂಗ್ರೆಸ್ ಪಕ್ಷದಲ್ಲಿ ಎಂದೆಂದೂ ಇದ್ದ –ವಿಧಾನಸಭಾ ಚುನಾವಣೆಗೆ ಮೊದಲು ಸಮಯ ಸಾಧಿಸಿ ತಲೆಯೆತ್ತಲು ಕಾದು ಮಲಗಿದ್ದ ಗುಂಪುಗಾರಿಕೆ–ಸೋಲಿನ ಬಳಿಕ ಒಮ್ಮೆಲೇ ತಲೆಯೆತ್ತಿದೆ. ರಾಜ್ಯ ಕಾಂಗ್ರೆಸ್ ನಾಯಕರು ನೇರವಾಗಿ ಅಥವಾ ಅವರ ಚೇಲಾಗಳ ಮೂಲಕ ಪರಸ್ಪರ ನಿಂದೆಯಲ್ಲಿಯೂ, ದೋಷಾರೋಪಣೆಯಲ್ಲಿಯೂ ನಿರತರಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾಯರು ಒಂದು ಹೆಜ್ಜೆ ಮುಂದೆ ಹೋಗಿ, ಚುನಾವಣೆಗೆ ಪಕ್ಷದ ವೀಕ್ಷಕರಾಗಿ ಬಂದ ಹೊರ ರಾಜ್ಯದ ನಾಯಕರೊಬ್ಬರನ್ನು ಬಲಿಪಶುವಾಗಿ ಮಾಡಿದ್ದಾರೆ. ಕೆಪಿಸಿಸಿ(ಐ) ಅಧ್ಯಕ್ಷ ಕೆ. ಎಚ್. ಪಾಟೀಲ್, ಶಾಸಕಾಂಗ ಪಕ್ಷದ ಮಾಜಿ ನಾಯಕ ಎಂ. ವೀರಪ್ಪ ಮೊಯಿಲಿ ಹಾಗೂ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ ಪ್ರಸಾದ್ ಅವರನ್ನು ಪಕ್ಷದಿಂದ ಹೊರಹಾಕಬೇಕೆಂದು ಆಸಕ್ತ ವ್ಯಕ್ತಿಗಳಿಂದ ಒತ್ತಡ ಬಂದಿದೆ.

ಇದೆಲ್ಲಾ ಸಹಜವೇ ಆಗಿದೆ. ಸೋತಾಗ ಹೊಣೆ ಜಾರಿಸುವುದೂ, "ನಾನಾಗಿದ್ದರೆ ಹೀಗಾಗುತ್ತಿರಲಿಲ್ಲ" ಅನ್ನುವುದೂ, ಗೆದ್ದರೆ ಎಲ್ಲವೂ ತನ್ನಿಂದಾಯಿತೆಂದು ಭುಜ ಕುಣಿಸುವುದೂ ಮನುಷ್ಯನ ಪ್ರವೃತ್ತಿಯಾಗಿದೆ. ಆದರೂ ಈ ಪ್ರವೃತ್ತಿ ಸಂಕುಚಿತವಾದದ್ದು, ದೂರದೃಷ್ಟಿಯಿಂದ ಕೆಲಸ ಮಾಡುವ ಯಾವುದೇ ರಾಜಕೀಯ ಪಕ್ಷ ಅಥವ ರಾಜಕಾರಣಿ ಇಂತಹ ಪ್ರವೃತ್ತಿಗಳಿಂದ ಮೇಲೆದ್ದು ನಿಂತು ಸಮಾಜದ ಸಮಷ್ಟಿ ಹಿತದಲ್ಲೇ ಪಕ್ಷದ ಅಥವಾ ವ್ಯಕ್ತಿಯ ಹಿತವನ್ನು ಕಂಡುಕೊಳ್ಳಬೇಕು

ಇಂದು ಸೋಲು ಉಂಡಿರುವ ಕರ್ನಾಟಕದ ಕಾಂಗ್ರೆಸ್(ಐ) ಪಕ್ಷ ಕೂಡ ಮಾಡಬೇಕಾದ್ದು ಇದೇ ಆಗಿದೆ. ವ್ಯಕ್ತಿಗಳು ಅಸಮರ್ಥರಾಗಿದ್ದರೆ ಅವರನ್ನು ಬದಿಗೆ ಸರಿಸಬೇಕು ಅನ್ನುವುದು ಸರಿ. ಆದರೆ ಅದು ಇನ್ನೊಂದು ಗುಂಪಿನ ಸ್ವಾರ್ಥಕ್ಕಾಗಿಯಾಗಲಿ, ಉಚ್ಚಾಟನೆಗಾಗಿ ಉಚ್ಚಾಟನೆ ಎಂಬುದಕ್ಕಾಗಿಯಾಗಲಿ ನಡೆಯಬಾರದು. ಯಾರು ಕೆಲಸ ಮಾಡಬಲ್ಲರೋ ಅಂತಹವರು ನಾಯಕರಾಗಬೇಕು. ಅಂತಹವರು ಯಾರೆಂಬುದನ್ನು ದಿಲ್ಲಿಯಲ್ಲಿ ಕುಳಿತು ನಿರ್ಧರಿಸುವ ಬದಲು ಕರ್ನಾಟಕದ ಜನರೇ, ಪಕ್ಷದ ಸದಸ್ಯರೇ ನಿರ್ಧರಿಸಬೇಕು. ಆಗ ಪಕ್ಷದಲ್ಲಿ ಜನತಂತ್ರ ಮೊಳೆಯುತ್ತದೆ. ಅದು ಜನರಿಗೆ ಸಲ್ಲುವ ರಾಜಕೀಯ ಪಕ್ಷವಾಗಿ ಬೆಳೆಯುತ್ತದೆ. ಇಂದು ಹಾಗಾಗಿಲ್ಲ ಎಂಬ ಕಾರಣಕ್ಕೆ ಜನರು ಈ ಪಕ್ಷವನ್ನು ತಿರಸ್ಕರಿಸಿದ್ದಾರೆ.

ನಾಯಕರನ್ನು ಆರಿಸುವ ಹೊಣೆಗಾರಿಕೆಯನ್ನು ಜನರಿಗೆ ಹಾಗೂ ಪಕ್ಷದ ಸದಸ್ಯರಿಗೆ ವಹಿಸಿಕೊಟ್ಟರೆ ಜನರ ಅಗತ್ಯಗಳನ್ನು ಅಂತಹ ಪಕ್ಷ ನೋಡಿಕೊಳ್ಳುತ್ತದೆ; ಅವರ ಆಶೋತ್ತರಗಳ ಈಡೇರಿಕೆಗಾಗಿ ಕೆಲಸ ಮಾಡುತ್ತದೆ; ಅವರ ಬೇಕು–ಬೇಡಗಳಿಗೆ ಪ್ರತಿಸ್ಪಂದಿಸುತ್ತದೆ. ಪಕ್ಷವೊಂದರ ನೀತಿ-ಧೋರಣೆ ಹಾಗೂ ಕಾರ್ಯಕ್ರಮಗಳನ್ನು ಜನರೇ ತೀರ್ಮಾನಿಸುವ ಜನತಂತ್ರ ಪಕ್ಷವಿದ್ದರೆ ಅದು ಜನರಿಗೆ ಸಲ್ಲುವ ಪಕ್ಷವಾಗುತ್ತದೆ.

ಇಂದು ಹಾಗಾಗಿಲ್ಲ ಎಂಬುದರಿಂದಲೇ, ಕಾಂಗ್ರೆಸ್ ಪಕ್ಷವು ಜನರಿಂದ ದೂರವಾಗಿ ಸೊರಗಿ ಹೋಗಿದೆ. ಜನರ ಆಶೋತ್ತರಗಳಿಗೆ ಮಿಡಿಯದ ನಾಯಕರಿಗೆ ಜನಹಿತಕ್ಕಿಂತಲೂ ಸ್ವಂತ ಅಧಿಕಾರ, ವರ್ಚಸ್ಸು ಹಾಗೂ ಸೊತ್ತು ಸಂಗ್ರಹಣೆಯೇ ಮುಖ್ಯ ವಿಚಾರವಾಗಿದೆ.

ಜನರಿಗೆ ಸಲ್ಲುವ ಸಂಸ್ಥೆ ಹಿಡಿಯಬೇಕಾದ ದಾರಿ ಇದಲ್ಲ. ಇಂದು ಕರ್ನಾಟಕದಲ್ಲಿ ಪ್ರತಿಪಕ್ಷವಾಗಿರುವ ಕಾಂಗ್ರೆಸ್ ಮೇಲೆ, ಜನಹಿತವನ್ನು ಕಾಯುವ ದೊಡ್ಡ ಹೊಣೆಗಾರಿಕೆಯಿದೆ. ಸೋಮವಾರ ವಿಧಾನಸಭೆಯ ಅಧಿವೇಶನ ಪ್ರಾರಂಭವಾಗುತ್ತದೆ. ಜನರ ಆಶೋತ್ತರಗಳನ್ನು ಅಲ್ಲಿ ಪ್ರತಿಧ್ವನಿಸಬೇಕಾದ ಕರ್ತವ್ಯ ಅದಕ್ಕಿದೆ. ಇದಕ್ಕೆ ಏನೆಲ್ಲ ವ್ಯೂಹ ರಚಿಸಬೇಕು ಎಂದು ಆ ಪಕ್ಷ ವಿಚಾರಿಸಬೇಕು. ಚುನಾವಣೆ ಕಳೆದು ಹತ್ತು ದಿನಗಳು ಸಂದರೂ ವಿರೋಧ ಪಕ್ಷದ ನಾಯಕನ ಆಯ್ಕೆ ಇನ್ನೂ ಆಗಿಲ್ಲ. ಅದಕ್ಕೆ, ಒಳಜಗಳದಲ್ಲಿ ನಿರತವಾದ ಈ ಪಕ್ಷಕ್ಕೆ ವ್ಯವಧಾನವೆಲ್ಲಿದೆ?

ಜನತಾ ಪಕ್ಷ ಚುನಾವಣೆಯಲ್ಲಿ ಹಲವು ಆಶ್ವಾಸನೆಗಳನ್ನು ಕೊಟ್ಟಿದೆ. ಅವುಗಳ ಬಗೆಗೆ ರಾಜ್ಯದ ಜನರ ಗಮನವನ್ನು ಸದಾ ಸೆಳೆಯುತ್ತಿರಬೇಕಾದ ಕರ್ತವ್ಯ ವಿರೋಧ ಪಕ್ಷಕ್ಕಿದೆ. ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಕ್ಯಾಪಿಟೇಶನ್ ಶುಲ್ಕ ನಿಷೇಧಿಸುವುದಾಗಿ ಆಳುವ ಪಕ್ಷ ಹೇಳಿದೆ. ಅದರಲ್ಲಿ ಮೋಸ ನಡೆಯದಂತೆ ನೋಡಿಕೊಳ್ಳಬೇಕಾದ ಹೊಣೆಯಿದೆ, ಎರಡು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಕೊಡುತ್ತೇವೆಂದು ಜನತಾಪಕ್ಷ ಸಾರಿದೆ. ಇದನ್ನು ಆಗ ಮಾಡಿಸುವುದಷ್ಟೇ ಅಲ್ಲದೆ ಅಕ್ಕಿ ಕ್ರಯವನ್ನು ಕಮ್ಮಿ ಮಾಡುವುದಕ್ಕಾಗಿ ಆಳುವ ಪಕ್ಷ, ಬೆಳೆಯುವ ರೈತರ ಬೆನ್ನಿನ ಮೇಲೆ ಇನ್ನೊಂದು ಗುದ್ದು ಕೊಡದಂತೆ ನೋಡಿಕೊಳ್ಳುವ ದೊಡ್ಡ ಜವಾಬುದಾರಿ ವಿರೋಧ ಪಕ್ಷಕ್ಕಿದೆ.

ಗೇಣಿದಾರರು ಕೊಡಬೇಕಾದ ಪರಿಹಾರ ಧನವನ್ನು ಮನ್ನಾ ಮಾಡುತ್ತೇವೆಂದು ಸಾರಿರುವ ಸರಕಾರ ಅದಕ್ಕೆ ಬೇಕಾದ ಯಾವ ಕಾನೂನನ್ನೂ ಮಾಡದೆ ಮಾಜಿ ಗೇಣಿದಾರರಿಗೆ ನೋಟೀಸು ಕಳಿಸುವ ಹಿಂಬಾಗಿಲು ಕೆಲಸವನ್ನು ನಡೆಸಿಕೊಂಡು ಬಂದಿದೆ. ಬಡವರಿಗೂ ಹಿಂದುಳಿದವರಿಗೂ ಮನೆಗೊಬ್ಬರಿಗೆ ಉದ್ಯೋಗ ಕೊಡುವುದಾಗಿ ಹೇಳುತ್ತಾ ಉದ್ಯೋಗ ನಿರ್ಮಾಣವಾಗುವಂತಹ ಸರಕಾರಿ ನೌಕರರ ನಿವೃತ್ತಿಯನ್ನು ಮೂರು ವರ್ಷ ಮುಂದೆ ಹಾಕಿದೆ. ಇದರಿಂದ ವರ್ಷಕ್ಕೆ 18,000 ಹುದ್ದೆಗಳು ಖಾಲಿಯಾಗುವುದು ನಿಂತುಹೋಗಿ, ಹಿಂದುಳಿದವರಿಗೂ ಪರಿಶಿಷ್ಟರಿಗೂ ದೊರೆಯುವ 12,000 ನೌಕರಿಗೆ ಬಾಗಿಲು ಬಿದ್ದಿದೆ.

ಈಯೆಲ್ಲಾ ಮೋಸಗಳನ್ನು ಜನರಿಗೆ ತಿಳಿಸಬೇಕಾದ ಕರ್ತವ್ಯ ವಿರೋಧ ಪಕ್ಷಕ್ಕಿದೆ. ಅದಕ್ಕೆ ಅಣಿಯಾಗುವ ಬದಲು ಕಾಂಗ್ರೆಸ್ ಪಕ್ಷ ಸೋಲಿಗೆ ಬಲಿಪಶುಗಳನ್ನು ಹುಡುಕುತ್ತಾ, ಇನ್ನೂ ಕುರ್ಚಿಯಾಟ ಬಿಡದಿರುವುದು ಆ ಪಕ್ಷ ಇನ್ನೂ ಸಮಯಸಾಧಕರ ಕೂಟವಾಗಿಯೆ ಉಳಿದಿರುವುದನ್ನು ತೋರಿಸುತ್ತದೆ.

ಮೇಯರ್ ಸತ್ಯನಾರಾಯಣ್, ಛಾಯಾ

ಮದರಾಸಿನಲ್ಲಿ ಹಾಡು ಕುದುರೆಮುಖದಲ್ಲಿ ಬೀಡು

ಭಕ್ತಿ ಪ್ರಧಾನ "ಭಕ್ತ ಸಿರಿಯಾಳ" ಚಿತ್ರದ ನಿರ್ಮಾಪಕ ಚಂದೂಲಾಲ್ ಜೈನ್, ಸಾಹಸ ಪ್ರಧಾನ "ಅಂತ" ಚಿತ್ರದ ನಿರ್ಮಾಪಕ ವೇಣುಗೋಪಾಲ್ ಅವರುಗಳು ಸಂಯುಕ್ತವಾಗಿ "ಮಾಸ್ಟರ್ ಪ್ರೊಡಕ್ಷನ್ಸ್" ಲಾಂಛನದಲ್ಲಿ ನಿರ್ಮಿಸುತ್ತಿರುವ "ಮಮತೆಯ ಮಡಿಲು" ಸಾಂಸಾರಿಕ ವರ್ಣ ಚಿತ್ರಕ್ಕಾಗಿ ಮದರಾಸಿನ ಎ.ವಿ.ಎಂ. ಸ್ಟುಡಿಯೋದಲ್ಲಿ ಎಂ. ಎಸ್. ವಿಶ್ವನಾಥನ್ ಅವರ ಸಂಗೀತ ಸಂಯೋಜನೆಯಲ್ಲಿ ಆರ್. ಎನ್. ಜಯಗೋಪಾಲ್ ಬರೆದ ನಾಲ್ಕು ಹಾಡುಗಳ ಧ್ವನಿ ಮುದ್ರಣ ಕಾರ್ಯ ಕಳೆದವಾರ ನಡೆಯಿತು.

ಈ ಹಾಡುಗಳನ್ನು ಚಿತ್ರೀಕರಿಸಲು ಚಿತ್ರ ತಂಡ ಈ ತಿಂಗಳ 15ರಿಂದ ಕುದುರೆ ಮುಖದಲ್ಲಿ ಬೀಡು ಹೂಡಿದೆ. ಹಾಡುಗಳ ಚಿತ್ರೀಕರಣ ಮಾತ್ರವಲ್ಲದೆ ಚಿತ್ರದ ಮಹತ್ವರ ದೃಶ್ಯಗಳನ್ನೂ 'ಕುದುರೆಮುಖ' ಹೊರಾಂಗಣದಲ್ಲಿ ಚಿತ್ರೀಕರಿಸಿಕೊಳ್ಳಲಾಗುತ್ತಿದೆ. ಶ್ರೀಮತಿ ಅನಸೂಯ ರಾಮರೆಡ್ಡಿ ಅವರ ಜನಪ್ರಿಯ ಕಾದಂಬರಿ "ಮಮತೆಯ ಮಡಿಲು" ಕಥೆಯನ್ನು ಆಧರಿಸಿ ತಯಾರಿಸುತ್ತಿರುವ ಈ ಚಿತ್ರವನ್ನು ಈರಂಕಿ ಶರ್ಮಾ ನಿರ್ದೇಶಿಸುತ್ತಿದ್ದಾರೆ.

ಛಾಯಾಗ್ರಾಹಕರು: ಬಿ. ಎಸ್. ಲೋಕನಾಥನ್, ಚಿತ್ರದ ಮಾತುಗಳನ್ನು ಆರ್. ಎನ್. ಜಯಗೋಪಾಲ್ ಬರೆದಿದ್ದಾರೆ. ಕಾ. ಹಿ. ರಾಧಾಕೃಷ್ಣ ಉಮಾಶಂಕರ್ ಅವರ ಸಹ ನಿರ್ದೇಶನವಿರುವ ಈ ಚಿತ್ರದ ನಿರ್ಮಾಣ ನಿರ್ವಹಣೆಯನ್ನು ಎಂ. ವಿ ಡೆಲ್ಲಿ ಅವರು ನಿರ್ವಹಿಸುತ್ತಿದ್ದಾರೆ. ತಾರಾಬಳಗದಲ್ಲಿ ಅಂಬರೀಷ್. ಶ್ರೀನಿವಾ. ಮೂರ್ತಿ, ಗೀತಾ, 'ಅಜೇಯ'ದ ಸಂಧ್ಯಾ ಶಿವರಾಂ, ಅರವಿಂದ್, ವೈಶಾಲಿ, ಮಂಜುಮಾಲಿನಿ, ಶ್ಯಾಮಲಾ, ಕೆ.ಎನ್, ಭಾರತಿ ಮುಂತಾದವರಿದ್ದಾರೆ.

ಮುಂದೆ ಮಹಿಮೆ'

ದಲ್ಲಿ ಶಿವಕುಮಾರ್ ನೃತ್ಯ ಸಂಯೋಜನೆಯಲ್ಲಿ "ಸೀತಮ್ಮಾ ಲಚ್ಚೆ ಏಕಮ್ಮಾ–ಹೇಳಮ್ಮ ಕೆನ್ನೆಯಲ್ಲೆ ಕೆಂಪೇಕಮ್ಮಾ ...... ಪ್ರೇಮದ ಮಿಡಿತವು ಆಸೆಯ ತುಡಿತವು ಅರಿಯದ ಕಂಪನ ನೂತನ ತಲ್ಲಣ" ಎಂಬ ಗೀತೆಯನ್ನು ಚಿತ್ರಿಸಿಕೊಳ್ಳಲಾಯಿತು.

ತೆಲುಗು ಚಿತ್ರರಂಗದ ಖ್ಯಾತ ಕಥಾಲೇಖಕ ಹಾಗೂ ನಿರ್ದೇಶಕ ವೇರಾಲ ಮೊದಲ ಬಾರಿಗೆ ನಿರ್ದೇಶಿಸುತ್ತಿರು ಕನ್ನಡ ಚಿತ್ರ ಈ ಚಿತ್ರವಾಗಲಿದೆ. ದಿ॥ ಎಸ್.ಎಸ್. ಲಾಲ್ ಅವರ ಪುತ್ರ ಕಬೀರ್ ಲಾಲ್ ಚಿತ್ರದ ಛಾಯಾ ಗ್ರಹಣ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಿತ್ರಕ್ಕೆ ಮಾತನ್ನು ಕು. ನಾಗಭೂಷಣ್ ಬರೆದರೆ ಹಾಡುಗಳನ್ನು ಜಯಗೋಪಾಲ್. ವಿಜಯಾನಾರಸಿಂಹ ಅವರುಗಳು ಬರೆದಿದ್ದಾರೆ. "ರವಿಚಿತ್ರ" ...ಲಂಸ್ ಲಾಂಛನದಲ್ಲಿ ತಯಾರಾಗುತ್ತಿರುವ ಈ ಚಿತ್ರಕ್ಕೆ ಕುಂಜಿ ಬೆಟ್ಟ, ಗಂಜಾಂ, ಶ್ರೀರಂಗಪಟ್ಟಣ, ಮೈಸೂರು ಸುತ್ತಮುತ್ತಲಿನ ಸ್ಥಳಗಳಲ್ಲಿ ನಿರಂತರವಾಗಿ ಚಿತ್ರೀಕರಣ ನಡೆದು ಒಂದೇ ಹಂತದಲ್ಲಿ ಚಿತ್ರೀಕರಣ ಕಾರ್ಯ ಸಂಪೂರ್ಣಗೊಳ್ಳಲಿದೆ.

ಕೋತಿ, ಗೂಳಿ, ಹಾವು ಈ ಮೂರು ಪ್ರಾಣಿಗಳ ವಿಶೇಷ ಸಾಹಸವಿರುವ ಈ ಚಿತ್ರದ ತಾರಾಬಳಗದಲ್ಲಿ ಚರಣ್‌ರಾಜ್, ಭವ್ಯ, ವಜ್ರಮುನಿ, ದಿನೇಶ್, ಉಮಾಶ್ರೀ, ...ತಸ್ ರಾಮರಾವ್, ಪ್ರಭ, ವೈಶಾಲಿ, ...ಮೆಲ್ ಸೋಮಣ್ಣ ಮುಂತಾದವರಿದ್ದಾರೆ.

ಹೊಸ ನಿರ್ದೇಶಕ ಹೊಸ ಅನುಭವ

ಮೈಸೂರಿನ "ಕೆ. ಎಸ್. ಪ್ರೊಡಕ್ಷನ್ಸ್" ಲಾಂಛನದಲ್ಲಿ ಮಂಜುಳಾ ಶ್ರೀನಿವಾಸ್, ಶಾಂತಾ ಕೇಶವ್ ಅವರುಗಳು ಕನ್ನಡ ಜನತೆಗೆ "ಹೊಸ ಅನುಭವ" ಎಂಬ ಚಿತ್ರವನ್ನು ನೀಡಲಿದ್ದಾರೆ. "ಹೊಸ ಅನುಭವ" ಚಿತ್ರದೊಂದಿಗೆ ಕನ್ನಡ ಚಿತ್ರರಂಗಕ್ಕೆ ಹೊಸ ನಿರ್ದೇಶಕರೊಬ್ಬರ ಪರಿಚಯವೂ ಆಗಲಿದೆ.

ಮೈಸೂರಿನವರೇ ಆದ ಕೆ. ಅಣ್ಣಾಜಿ ಅವರು ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳನ್ನು ಕೆ. ಅಣ್ಣಾಜಿ ಅವರೇ ಬರೆದಿದ್ದಾರೆ. ಛಾಯಾಗ್ರಾಹಕ ಬಿ. ಸಿ. ಗೌರೀಶಂಕರ ಅವರ ಬಳಿ ಸಹಾಯಕರಾಗಿ ದುಡಿಯುತ್ತಿರುವ ಜಾನ್ ಈ ಚಿತ್ರದ ಮುಖಾಂತರ ಸ್ವತಂತ್ರ ಛಾಯಾಗ್ರಾಹಕರಾಗಲಿದ್ದಾರೆ. ಎಂ. ರಂಗರಾವ್ ಈ ಚಿತ್ರಕ್ಕೆ ಸಂಯೋಜನೆ ನೀಡಲಿದ್ದಾರೆ.

ವಿಜಯಕಾಶಿ, "ಅನುಭವ"ದ ಶಿವಕುಮಾರ್, ಶಿವರಾಂ, ಲಲಿತಮ್ಮ ಅವರುಗಳೊಂದಿಗೆ ಹಲವಾರು ಹೊಸ ಪ್ರತಿಭೆಗಳನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗುವುದು. ಚಿತ್ರದ ನಾಯಕಿಯರಿಗಾಗಿ ಶೋಧ ನಡೆಸಿದ್ದಾರೆ ನಿರ್ಮಾಪಕರು.

ಮನರಂಜನೆ

14-3-1985

ರೂಪವಾಣಿ: ರಾಜ್ ತಿಲಕ್ (ಹಿಂದಿ)
ರಾಜ್‌ಕುಮಾರ್, ಕಮಲಹಾಸನ್

ನ್ಯೂಚಿತ್ರಾ: ಅಂದರ್ ಬಾಹರ್ (ಹಿಂದಿ)
ಜಾಕಿ ಶ್ರೋಫ್, ಕಿಮ್, ಮೂನ್‌ಮೂನ್

ಅಮೃತ್: ಒರು ಖೈದಿಯನ್ ಡೈರಿ
ಕಮಲಹಾಸನ್, ರಾಧ (ತಮಿಳು)

ಪ್ಲಾಟಿನಂ: ಕೈಕೊಡುಕ್ಕುಂ ಕೈ (ತಮಿಳು)
ರಜನಿಕಾಂತ್, ರೋಹಿಣಿ

ಸೆಂಟ್ರಲ್: ಮುಗಿಲ ಮಲ್ಲಿಗೆ (ಕನ್ನಡ)
ಪ್ರಣಯರಾಜ ಶ್ರೀನಾಥ್, ಸರಿತ

ಜ್ಯೋತಿ: ಆಹುತಿ (ಕನ್ನಡ)
ರೆಬೆಲ್‌ಸ್ಟಾರ್ ಅಂಬರೀಶ್, ಸುಮಲತ

ರಾಮಕಾಂತಿ: ಮಯೂರ (ಕನ್ನಡ)
ನಟಸಾರ್ವಭೌಮ ಡಾ। ರಾಜ್, ಮಂಜುಳ

ಪ್ರಭಾತ್: ತಾಯಿಕನಸು (ಕನ್ನಡ)
ಶಂಕರ್‌ನಾಗ್, ಸುಮಲತಾ

ಸುಚಿತ್ರ: ಬಿಡುಗಡೆಯ ಬೇಡಿ
ಅನಂತನಾಗ್, ಲಕ್ಷ್ಮಿ (ಕನ್ನಡ)



ಮುಂಗಾರು

ಮುಸುಕಿದೀ ಮಬ್ಬಿನಲಿ...

ಸ್ಪೇನಿನ ಅಂತರ್ಯುದ್ಧದಲ್ಲಿ ಬಂದೂಕು ಹಿಡಿದು ಹೋರಾಟ ಅನುಭವದಿಂದ ಹಿಡಿದು ಗಾಂಧೀ ಸೇವಾ ಗ್ರಾಮದಲ್ಲಿ ಸ್ವಸ್ಥ ಕುಳಿತು ಸಾಹಿತ್ಯ ಸೃಷ್ಟಿ ಮಾಡುವ ವರೆಗೆ, ಬದುಕಿನ ಅತ್ಯಂತ ವೈವಿಧ್ಯಮಯ ಗಳಿಗೆಗಳನ್ನು ಹಾಯ್ದು ಬಂದಿರುವ ಲೇಖಕ ಮುಲ್ಕ್‌ರಾಜ್ ಆನಂದ್, ಒಮ್ಮೆ "ಈ ಜಗತ್ತು ಸುರಕ್ಷಿತ ಸ್ಥಳವಲ್ಲ" ಎಂದು ಉದ್ಗರಿಸಿದ್ದರು.

ನಿಜ-ಅನುಭವನಿಷ್ಠ ಪ್ರಾಮಾಣಿಕತೆಯಿಂದ ಇಂಥ ದಪ್ಪ ಮಾತು ಹೇಳುವಂತಾಗಬೇಕಾದರೆ ಮನುಷ್ಯ ಬಹಳಷ್ಟು ಕಂಡಿರಬೇಕು, ಬದುಕಿನ ಮೂಸೆಯಲ್ಲಿ ಬೆಂದು ಹದಗೊಂಡಿರಬೇಕು.

ಆದರೆ, ನಾವು ಬದುಕುತ್ತಿರುವ ಪರಿಸರ-ಹೆಚ್ಚು ಅನುಭವವೇ ಇಲ್ಲದೆ ಇಂಥ ಉದ್ಗಾರಗಳನ್ನು ಹೊರಡಿಸಲು ಪ್ರೇರಣೆಯಾಗಬಲ್ಲುದು. ಗಾಢ ದುಗುಡದ, ದಾರುಣ ಸಂಕಟಗಳ, ವಿಚಿತ್ರ ವಿಪರೀತಗಳ ಯುಗವಿದು. ಜಗತ್ತಿನ ಹಸಿವನ್ನೇ ನೀಗಬಲ್ಲ ಸಂಪನ್ಮೂಲಗಳು, ವಿಶ್ವಭವಿಷ್ಯದ ಮೇಲೆ ಕರಾಳ ನೆರಳು ಚಾಚುವ ಅಣ್ವಸ್ತ್ರಗಳನ್ನು ಪೇರಿಸುವ ಹಣದ ಥೈಲಿಗಳಾಗಿವೆ. ಲಕ್ಷಾಂತರ ಜನರ ಅರೆಹೊಟ್ಟೆಯ ದುಡಿಮೆ ಒಬ್ಬಿಬ್ಬರ ಸುಪ್ಪತ್ತಿಗೆಯ ಹಾಸುಗಳಾಗುತ್ತಿವೆ....

ಇಂಥ-ಸಾಮಾನ್ಯ ಗ್ರಹಿಕೆಗೆ ನಿಲುಕದ ವಿಷಯಗಳಿರಲಿ, ಮನುಷ್ಯ ಮನುಷ್ಯನನ್ನೇ ಅಪನಂಬಿಕೆಯಿಂದ ನೋಡುವ ದಟ್ಟ ದುರಂತವೂ ಸರ್ವೇಸಾಮಾನ್ಯ ವಿಷಯವಾಗಿಬಿಟ್ಟಿದೆ. ಯಾರೂ ಇನ್ನಾರಿಗೂ ಒದಗಿಬರದೆ, ಅವರವರ ಪಾಡು ಅವರವರದೇ ಆಗಿ ಒಂಟಿ ದ್ವೀಪಗಳಂತೆ ಬದುಕುತ್ತಿದ್ದೇವೆ. ಎದೆಯಿಂದ ಎದೆಗೆ ಹರಿಯಬೇಕಾದ ಜೀವದ್ರವ್ಯ ಬತ್ತಿಹೋಗಿ ಮುಕ್ತ ಸ್ವಚ್ಛಂದ ಪ್ರೇಮವನ್ನು ಕೊಂದಿದೆ, ಪುಟಿದು ಅರಳುವ ಉಲ್ಲಾಸವನ್ನು ಕೊಂದಿದೆ. ನಾವು ಸೃಷ್ಟಿಸಿಕೊಂಡ ವ್ಯವಸ್ಥೆಯ ಪಂಜರದಲ್ಲಿ ಸಿಕ್ಕಿಬಿದ್ದು ಅಲ್ಲಿರಲಾರದೆ ಹೊರಬರಲಾರದೆ ರೆಕ್ಕೆ ಮುರಿದ ಹಕ್ಕಿಗಳಾಗಿದ್ದೇವೆ....

ನಮ್ಮನ್ನು ಕಾಡುವ ಈ ಎಲ್ಲ ತಲ್ಲಣಗಳೂ ಹಿಂಸೆಯ ವಿಭಿನ್ನ ರೂಪಗಳು. ನಮಗೆ ತಿಳಿದೋ ತಿಳಿಯದೆಯೋ ಒಬ್ಬರ ಮನಸ್ಸಿನ ಮೇಲೆ, ಸಂವೇದನೆಯ ಮೇಲೆ ಮತ್ತೊಬ್ಬರು ಎಸಗುವ ಅತ್ಯಾಚಾರದ ವಿವಿಧ ಮುಖಗಳು.

ಹಿಂಸೆ-ಮನುಷ್ಯ ಜೀವನದ ಅವಿಭಾಜ್ಯ ಅಂಗಗಳಲ್ಲೊಂದು. ಹಿಂಸೆಯಿಲ್ಲದೆ ಸೃಷ್ಟಿ ಸಾಧ್ಯವಿಲ್ಲ.... ಹೀಗೆ ನಾನಾ ರೀತಿಯಲ್ಲಿ ನಮ್ಮ ವಿಕಾಸಗಳನ್ನು ಸಮರ್ಥಿಸಿಕೊಳ್ಳುವ ಪ್ರಯತ್ನಗಳಲ್ಲಿದ್ದೇವೆಯೇ ಹೊರತು, ಮನುಷ್ಯನ ದುಃಖದ ಬೇರು ತಡಕಿ ಸಂತೈಸುವ ಮನಸ್ಸು ನಮಗಾರಿಗೂ ಇಲ್ಲವಾಗಿದೆ. ಇದು ನಮ್ಮ ಯುಗದ ದುರಂತ-ಯುಗಧರ್ಮ.

ಮನಸ್ಸು ಮುದುಡಿಸುವ ಇಂಥ ಪ್ರಲಾಪಗಳಲ್ಲಿ ನಿರ್ವಿಣ್ಣನಾಗಿ ಕೂರದೆ-ಅಹಿಂಸೆಯನ್ನು, ಪ್ರೀತಿಯನ್ನು ತನ್ನ ಹೋರಾಟದ ಸಾಧನವಾಗಿಸಿಕೊಂಡ ಗಾಂಧೀಜಿ ಇಂದು ಹಿಂದೆಂದಿಗಿಂತ ನಮಗೆ ಹತ್ತಿರವಾಗಬೇಕು; ನಮ್ಮ ಎದೆಯಾಳಕ್ಕಿಳಿದು ಪ್ರೀತಿಯನ್ನು, ದೊಡ್ಡ ಹೃದಯವನ್ನು ಅರಳಿಸುವ ಪ್ರೇರಣೆಯಾಗಬೇಕು.

ಸುತ್ತಲೂ ಮಬ್ಬು ಮುಸುಕಿದೆ. ನಮ್ಮ ಬದುಕಿನ ಒಟ್ಟಂದವೇ ಛಿದ್ರಗೊಂಡು ತುಣುಕುಗಳಲ್ಲಿ ಬದುಕುವ ತುಣುಕುಗಳಲ್ಲಿ ಯೋಚಿಸುವ-ತುಣುಕು ತುಣುಕಾಗಿ ಸಾಯುವ ಪರ್ವ ನಮ್ಮದು.

ನಮ್ಮಲ್ಲಿ ಹಿಂಸೆಯಿದೆ, ಪ್ರೀತಿಯಿಲ್ಲ. ತಾತ್ಸಾರವಿದೆ, ಸಹಾನುಭೂತಿಯಿಲ್ಲ. ಜೀವಿತ ಇದೆ, ಜೀವನ ಇಲ್ಲ. ಮನುಷ್ಯ ರೂಪವಿದೆ, ಮನುಷ್ಯತ್ವವಿಲ್ಲ. ನಮ್ಮ ಸಣ್ಣತನವೇ ಬೆಳೆದು ಅಣ್ವಸ್ತ್ರವಾಗಿದೆ, ನಮ್ಮ ಅಪನಂಬಿಕೆಯೇ ಸಮರ ಭೀತಿಯಾಗಿ ಕಾಡುತ್ತದೆ ಎಂಬ ಸತ್ಯ ಗಾಂಧೀಜಿಗೆ ಗೊತ್ತಿತ್ತು. ನಮಗೆ ಗೊತ್ತಾಗಬೇಕಿದೆ.

ಮನುಷ್ಯ ತನ್ನ ಬದುಕನ್ನೇ ಉದಾಹರಣೆ ಮಾಡಿ ಸಹಜೀವಿಗಳನ್ನು ತಿದ್ದುವ ಉದಾತ್ತತೆ ಪಡೆಯುವನೇ ಎಂಬುದು ಗಾಂಧೀಜಿ ನಂತರ ಉತ್ತರವನ್ನೇ ಕಾಣದಿರುವ ಪ್ರಶ್ನೆಯಾಗಿ ಉಳಿದಿದೆ. ಅದಕ್ಕೆ ಉತ್ತರ ಹುಡುಕಬೇಕು.

ಒಬ್ಬನಿದ್ದ ಕಡೆ ನೂರು ಗಾಂಧೀಜಿ ಬರಬೇಕು. ವ್ಯವಸ್ಥಿತ ಹಿಂಸೆಯನ್ನು ಸಂಘಟಿತ ಅಹಿಂಸೆ ಮತ್ತು ಪ್ರೀತಿಎದುರಿಸಿದಾಗಲಷ್ಟೇ ಹೊಸ ಸಂಸ್ಕೃತಿ ಉದಯಿಸಲು ಸಾಧ್ಯ.

ಇದು ಲೋಕದ ಡೊಂಕು ತಿದ್ದುವ ತಲೆನೋವಲ್ಲ. ನಮ್ಮ ಖಾಸಗಿಯನ್ನೂ, ನಮ್ಮನ್ನೂ ಆತ್ಮಶೋಧನೆಗೊಡ್ಡಿ ತಿದ್ದಿಕೊಳ್ಳುವ, ಅರಳುವ, ವಿಕಸಿಸುವ ಪ್ರಕ್ರಿಯೆ. ನಮ್ಮ ಕೈಗೆಟಕುವ ಜೀವನ ಮಾರ್ಗ. ನಮ್ಮ ವರ್ತಮಾನ ನಮ್ಮ ಮುಂದಿಟ್ಟಿರುವ ಅನಿವಾರ್ಯತೆ.

ಆಗಷ್ಟೇ ಗಾಂಧೀಜಿಯ ಹೆಸರಿಗೆ ಮರ್ಯಾದೆ ಬಂದೀತು.

...ತಿಭಟನೆ

...ಟ್ಟು ನಿರಾಶರಾದ ದಲಿತರು ಸರ ... ಭಿಕ್ಷೆ ಬೇಡ. ನಮ್ಮ ಹಕ್ಕನ್ನು ಕೊಡಿ ... ಪ್ರತಿಪಾದಿಸಿ ಇಂದು ಬೀದಿಗಿಳಿದ ... ಇವರ ನೋವಿನ ಕೊರಳದನಿಗೆ ...ಜನಿಕರು ದನಿಗೂಡಿಸಬೇಕು" ...

...ಯಲ್ಲಿ ಕೇಂದ್ರೀಯ ಪುನರ್ ಸಂಘ ...ಸಮಿತಿ, ಕಮ್ಯುನಿಸ್ಟ್ ಪಾರ್ಟಿ ಆಫ್ ...ಯಾ (ಮಾರ್ಕಿಸ್ಟ್-ಲೆನಿನಿಸ್ಟ್) ಇದರ ...ಗಿ ಲೋಲಾಕ್ಷ ಅವರು ಮತ್ತು ... ವಿಮೋಚನಾ ಸಮಿತಿಯ ಉಡುಪಿ ...ಕು ಸಮಿತಿಯ ಕೃಷ್ಣಪ್ಪ ಅವರು ...ಡಿದರು.

...ಚಿನಡ್ಕದ ದಲಿತರ ಬೇಡಿಕೆಗಳು ...ವಾಗಿ ಈಡೇರದಿದ್ದಲ್ಲಿ ಉಡುಪಿ ತಾ ... ಕಚೇರಿಯ ಎದುರು ಜನತಾ ವಿಮೋ ... ಸಮಿತಿ ಸತ್ಯಾಗ್ರಹ ಹೂಡುವುದಾಗಿ ...ಪ್ಪ ಅವರು ಎಚ್ಚರಿಕೆ ನೀಡಿದರು.

... ಪದಾಧಿಕಾರಿಗಳು

...ಣ್ಣೂರು, ಅ. 1– ಇಲ್ಲಿಯ ಬದ್ರಿಯಾ ...ಮ್ಮಾ ಮಸೀದಿಯ ಆಡಳಿತ ಕಮಿಟಿಗೆ ಈ ...ಳಗಿನವರು ಆಯ್ಕೆಯಾಗಿದ್ದಾರೆ.

... ಎ. ಖಾಲಿದ್‌ಯಾಸುಫ್ (ಅಧ್ಯಕ್ಷರು), ...ಎಸ್. ಹಮೀದ್ (ಕಾರ್ಯದರ್ಶಿ), ಕೆ. ...ಮ್ಮದ್‌ಭಾವ (ಉಪಾಧ್ಯಕ್ಷರು), ಎ. ...ಾಕೂಬ್ (ಕೋಶಾಧಿಕಾರಿ), ಎಸ್. ...ಮೀದ್. ಎ. ಜುಬೈರ್ ಅಹ್ಮದ್. ಬಿ. ...ಬ್ದುಲ್‌ಖಾದರ್ (ಸಹಾಯಕ ಕಾರ್ಯ ...ರ್ಗಳು.)

ಕಳ್ಳತನ

...ಕಾರ್ಕಳ, ಅ. 1–ಇತ್ತೀಚೆಗೆ ಇಲ್ಲಿಯ ... ನಿಲ್ದಾಣದ ಬಳಿಯ ಮನೋಹರ ...ಟ್ಟಿ ಎಂಬವರ ಅಂಗಡಿಗೆ ಮಾಡಿನ ...ಂಚು ತೆಗೆದು ಕಳ್ಳರು ನುಗ್ಗಿ ಸುಮಾರು ...450 ರೂಪಾಯಿ ನಗದು ಹಣವನ್ನು ...ದೋಚಿದರು.

ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮಂಗಳೂರಿನಲ್ಲಿ... ಕಾರ್ಯಕ್ರಮ

ಪ್ರತಿಭಾ ಪ್ರೋತ್ಸಾಹ

ಪುತ್ತೂರು, ಅ. 1–ಇಲ್ಲಿಯ ಬಪ್ಪಳಿಗೆ ಅನ್ಸಾರುಲ್ ಇಸ್ಲಾಂ ಯುವಕ ಸಮಿತಿಯ ವತಿಯಿಂದ ಇತ್ತೀಚೆಗೆ ಪ್ರತಿಭಾ ಪ್ರೋತ್ಸಾಹ ಕಾರ್ಯಕ್ರಮ ಜರಗಿತು.

ನೂರುಲ್ ಹುದಾ ಮದ್ರಸದ ಹಾಜರಿ ಮತ್ತು ಅಂಕಗಳಲ್ಲಿ ಪ್ರಥಮ ಸ್ಥಾನ ಪಡೆದ ಸುಮಾರು 30 ಮಕ್ಕಳನ್ನು ಈ ಬಗ್ಗೆ ಸನ್ಮಾನಿಸಲಾಯಿತು.

ನೂತನ ಅಂಚೆ ಕಚೇರಿ

ಕಾರಿಂಜೆ, ಅ. 1–ಇಲ್ಲಿಯ ಕಾರಿಂಜೇಶ್ವರ ದೇವಾಲಯದ ಸಮೀಪ ನೂತನ ಅಂಚೆ ಕಚೇರಿಯು ಬಂಟ್ವಾಳ ವಿಭಾಗೀಯ ಅಧಿಕಾರಿ ಆರ್. ಶೆಣೈಯವರಿಂದ ಉದ್ಘಾಟನೆ ಗೊಂಡಿತು.

ಅಂಚೆ ಮೇಲ್ವಿಚಾರಕ ಚಿನ್ನಪ್ಪ, ದೇವಾಲಯದ ಧರ್ಮದರ್ಶಿಗಳು ಈ ಸಂಧರ್ಭದಲ್ಲಿ ಉಪಸ್ಥಿತರಿದ್ದರು.

ಗಾಂಧಿ ಜನ್ಮ ದಿನಾಚರಣೆ

ಉಪ್ಪಿನಂಗಡಿ, ಅ. 1– ಇಲ್ಲಿನ ಲಯನ್ಸ್ ಕ್ಲಬ್ ಮತ್ತು ಗಾಂಧಿ ಸ್ಮಾರಕ ಸಮಿತಿ ಇವರ ಆಶ್ರಯದಲ್ಲಿ ಗಾಂಧೀಜಿ ಅವರ 115ನೇ ಜನ್ಮ ದಿನಾಚರಣೆಯನ್ನು ಆಕ್ಟೋಬರ್ 2ರಂದು ಆಚರಿಸಲಾಗುವುದು.

ಗಾಂಧಿ ಜಯಂತಿ

ನಿಟ್ಟೆ, ಸೆ. 1– ಲ್ಯಾಮಿನಾ ಮತ್ತು ನಿಟ್ಟೆ ವಿದ್ಯಾ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಗಾಂಧಿ ಜಯಂತಿ ಅಕ್ಟೋಬರ್ 2ರಂದು ಇಲ್ಲಿ ಆಚರಿಸಲಾಗುವುದು

ಸಮಾರಂಭದ ಅಧ್ಯಕ್ಷತೆಯನ್ನು ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶ ಕೆ. ಎಸ್. ಹೆಗ್ಡೆ ವಹಿಸುವರು.

ಮುಖ್ಯ ಅತಿಥಿಯಾಗಿ ಸಿಂಡಿಕೇಟ್ ಬ್ಯಾಂಕಿನ ಆಡಳಿತ ನಿರ್ದೇಶಕ ಎ. ಕೃಷ್ಣ ರಾವ್ ಅವರು ಭಾಗವಹಿಸುವರು.

ಆಕಾಶವಾಣಿ

ಅ. 2. ಮಂಗಳವಾರ
ಬೆಂಗಳೂರು
490.1 ಮೀ

ಭದ್ರಾವತಿ 220.75 ಮೀ — ಮೈಸೂರು 294.98 ಮೀ

ಬೆಳಗ್ಗೆ 5–55 ವಂದೇಮಾತರಂ. 6–45 ಕನ್ನಡ ಗೀತೆ. 7–15 ಅಥ್ಲೆಟಿಕ್ಸ್ ಬಗ್ಗೆ ಭಾಷಣ–ಎಂ. ಆರ್. ರಂಗನಾಥ್ 7–20 ಆರೋಗ್ಯ ಭಾಗ್ಯ. 7–30 ಕಿರಣ. 8–21 ಕೆ. ಜಿ. ಕನಕ ಲಕ್ಷ್ಮಿ–ಗಾಯನ (ಕರ್ನಾಟಕ) 9–05 ಹಿಂದಿಪಾಠ. 9-15 ಪದ್ಮಾ ಗೋಪಾಲಕೃಷ್ಣ–ಗಾಯನ (ಕರ್ನಾಟಕ) 12–30 ವನಿತಾ ವಿಹಾರ.

1–00 ಗೀತಲಹರಿ–ಗಾಂಧೀಜಿ ಬಗ್ಗೆ ಹಾಡುಗಳು. 1–20 ಕಾವ್ಯ ವಾಚನ. 1–30 ಪಂಕಜ ರಾಮಚಂದ್ರ–ಗಾಯನ

ಸಂಜೆ 5–45 ಪೊಲೀಸ್ ವಾರ್ತೆ. 6–15 ಕಾರ್ಮಿಕರಿಗಾಗಿ–ಗಾಂಧೀಜಿಯವರ ದೃಷ್ಟಿಯಲ್ಲಿ ದುಡಿಮೆ ಹಾಗೂ ಕೈಗಾರಿಕೆ. ಗಾಂಧೀಜಿ ಬಗ್ಗೆ ಹಾಡುಗಳು. 6–50 ಗ್ರಾಮಾಂತರ ರೇಡಿಯೋ ಗೋಷ್ಠಿ. 7–45 ಮೈಸೂರಿನ ದಸರಾ ಉತ್ಸವದ ಸಂಗೀತ ಕಛೇರಿಯ ನೇರ ಪ್ರಸಾರ–ಉಮಾಶಂಕರ ಮಿಶ್ರ–ಸಿತಾರ್. 9–16 ಸಮಾಚಾರ ದರ್ಶನ. 9–30 ರಾಷ್ಟ್ರೀಯ ಭಾಷಣ ಕಾರ್ಯಕ್ರಮ–ಮಾನವೀಯಹಕ್ಕುಗಳು-ಎ.ಕೆ. ದಾಮೋದರನ್. 9–45 ಪಾಶ್ಚಾತ್ಯ ಸಂಗೀತ 10–30 ಯುವವಾಣಿ 11–05 ಮುಕ್ತಾಯ.

ಮಂಗಳೂರು.

ಬೆಳಗ್ಗೆ 6.30 ವಂದೇಮಾತರಂ, 6.35 ವಂದನ, 7.15 ಸಂಗೀತಗುಚ್ಛ, 7.45 ಕನ್ನಡಹಾಡುಗಳು, 8.30 ಶಾಸ್ತ್ರೀಯಸಂಗೀತ

12.30 ಶಾಸ್ತ್ರೀಯಸಂಗೀತ, 1.20 ಚಿತ್ರಗೀತೆ 1.35 ಸಕಾಲಿಕ, 5.30 ಶಾಸ್ತ್ರೀಯ ಸಂಗೀತ, 6.15 ಜನಪದ ಗೀತೆ, 6.50 ಕೃಷಿರಂಗ– ಕುಷ್ಠರೋಗ– ಸಿ.ಆರ್.ರಾಜಶೇಖರಯ್ಯ, 7.20 ಚಿತ್ರ ಗೀತೆ, 7.45 ಯುವವಾಣಿ, 8.20 ಲಘು ಶಾಸ್ತ್ರೀಯ ಸಂಗೀತ, 9.16 ಸಮಾಚಾರ ದರ್ಶನ, 9.30 ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಷಣ, 9.45 ಲಘುಸಂಗೀತ, 10.00 ಸಂಗೀತ ಕಛೇರಿ.

ಕರ್ನಾಟಕ ರಾಜ್ಯ ಲಾಟರಿ

ಮುಂಗಾರು

ತಪ್ಪು ತಿದ್ದಿಕೊಳ್ಳಬೇಕು

ಕರ್ನಾಟಕದ ಜನತಾ ಪಕ್ಷ ಸರಕಾರಕ್ಕೆ ಸಹಕಾರ ಕೊಡುವುದಾಗಿ ಕೇಂದ್ರ ಸರಕಾರದ ಹಣಕಾಸು ರಾಜ್ಯ ಸಚಿವ ಬಿ. ಜನಾರ್ದನ ಪೂಜಾರಿ ಅವರು ಹೇಳಿದ್ದಾರೆ. ಜನತಾ ಸರಕಾರವು ಬಡವರ ಹಾಗೂ ದುರ್ಬಲ ವರ್ಗಗಳ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಅವರು ಸೂಚನೆ ಕೊಟ್ಟಿದ್ದಾರೆ.

ಜನರ ಅನುಮತಿ ಪಡೆದು ಬಂದಿರುವ ಪಕ್ಷ ಜನಹಿತದ ಕಾರ್ಯಗಳನ್ನು ಮಾಡಬೇಕೆಂದೂ ಅದನ್ನು ಜನತಾ ಪಕ್ಷದ ಸರಕಾರ ನೆರವೇರಿಸುವುದೆಂದೂ ನಿರೀಕ್ಷಿಸಿದರೆ ತಪ್ಪಾಗಲಾರದು. ಸರಕಾರದ ಎಲ್ಲ ಜನಹಿತ ಕಾರ್ಯಗಳಿಗೂ ಜನರ ಹಾಗೂ ವಿರೋಧ ಪಕ್ಷದ ಸಹಾಯ ಸಹಕಾರ ದೊರೆಯಬೇಕು. ಇದರಲ್ಲಿ ಪಕ್ಷದ ಇಷ್ಟಾನಿಷ್ಟಗಳೂ ಪೂರ್ವಗ್ರಹಗಳೂ ಅಡ್ಡಿಯಾಗಬಾರದು.

ತಮಗೆ ಯಾವುದು ಬೇಕು, ಯಾರು ಹಿತವರು ಎಂಬುದನ್ನು ಜನರು ನಿರ್ಧರಿಸುತ್ತಾರೆ. ಜನತಂತ್ರದ ಮೇಲೆ ಗೌರವವಿರುವ ಎಲ್ಲರೂ ಇದನ್ನು ಗೌರವಿಸಲೇಬೇಕಾಗುತ್ತದೆ. ಲೋಕಸಭಾ ಚುನಾವಣೆಯಲ್ಲಿ ಒಂದು ರಾಜಕೀಯ ಪಕ್ಷದ ಕಡೆಗೆ ಒಲಿದ ಮತದಾರರು ಎರಡೇ ತಿಂಗಳ ಬಳಿಕ ಬೇರೆಯೆ ಒಂದು ಪಕ್ಷದ ಪರ ನೀಡಿದ ತೀರ್ಪಿನಿಂದ ನಮ್ಮ ರಾಜಕೀಯ ಪಕ್ಷಗಳು ಒಂದು ಮಹತ್ವದ ಪಾಠವನ್ನು ಕಲಿಯಬೇಕಾಗಿದೆ. ಜನರ ಆಶೋತ್ತರಗಳ ಬಗ್ಗೆ, ಅವರ ಇಷ್ಟಾನಿಷ್ಟಗಳ ಬಗ್ಗೆ ಪೂರ್ವನಿರ್ಧಾರ ಸಲ್ಲದು ಎಂಬುದನ್ನು ಪಕ್ಷಗಳು ಮನನ ಮಾಡಿಕೊಳ್ಳಬೇಕು. ಯಾವ ಪಕ್ಷವನ್ನೂ ಜನರು ಶತ್ರುವೆಂದು ಭಾವಿಸುವುದಿಲ್ಲ, ಯಾವುದರಿಂದ ಉದ್ದೇಶ ಸಾಧನೆ ಆಗುವುದೊ ಆ ಪಕ್ಷವನ್ನು ಮತದಾರ ಪ್ರಭು ಅಧಿಕಾರಕ್ಕೆ ತರುತ್ತಾನೆ; ಯಾವುದು ಜನವಿರೋಧಿಯೆಂದು ಅನಿಸುವುದೋ ಅದನ್ನು ಕಿತ್ತು ಒಗೆಯುತ್ತಾನೆ.

ರಾಜಕೀಯ ಪಕ್ಷಗಳ ಪರಸ್ಪರ ವಿರೋಧವೂ ಸಹಕಾರವೂ ಕೇವಲ ತಾತ್ವಿಕ ನೆಲೆಯಲ್ಲಿರಬೇಕು, ವೈಯಕ್ತಿಕವಾಗಿ ಸಲ್ಲದು ಎಂಬಂತಹ ರಾಜಕೀಯ ಶಾಸ್ತ್ರದ ಒಳ್ಳೆಯ ಪಾಠವೊಂದನ್ನು ಕರ್ನಾಟಕದ ಮತದಾರರು ಈ ಬಾರಿ ಕಲಿಸಿದ್ದಾರೆ. ಈ ಬೆಳಕಿನಲ್ಲಿ ಆಳುವ ಜನತಾ ಪಕ್ಷವೂ ವಿರೋಧಿಯಾದ ಕಾಂಗ್ರೆಸ್ ಪಕ್ಷವೂ ಮುಂದಿನ ಐದು ವರ್ಷ ಕಾಲ ಕಾರ್ಯನಿರ್ವಹಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಹೊಣೆಗಾರಿಕೆಯಿದೆ. ಐತಿಹಾಸಿಕ ಕಾರಣಗಳಿಗಾಗಿ ದಕ್ಷಿಣ ಭಾರತದಲ್ಲಿ ಗಮನಾರ್ಹವಾದ ಕೇಂದ್ರ ವಿರೋಧಿ ಅಲೆ ಎದ್ದಿದೆ ಎಂಬುದನ್ನು ಅದು ಗಮನಿಸಬೇಕು. ಆಂಧ್ರಪ್ರದೇಶದಲ್ಲಿ ಪ್ರಾದೇಶಿಕ ಪಕ್ಷವೊಂದು ಮತ್ತೆ ಬಲಯುತವಾಗಿ ಎದ್ದುಬಂದು ಅಧಿಕಾರ ಹಿಡಿದಿದೆ. ತಮಿಳುನಾಡಿನಲ್ಲಿ ಇನ್ನೊಂದು ಪ್ರಾದೇಶಿಕ ಪಕ್ಷದ ಹಿಡಿತವನ್ನು ಸಡಿಲಿಸಲಾಗದೆ ಕಾಂಗ್ರೆಸ್ ಪಕ್ಷ ಅದರೊಂದಿಗೆ ಸ್ನೇಹ ಮಾಡಿಕೊಂಡಿದೆ. ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಆಳ್ವಿಕೆ ಹೆಸರಿಗೆ ಮಾತ್ರವಿದ್ದು ಅಧಿಕಾರ ಉಳಿಸಿಕೊಳ್ಳಲು ಅದು ದಿನವೂ ಹಗ್ಗದಲ್ಲಿ ನಡೆಯುವ ದೊಂಬರಾಟ ಆಡಬೇಕಾಗಿದೆ. ಕರ್ನಾಟಕದಲ್ಲಿ ಜನತಾ ಪಕ್ಷದ ವಿಜಯದಲ್ಲಿ ಜನರ ಕೇಂದ್ರ ವಿರೋಧಿ ಭಾವನೆಗಳ ಪಾಲೂ ಇದೆ. ಹಣಕಾಸಿನ ಹಾಗೂ ರಾಜಕೀಯವಾದ ಅಧಿಕಾರದಲ್ಲಿ ಬಹುಪಾಲನ್ನು ಕೇಂದ್ರ ಸರಕಾರವೆ ಹಿಡಿದು ಕೂತದ್ದು ಇಂತಹ ಭಾವನೆಗೆ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ.

ಇಂತಹ ಅಧಿಕಾರದಲ್ಲಿ ರಾಜ್ಯಗಳಿಗೆ ಸಲ್ಲತಕ್ಕ ನ್ಯಾಯವಾದ ಪಾಲನ್ನು ಬಿಟ್ಟುಕೊಡುವುದರಿಂದ ಮಾತ್ರವೆ ದಕ್ಷಿಣದಲ್ಲಿ ಜನಬೆಂಬಲವನ್ನು ಮತ್ತೆ ಗಳಿಸುವ ಸಾಧ್ಯತೆ ಕಾಂಗ್ರೆಸ್ ಪಕ್ಷಕ್ಕಿದೆ. ಉತ್ತರದಲ್ಲಿ ಅದಕ್ಕೆ ಸಿಕ್ಕಿರುವ ಜನಬೆಂಬಲವನ್ನು ಉಳಿಸಿಕೊಳ್ಳುವುದಕ್ಕೂ ಅದುವೇ ದಾರಿ. ಇಲ್ಲವಾದರೆ ಈ ದೇಶವನ್ನು ಒಂದಾಗಿ ಉಳಿಸಿಕೊಳ್ಳುವುದು ಕಷ್ಟ ಸಾಧ್ಯವೆಂಬುದನ್ನು ಅದು ಆದಷ್ಟು ಬೇಗ ಅರ್ಥಮಾಡಿಕೊಳ್ಳಬೇಕು. ರಾಜ್ಯ ಸರಕಾರದೊಂದಿಗೆ ಸಹಕಾರವೆಂದರೆ ಅಧಿಕಾರ ವಿಕೇಂದ್ರೀಕರಣವೂ ಒಳಗೊಳ್ಳುವುದೆಂದು ತಿಳಿಯಬೇಕು.

ಜನಹಿತ ಕಾರ್ಯಗಳಲ್ಲಿ ಸಹಕಾರ ಕೊಡಬೇಕಾದ ಕರ್ತವ್ಯದ ಜತೆಗೆ ಸರಕಾರ ದಾರಿ ತಪ್ಪಿದಾಗ, ಜನವಿರೋಧಿ ಕೆಲಸಗಳಲ್ಲಿ ತೊಡಗಿದಾಗ, ಹಿಂದುಳಿದವರಿಗೂ ರೈತರಿಗೂ ದಲಿತ, ದಮನಿತರಿಗೂ ದ್ರೋಹ ಬಗೆದಾಗ ದೊಡ್ಡ ದನಿಯಲ್ಲಿ ಎಚ್ಚರಿಸಬೇಕಾದ ಕರ್ತವ್ಯ ವಿರೋಧ ಪಕ್ಷಕ್ಕಿದೆ. ಮೀಸಲಾತಿ ವಿಚಾರದಲ್ಲಿ ಜನತಾ ಸರಕಾರ ಹಿಂದುಳಿದವರಿಗೆ ದ್ರೋಹ ಮಾಡಿದೆಯೆಂದು ನಾವು ಹೇಳುತ್ತಲೇ ಬಂದಿದ್ದೇವೆ. ನಿವೃತ್ತಿ ವಯೋಮಿತಿಯನ್ನು ಮತ್ತೆ ಮೂರು ವರ್ಷದಷ್ಟು ಏರಿಸುವ ಮೂಲಕ ಜನತಾ ಸರಕಾರ ಸಮಾಜದ ಪ್ರತಿಷ್ಠಿತ ವರ್ಗಕ್ಕೆ ಲಾಭವನ್ನೂ ಹಿಂದುಳಿದವರಿಗೆ ಮೋಸವನ್ನೂ ಮಾಡಿದೆಯೆಂದು ಎಚ್ಚರಿಸಿದ್ದೇವೆ. ಜನಹಿತದ ಕಾಳಜಿ ಕಾಂಗ್ರೆಸ್ ಪಕ್ಷಕ್ಕಿದ್ದರೆ ಅದು ಬಾಯಿಲ್ಲದ ಹಿಂದುಳಿದವರ ಬಾಯಾಗಬೇಕು. ಅವರ ಪರವಾಗಿ ಶಾಸನಸಭೆಯಲ್ಲಿ ಪ್ರತಿಪಾದಿಸಿ ಹಿಂದುಳಿದವರ ಉದ್ಯೋಗಾವಕಾಶಕ್ಕೆ ಸರಕಾರ ಹಾಕಿರುವ ಬಾಗಿಲನ್ನು ತೆರೆಸಬೇಕು. ಸಮಾಜದ ಅರಕ್ಷಿತರಿಗೂ ದುರ್ಬಲರಿಗೂ ಹಿತಮಾಡುವ ವಿಚಾರದಲ್ಲಿ ಸರಕಾರಕ್ಕೂ ಒಣ ಪ್ರತಿಷ್ಠೆ ಸಲ್ಲದು. ತಪ್ಪನ್ನು ತಿದ್ದಿಕೊಳ್ಳುವುದರಿಂದ ಎಲ್ಲರಿಗೂ ಅನುಕೂಲ.

ಜನತಾ ಸುಳ್ಳು ಆಶ್ವಾಸನೆ ...ೀಡಿ ಅಧಿಕಾರಕ್ಕೆ ಬಂದಿದೆ'

(ಮುಂಗಾರು ವರದಿ)

ಉಡುಪಿ, ಮಾ. 8– ಸುಳ್ಳು ಆಶ್ವಾ...ನೆಗಳನ್ನು ಜನತೆಗೆ ನೀಡಿ ಜನತಾ ಸರ್ಕಾ... ಮತ್ತೆ ಅಧಿಕಾರಕ್ಕೆ ಬಂದಿದೆ ಎಂದು ...ಂಗ್ರೆ ನಾಯಕರು ಇಲ್ಲಿ ಆಪಾದಿಸಿದರು.

ದಕ್ಷಿಣ ಕನ್ನಡದಲ್ಲಿ ಕಾಂಗ್ರೆ ಪಕ್ಷ ...ಚ್ಚು ಸ್ಥಾನ ಗಳಿಸಿದ ಸಂತೋಷಕ್ಕಾಗಿ ...ಡುಪಿಯಲ್ಲಿ ನಡೆದ ವಿಜಯೋತ್ಸವ ...ಮಾರಂಭದಲ್ಲಿ ಕಾಂಗ್ರೆ ನಾಯಕರು ತಮ್ಮ ...ಭಿಪ್ರಾಯ ವ್ಯಕ್ತಪಡಿಸುತ್ತಿದ್ದರು.

ಕಾಂಗ್ರೆ ಶಾಸಕಿ ಮನೋರಮಾ ಮಧ್ವ...ಜ್ ಅವರನ್ನು ವಿಜಯೋತ್ಸವದಲ್ಲಿ ...ಥ ಬೀದಿಯವರೆಗೆ ಭಾರಿ ಮೆರವಣಿಗೆ...ಲ್ಲಿ ಕರೆತರಲಾಯಿತು.

ಮೆರವಣಿಗೆಯ ನಂತರ ನಡೆದ ಸಭೆಯಲ್ಲಿ ಬೈಂದೂರು ಶಾಸಕ ಜಿ. ಎಸ್. ಆಚಾರ್, ಕುಂದಾಪುರ ಶಾಸಕ ಪ್ರತಾಪ್ ಚಂದ್ರಶೆಟ್ಟಿ, ಬೈಂದೂರು ಮಾಜಿ ಶಾಸಕ ಎ.ಜಿ. ಕೊಡ್ಗಿ, ಉಡುಪಿ ಶಾಸಕಿ ಮನೋರಮಾ ಮಧ್ವರಾಜ್, ಯು.ಆರ್ ಸಭಾಪತಿ, ಡಾ॥ ರಾಮನಂದಭಟ್ ಮುಂತಾದವರು ಮಾತನಾಡಿದರು.

ಉಡುಪಿ: ಜನತಾ ವಿಜಯೋತ್ಸವ

ಉಡುಪಿ, ಮಾ. 8 – ರಾಜ್ಯದಲ್ಲಿ ಜನತಾ ಪಕ್ಷ ಬಹುಮತಗಳಿಸಿದ್ದಕ್ಕೆ ಇಲ್ಲಿನ ಸುಮಾರು ಐದು ಸಾವಿರಕ್ಕೂ ಹೆಚ್ಚು ಜನರು ಬುಧವಾರ ವಿಜಯೋತ್ಸವ ಆಚರಿಸಿದರು.

ಕಿನ್ನಿ ಮೂಲ್ಕಿಯಿಂದ ಹೊರಟ ಮೆರವಣಿಗೆ ಉಡುಪಿ ರಥಬೀದಿಯಲ್ಲಿ ಕೊನೆಗೊಂಡಿತು. ಮೆರವಣಿಗೆಯಲ್ಲಿ ಉಡುಪಿ ಜನತಾ ಅಧ್ಯಕ್ಷ ಅತ್ರಾಡಿ ಸತೀಶ್ ಹೆಗ್ಡೆ, ಮಟ್ಟಾರು ರತ್ನಾಕರ ಹೆಗ್ಡೆ ಹಾಗೂ ಪಕ್ಷದ ಇನ್ನಿತರ ಪದಾಧಿಕಾರಿಗಳು ಭಾಗವಹಿಸಿದ್ದರು.

'ಶಕ್ತಿ' ತಳಿಯ ಕ್ಷೇತ್ರೋತ್ಸವ

ಕಿನ್ನಿಗೋಳಿ, ಮಾ.8– ಅಧಿಕ ಇಳುವರಿ ...ತ್ರದ 'ಶಕ್ತಿ' ತಳಿಯ ಕ್ಷೇತ್ರೋತ್ಸವ ...ಮಾರಂಭವು ಇತ್ತೀಚೆಗೆ ತಾಳಿಪಾಡಿ ...ಗ್ರಾಮದಲ್ಲಿ ಪಿ. ವಾಸುದೇವ ರಾವ್ ...ವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಲ್ಕಿ ವಲಯದ ಸಹಾಯಕ ಕೃಷಿ ...ಧಿಕಾರಿ ಬಿ. ಆರ್. ಮಾಚಯ್ಯ ಅವರು ...ಕೃಷಿಯಲ್ಲಿ ಆಧುನಿಕ ಸಲಕರಣೆಗಳ ಬಳಕೆ ...ಹಾಗೂ ಸಸ್ಯಗಳ ರೋಗ ತಡೆಗಟ್ಟುವ ...ವಿಧಾನವನ್ನು ವಿವರಿಸಿದರು. ಸಿಂಡಿಕೇಟ್ ...ಬ್ಯಾಂಕಿನ ಕೃಷಿ ವಿಭಾಗದ ಕ್ಷೇತ್ರ ಸಹಾ...ಯಕ ಸತೀಶ್ ಪೈ ಅವರು ಸಾಲ ಸೌಲಭ್ಯದ ಬಗ್ಗೆ ಮಾತನಾಡಿದರು.

ಪ್ರಾರಂಭದಲ್ಲಿ ಕೃಷಿ ಸಹಾಯಕ ಎನ್. ಎಚ್. ನಾಯ್ಕ್ ಅವರು ಸ್ವಾಗತಿಸಿದರು.

ಶಿಶು ಪ್ರದರ್ಶನ

ಹೊಸಬೆಟ್ಟು, ಮಾ. 8 – ಇಲ್ಲಿನ ಗ್ರಾಮಸಂಘದಲ್ಲಿ ಸ್ಥಳೀಯ ವನಿತಾ ಸಮಾಜದ ವತಿಯಿಂದ ಗೋವಿಂದದಾಸ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ನೆರವಿನಿಂದ ಶಿಶು ಪ್ರದರ್ಶನವನ್ನು ಏರ್ಪಡಿಸಲಾಯಿತು. ಡಾ। ಸಂತೋಷ್ ಕುಮಾರ್ ಹೆಗ್ಡೆ, ಸುರತ್ಕಲ್, ಇವರು ಮಕ್ಕಳನ್ನು ಪರೀಕ್ಷಿಸಿದರು.

ವನಿತಾ ಸಮಾಜದ ಸದಸ್ಯೆಯರಿಗಾಗಿ ರಂಗವಲ್ಲಿ ಮತ್ತು ಛದ್ಮವೇಷ ಸ್ಪರ್ಧೆಗಳನ್ನೂ ನಡೆಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಐ. ಉಮಾದೇವಿ ವಹಿಸಿದ್ದರು. ವನಿತಾ ಸಮಾಜದ ಅಧ್ಯಕ್ಷೆ ಟಿ. ಅನಸೂಯ ಆರ್. ರಾವ್ ಮೊದಲು ಸ್ವಾಗತಿಸಿದರು.

ಕಾರ್ಮಿಕ ನಾಯಕನ ಹಲ್ಲೆಗೆ ಖಂಡನೆ

ಮಂಗಳೂರು, ಮಾ. 8–ಮಂಗಳವಾರ ಮಂಗಳೂರು ತಾಲೂಕಿನ ಕುತ್ತಾರಿನಲ್ಲಿ ಸಿ.ಐ.ಟಿ.ಯು. ಜಿಲ್ಲಾ ಉಪ ಕಾರ್ಯದರ್ಶಿ ಯು. ಬಿ. ಲೋಕಯ್ಯ ಅವರ ಮೇಲೆ ನಡೆದ ಹಲ್ಲೆಗೆ ಸಿ. ಐ. ಟಿ. ಯು. ಜಿಲ್ಲಾ ಸಮಿತಿಯು ಕಳವಳ ವ್ಯಕ್ತ ಪಡಿಸಿದೆ.

ಸಂಜೆ ಅವರು ರಸ್ತೆ ಬದಿಯಲ್ಲಿ ಬಸ್ಸಿಗಾಗಿ ಕಾಯುತ್ತಿದ್ದಾಗ ಕಾಂಗ್ರೆಯವರೆನ್ನಲಾದ ಕೆಲವರು ಮಾರಕ ಆಯುಧಗಳಿಂದ ಹಲ್ಲೆ ನಡೆಸಿದರೆಂದು ಆಪಾದಿಸಿದ ಸಿ.ಐ.ಟಿಯು. ಜಿಲ್ಲಾ ಕಾರ್ಯದರ್ಶಿ ಕೆ. ಮೂಸಬ್ಬ ಅವರು ತಪ್ಪಿತಸ್ಥರನ್ನು ದಂಡಿಸಬೇಕೆಂದು ಒತ್ತಾಯಿಸಿದ್ದಾರೆ.

ಭಾಷಣ ಕಾರ್ಯಕ್ರಮ

ಮಂಗಳೂರು, ಮಾ. 8 – ಐಕೊಬೂ ಉಪಾಧ್ಯಕ್ಷ ಆರ್ ಎನ್. ಗೋಡ್‌ಬೋಲೆ ಅವರು ನಾಳೆ (ಮಾ. 9) ಅಪರಾಹ್ನ 4 ಗಂಟೆಗೆ ನಗರದ ಹೋಟೇಲ್ ಶ್ರೀನಿವಾಸ್‌ದಲ್ಲಿ ದ. ಕ. ಜಿಲ್ಲೆಯ ಬ್ಯಾಂಕ್ ಅಧಿಕಾರಿಗಳನ್ನುದ್ದೇಶಿಸಿ ಭಾಷಣ ಮಾಡಲಿರುವರು.

ಅದೇ ಹೊತ್ತಿಗೆ ಸರ್ಕಾರಿ ಕಾಲೇಜಿನಲ್ಲಿ ಸಾಹಿತಿ ಡಾ। ಶಿವರಾಮ ಕಾರಂತರ ಭಾಷಣವಿದೆ.

● ಮಂಗಳೂರು ಮಾ. 8- 1930ರ ದಶಕದಲ್ಲಿ ಮೈಸೂರು ಆಕಾಶವಾಣಿ ಸ್ಥಾಪನೆಗೆ ನೆರವಾಗಿದ್ದ ಇಂಜನಿಯರ್ ಎ. ಜಿ. ಜಗದೀಶ್ ಇತ್ತೀಚೆಗೆ ನಿಧನ ಹೊಂದಿದರು. ಆಕಾಶವಾಣಿ ಜನಕರಾಗಿದ್ದ ಎಂ.ವಿ. ಗೋಪಾಲಸ್ವಾಮಿ ಅವರೊಂದಿಗೆ ಎ.ಜಿ. ಜಗದೀಶ್ ಕೂಡಾ ದುಡಿದಿದ್ದರು. ದಿವಂಗತರಿಗೆ ಪತ್ನಿ ಮತ್ತು ಎಂಟು ಜನ ಮಕ್ಕಳಿದ್ದಾರೆ.

ಬೀಳ್ಕೊಡುಗೆ ಸಮಾರಂಭ

ಕಾರ್ಕಳ, ಮಾ. 8- ಇಲ್ಲಿನ ಪ್ರಧಾನ ...ಮುನ್ಸೀಫ್ ನ್ಯಾಯಾಲಯದ ಬೆಂಚ್ ...ಕ್ಲರ್ಕ್ ಕೆ. ನಾರಾಯಣ ಅವರು ಬೆಳ್ತಂ...ಡಿಗೆ ವರ್ಗವಾದ ಕಾರಣ ಅವರನ್ನು ...ಇತ್ತೀಚೆಗೆ ನ್ಯಾಯಾಲಯದ ಸಹೋದ್ಯೋ...ಗಳು ಹಾರ್ದಿಕವಾಗಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ಸೋಮನಾಥ್ ...ಪ್ಪೂರು ಅವರು ನಾರಾಯಣ ಅವರ ...ಸೇವೆಯನ್ನು ಶ್ಲಾಘಿಸಿ ಮಾತನಾಡಿದರು.

ಜಿ. ಬಸವರಾಜ್ ಅವರು ಸ್ವಾಗತಿಸಿ ...ವಂದಿಸಿದರು.

ಕುಂದಾಪುರ, ಮಾ. 8 :– ಇಲ್ಲಿನ ಸಹ...ಕಾರಿ ಸಂಘಗಳ ಸಹಾಯಕ ನಿಬಂಧಕರಾಗಿ ...ದ ಎರಡು ವರ್ಷಗಳಿಂದ ಸೇವೆ ಸಲ್ಲಿ...ಸುತ್ತಿದ್ದ ಎಚ್. ನಾರಾಯಣ ಹೆಗ್ಡೆಯ...ವರು ವರ್ಗವಾದ ಕಾರಣ ಇಲಾಖಾ ...ಸುತ್ತು, ಸಹಕಾರಿ ಸಂಘ...

ಲೈಂಗಿಕ ಸಮಸ್ಯೆ ಬಗ್ಗೆ ಗುಟ್ಟೇಕೆ?



ವಿವಾಹದ ಮೊದಲು ಅಥವಾ ನಂತರ ಎಲ್ಲಾ ಲೈಂಗಿಕ ಸಮಸ್ಯೆಗಳಿಗೆ ವೈಜ್ಞಾನಿಕ ಮಾರ್ಗದರ್ಶನ ಪಡೆಯಲು ನಿಧಾನಿಸಬೇಡಿರಿ. ಜೀವನ ಸುಖಮಯವಾಗಲು ಪುರುಷತ್ವ, ಯೌವನ, ವೀರ್ಯ ತೇಜಸ್ಸುಗಳು ಅತ್ಯಗತ್ಯ. ಸ್ವಪ್ನಸ್ಖಲನ ಶೀಘ್ರಸ್ಖಲನ ಮುಂತಾದ ದಾಂಪತ್ಯ

ಸಮಸ್ಯೆಗಳಿಗೆ ಲೈಂಗಿಕ ತಜ್ಞರಾದ ಡಾ। ಖೋಕರ್ ಅವರ ಸಲಹೆ ಪಡೆಯಿರಿ. 25 ವರ್ಷಗಳಿಂದ ಇವರು ಮಂಗಳೂರಿನಲ್ಲಿ ನಿಮ್ಮ ಸೇವೆ ಮಾಡುತ್ತಾ ಬಂದಿದ್ದಾರೆ.

ಖೋಕರ್ ಡಿಸ್ಪೆನ್ಸರಿ,

ರೂಂ. ನಂ. 14, ಉಡುಪಿ ಶ್ರೀ ಕೃಷ್ಣ ಭವನ, ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು

ಸಮಯ: ಬೆಳಗ್ಗೆ 8 ರಿಂದ ಸಾಯಂಕಾಲ 8ರ ತನಕ.

ಮಂಗಳೂರು ಕ್ಷೇತ್ರದ ಮತದಾರರಿಗೆ ವಂದನೆಗಳು

ಕರ್ನಾಟಕ ವಿಧಾನ ಸಭಾ ಚುನಾವಣೆಯಲ್ಲಿ ಮಂಗಳೂ...

ಮುಂಗಾರು

ಮೀಸಲಾತಿಗೆ ಮೋಸವಾದೀತು

ಹಿಂದುಳಿದವರ ಏರಿಕೆ ಮೀಸಲಾತಿಯನ್ನು ವಿರೋಧಿಸುವ ಹೆಸರಿನಲ್ಲಿ ಉತ್ತರ ಭಾರತದಲ್ಲಿ ಹಿಂಸಾಚಾರ ನಡೆಯುತ್ತಿದೆ. ಈ ಚಳವಳಿಯ ಹಿಂದೆ ಮೇಲ್ವರ್ಗದವರಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಮುಖ್ಯವಾಗಿ ವಿದ್ಯಾರ್ಥಿಗಳೇ ಮುಂಚೂಣಿಯಲ್ಲಿರುವ ಈ ಚಳವಳಿಕ್ಕೆ ಅಖಿಲಭಾರತ ವಿದ್ಯಾರ್ಥಿ ಪರಿಷತ್ ತನ್ನ ಸಕ್ರಿಯ ಬೆಂಬಲವನ್ನು ಸಾರಿದೆ. ವಕೀಲರೂ, ವೈದ್ಯರೂ ಮುಂತಾದ ವೃತ್ತಿ ನಿರತರು ಗುಜರಾತಿನಲ್ಲಿಯೂ ಮಧ್ಯಪ್ರದೇಶದಲ್ಲಿಯೂ ನಡೆಯುತ್ತಿರುವ ಈ ಚಳವಳದ ಬೆಂಬಲಕ್ಕೆ ನಿಂತಿದ್ದಾರೆ. ದಲಿತ ವೈದ್ಯರು ಅಸಮರ್ಥರೆಂಬಂತೆ ಚಿತ್ರಿಸುವ ಗೋಡೆ ಬರಹಗಳು ಹಾಗೂ ವ್ಯಂಗ್ಯ ಚಿತ್ರಗಳು ಅಹ್ಮದಾಬಾದಿನಲ್ಲಿ ಕಾಣಿಸಿಕೊಂಡಿವೆ.

1952ರಲ್ಲಿ ಹಿಂದುಳಿದವರಿಗೆ ಮೀಸಲಾತಿಯೆಂಬುದು ಹಲವು ರಾಜ್ಯಗಳಲ್ಲಿ ಅಸ್ತಿತ್ವಕ್ಕೆ ಬಂದಿದ್ದರೂ ಅದಕ್ಕೆ ಮೇಲ್ಜಾತಿಗಳವರಿಂದ ವಿರೋಧ ಪ್ರಾರಂಭಿಕ ಹಂತಗಳಲ್ಲಿ ಅಷ್ಟೇನೂ ಇರಲಿಲ್ಲ. ಇತ್ತೀಚೆ ಮಾತ್ರವೇ ಅದು ಉಗ್ರರೂಪವನ್ನು ತಳೆಯುತ್ತಿದೆ. ಗುಜರಾತಿನಲ್ಲಿ 1981ರಲ್ಲಿ ಮೀಸಲಾತಿ ವಿರೋಧಿ ಚಳುವಳಿ ನಡೆದು ಅಪಾರ ಸಂಖ್ಯೆಯಲ್ಲಿ ಹರಿಜನರನ್ನು ಕೊಲ್ಲಲಾಯಿತು. ಹರಿಜನರ ಗುಡಿಸಲುಗಳನ್ನು ಉರಿಸಲಾಯಿತು. ಅವರ ಮಹಿಳೆಯರ ಮೇಲೆ ಅತ್ಯಾಚಾರ ನಡೆಯಿತು.

ಮೀಸಲಾತಿಗೆ ವಿರೋಧ ಈಚೆಗಿನ ವರ್ಷಗಳಲ್ಲಿ ಉಲ್ಬಣಗೊಂಡದ್ದಕ್ಕೆ ಸಾಮಾಜಿಕ ಕಾರಣಗಳಿವೆ. ಹಿಂದೆ ಮೀಸಲಾತಿ ಇದ್ದರೂ ಅದನ್ನು ಪಡೆದುಕೊಳ್ಳುವವರಿರಲಿಲ್ಲ. ಇತ್ತೀಚೆಗೆ ಪರಿಶಿಷ್ಟರು ಹಾಗೂ ಹಿಂದುಳಿದವರು ಹೆಚ್ಚೆಚ್ಚು ಮಂದಿ ವಿದ್ಯಾವಂತರಾಗುತ್ತ ಮೀಸಲಾತಿ ಪ್ರಯೋಜನ ಪಡೆಯುತ್ತಿದ್ದಾರೆ. ಹೀಗೆ ಸಾಮಾಜಿಕವಾಗಿ ಅದುಮಿ ಹಿಡಿಯಲಾದ ಜನವರ್ಗ ಮೇಲಕ್ಕೇರುವ ಪ್ರವೃತ್ತಿ ಕಾಣಿಸಿಕೊಂಡಾಗ ಸ್ಥಾನ ಭದ್ರಮಾಡಿ ಕೂತ ಮೇಲ್ಜಾತಿಗಳವರಲ್ಲಿ ಸ್ಥಾನಚ್ಯುತಿಯ ಭೀತಿ ಶುರುವಾಗಿದೆ. ಅದುವೆ ಇಂದಿನ ವಿದ್ಯಮಾನಕ್ಕೆ ಕಾರಣ.

ಗುಜರಾತು ಹಾಗೂ ಮಧ್ಯಪ್ರದೇಶಗಳಲ್ಲಿ ಕೆಲವು ವರ್ಷಗಳ ಹಿಂದೆ ಹಿಂದುಳಿದವರಿಗೆ ಮೀಸಲಾತಿ ನಿರ್ಧರಿಸುವುದಕ್ಕೆ ಆಯೋಗಗಳನ್ನು ರಚಿಸಲಾಗಿತ್ತು. ಅವುಗಳ ವರದಿಗಳು ಒಂದೆರಡು ವರ್ಷಗಳಿಂದ ದೂಳು ತಿನ್ನುತ್ತ ಬಿದ್ದಿದ್ದವು. ಇದೀಗ ಕಳೆದ ಲೋಕಸಭಾ ಚುನಾವಣೆಗೆ ಮೊದಲು ಆಯೆರಡೂ ರಾಜ್ಯಗಳ ಸರಕಾರಗಳು ಹಿಂದುಳಿದ ಜಾತಿಗಳವರಿಗೆ ಮೀಸಲಾತಿ ಹೆಚ್ಚಿಸುವ ಘೋಷಣೆ ಮಾಡಿದವು. ಗುಜರಾತಿನಲ್ಲಿ ಮೀಸಲಾತಿಯನ್ನು ಶೇಕಡಾ 31ರಿಂದ ಶೇಕಡಾ 49ಕ್ಕೆ [illegible]

[illegible] ವಳಿಯ ಹಿನ್ನೆಲೆಯಲ್ಲಿ ಅದರ ಅನುಷ್ಠಾನವೂ ಕಷ್ಟದ ವಿಷಯವೆನಿಸಿದೆ.

ಇತ್ತ ಕರ್ನಾಟಕದಲ್ಲಿ 1957ರಲ್ಲಿ ನೇಮಿಸಲಾದ ಡಾ। ನಾಗನಗೌಡ ಸಮಿತಿ ಬ್ರಾಹ್ಮಣರನ್ನು ಮಾತ್ರ ಹೊರತುಪಡಿಸಿ ಉಳಿದ ಎಲ್ಲ ಜಾತಿಗಳನ್ನೂ ಹಿಂದುಳಿದವೆಂದು ಪರಿಗಣಿಸಬೇಕೆಂದು ತೀರ್ಮಾನಿಸಿ ಹಿಂದುಳಿದವರಿಗೆ ಶೇಕಡಾ 50 ಮೀಸಲಾತಿ ಕೊಡಬೇಕೆಂದು ಶಿಫಾರಸು ಮಾಡಿತು. ಪರಿಶಿಷ್ಟರಿಗೆ ಶೇಕಡಾ 18 ಪ್ರತ್ಯೇಕವಿದ್ದು ವರದಿಯನ್ನು ಜಾರಿಗೆ ಕೊಟ್ಟ ಸರಕಾರದ ಆಜ್ಞೆಯನ್ನು 1962ರಲ್ಲಿ ಸುಪ್ರೀಂ ಕೋರ್ಟು ಹೊಡೆದುಹಾಕಿತು. ಆ ಮೇಲೆ ಕರ್ನಾಟಕದ ಹಿಂದುಳಿದವರಿಗೆ ಸರಕಾರಿ ಉದ್ಯೋಗಗಳಲ್ಲಿಯೂ ಶಿಕ್ಷಣ ಸಂಸ್ಥೆಗಳಲ್ಲಿಯೂ ಮೀಸಲಾತಿ ದೊರೆಯಬೇಕಿದ್ದರೆ ದೇವರಾಜ ಅರಸು ಸರಕಾರ ಬಂದು ಹಾವನೂರು ಆಯೋಗದ ನೇಮಕ ಆಗಬೇಕಾಯಿತು.

ಮೀಸಲಾತಿ ತತ್ವವನ್ನು ಹಲವು ರಾಜ್ಯಗಳು ಒಪ್ಪಿಕೊಂಡು ಅನುಷ್ಠಾನಕ್ಕೆ ತಂದಿದ್ದರೂ ಅದರ ಲಾಭವನ್ನು ಸಂಪೂರ್ಣವಾಗಿ ಪಡೆದುಕೊಳ್ಳುವುದಕ್ಕೆ ಪರಿಶಿಷ್ಟರಿಂದಲೂ ಹಿಂದುಳಿದ ಜಾತಿಗಳವರಿಂದಲೂ ಈ ತನಕವೂ ಆಗಿಲ್ಲ. ಮೀಸಲಿರುವ ಸ್ಥಾನ ಎಂದೂ ಭರ್ತಿಯಾದದ್ದಿಲ್ಲ. ಪರಿಶಿಷ್ಟರಿಗಿರುವ ಮೀಸಲಾತಿಯಲ್ಲಿ ನಾಲ್ಕನೇ ದರ್ಜೆ ಸ್ಥಾನಗಳು ಮಾತ್ರವೆ ಭರ್ತಿಯಾಗುತ್ತಿದೆ. ಪರಿಶಿಷ್ಟ ಪಂಗಡದವರ ಉಳಿದ ಮೀಸಲು ಸ್ಥಾನಗಳಲ್ಲಿ 1970ರ ವೇಳೆಗೆ ಶೇಕಡ 7.5 ಮಾತ್ರವೆ ಭರ್ತಿಯಾಗಿದ್ದವು. ಭರ್ತಿಯಾಗದ ಉಳಿದೆಲ್ಲ ಮೀಸಲು ಸ್ಥಾನಗಳನ್ನು ವರ್ಷ ವರ್ಷವೂ ಎಲ್ಲರಿಗೂ ತೆರೆದಿಡುವ ಪರಿಪಾಠ ಬೆಳೆದು ಬಂದಿದ್ದು ಮೇಲ್ವರ್ಗದವರೇ ಅದನ್ನೂ ಕಬಳಿಸುತ್ತಿದ್ದಾರೆ.

ಈಗ ಪರಿಸ್ಥಿತಿ ಕ್ರಮೇಣ ಬದಲಾಗುತ್ತಿದೆ. ಪರಿಶಿಷ್ಟರು ಹಾಗೂ ಹಿಂದುಳಿದವರು ವಿದ್ಯೆ ಪಡೆದು ಮೀಸಲಿಟ್ಟ ಸ್ಥಾನಗಳ ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಮೇಲು ವರ್ಗದವರಿಗೆ ಎಲ್ಲೆಲ್ಲೂ ಮೇಯುವ ಅವಕಾಶ ತಪ್ಪಿಹೋಗುವ ಭೀತಿ ಕಾಣಿಸಿಕೊಂಡಿರುವುದೇ ಇಂದು ಗುಜರಾತು ಮತ್ತು ಮಧ್ಯಪ್ರದೇಶಗಳಲ್ಲಿ ಮೇಲ್ವರ್ಗದವರು ಹಿಂಸಾತ್ಮಕ ಹೋರಾಟಕ್ಕಿಳಿಯಲು ಪ್ರಚೋದನೆಯಾಗಿದೆ.

ಹಿಂದುಳಿದ ಜಾತಿಗಳವರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿರುವವರು ಎಂಬುದನ್ನು ದೇಶ ಒಪ್ಪಿಕೊಂಡಿದೆ. ಇದೊಂದು ಸಾಮಾಜಿಕ ತತ್ವವಾಗಿದ್ದು ಸಾಮಾಜಿಕವಾಗಿ ಊನಗೊಂಡವರಾದ ಇವರಿಗೆಲ್ಲ ಶಿಕ್ಷಣದಲ್ಲಿಯೂ ಉದ್ಯೋಗದಲ್ಲಿಯೂ ಆದ್ಯತೆ ನೀಡುವುದು ಹಾಗೂ ಈ ಜನವರ್ಗ ಉತ್ಕರ್ಷಕ್ಕೆ ಬಂದು ಇತರರಿಗೆ ಸಮಾನವಾಗಿ ತಲೆ ಎತ್ತಿ ನಿಲ್ಲುವ ತನಕ ಮೀಸಲಾತಿ ಮುಂದುವರಿಯು

21 ಶೇಕಡ ಕೂಡ ಸೇರಿದೆ. ಮಧ್ಯಪ್ರದೇಶದಲ್ಲಿ ಮೀಸಲಾತಿಯನ್ನು ಒಟ್ಟು ಶೇಕಡಾ 55ಕ್ಕೇರಿಸಲಾಗಿದ್ದು ಅದರಲ್ಲಿ ಪರಿಶಿಷ್ಟರ ಪಾಲು ಶೇಕಡಾ 30. ಆದಿವಾಸಿಗಳು ಸಾಕಷ್ಟಿರುವ ಮಧ್ಯಪ್ರದೇಶದಲ್ಲಿ ಪರಿಶಿಷ್ಟರು ಒಟ್ಟು ಶೇಕಡಾ 30ರಷ್ಟಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪಂಗಡಗಳವರಿಗೆ ಮತ್ತು ಹಿಂದುಳಿದ ಜಾತಿಗಳವರಿಗೆ ಮೀಸಲಾತಿ ಒದಗಿಸಬೇಕೆಂದು ನಮ್ಮ ಸಂವಿಧಾನ ವಿಧಿಸುತ್ತದೆ. ಪರಿಶಿಷ್ಟರಿಗೆ ಮೀಸಲಾತಿ ಕೇಂದ್ರಸರಕಾರದ ಸಹಿತ ಎಲ್ಲ ಕಡೆ ಪಾಲನೆಯಲ್ಲಿದೆ. ಆದರೆ ಹಿಂದುಳಿದ ಜಾತಿಗಳವರ ಮೀಸಲಾತಿಗಾಗಿ 1948ರಲ್ಲಿ ಕೇಂದ್ರ ಸರಕಾರ ನೇಮಿಸಿದ್ದ ಕಾಕಾ ಕಾಲೇಲ್ಕರ್ ಸಮಿತಿ ಕೊಟ್ಟ ವರದಿ ಮೂಲೆಗೆ ಬಿದ್ದು ಹೋಯಿತು. ಆ ಬಳಿಕ 1977ರಲ್ಲಿ ಜನತಾ ಸರಕಾರ ನೇಮಿಸಿದ್ದ ಮಂಡಲ್ ಆಯೋಗದ ವರದಿ ಇನ್ನೂ ಜಾರಿಗೆ ಬಂದಿಲ್ಲ. ಹೀಗಾಗಿ ಕೇಂದ್ರ ಸರಕಾರದಲ್ಲಿ ಹಿಂದುಳಿದ ಜಾತಿಗಳವರಿಗೆ ಈಗ ಮೀಸಲಾತಿ ಇಲ್ಲ. ಇದೀಗ ನಡೆಯುತ್ತಿರುವ ಚಳ

ವುದು ನ್ಯಾಯವೂ ಅಗತ್ಯವೂ ಆಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಹಿಂದುಳಿದವರು ತಮ್ಮ ಹಿತಾಸಕ್ತಿಗಳನ್ನು ಎಚ್ಚರದಿಂದ ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕಾದ ಅಗತ್ಯ ಇಂದು ಬಂದಿದೆ. ಮೇಲ್ಜಾತಿಗಳವರು ಉತ್ತರದಲ್ಲಿ ನಡೆಸುತ್ತಿರುವ ಹೋರಾಟ ಅಲ್ಲಿ ಜಾತಿ ಆಧಾರದ ಮೀಸಲಾತಿಗೆ ಅಪಾಯ ತಂದೊಡ್ಡಲೂಬಹುದು. ಈ ಚಳವಳಿ ಕರ್ನಾಟಕಕ್ಕೂ ಸಾಂಕ್ರಾಮಿಕದಂತೆ ಹಬ್ಬಬಹುದು. ಮೀಸಲಾತಿಯ ತತ್ವಕ್ಕೆ ಮೋಸಮಾಡುವ ಭೂಮಿಕೆಯಂತೂ ಕರ್ನಾಟಕದಲ್ಲಿ ನಿವೃತ್ತಿ ವಯಸ್ಸಿನ ಏರಿಕೆ ಹಾಗೂ ರೋಸ್ಟರ್ ಪದ್ಧತಿಯ ರದ್ಧತಿ ಮೂಲಕ ಈಗಾಗಲೇ ಸಿದ್ಧವಾಗಿದೆ. ರೋಗ ಬಂದ ಮೇಲೆ ಮದ್ದು ಮಾಡಿದರೆ ಆಗದು. ಅದು ಬರದಂತೆ ಪ್ರತಿಬಂಧಕ ಕ್ರಮ ಕೈಕೊಳ್ಳಬೇಕು. ಚಳವಳಿಗೆ ಪ್ರತಿ ಚಳವಳಿ ಅಲ್ಲ, ಅಪಾಯವನ್ನು ದೂ[illegible] ಮಾಡುವುದಕ್ಕಾಗಿ ಈಗಿಂದೀಗಲೇ ಹೋರಾಟಕ್ಕೆ ಅ[illegible]ಯಾಗಬೇಕು. ನಿವೃತ್ತಿ ವಯಸ್ಸನ್ನು ಆ[illegible] ಮೂಲ[illegible] ಇಳಿಸಬೇಕು, ರೋಸ್ಟರ್ ಪದ್ಧತಿಯನ್ನು ಮರಳಿ ಜಾರಿಗೆ ತರಬೇಕು.

ಮಾಯವಾದ ಭೂತ [illegible]ತೆಯ 'ರೋಗ'